ಶತ್ರುವತ್ಸಲ

ಪ್ರವಾದಿ ಮುಹಮ್ಮದ್(ಸ)

ಮುಹಮ್ಮದ್ ಅಶ್ರಫ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಎರಡು ದಶಕಗಳ ಕಾಲ ನಿರಂತರ ಪೀಡಿಸಿದ, ತರತರವಾಗಿ ಕಿರುಕುಳ ನೀಡಿದ, ಕೊಲ್ಲಲೂ ಯೋಜನೆ ರೂಪಿಸಿದ ಹಾಗೂ ಕೊನೆಯಲ್ಲಿ ಊರು ಬಿಟ್ಟು ಹೋಗಲು ನಿರ್ಬಂಧಿಸಲ್ಪಟ್ಟ ಪ್ರವಾದಿ ಮುಹಮ್ಮದ್(ಸ)ರವರು ದಿಗ್ವಿಜಯಿಯಾಗಿ ಮಕ್ಕಾ ನಗರಕ್ಕೆ ಪ್ರವೇಶಿಸಿದ ಸಂದರ್ಭ. ಎಲ್ಲ ರೀತಿಯ ಅಪರಾಧಿಗಳೂ ಶರಣಾಗತರಾಗಿ ತಲೆ ತಗ್ಗಿಸಿ ತಮ್ಮ ಮೇಲೆ ಇಂದು ಯಾವ ಕ್ರಮ ಕೈಗೊಳ್ಳಲಾಗುವುದೋ ಎಂದು ಆತಂಕಿತರಾಗಿದ್ದ ಸಂದರ್ಭ. ಆದರೆ ಲೋಕಾನುಗ್ರಹಿ ಪ್ರವಾದಿವರ್ಯರು(ಸ) ಅವರ ಅಪರಾಧಗಳನ್ನೆಲ್ಲ ಮನ್ನಿಸುತ್ತಾ, "ನಿಮ್ಮ ಮೇಲೆ ಯಾವುದೇ ಅಪವಾದವಿಲ್ಲ. ಹೋಗಿ, ನೀವೆಲ್ಲರೂ ಸ್ವತಂತ್ರರು" ಎಂದು ಹೇಳಿ ಎಲ್ಲರನ್ನೂ ಬಿಟ್ಟು ಬಿಟ್ಟರು.

ಶತ್ರುಗಳಿಗೆ ಈ ರೀತಿ ಪ್ರೀತಿ ವಾತ್ಸಲ್ಯವನ್ನು ಧಾರೆಯೆರೆಯಲಾದ ಇನ್ನೊಂದು ಉದಾಹರಣೆ ಇತಿಹಾಸದಲ್ಲಿ ಬೇರೆ ಸಿಗಲಾರದು. ಪ್ರವಾದಿವರ್ಯರಿಗೆ(ಸ) ಎಂತೆಂತಹ ಭೀಕರ ಸಂಕಷ್ಟಗಳನ್ನು, ಸತ್ವಪರೀಕ್ಷೆಗಳನ್ನು ಎದುರಿಸಬೇಕಾಯಿತು; ಅವರ ಮೇಲೆ ಏನೆಲ್ಲ ಗತಿಸಿತು ಎಂಬುದನ್ನು ಯೋಚಿಸುವಾಗಲೇ ಮೈ ನವಿರೇಳುತ್ತದೆ. ಅಂತಹ ಘಟನೆಗಳ ಪೈಕಿ ಕೆಲವೊಂದನ್ನು ಇತಿಹಾಸದ ಪುಟಗಳಿಂದ ಆಯ್ದು ಯುವ ಲೇಖಕ ಮುಹಮ್ಮದ್ ಅಶ್ರಫ್ ಅವರು 'ಶತ್ರುವತ್ಸಲ ಪ್ರವಾದಿ ಮುಹಮ್ಮದ್(ಸ)' ಎಂಬ ಈ ಕೃತಿಯಲ್ಲಿ ಸುಂದರವಾಗಿ ಪೋಣಿಸಿ ಸಿದ್ಧಪಡಿಸಿದ್ದಾರೆ.

ಲೋಕದಲ್ಲಿ ಪ್ರವಾದಿ ಮುಹಮ್ಮದ್(ಸ)ರ ಜೀವನ ಚರಿತ್ರೆಗೆ ಸಂಬಂಧಿಸಿ ರಚಿಸಲಾದಷ್ಟು ಕಿರು ಪುಸ್ತಕಗಳು ಮತ್ತು ಅನೇಕ ಸಂಪುಟಗಳುಳ್ಳ ಬೃಹತ್ ಗ್ರಂಥಗಳು ಬೇರೆ ಯಾರ ಬಗ್ಗೆಯೂ ರಚಿಸಲಾಗಿಲ್ಲವೆಂಬುದು ವಾಸ್ತವ. ಇಂದಿಗೂ ಈ ಪ್ರಕ್ರಿಯೆ ಜಾರಿಯಲ್ಲಿದೆ. ಆದರೆ ನಿಮ್ಮ ಕೈಯಲ್ಲಿರುವ ಈ ಕೃತಿಯಲ್ಲಿ, ವೈರಿಗಳ ದ್ವೇಷ, ಕ್ರೋಧಭರಿತ ವರ್ತನೆ ಮತ್ತು ಅದಕ್ಕೆ ಪ್ರವಾದಿವರ್ಯರ(ಸ) ಪ್ರೀತಿ–ವಾತ್ಸಲ್ಯಗಳೇ ತುಂಬಿದ ಪ್ರತಿಕ್ರಿಯೆಯನ್ನು ಬಹಳ ಸೊಗಸಾಗಿ ಚಿತ್ರಿಸಲಾಗಿದೆ. ಕನ್ನಡ ಸಾಹಿತ್ಯ ಲೋಕಕ್ಕೆ ಇದೊಂದು ಹೊಸ ಕೊಡುಗೆಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಲೇಖಕರ ಮಾತು

ಸಕಲ ಸ್ತುತಿಗಳೂ ಸರ್ವ ಲೋಕಗಳ ಒಡೆಯನಾದ ಅಲ್ಲಾಹನಿಗೆ ಮೀಸ ಲೋಕಾನುಗ್ರಹಿ ಪ್ರವಾದಿ ಮುಹಮ್ಮದ್‌ರ(ಸ) ಬಗ್ಗೆ ಅನೇಕ ಸಣ್ಣ-ದೊಡ್ಡ ಕೃತಿಗ ಬೃಹತ್ ಗ್ರಂಥಗಳು ಲೋಕದಾದ್ಯಂತ ಸಾವಿರಾರು ಭಾಷೆಗಳಲ್ಲಿ ಪ್ರಕಟ ಗೊಂಡಿ ಕನ್ನಡದಲ್ಲಿಯೂ ಹೇರಳ ಕೃತಿಗಳು ಪ್ರಕಟವಾಗಿವೆ. ಇನ್ನು ಅವರ(ಸ) ಜೀ ಚರಿತ್ರೆಯನ್ನು ಬರೆಯುವ ವಿಶೇಷ ಅಗತ್ಯ ಸದ್ಯಕ್ಕೆ ಇರಲಾರದು. ಈ ಸಣ್ಣ ಕೃತಿ ಮೂಲಕ ಪ್ರವಾದಿವರ್ಯರ(ಸ) ಜೀವನ ಚರಿತ್ರೆಗಿಂತ ಭಿನ್ನವಾಗಿ ಶತ್ರುಗಳ ಕು ಅವರ(ಸ) ಸದ್ವರ್ತನೆಯನ್ನು ತಿಳಿಸಲು ಪ್ರಯತ್ನಪಡಲಾಗಿದೆ. ಪ್ರವಾದಿವರ್ಯರು(ತಮ್ಮ ಅನುಯಾಯಿಗಳಲ್ಲಷ್ಟೇ ಅಲ್ಲ ತಮ್ಮನ್ನು ಪೀಡಿಸಿದ, ನಾಡಿನಿಂದ ಹೊರಗಟ್ಟಿ ತಮ್ಮ ಕೊಲೆಗೆ ಮುಂದಾದ ಶತ್ರುಗಳ ಮೇಲೂ ಎಷ್ಟು ವಾತ್ಸಲ್ಯ ಹೊಂದಿದ್ದ ಎಂಬುದನ್ನು ತಿಳಿಸುವುದೇ ಈ ಕೃತಿಯ ಉದ್ದೇಶ.

ಈ ರೀತಿಯ ಪ್ರಯತ್ನ ತೀರಾ ವಿರಳವಾಗಿ ನಡೆದಿದೆ. ನನಗೆ ತಿಳಿದಿರ ಮಟ್ಟಿಗೆ ಇಂತಹ ಪ್ರಯೋಗ ಕನ್ನಡದಲ್ಲಿ ಇದು ಮೊದಲನೆಯದ್ದು. ಈ ಕೃತಿ ರಚನೆಗಾಗಿ ಸುಮಾರು ಅರುವತ್ತರ ದಶಕದಲ್ಲಿ ಪ್ರಕಟವಾಗಿದ್ದ 'ರಸೂಲೆ ಅಕ್ರ ಕಿ ದುಶ್ಮನೋಂ ಸೆ ಸುಲೂಕ್' ಎಂಬ ಉರ್ದು ಕೃತಿ ಮತ್ತು ಇಬ್ರಾಹೀಮ್ ಸಈ ರವರ 'ಪ್ರವಾದಿ ಮುಹಮ್ಮದ್(ಸ) ಜೀವನ ಮತ್ತು ಸಂದೇಶ' ಎಂಬ ಕೃತಿಯ ಆಧಾರವಾಗಿರಿಸಿ ಮತ್ತಿತರ ಮೂಲಗಳಿಂದ ಮಾಹಿತಿಗಳನ್ನು ಕಲೆ ಹಾಕಿ ನಿ ಮುಂದಿರಿಸಲು ಪ್ರಯತ್ನಿಸಿದ್ದೇನೆ. ಕೆಲವು ಘಟನೆಗಳು ಪುನರಾವರ್ತನೆಯಾಗಿರುವು ಕಾಣಬಹುದು. ಆದರೆ ಅದು ಸಂದರ್ಭಾನುಸಾರ ಉಲ್ಲೇಖಿಸುವುದು ಅನಿವಾ ವಾಗಿತ್ತು. ಅದೇನಿದ್ದರೂ ಮಾನವ ಸಹಜ ದೌರ್ಬಲ್ಯದ ಕಾರಣ ತಪ್ಪೇನಾದ ಸಂಭವಿಸಿದ್ದರೆ, ಅದನ್ನು ತಿದ್ದಲು ಸಹಾಯ ಮಾಡುವಿರಾಗಿಯೂ ನಂಬಿದ್ದೆ ಅಂತೆಯೇ ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಹಿರಿಯ ಇಸ್ಲಾಮೀ ಚಿಂತಕ, ಸಾ ಇಬ್ರಾಹೀಮ್ ಸಈದ್ ಹಾಗೂ 'ಶತ್ರುವತ್ಸಲ' ಎಂಬ ಪದವನ್ನು ಪರಿಚಯಿಸಿ ಕೃತಿಯ ರಚನೆಗೆ ಪ್ರೇರಕವಾದ ನ್ಯಾಯವಾದಿ ಕೋ. ಚೆನ್ನಬಸಪ್ಪರಿಗೆ ಆಭಾರಿಯಾಗಿದ್ದೆ

ಪ್ರವಾದಿವರ್ಯರ(ಸ) ಸದ್ವರ್ತನೆಯನ್ನು ಮಾದರಿಯಾಗಿಸಿ ನಮ್ಮ ಇ ಪರಗಳನ್ನು ಬೆಳಗಿಸುವ ಸೌಭಾಗ್ಯವನ್ನು ಕರುಣಿಸಲೆಂದು ಅಲ್ಲಾಹನಲ್ಲಿ ಪ್ರಾರ್ಥಿಸುತ

ವಮಾ ತೌಫೀಕೀ ಇಲ್ಲಾ ಬಿಲ್ಲಾಹ್.

2007 ಸೆಪ್ಟೆಂಬರ್ 14

ಮುಹಮ್ಮದ್ ಅಶ್ರ
ಮಂಗಳೂ

ಮುನ್ನುಡಿ

ಹಿಂದೊಮ್ಮೆ ನಮ್ಮ ಕಲ್ಪನೆಗೂ ಸಿಗಲಾರದಷ್ಟು ವಿಶಾಲವಾಗಿದ್ದ ಭೂಮಿ ದಿನ ವೈಜ್ಞಾನಿಕ ಬೆಳವಣಿಗೆಯಿಂದಾಗಿ ಆಧುನಿಕ ಮಾನವನ ಪಾಲಿಗೆ ಸಂಕುಚಿತ ಂಡು 'ವಿಶ್ವಗ್ರಾಮ'ವಾಗಿ ಪರಿವರ್ತನೆಗೊಂಡಿದೆ. ಒಂದು ಟಿ.ವಿ.ಯನ್ನು ಆನ್ ಡಿ ನನ್ನ ಮನೆಯ ಕೋಣೆಯೊಳಗೆ ಕುಳಿತು ನಾನು ದಕ್ಷಿಣ ಆಫ್ರಿಕಾದಲ್ಲಿ ಯುತ್ತಿರುವ ಕ್ರಿಕೆಟ್ ಮ್ಯಾಚನ್ನು ಆಫ್ರಿಕಾದ ಸ್ಟೇಡಿಯಮ್‌ನಲ್ಲಿ ಹಣಕೊಟ್ಟು ಕವನಿಗಿಂತ ಚೆನ್ನಾಗಿ ಜೀವಂತವಾಗಿ ಕಾಣಬಹುದಾಗಿದೆ. ನನ್ನ ಮುಷ್ಟಿಯೊಳಗಿನ ಬೈಲಿನ ನಂಬ್ರಗಳನ್ನು ಒತ್ತಿ ನಾನು ಅಮೇರಿಕಾದಲ್ಲಿರುವ ನನ್ನ ಸಂಬಂಧಿಗಳೊಡನೆ ದುರು ಕೂತವನಷ್ಟೆ ಸರಾಗವಾಗಿ ಮಾತಾಡಬಹುದಾಗಿದೆ. ವಿಶ್ವವಿಂದು ಮಾನವನ ಂದೆ ತೆರೆದುಕೊಂಡಿದೆ. ಭೂಮಿ ಕೈಯಳತೆಗೆ ಕುಗ್ಗಿಕೊಂಡಿದೆ. ಇಷ್ಟೇ ಏಕೆ, ಗ್ರಹಗಳ ಯಾತ್ರೆಗೆ ಕ್ಷಣಗಣನೆ ಮಾಡಲಾಗಿದೆ. ಮುಂದಿನ ಕ್ರಿಕೆಟ್ ಮ್ಯಾಚು ಗಳ ಲೋಕದ ಅಂಗಳದಲ್ಲಿ ನಡೆದರೆ ಆಶ್ಚರ್ಯವೇನೂ ಇಲ್ಲ.

ಬಾಹ್ಯದಲ್ಲಿ, ವೈಜ್ಞಾನಿಕವಾಗಿ ತ್ರಿವಿಕ್ರಮನಂತೆ ಬೆಳೆದ ಮಾನವ ಅಂತರಂಗದ ಷ್ಟಯಿಂದ ದಿನದಿಂದ ದಿನಕ್ಕೆ ಕುಬ್ಜನಾಗುತ್ತಿದ್ದಾನೆ. ಅನಾಯಾಸವಾಗಿ, ದೇಣಿಗೆಯಾಗಿ, ಬ್ರಹ್ಮಾಂಡವನ್ನೇ ತನ್ನ ತೆಕ್ಕೆಯಲ್ಲಿ ಅರ್ಶಿಯಿಂದ ತಬ್ಬಿಕೊಳ್ಳಬಲ್ಲ ನವಾದ ಹೃದಯಕ್ಕೆ ಮಾತ್ರ ಆಧುನಿಕ ಮಾನವ ಬೀಗ ಜಡಿದು ಬಿಟ್ಟಿದ್ದಾನೆ. ರ ಸುತ್ತ ಅಡ್ಡಗೋಡೆಗಳನ್ನು ಎತ್ತರಿಸುತ್ತಿದ್ದಾನೆ. ಅದರಿಂದಲೇ ಇಂದು ದೈವ ಕುಟುಂಬದ ಮಾತು ಬಿಡಿ, ನಮ್ಮ ನೆರೆಯವನೇ ನಮಗೆ ರಿಚಿತನಾಗುತ್ತಿದ್ದಾನೆ. ಒಂದೇ ಕಟ್ಟಡದ, ಒಂದೇ ಸೂರಿನ, ಒಂದೇ ಮಹಡಿಯ ರು–ಬದುರು ಪ್ಲ್ಯಾಟಿನವನೂ ನಮಗೆ ಅಪರಿಚಿತನಾಗಿದ್ದಾನೆ. ಕುಟುಂಬ ಂಧಗಳು ಒಡೆದು ಹೋಗಿವೆ. ಗಂಡ ಹೆಂಡಿರದ್ದೂ, ತಂದೆ ಮಕ್ಕಳದ್ದೂ ತುಕೊಳ್ಳುವ ಲೆಕ್ಕಾಚಾರದ ವ್ಯಾಪಾರೀ ಸಂಬಂಧಗಳಾಗುವ ದುರಂತದ ದಿನಗಳನ್ನು ಪು ಹಾದು ಹೋಗುತ್ತಿದ್ದೇವೆ. ಹೀಗೆ ಎರಡು ವಿರೋಧಾಭಾಸಗಳ ನಡುವೆ ನಮ್ಮ ಕು ಸಾಗಿದೆ.

ಪರಸ್ಪರ ಹೊಂದಾಣಿಕೆಯ, ಪರಸ್ಪರ ಅರ್ಥವಿಸಿಕೊಳ್ಳುವ ಸಾಧನಗಳೂ

ಪರಸ್ಪರರ ಕೊಡುಗೆಯಾಗಿ, ಪೋಷಕವಾಗಿ ಪರಿಗಣಿತವಾಗಿದ್ದ ಸಂಗತಿಗಳೂ ಇಂ ಹೇಗೆ ದ್ವೇಷದ ಆಸ್ಫೋಟದ ಸಾಧನಗಳಾಗುತ್ತಿವೆ. ನೋಡಿ, ಭಾಷೆ ಅನ್ನುವ ಮನುಷ್ಯ ಮನುಷ್ಯರೊಡನೆ ತಿಳಿವಿನ ಬೆಳಕು ಚೆಲ್ಲುವ ಸ್ನೇಹದ ಬಳ್ಳಿ ಬೆಳೆಯ ಸಾಧನ. ಆದರೆ ಇಂದು ನಮ್ಮ ದೇಶದಲ್ಲೇ ಭಾಷೆ-ಭಾಷೆಗಳು ಪರಸ್ಪರ ಕತ್ತಿ ಹಿ ನಿಂತಿರುವುದನ್ನು ಕಾಣುತ್ತಿದ್ದೇವೆ. ನಮಗೆಲ್ಲ ತಿಳಿದಿರುವಂತೆ ಎಲ್ಲೇ ಬೆಂಕಿ ಬಿದ್ದ ನಂದಿಸಲು, ತಣಿಸಲು ನೀರು ಮಾತ್ರ ಸಾಧನ. ಆದರೆ ಇಂದು ನಮ್ಮ ಗಡಿ ಪ್ರದೇ ಕಾವೇರಿ, ಕೃಷ್ಣೆಯರನ್ನು ನೋಡಿ! ಅದರ ಜೀವನದಾಯಿ ನೀರೇ ಇಂದು ಪೆಟ್ರೋ ಆಗಿ ಪರಿವರ್ತನೆಗೊಂಡು ಬಸ್ಸು, ರೈಲು, ರಿಕ್ಷಾ, ಕಟ್ಟಡಗಳನ್ನು ಬೆಂಕಿಯ ಉರಿಸುವ ಸಾಧನವಾಗಿರುವುದನ್ನು ನಾವು ನೋಡುತ್ತಾ ಬಂದಿದ್ದೇವೆ.

ಇವೆಲ್ಲದರ ಕಾರಣ ಮಾನವ ಬುದ್ಧಿಯಿಂದ ಬೆಳೆದಷ್ಟೇ ಹೃದಯದಿ ಬೆಳೆಯದಿರುವುದಾಗಿದೆ. ನಮ್ಮ ಬುದ್ಧಿಯಷ್ಟೇ ಹೃದಯವೂ ಬೆಳೆಯುತ್ತಿ ಆಂತರಂಗಿಕವಾಗಿ ಕೂಡಾ ವಿಶ್ವ ಒಂದು ಗ್ರಾಮವಾಗಿ ನಮ್ಮಂತರಂಗ ತುಂಬಿಕೊಳ್ಳುತ್ತಿತ್ತು. ಹೃದಯದಿಂದ ಸೂಸಿ ಬಂದ ಪ್ರೀತಿ ವಿಶ್ವಾಸಗಳ ಮೂ ಆದಿಕವಿ ಪಂಪನೆಂದ 'ಮನುಜಕುಲ ತಾನೊಂದೆ ವಲ' ಎಂಬ ಮಾ ವಾಸ್ತವವಾಗಿ ನಮ್ಮ ಮುಂದೆ ಸಾಕ್ಷಾತ್ಕಾರಗೊಳ್ಳುತ್ತಿತ್ತು. ಇಂದು ದ್ವೇಷ ಅಸೂಯೆ ತಮ್ಮ ಆಸುರೀ ನೃತ್ಯ ನಡೆಸಿವೆ. ನಮ್ಮ ಕಣ್ಣಮುಂದೆಯೇ ಈ ವಿಕೃತ ವಿಕಾ ಮನಸ್ಸುಗಳನ್ನು ಕಂಡು ನನ್ನ ಮನಸ್ಸು ನೊಂದಿದೆ, ಬೆಂದಿದೆ. ಆಗಲೆಲ್ಲ ಗೋಪಾಲಕೃಷ್ಣ ಅಡಿಗರ ಕವನದ ತುಣುಕೊಂದು ನನ್ನಂತರಂಗದಲ್ಲಿ ಅನುರಣಿಸುತ್ತ

ಎಂದು ಕೊನೆ?– ಹಾ– ಎಂದು ಕೊನೆ?
ಒಬ್ಬರನ್ನೊಬ್ಬರು ಕೊಂದು ಕಳೆವ ಕೊಲೆ
ಹಬ್ಬಕೆ ತಾ ಬರದೇನು ಕೊನೆ?
ಈ ಕೊಳೆಕೊಬ್ಬಿಗೆ– ಈ ಬಗೆ ಮಬ್ಬಿಗೆ
ಎಂದು ಕೊನೆ?– ಓ– ಎಂದು ಕೊನೆ?

ದಯಾಮಯನೂ, ಉದಾರಿಯೂ ಆದ ದೇವರು ಈ ಸುಂದರ ಸೃಷ್ಟಿಯ ಪ್ರೀತಿ ವಿಶ್ವಾಸಗಳ ಮೂಲದ್ರವ್ಯದ ಮೂಲಕ ಮಾನವರನ್ನು ಹುಟ್ಟಿಸಿರುವ ಮಾನವರು ಸೈತಾನರಂತೆ ಯಾಕೆ ಪರಸ್ಪರ ದ್ವೇಷಿಸುತ್ತಾರೆ, ನೆತ್ತರಕೋಡಿ ಹರಿಸುತ ಕೊಲ್ಲುತ್ತಾರೆ? ಪರಸ್ಪರ ಸಹೋದರರಂತೆ ಪ್ರೀತಿಸುತ್ತಾ ಬಾಳುವ ಮೂಲಕ ಸೃಷ್ಟಿಯನ್ನು ಯಾಕೆ ದೇವ ನಿರ್ಮಿತ ಸುಂದರ ನಂದನವನ್ನಾಗಿಸಲು ಆಗುತ್ತಿ ಒಬ್ಬರನ್ನೊಬ್ಬರು ನಂಬುವ, ತುಂಬುವ ಹಬ್ಬವು ಕಬ್ಬದ ಕಾದಂಬಿನಿಯ ಮೂಡುವ ಮುಳುಗುವ ಮಳೆಬಿಲ್ಲು ಮಾತ್ರ ಏಕಾಗುತ್ತದೆ? ಮಾನವ ಮಾನವರೊಳ

ಾಕು ಚಿರಂತನವಾದ, ಚೇತೋಹಾರಿಯಾದ ದೈವೀ ಸಂಬಂಧಗಳಾಗಿ ಏಕೆ ಪುಗೊಳ್ಳುತ್ತಿಲ್ಲ? ಈ ರಕ್ತಸಿಕ್ತ ಕುರುಕ್ಷೇತ್ರದ ಸ್ಥಿತಿ ಬದಲಾಗದೆ ಹೋದರೆ ನವನಿಗೆ ಉಳಿಗಾಲವಿಲ್ಲ.

ಇಂದು ಎಲ್ಲ ಕ್ಷೇತ್ರಗಳಲ್ಲಿ ವಿಜೃಂಭಿಸುತ್ತಿರುವ ಸರ್ವಾಧಿಕಾರಿ ಮನೋವೃತ್ತಿ ಸ್ತ ಕುರುಡು ಧೃತರಾಷ್ಟ್ರ ಬುದ್ಧಿಗಳೇ ನಮ್ಮ ವಿಭಜನೆಗೆ, ನಮ್ಮ ನಮ್ಮಲ್ಲಿನ ದ್ವೇಷಕ್ಕೆ ಣವಾಗಿದೆ. ಮೆದುಳನ್ನು ಬೆಳೆಸುತ್ತಾ, ಬುದ್ಧಿಯನ್ನು ಹೆಚ್ಚಿಸುತ್ತಾ ಹೃದಯವಂತಿಕೆಯನ್ನು ಮಕೊಳ್ಳುವ ವಿದ್ಯಾಭ್ಯಾಸ ಇವೆಲ್ಲವುಗಳ ಮೂಲ ಕಾರಣವಾಗಿದೆ.

ಈ ದೇವಸೃಷ್ಟಿಯಲ್ಲಿ ಒಬ್ಬ ಮನುಷ್ಯ ಮತ್ತೊಬ್ಬನಿಗಿಂತ ರೂಪ ಆಕಾರಗಳಲ್ಲಿ ವಿರುವಂತೆಯೇ ಅಭಿರುಚಿ ಮತ್ತು ಆಸಕ್ತಿಗಳಲ್ಲಿ ವಿಭಿನ್ನವಾಗಿರುವುದು ಸಹ ಾವಿಕ ಎನ್ನುವ ಮೂಲಭೂತ ಸತ್ಯವನ್ನು ನಾವು ಅರಿತಿರಬೇಕು. ಈ ಸತ್ಯ'ವನ್ನು ಅರಿತಾಗಲೇ ವಿಭಿನ್ನ ನಂಬಿಗೆಯ ಬೇರೆಬೇರೆ ನಡವಳಿಕೆಯ ನಾವು ಂದಾಣಿಕೆಯಿಂದ ಒಂದಾಗಿ ಬಾಳಬಲ್ಲೆವು. ಜೊತೆಗೆ ನಮಗೆ ಪ್ರಿಯವಾದುದನ್ನು ರಿಂದ ಸ್ವೀಕರಿಸುತ್ತಲೂ, ಅವರಿಗೆ ಪ್ರಿಯವಾದುದನ್ನು ನಾವು ಅವರಿಗೆ ಟುತ್ತಲೂ ಪರಸ್ಪರ 'ಕೊಡುಕೊಳು'ವ ಮೂಲಕ ಶಾಂತಿಯಿಂದ ಬದುಕಬಲ್ಲೆವು.

ಆದರೆ ಹೊಂದು – ಹೊಂದಾಣಿಕೆಯ ಬದುಕಿಗೆ ಪೂರಕವೂ ಪೋಷಕವೂ ವೇಕಿದ್ದ ಎಲ್ಲವೂ ಇಂದು ಹಿಂದಿನ ಬಾಗಿಲಲ್ಲಿ ವಿಭಜನೆಗೆ ಪ್ರೋತ್ಸಾಹಿಸುತ್ತಿರುವುದನ್ನು ಹು ನಾನು ನೊಂದಿದ್ದೇನೆ. ಇಂದು ಧರ್ಮರಾಜಕೀಯ, ಭಾಷೆ, ನಡೆನುಡಿ, ಾರ–ವಿಚಾರ ಇವೆಲ್ಲ ನಮಗರಿಯದಂತೆಯೇ ವಿಭಜನೆಯ ವಿಷದಿಂದ ಷಿತವಾಗಿರುವುದನ್ನೂ ಕಂಡು ನಾನು ದಿಗ್ಭ್ರಮೆಗೊಂಡಿದ್ದೇನೆ. ಹೀಗಾಗಿ ಈ ಗಳಲ್ಲಿ ನಾನು ಎಲ್ಲಾ ಕ್ಷೇತ್ರಗಳಲ್ಲೂ ನನ್ನನ್ನು ಒಳಗೆ ಉಳಕೊಳ್ಳುತ್ತಾ ಆಮೆಯಂತೆ ಾಕುತ್ತಿದ್ದೇನೆ.

ಎಲ್ಲಕ್ಕಿಂತ ಹೆಚ್ಚು ನನ್ನನ್ನು ಚುಚ್ಚುತ್ತಿರುವುದು ದೇಶದ ಸಮಸ್ತರನ್ನೂ ಸಮ ಯ, ಸಮಸುಖದ, ಸಾಮರಸ್ಯದ ನೆಲೆಯಲ್ಲಿ ಮುನ್ನಡೆಸಿಕೊಂಡು ಹೋಗಬೇಕಾಗಿದ್ದ ಃಕಾರಣಿಗಳ ನಡೆ–ನುಡಿಗಳು ಮಾತು–ಕೃತಿಗಳಿಗೆ ತಾಳ–ಮೇಳವಿಲ್ಲದಾಗಿದೆ. ಯಕ್ತಿಕ ಸ್ಥಾನಮಾನ, ಸಂಪತ್ತುಗಳಿಗಾಗಿ ಏನನ್ನು ಬೇಕಾದರೂ ಮಾಡುತ್ತಿರುವ ಾಜಕಾರಣಗಳಿಂದ ನಮ್ಮ ದೇಶದ ಭವಿಷ್ಯತ್ತು ಏನಾದೀತೆಂದು ಆತಂಕಿತನಾಗಿದ್ದೇನೆ. ನ್ನಂದು ಮಾನವಕುಲದ ಉನ್ಮುಖ ಬದುಕಿನ ಹಾದಿತೋರಿಸಿ, ವಿಶ್ವವನ್ನೆಲ್ಲ ಪ್ರೀತಿ ಸಗಳ ನೆಲೆಯಲ್ಲಿ ಒಂದಾಗಿ ಬೆಳೆಸಿ, ಶಾಂತಿ–ಸೌಹಾರ್ದಗಳ ಮೂಲಕ ಾಜವನ್ನು ಕಟ್ಟಿ ಬೆಳೆಸಬೇಕಾದ ಕೆಲವು ಧಾರ್ಮಿಕ ಮುಂದಾಳುಗಳೆನ್ನಿಸಿ ಸ್ಳುತ್ತಿರುವವರು ಬಿತ್ತುತ್ತಿರುವ ದ್ವೇಷ, ಕೊಲೆ, ಕ್ರೌರ್ಯಗಳು ಎಂದೂ ಧರ್ಮ

ಎನಿಸಿಕೊಳ್ಳಲಾರದು. ಧರ್ಮ ಬಿಡಿ ಸಾಮಾನ್ಯ ಮಾನವೀಯ ನಡವಳಿಕೆಯೂ ಅ ಧರ್ಮವು ಮನುಷ್ಯ ಮನುಷ್ಯರನ್ನು ಪ್ರೀತಿಸಲು ಕಲಿಸುತ್ತದೆ. ಧರ್ಮವು ಪರ ವಿಶ್ವಾಸದ ಮೂಲಕ ಸೌಹಾರ್ದ ಸಾಮರಸ್ಯದ ಸಮಾಜ ನಿರ್ಮಾಣ ಮಾಡುತ್ತ ಧರ್ಮದ ಕೆಲಸ ಸಮಾಜದಲ್ಲಿ ಪ್ರೀತಿಯ ಅಮೃತವಾಹಿನಿಯನ್ನು ಹರಿಸುವುದಾ ಕತ್ತಿಯನ್ನು ಕೈಗೆತ್ತಿ ಸಂಹಾರ ನಡೆಸುವುದಾಗಲೀ ಆಸ್ಫೋಟವನ್ನು ಸೊಂಟ ಸುತ್ತಿಕೊಂಡು ಗುಂಡಿಯೊತ್ತಿ ನರಸಂಹಾರ ನಡೆಸುವುದಾಗಲೀ ಧರ್ಮ ಆಗಲಾ ಎನ್ನುವುದನ್ನು ನಾವು ಮೊತ್ತಮೊದಲು ತಿಳಿದಿರಬೇಕು. ಅದೇ ರೀತಿಯಾಗಿ ನೆರೆಕರೆಯವ ತನ್ನ ಮತಧರ್ಮದವನಲ್ಲ ಎಂದು ದ್ವೇಷಿಸುವುದನ್ನೂ ಧ ಒಪ್ಪಲಾರದು. ಒಟ್ಟು ಮಾನವಕುಲವನ್ನು ಪ್ರೀತಿಸುವುದೇ, ಪರಸ್ಪರ ನೆರವಾಗುವ ಧರ್ಮದ ಮೂಲ ತತ್ವ ಮತ್ತು ಅದೇ ಅದರ ಸತ್ವ.

ನಾನು ಇತ್ತೀಚೆಗಿನ ದಿನಗಳಲ್ಲಿ ಈ ಸಾಮಾಜಿಕ ದುರಂತವನ್ನು ಕ ಆಂತರಂಗಿಕವಾಗಿ ತುಂಬಾ ನೊಂದಿದ್ದೇನೆ. ಮಾನವನ ಇಹಪರಗಳ ಉನ್ಮುಖ ಸಾಧನವಾದ ಧರ್ಮ, ಒಟ್ಟು ಸಮಾಜದ ಸರ್ವತೋಮುಖ ಪ್ರಗತಿಗೆ ನೆರವಾಗಬೇ ರಾಜಕೀಯ, ಒಟ್ಟು ಮಾನವಕುಲದ ಅಂತರಂಗದ ಸಂವೇದನೆಗಳ ಅರ್ಥವಿಸಿಕೊಳ್ಳಲು ಸಾಧನವಾದ ಭಾಷೆ– ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಕಾಸರಕನ ಬಿ ಬಿತ್ತುತ್ತಿರುವ, ವಿಷಗಾಳಿ ಹಬ್ಬುತ್ತಿರುವ, ಅಮಾನುಷ ಮಾತುಕತೆ, ಕೆಲಸ ಕಾರ್ಯ ನಡೆಯುತ್ತಿರುವುದನ್ನು ಕಂಡು ಉದ್ಗಾರವೊಂದು ನನ್ನೊಳಗಿಂದ ನಿರಂ ಹೊರಡುತ್ತಿರುತ್ತದೆ, "ಓ ದೇವರೇ ಎಂದು ಕೊನೆ? ಇದಕ್ಕೆ ಎಂದು ಕೊನೆ?

ಇಂತಹ ದಿನಗಳಲ್ಲೇ ಒಂದು ಬೆಳಗಿನ ಹೊತ್ತು. ನನ್ನ ಮನೆಯಂಗ ಮಾವಿನ ಮರದ ಹಸಿರು ತಳಿರುಗಳು ಬಾಲ ಸೂರ್ಯನ ಮುಗ್ಧ ಕಿರಣಗಳೊ ಚೆಲ್ಲಾಟವಾಡುತ್ತ ಅಂಗಳದಲ್ಲಿ ಕ್ಷಣಕ್ಕೊಂದು ನೆರಳು ಬೆಳಕಿನ ರಂಗೋಲಿಯ ಚಿತ್ರಿಸುತ್ತಿತ್ತು. ಮರದ ಎಲೆಗಳ ಗೊಂಚಲುಗಳ ನಡುವೆ ಅಡಗಿದ್ದ ಅನಾಮಧೇ ಹಕ್ಕಿಯೊಂದು ತನ್ನ ಕೊರಳೊಳಗಿಂದ ಶಾಂತಿಯ ಸಂದೇಶವಾಗಿ ದೈವೀ ಒಂದನ್ನು ಹೊರಡಿಸುತ್ತಿತ್ತು. ಆ ರಾಗ ತರಂಗಿಕತೆಯು ಅಂತರಂಗದಲ್ಲಿ ಪ್ರೀತಿಯಿ ಕಚಗುಳಿ ಇಡುತ್ತಿತ್ತು. ಆ ಬೆಳಗಿನ ತಣ್ಣನೆಯ ತಂಗಾಳಿ ನನ್ನ ದೇಹವ ಅರಿಯದಂತೆ ಪೂಸಿಪೂಸಿ ನವಿರೇಳಿಸುತ್ತಿತ್ತು. ಇಂತಹ ಪ್ರಸನ್ನ ಹೊತ್ತಿ ಮಂಗಳೂರಿನ 'ಶಾಂತಿ ಪ್ರಕಾಶನ'ದ ತರುಣ ಮಿತ್ರರು, ಮನೆಯೊಳಗೆ ಕಾಲಿಟ್ಟ

ಮಂಗಳೂರಿನ ಶಾಂತಿ ಪ್ರಕಾಶನ ಮತ್ತು ಮಿತ್ರರದ್ದು ನನಗೆ ಸ್ವಲ್ಪ ಕಾ ಹಿಂದೆಯೇ ಪರಿಚಯವಿತ್ತು. ಶಾಂತಿ ಪ್ರಕಾಶನ ಬಹಳ ಕಾಲದಿಂದ ಮುಸ್ಲಿ ಧಾರ್ಮಿಕ ಸಾಹಿತ್ಯವನ್ನು ಅಚ್ಚುಕಟ್ಟಾಗಿ ಸರಳವಾಗಿ, ಸುಂದರವಾಗಿ ಮು

ೂರತರುತ್ತಿತ್ತು. ಸಾಮಾಜಿಕ ಸಾಮರಸ್ಯಕ್ಕೆ ಪೂರಕವೂ, ಪೋಷಕವೂ ಆಗುವ ಕಷ್ಟು ಗ್ರಂಥಗಳು ಶಾಂತಿ ಪ್ರಕಾಶನದಿಂದ ಹೊರ ಬಂದಿದೆ. ಇತ್ತೀಚೆಗೆ ದ್ಯಾದ್ಯಂತ ತಪ್ಪಾಗಿ ಅರ್ಥೈಸಲ್ಪಟ್ಟಿದ 'ಜಿಹಾದ್' ಇದರ ಕುರಿತು ಮುಸ್ಲಿಮ್ ರ್ಮಗ್ರಂಥಗಳು ಹೇಳುವ ಜಿಹಾದ್ ನಿಜವಾದ ಅರ್ಥದಲ್ಲಿ ಏನು ಎಂಬುದನ್ನು ಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಸೊಗಸಾಗಿ ಬರೆದ ಗ್ರಂಥವನ್ನು ಕೈಯಿಂದಲೇ ಶಾಂತಿ ಪ್ರಕಾಶನದವರು ಬಿಡುಗಡೆಗೊಳಿಸಿದ್ದರು. ಅವರು ಟಿಸಿದ ಇನ್ನೂ ಕೆಲವು ಗ್ರಂಥಗಳನ್ನು ನನಗೆ ಕೊಟ್ಟಿದ್ದರು. ಅದರಲ್ಲಿ ಕೆಲವನ್ನು ವಿನಲ್ಲಿ ಓದಿ ಸಂತೋಷಪಟ್ಟಿದ್ದೆ. ಒಳ್ಳೆತನದ ತಿಳಿವನ್ನು ಆ ಕಡೆಯಿಂದ ಈ ಯವರಿಗೆ, ಈ ಕಡೆಯಿಂದ ಆ ಕಡೆಯವರಿಗೆ ಕೊಡು-ಕೊಳ್ಳುವ ಆದಾನ ಾನ ಇಂದಿನ ತುರ್ತು ಅಗತ್ಯವಾಗಿದೆ. ಆಗ ಮಾತ್ರ ಪರಸ್ಪರರಲ್ಲಿ ತಪ್ಪು ವಳಿಕೆಗಳು ಕಳೆದು ಹೋಗುತ್ತವೆ. ಎಷ್ಟೋ ಮಂದಿ ಧಾರ್ಮಿಕರೆನ್ನುವವರು ಅನ್ಯ ರ್ಮದ ಮಾತು ಬಿಡಿ, ತನ್ನ ಧರ್ಮದ ಕುರಿತೇ ಸರಿಯಾಗಿ ತಿಳಿದುಕೊಂಡಿರುವುದಿಲ್ಲ. ಧರ್ಮಗಳ ನಡುವೆ ಬರುವ ಘರ್ಷಣೆಗೆ ಇದೇ ಮೂಲ.

ಮನುಷ್ಯ 'ತಾನು, ತನ್ನದು, ತನಗೆ' ಎಂದು ಮಾತ್ರ ತಿಳುವಳಿಕೆ ಇರುವ ನಸಿಕ ಸ್ಥಿತಿಯ ಅನಾಗರಿಕ ದಿನಗಳಲ್ಲಿ ಉದಾರ ಚರಿತರೂ ವಿಶಾಲ ಯಿಗಳೂ ಆದ ದಾರ್ಶನಿಕ ಮಹಾಮಾನವರು ಹುಟ್ಟಿದರು. ಅವರು ದೈವೀ ಯಿಂದ ಮಾನವ-ಮಾನವರೊಳಗಿನ ದ್ವೇಷವನ್ನು ಕಳೆದೊಗೆಯುವ ಕೆಲಸವನ್ನು ದಲು ಮಾಡಿದರು. ಆ ಬಳಿಕ ಪರಸ್ಪರ ಪ್ರೀತಿಸಿ, ವಿಶ್ವಾಸದಿಂದ ಅವರನ್ನೆಲ್ಲಾ ಮಗೂಡಿಸುವ ಕಾಯಕ ನಡೆಸಿದರು. ಹೃದಯದಿಂದ ಹೃದಯಕ್ಕೆ ಇರುವ ತರವನ್ನು ಸ್ನೇಹದ ಸೇತು ಕಟ್ಟುವ ಮೂಲಕ ಒಂದಾಗಿಸಿದರು. ಇಂತಹವರೇ ರ್ಶನಿಕರು, ಋಷಿಗಳು, ಪ್ರವಾದಿಗಳು, ಸಾಧುಸಂತರು. ಒಟ್ಟು ಮಾನವಕುಲವನ್ನು ದಾಗಿಸ ಹೊರಟ ಇಂತಹ ಮಹಾಮಾನವರು ಕ್ರೋಧ ಕೊಲೆಗಳ ಕುರಿತು ೀಚನೆ ಮಾಡಿದ್ದಾರೆಂದು ಯೋಚಿಸುವುದೂ ಮಹಾ ಪಾಪ. ಅವರಿಂದ ಟ್ಟೊಬ್ಬರಿಗೆ ಕೆಟ್ಟ ಮಾತೂ ಬಂದಿರಲಾರದು. ಅವರಿಗೆ ಕೇಡು ಬಗೆದವರ ಕುರಿತೂ ವಿಶ್ವಾಸಗಳನ್ನು ನೀಡುವ ಉದಾರ ಚರಿತದವರು.

ಇದಕ್ಕಿಂತ ಹೊರತಾಗಿ ಅಂತಹ ಪ್ರೀತಿ ವಿಶ್ವಾಸಗಳ ಪ್ರಸಾರ ಮಾಡುವವರಿಗೆ, ಶೋಧಕರಾದ ಈ ಎಲ್ಲಾ ಮಹಾನ್ ಮಾನವರಿಗೆ ಅನ್ಯರಿಂದ ಬಂದಿರುವ ಕೋಟಲೆಗಳದ್ದೇ ದೊಡ್ಡ ಇತಿಹಾಸವಿದೆ. ಈ ಶಾಂತಿ ಪ್ರಿಯರಾದ ದೇವಪಥ ನಿಗಳಿಗೆ ಬುದ್ಧಿ ಇಲ್ಲದ ಕ್ರೂರಿಗಳಿಂದ ಸಾಕಷ್ಟು ದೊಡ್ಡ ಪ್ರಮಾಣದ ಅಪಾಯ ತ್ತುಗಳು ಬಂದುದನ್ನು ಇತಿಹಾಸ ನಿರೂಪಿಸುತ್ತದೆ. ಇಂತಹ ಸಾವು-ನೋವಿನ

ಪ್ರಸಂಗಗಳನ್ನು ಪ್ರೀತಿ ವಿಶ್ವಾಸಗಳಿಂದ ಮಾತ್ರ ಎದುರಿಸುತ್ತಾ ಮಾನವಕು ಇಹಪರಗಳೆರಡರ ಶ್ರೇಯಸ್ಸಿಗಾಗಿ ಈ ಮಹಾಮಾನವರು ದುಡಿದ ಇತಿಹ ನಿಜವಾದ ಪುಣ್ಯಕಥನ. ತಮ್ಮ ರಕ್ತವನ್ನು ಹರಿಯಿಸುತ್ತಾ ಇವರು ಮಾನ ಅಂತರಂಗದಲ್ಲಿ ಪ್ರೀತಿಯ ಅರಿವು ಮೂಡಿಸಿದರು. ಈ ಜಗತ್ತನ್ನು ದ ನಂದನವನ್ನಾಗಿಸಲು ಅಹರ್ನಿಶಿ. ದುಡಿದರು. ಇಂತಹವರು ತೋರಿಸಿದ ದಾರಿಯ ಇಹದ ಸುಖಶಾಂತಿಗಳು ಮಾತ್ರವಲ್ಲ, ಪರದ ಪುಣ್ಯ ಸಂಚಯವೂ ಇತ್ತು. ಇ ಸಂಪತ್ತು, ಸ್ಥಾನಮಾನವನ್ನು ಮಾತ್ರ ಚಿಂತಿಸುವ, ಬಯಸುವ ಆಯಾ ಕಾಲಘಟ್ಟದ ಸೈತಾನ ಪ್ರವೃತ್ತಿಯ ಜನಕ್ಕೆ ಈ ಪ್ರವಾದಿಗಳನ್ನು ತಿಳಿದುಕೊಳ್ಳುವ ಸಾಧ್ಯವಾಗುತ್ತಿರಲಿಲ್ಲ. ಇಂತಹ ಜನರು ಕೊಡುವ ಕಷ್ಟಕಾರ್ಪಣ್ಯಗಳನ್ನೂ ಮಹಾಮಾನವರು ಪ್ರೀತಿಯಿಂದ ಸಹಿಸಿಕೊಂಡು ಕೇಡುಗೈದ ಕೆಡುಕರನ್ನೂ ಕ್ಷ ಪ್ರೀತಿಸಿದರು.

ಏಸುಕ್ರಿಸ್ತರ ಬದುಕಿನ ಕೊನೆಯ ಘಟನೆ ನೆನಪಿಸಿಕೊಂಡಷ್ಟೂ ನನ್ನ ತುಂಬಿಕೊಳ್ಳುತ್ತದೆ. ಅವರನ್ನು ಶಿಲುಬೆಗೆ ಹಾಕಿದವರನ್ನು ಕುರಿತು ಕೊನೆಯ ಕ್ಷಣ ಏಸುಕ್ರಿಸ್ತರ ಬಾಯಿಯಿಂದ ಒಂದು ಮಾತು ಬರುತ್ತದೆ: 'ಓ ದೇವರೇ ಅವರ ಮಾಡುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ. ಅವರನ್ನು ಕ್ಷಮಿಸು.' ಇಂತಹ ಹೃದಯಸ್ಪ ಘಟನೆಗಳೇ ಮಾನವರನ್ನು ಮಹಾಮಾನವರನ್ನಾಗಿ ಎತ್ತರಿಸುತ್ತದೆ.

ಶಾಂತಿ ಪ್ರಕಾಶನದ ತರುಣ ಮಿತ್ರರು ನನ್ನ ಕೈಯಲ್ಲಿ ಕೊಟ್ಟದ್ದು ಪ್ರವ ಮುಹಮ್ಮದ್‌ರ(ಸ) ಬದುಕಿಗೆ ಸಂಬಂಧಿಸಿದ ಇಂತಹುದೇ ಘಟನೆಗಳನ್ನು ಸಂಗ್ರಹಿ ಪುಸ್ತಕ. ಪ್ರವಾದಿ ಮುಹಮ್ಮದ್‌ರು(ಸ) ಅಲ್ಲಾಹನಿಂದ ಅವತೀರ್ಣವಾದ ಸ ಸಂದೇಶವನ್ನು ಸಾರುತ್ತಿರುವ ಸಂದರ್ಭದಲ್ಲಿ ಅವರಿಗೆ ಸತ್ಯನಿಷೇಧಿಗಳಿಂದ ತು ವಿರೋಧಗಳು ಎದುರಾದುವು. ಅವರ(ಸ) ಪ್ರಾಣಕ್ಕೂ ಅಪಾಯ ಒದಗಿತ್ತು. ಸಾ ಬಗೆಯ ಹಿಂಸೆಗಳನ್ನು ಆ ಸತ್ಯನಿಷೇಧಿಗಳು ಪ್ರವಾದಿಯವರಿಗೆ(ಸ) ಕೊಟ್ಟರು. ಕನಕ, ಸಾಮ್ರಾಜ್ಯ, ಹೆಣ್ಣು– ಇವೆಲ್ಲವುಗಳ ಆಮಿಷವನ್ನೊಡ್ಡಿದ್ದರು. ಆದರೆ ಸತ್ಯಪಥ ಕ್ರಮಿಸುವಲ್ಲಿ, ಸತ್ಯವನ್ನು ಸಾರಿ ಹೇಳುವಲ್ಲಿ ಪ್ರವಾದಿಯವರು(ಸ) ಇಂ ಯಾವುದೇ ಆಶೆ, ಆಮಿಷಗಳಿಗೆ ಬಲಿಯಾಗಲಿಲ್ಲ. ಅಪಾಯಗಳಿಗೆ ಹೆದರಲಿಲ್ಲ. ಎಲ್ಲಾ ದಳ್ಳುರಿಯ ಹಾದಿಯಲ್ಲೂ ಅವರು ಹೂವಿನ ಹಾಸಿಗೆಯಲ್ಲಿ ನಡೆ ನಡೆದರು. ಯಾರನ್ನೂ ದ್ವೇಷಿಸಲಿಲ್ಲ. 'ಬೈದವರೆನ್ನ ಬಂಧುಗಳು ಹೊಡೆದವ ಹೊರೆದವರು' ಎನ್ನುವ ಬಗೆಯಲ್ಲಿ ಚಿಂತಿಸಿ ವೈರಿಗಳನ್ನೂ ಪ್ರೀತಿಸುತ್ತಾ ಬ ಸಾಗಿಸಿದರು. ಈ ಬಗೆಯ ನಡೆನುಡಿಗಳ ಮೂಲಕವೇ ಅರೇಬಿಯಾದ ಮರಳುಗಾಡಿ ಪ್ರವಾದಿಯವರು(ಸ) ಪ್ರೀತಿ–ವಿಶ್ವಾಸಗಳ ಸಾಮ್ರಾಜ್ಯ ರೂಪಿಸಿ ನಂದನ

ರ್ಮಾಣ ಮಾಡಿದರು.

ಇಸ್ಲಾಮ್ ಇಂದು ವಿಶ್ವವ್ಯಾಪಿಯಾಗಿ, ಬಲಿಷ್ಠ ಶಕ್ತಿಯಾಗಿ ಬೆಳೆದಿದೆ. ಆದರೆ ದರ ಪ್ರಾರಂಭದ ದಿನಗಳಲ್ಲಿ ಮುಹಮ್ಮದ್‌ರಾಗಲೀ(ಸ) ಅವರ ಬೆನ್ನು ಹಿಡಿದ ್ರರಂಭದ ಅನುಯಾಯಿಗಳಾಗಲೀ ಪಟ್ಟ ಪಾಡು, ಎದುರಿಸಿದ ಅಪಾಯಗಳು ಷ್ಟಿಷ್ಟಲ್ಲ. ಇವೆಲ್ಲವುಗಳ ಸಂಕ್ಷಿಪ್ತ ಇತಿಹಾಸ ಈ 'ಶತ್ರುವತ್ಸಲ' ಪುಸ್ತಕದಲ್ಲಿದೆ. ಆ ಲಘಟ್ಟದ ಅಂತಹ ಅಪಾಯಕಾರಿ ಘಟನೆಗಳನ್ನೂ ಅವುಗಳನ್ನು ಪ್ರವಾದಿ ುಹಮ್ಮದ್‌ರು(ಸ) ಎದುರಿಸಿ ಬಾಳಿದ ಬಗೆಯನ್ನು ಆ ಘಟನೆಗಳಿಗೆ ಕಾರಣ ಾದವರನ್ನೂ ದ್ವೇಷಿಸದೆ ಕರುಣೆ, ಪ್ರೀತಿಗಳಿಂದ ಕಂಡ ಬಗೆಯನ್ನೂ ಈ ಗ್ರಂಥದಲ್ಲಿ ೀಖಕ ಮುಹಮ್ಮದ್ ಅಶ್ರಫ್‌ರು ಸೊಗಸಾಗಿ ನಿರೂಪಿಸಿದ್ದಾರೆ. ಇಲ್ಲಿನ ಈ ಂಗತಿಗಳು ಬರೇ ಮುಸ್ಲಿಮರಿಗೆ ಮಾತ್ರ ಪ್ರಿಯವಾಗುವುದಲ್ಲ. ನ್ಯಾಯ, ನೀತಿ, ್ಯಗಳನ್ನು ನಂಬಿ ನಡೆವ ಎಲ್ಲರಿಗೂ ಪ್ರಿಯವಾಗಬಲ್ಲುದು. ಸಮಾನ ಮನೋಧರ್ಮದ ಲ್ಲರಿಗೂ, ಎಲ್ಲಾ ಕಾಲ–ಪ್ರದೇಶಗಳ ಒಳ್ಳೆಯ ಸಂಗತಿಗಳು ಪ್ರಿಯವೂ, ನುಕರಣೀಯವೂ ಆಗುತ್ತದೆ ಎನ್ನುವುದರಲ್ಲೇ 'ಮನುಜ ಕುಲ ತಾನೊಂದೆ ವಲಂ' ನ್ನುವುದಕ್ಕೆ ಸಾಕ್ಷಿ ದೊರಕುತ್ತದೆ. ಇಂತಹ ಸಂಗತಿಗಳು ಪ್ರಾರಂಭದಲ್ಲಿ ಒಳ್ಳೆಯ ನರಿಗೆ ಎಷ್ಟೇ ಕಷ್ಟಗಳು ಬಂದರೂ ಕೊನೆಯ ವಿಜಯ ಅವರದೇ ಎನ್ನುವುದರಲ್ಲಿ ರವಸೆ ಮೂಡಿಸುತ್ತದೆ.

ಸಹೃದಯಿ ಓದುಗರೇ, ನಾನು ಈ ಪುಸ್ತಕದ ಕುರಿತು ಇದಕ್ಕಿಂತ ಹೆಚ್ಚು ೀಳುವುದಿಲ್ಲ. ನೀವೇ ಓದಿ. ನಿಮ್ಮದೇ ಬಗೆಯಲ್ಲಿ ತಿಳಿದುಕೊಳ್ಳಲು ಕೈಗೆತ್ತಿಕೊಂಡಿರುವ ಸ್ತಕದ ಕುರಿತು ನಾನು ಹೆಚ್ಚು ಹೇಳುವುದು, ನನ್ನದೇ ಬಗೆಯಲ್ಲಿ ಅರ್ಥೈಸುವುದು ನಪೇಕ್ಷಿತ ಆಗಬಹುದು. ನಾನು ಇಲ್ಲಿ ನೋಡಿ, ಓದಿ ಎಂದು ಬೆರಳು ತೋರಿಸುವ ಂಸವನ್ನಷ್ಟೇ ಮಾಡಿದ್ದೇನೆ. ಇಂತಹ ಒಂದು ಪುಸ್ತಕ ಕನ್ನಡ ಸಾರಸ್ವತ ಲೋಕಕ್ಕೆ ್ಕದ್ದಕ್ಕಾಗಿ ನಾನು ಸಂತೋಷಿಸುತ್ತಿದ್ದೇನೆ.

ದೇವಪಥ ಯಾತ್ರಿಗಳಾಗಿ, ಎಲ್ಲರಿಗೂ ಈ ದಿಸೆಯಲ್ಲಿ ಮಾರ್ಗದರ್ಶಿಗಳಾದ ಪಂಚದ ಎಲ್ಲಾ ಕಡೆಗಳಲ್ಲೂ ಹುಟ್ಟಿ ಬಂದ ಮಹಾಮಾನವರ ಬದುಕು ಂತಹುದೇ ಹತ್ತಾರು ರೋಚಕ ಘಟನೆಗಳಿಂದ ರೂಪಿತವಾಗಿದೆ. ಅವರೆಲ್ಲರ ೀವಿತ ಇಂತಹ ಹತ್ತಾರು ಹೃದಯಸ್ಪರ್ಶಿ ಚಿತ್ರಗಳಿಂದ ವರ್ಣರಂಜಿತವಾಗಿದೆ. ವೆಲ್ಲವುಗಳನ್ನೂ ಸಂಗ್ರಹಿಸಿ, ಆರಿಸಿ, ಸಂಪಾದಿಸಿ ಮುದ್ರಿಸುವ ಕೆಲಸ ನಡೆದರೆ ಶ್ವಭ್ರಾತೃತ್ವಕ್ಕೆ ಬಹಳ ದೊಡ್ಡ ಕೊಡುಗೆಯಾದೀತು. ಪ್ರೀತಿ ತುಂಬಿ ತುಳುಕುವ ದಯವಂತಿಕೆಯ ಈ ಮಹಾಮಾನವರ ಅಂತರಂಗದ ತುಡಿತ ಮಿಡಿತಗಳಲ್ಲಿರುವ ಮಾನತೆ, ಜನರ ಒಳಿತಿಗಾಗಿ ಅವರು ಪಡುವ ಪಾಡು, ತನ್ನ ಸ್ವಂತ ಸುಖದ

ಬಗ್ಗೆ ಯೋಚಿಸದೆ ಲೋಕ ಹಿತಾರ್ಥವಾಗಿ ಅವರು ಚಿಂತಿಸಿದ ಬಗೆ, ನಡೆ ಗುಡ್ಡ–ಬೆಟ್ಟಗಳ ಕಲ್ಲು–ಮುಳ್ಳಿನ ಹಾದಿ, ಪಟ್ಟ ಸಂಕಟಗಳ ಸಾಲುಸಾಲು ಓದಿದಾ ನಮ್ಮ ಕಣ್ಣಿನಲ್ಲಿ ನೀರು ಇಳಿದೀತು. ಹೃದಯ ನೋವಿನಿಂದ, ಕಾವಿನಿಂದ ಬೆಂದೀತ ಆಗಲೆಲ್ಲ ನಮ್ಮ ಹೃದಯ ವಿಶ್ವಭ್ರಾತೃತ್ವದ ಕುರಿತು ಚಡಪಡಿಸೀತು.

ಇಂದು ಧಾರ್ಮಿಕರೆನಿಸಿಕೊಳ್ಳುವ ಜನ ಎಲ್ಲಾ ಮತ ಧರ್ಮಗಳ ಕುರಿ ತಲ ಸ್ಪರ್ಶಿಯಾಗಿ ತಿಳಿಯದಿರುವುದೇ ಪರಸ್ಪರ ಸಂಶಯ–ದ್ವೇಷಗಳಿಗೆ ಕಾರಣವಾಗುತ್ತ ಅನ್ಯಧರ್ಮವನ್ನು ಬಿಡಿ, ತನ್ನ ಧರ್ಮದ ಕುರಿತೇ ಆಳವಾಗಿ ತಿಳಿಯದಿರು ಜನರಿಂದಲೇ ಸಂಶಯ ಹಿಂಸೆಗಳ ಬೀಜ ಬಿತ್ತಲ್ಪಡುತ್ತದೆ. ಪ್ರಪಂಚದ ಯಾವು ಮತಧರ್ಮವೂ ಹಿಂಸೆ, ದ್ವೇಷಗಳನ್ನು ಬೋಧಿಸಲಾರದು. ಬೋಧಿಸಿದರೆ ಅ ವಿಶ್ವಧರ್ಮವಾಗಲಾರದು.

'ಶತ್ರುವತ್ಸಲ'ದಂತಹ ಉತ್ತಮ ಗ್ರಂಥದ ಮೂಲಕ ಪ್ರವಾದಿ ಮುಹಮ್ಮದ್‌ರ(ಬದುಕಿನ ಹತ್ತಾರು ಘಟನೆಗಳನ್ನು ಸಂಗ್ರಹಿಸಿ ಚೆನ್ನಾಗಿ ಪೋಣಿಸಿ ಆಸಕ್ತ ಲೋ ಮುಹಮ್ಮದ್ ಅಶ್ರಫ್‌ರು ಒಂದು ಒಳ್ಳೆಯ ಕೊಡುಗೆಯನ್ನು ನೀಡಿದ್ದಾರೆ. ಅದಕ್ಕ ನಾನು ಅವರನ್ನೂ ಇಂತಹ ಒಂದು ಉಪಯುಕ್ತ ಗ್ರಂಥವನ್ನು ಸುಂದರವಾ ಮುದ್ರಿಸಿ ಹೊರತರಲು ಮುಂದೆ ಬಂದಿರುವ ಶಾಂತಿ ಪ್ರಕಾಶನದವರನ ಅಭಿನಂದಿಸುತ್ತೇನೆ.

ಒಬ್ಬನೇ ದೇವನ ಮಕ್ಕಳಾದ ನಾವೆಲ್ಲ ಪರಸ್ಪರ ಪ್ರೀತಿ–ವಿಶ್ವಾಸಗಳಿಂದ ಅಣ್ಣ ತಮ್ಮಂದಿರಂತೆ ಹೊಂದಿಕೊಂಡು ಬಾಳೋಣ. ದೇವರು ನಮ್ಮೆಲ್ಲರಿಗೂ ಸು ಶಾಂತಿ ಸಮೃದ್ಧಿಯನ್ನು ಕರುಣಿಸಲಿ. ಉದಾರತೆ, ದಯಾಪರತೆಗಳಂತಹ ಉದಾ ತತ್ವಗಳು ನಮ್ಮದಾಗಲಿ.

ಸಾಕೇತ
ಮೊಡಂಕಾಪು – 574219
ಬಂಟ್ವಾಳ. ದ.ಕ.

ಏರ್ಯ ಲಕ್ಷ್ಮೀನಾರಾಯಣ ಆ
(ಅಧ್ಯಕ್ಷರು, ಭಾರತ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು)

"ನಾವು ಜಗತ್ತಿನ ಸರ್ವಶ್ರೇಷ್ಠ ದೇವಸಂದೇಶವಾಹಕ ಮತ್ತು ಆಧ್ಯಾತ್ಮಿಕ ಸುಧಾರಕ ಹಾಗೂ ಮಾನವ ಕುಲದ ಮಹೋನ್ನತ ಉಪಕಾರಿ ಹಝ್ರತ್ ಮುಹಮ್ಮದ್‌ರಿಗೆ ನಮ್ಮ ಮನ ಮಸ್ತಿಷ್ಕಗಳಲ್ಲಿ ಸೂಕ್ತ ಸ್ಥಾನ ನೀಡದಿರುವುದು ಕೃತಘ್ನತೆಯಾಗಿದೆ. ಹಿಂದುಗಳ ಅನೇಕ ಧಾರ್ಮಿಕ ಗ್ರಂಥಗಳಲ್ಲಿ ದೇವತೆ ಮತ್ತು ಅವತಾರ ಪುರುಷರ ಮೂಲಕ ಪಾಪಿಗಳನ್ನು ನಾಶಪಡಿಸಿದ ಘಟನೆಗಳ ಕುರಿತು ಅಭಿಮಾನದಿಂದ ಉಲ್ಲೇಖಿಸಲಾಗಿದೆ. ಆದರೆ ಇತಿಹಾಸ ಪುರುಷರಾದ ಮುಹಮ್ಮದರು ಪಾಪಿಗಳನ್ನು ನಾಶ ಮಾಡದೆ ಅವರ ಪಾಪಗಳನ್ನು ನಾಶಮಾಡಿದರು. ಈ ಪ್ರಕ್ರಿಯೆಯ ಮೂಲಕ ಸಾಮೂಹಿಕವಾಗಿ ಹೃದಯ ಪರಿವರ್ತನೆ ಮಾಡಿ ಅಲ್ಪ ಸಮಯದಲ್ಲಿ ಪಾಪಿಗಳನ್ನು ಪುಣ್ಯಾತ್ಮರಾಗಿ ಮಾಡಿದರು."

ರಾಜೇಂದ್ರ ನಾರಾಯಣ್ ಲಾಲ್, ಎಂ.ಎ.

('ದೈವಿಕ ಧರ್ಮ' ಎಂಬ ಪುಸ್ತಕದಲ್ಲಿ)

ಅನುಕ್ರಮಣಿಕೆ

ೋಕಾನುಗ್ರಹಿಯ ಚಾರಿತ್ರ್ಯ ಮತ್ತು ಸಂದೇಶ

ಸರ್ವ ಲೋಕಗಳ ಒಡೆಯ, ಪಾಲಕ ಪ್ರಭುವಾದ ಅಲ್ಲಾಹನು ತನ್ನ ಅಂತಿಮ ಾದಿ ಮುಹಮ್ಮದ್‌ರನ್ನು(ಸ) ಲೋಕಾನುಗ್ರಹಿಯಾಗಿಯೂ ಮಾನವ ಕುಲಕ್ಕೆ ರ್ಗದರ್ಶಕ ಮತ್ತು ಪರಿಪೂರ್ಣ ಮಾದರಿಯಾಗಿಯೂ ಮಾಡಿ ಕಳುಹಿಸಿದ್ದಾನೆ. ಗೆಯೇ ಮಾನವರ ಮೇಲೆ ಪ್ರವಾದಿಯ(ಸ) ಅನುಸರಣೆ ಮತ್ತು ಮಾರ್ಗದರ್ಶನ ಯುವುದನ್ನು ಕಡ್ಡಾಯವೆಂದು ಸಾರಿದ್ದಾನೆ. ಪವಿತ್ರ ಕುರ್‌ಆನ್ ಹೇಳುತ್ತದೆ, ಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಾದರಿಯಿದೆ. ಇದು ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." (ಪವಿತ್ರ ಕುರ್‌ಆನ್: 33: 21)

ಪ್ರವಾದಿವರ್ಯರು(ಸ) ಬೋಧಿಸಿದ ಶಿಕ್ಷಣವು ಪರಿಪೂರ್ಣವಾದುದಾಗಿದೆ. ರ(ಸ) ಚಾರಿತ್ರ್ಯ ಮತ್ತು ವ್ಯಕ್ತಿತ್ವವೂ ಪರಿಪೂರ್ಣವಾಗಿದೆ. ಆದ್ದರಿಂದಲೇ ಅವರು ೋಕಾಂತ್ಯದ ತನಕವೂ ಸಕಲ ಮಾನವರಿಗಾಗಿ ಮಾದರಿ ಮತ್ತು ದಾರಿದೀಪವಾಗಿದ್ದಾರೆ. ಾನವನು ತನ್ನ ಜೀವನದ ವಿವಿಧ ರಂಗಗಳಲ್ಲಿ ಮತ್ತು ವಿವಿಧ ಸಂದರ್ಭಗಳಲ್ಲಿ ಧ ಮಾದರಿ ಪುರುಷರನ್ನು (Role models) ಅನುಸರಿಸುತ್ತಾನೆ. ಮಾನವನ ಲಿಗೆ ರಾಜಕೀಯದಲ್ಲಿ ಒಬ್ಬನು ಮಾದರಿಯಾದರೆ, ಆರ್ಥಿಕ ರಂಗದಲ್ಲಿ ನ್ನೊಬ್ಬನಿರುತ್ತಾನೆ... ಧಾರ್ಮಿಕ ಜೀವನದಲ್ಲಿ ಮತ್ತೊಬ್ಬನಿದ್ದರೆ, ಸಾಮಾಜಿಕ ವನದಲ್ಲಿ ಬೇರೊಬ್ಬನಿರುತ್ತಾನೆ. ಆದರೆ ಅಂತ್ಯ ಪ್ರವಾದಿ ಮುಹಮ್ಮದ್‌ರ(ಸ) ತ್ತ್ವವು ಮಾನವ ಜೀವನದ ಸಕಲ ರಂಗಗಳಿಗೂ ಮಾದರಿ ಮತ್ತು ಆದರ್ಶ ಯದಂತಹ ಸ್ಥಾನಮಾನ ಹಾಗೂ ಯೋಗ್ಯತೆಯನ್ನು ಹೊಂದಿದೆ. ಅದರಲ್ಲಿ ಾವುದೇ ರೀತಿಯ ಕೊರತೆಯು ಕಾಣಲಾರದು. ಸರ್ವಕಾಲಕ್ಕೂ ಎಳ್ಳಷ್ಟೂ ೀಕರಣಕ್ಕೆ ಎಡೆಗೊಡದಂತಹ ಮಾದರಿಯದು.

ಆಧುನಿಕ ಕಾಲಘಟ್ಟದ ಮಾನವನು, ಸಾಮಾನ್ಯವಾಗಿ ತನ್ನ ಜೀವನವನ್ನು ಯಕ್ತಿಕ (Private) ಮತ್ತು ಸಾಮಾಜಿಕ (Social) ಎಂದು ಎರಡು ಭಾಗಗಳಾಗಿ

ವಿಂಗಡಿಸಿ ಬಿಟ್ಟಿರುತ್ತಾನೆ. ವೈಯಕ್ತಿಕ ಜೀವನಕ್ಕೆ ಕೆಲವು ವಿಧಿ-ವಿಧಾನಗಳನ್ನು ವ ರೀತಿ-ರಿವಾಜುಗಳನ್ನು ಅನುಸರಿಸಿದರೆ, ಸಾಮಾಜಿಕ ಜೀವನದಲ್ಲಿ ಕೆಲವು ಪ್ರ ಆದರ್ಶಗಳನ್ನು ರೂಢಿಸಿ ಕೊಂಡಿರುತ್ತಾನೆ. ಒಬ್ಬನ ಬಾಹ್ಯ ಅಂದರೆ ಸಾಮಾ ಜೀವನವನ್ನು ಅವಲೋಕಿಸಿದರೆ, ಅಲ್ಲಿ ಒಂದು ಸುಂದರ ಸ್ವಪ್ನಗಾನದ ತರಂಗ ನಿಮಗೆ ಗೋಚರಿಸಬಹುದು. ಅದೇ ವೇಳೆ, ಆ ವ್ಯಕ್ತಿಯ ವೈಯಕ್ತಿಕ ಜೀವ ಮೇಲೆ ದೃಷ್ಟಿ ಬೀರಿದಾಗ ಆ ಸ್ವಪ್ನವು ಭಯಾನಕ ಕನಸಿನಂತೆ ಕಾಣುವ ಸಾ ಯಿದೆ. ಒಬ್ಬನದೇ ವ್ಯಕ್ತಿತ್ವದಲ್ಲಿ ಇಂತಹ ವೈರುಧ್ಯಗಳು, ಆತನ ಜೀವನವು ಧಾಮಿ ಮತ್ತು ಲೌಕಿಕವೆಂಬ ಪ್ರತ್ಯೇಕ ಕೋಣೆಗಳಿಗೆ ವಿಭಾಜಿಸಲ್ಪಟ್ಟಿರುವುದಾಗಿ ಗೋಚ ತ್ತವೆ. ಆದರೆ ಪ್ರವಾದಿ ಮುಹಮ್ಮದ್‌ರ(ಸ) ಜೀವನದಲ್ಲಿ ವೈಯಕ್ತಿಕ-ಸಾಮಾಜಿಕವೆ ವ್ಯತ್ಯಾಸವಿಲ್ಲದೆ ಸಕಲ ರಂಗಗಳಲ್ಲೂ ಏಕಪ್ರಕಾರವಾದ ಆದರ್ಶವನ್ನು ಕಾಣಬಹುದಾ

ಖ್ಯಾತ ಇತಿಹಾಸಜ್ಞ ಮೈಕಲ್ ಹೆಚ್. ಹಾರ್ಟ್ ತಮ್ಮ 'ದಿ ಹಂಡ್ರೆಡ್' ಎ ಕೃತಿಯಲ್ಲಿ, ಇತಿಹಾಸದ ಗತಿಯನ್ನು ಬದ ಲಾಯಿಸಿದ 100 ಮಹಾಪುರುಷರ ಮತ್ತು ಅವರು ಬೀರಿದ ಪ್ರಭಾವವನ್ನು ಕ್ರಮ ಪ್ರಕಾರ ಪರಿಚಯಿಸಿದ್ದಾರೆ. ಧರ್ಮೀಯರಾಗಿದ್ದ ಹಾರ್ಟ್, ಜಾಗತಿಕ ಇತಿಹಾಸದ ಮೇಲೆ ಪ್ರಭಾವ ಬೀರಿದವ ಪ್ರವಾದಿ ಮುಹಮ್ಮದ್‌ರಿಗೆ(ಸ) ಪ್ರಥಮ ಸ್ಥಾನ ನೀಡಿದ್ದಾರೆ. ಜಾಗತಿಕ ಜನಸಂ ಯಲ್ಲಿ ಕ್ರೈಸ್ತರೇ ಅಧಿಕವಿದ್ದರೂ ಪ್ರವಾದಿ ಏಸುಕ್ರಿಸ್ತ(ಈಸಾ)ರಿಗೆ ಯಾಕೆ ಪ್ರಥ ಸ್ಥಾನ ನೀಡಲಿಲ್ಲ? ಸ್ವತಃ ಹಾರ್ಟ್ ಹೀಗೆ ಸ್ಪಷ್ಟೀಕರಣ ನೀಡಿದ್ದಾರೆ, "ಕ್ರೈಸ್ತ ವೆ ಗ್ರಂಥವು ಮುಖ್ಯವಾಗಿ ಸಂತ ಪೌಲ್‌ನ ಕೊಡುಗೆಯಾಗಿದೆ. ಜನರು ಕ್ರೈಸ್ತ ಧ ಸ್ವೀಕಾರಕ್ಕೆ ಬೈಬಲ್‌ನ ಹೊಸ ಒಡಂಬಡಿಕೆಯ ಬಹುಭಾಗವನ್ನು ರಚಿಸಿದ ಪೌಲ ಪ್ರಧಾನ ಕಾರಣವಾಗಿದ್ದಾರೆ." ಹಾರ್ಟ್ ಮುಂದುವರಿದು ಹೀಗೆನ್ನುತ್ತಾರೆ, "ಮುಹಮ್ಮದ್ ಧಾರ್ಮಿಕ ನಾಯಕ ಮಾತ್ರವಲ್ಲ, ಲೌಕಿಕ ನಾಯಕ ಕೂಡ ಆಗಿದ್ದಾರೆ."

ಲೋಕ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರವಾಗಬೇಕಾದರೆ ಮಾನವ ಶ್ರೇಷ್ಠರ ಪ್ರವಾದಿ ಮುಹಮ್ಮದ್(ಸ)ರಲ್ಲಿ ಅದೆಂಥ ವ್ಯಕ್ತಿತ್ವವಿತ್ತೆಂಬುದನ್ನು ಪ್ರತ್ಯೇಕ ಹೆ ಬೇಕಾಗಿಲ್ಲವಷ್ಟೇ. ಸರ್ವಶಕ್ತನಾದ ಅಲ್ಲಾಹನು ಮಾನವನನ್ನು ತನ್ನ ಸೃಷ್ಟಿ ಗಳಲ್ಲಿಂ ಶ್ರೇಷ್ಠನಾಗಿಯೂ ಭೂಮಿಯಲ್ಲಿ ತನ್ನ ಪ್ರತಿನಿಧಿಯಾಗಿಯೂ ಮಾಡಿರುವನು. ರೀತಿಯ ಶ್ರೇಷ್ಠತೆಯನ್ನು ಹೊಂದಿರುವ ಮಾನವನು ತನಗಿಂತ ಕೆಳ ಮಟ್ಟದಲ್ಲಿರು ಇತರ ಜೀವಿಗಳ ಮುಂದೆಯೋ ಅಥವಾ ತನ್ನ ಉಪಯೋಗಕ್ಕಾಗಿ ಸೃಷ್ಟಿಸಲ್ಪಟ್ಟಿರು ವಸ್ತುಗಳ ಮುಂದೆಯೋ ಶಿರಬಾಗುವುದು ಎಳ್ಳಷ್ಟೂ ಸರಿಯೆನಿಸಲಾರದು. ಹೀಗಿರುವಾ ಅಂತಹ ಜೀವಿ-ವಸ್ತುಗಳನ್ನು ಆರಾಧಿಸುವುದು ಮಾನವ ಘನತೆಯ ಅವಮಾನವೆನಿ ತ್ತದೆ. ಆದ್ದರಿಂದಲೇ ಮಾನವನ ಶ್ರೇಷ್ಠತೆಯ ಪಾಲನೆ ಮತ್ತು ಮಾನವೀಂ

ಲ್ಯಗಳ ಬೋಧನೆಗಾಗಿ ಅಲ್ಲಾಹನು ಪ್ರವಾದಿ ಮುಹಮ್ಮದ್(ಸ)ರನ್ನು ತನ್ನ ವೇಶವಾಹಕರನ್ನಾಗಿ ನೇಮಿಸಿದನು. ಹಾಗಾಗಿ ಅವರ(ಸ) ಜೀವನದ ಉದ್ದೇಶ ಕ್ತ ಸಂದೇಶವು ಮಾನವರ ಮಾರ್ಗ ದರ್ಶನವಲ್ಲದೆ ಬೇರೇನೂ ಅಲ್ಲವೆಂದು ಮೂಲಕ ತಿಳಿಯಬಹುದಾಗಿದೆ.

ದೇವ ಮಾರ್ಗದತ್ತ ಜನರನ್ನು ಆಹ್ವಾನಿಸುವುದೇ ಪ್ರವಾದಿವರ್ಯರ(ಸ) ುಭಾರ(ದೌತ್ಯ)ವಾಗಿತ್ತು. ಸತ್ಯ ಪ್ರಚಾರವು ವಾಸ್ತವದಲ್ಲಿ ಅತಿ ಕಠಿಣ ಕಾರ್ಯವಾಗಿದೆ. ಂಚಲ ಆದರ್ಶನಿಷ್ಠೆ, ಉನ್ನತ ಚಾರಿತ್ರ್ಯ, ಉತ್ತಮ ಗುಣ ನಡತೆಯು ಪ್ರಚಾರ ಗದ ಯಶಸ್ಸಿಗೆ ಅಪೇಕ್ಷಣೀಯವಾಗಿದೆ. ಇಲ್ಲಿ ಇನ್ನೊಂದು ವಿಷಯವನ್ನು ಪಿಡಬೇಕಾಗಿದೆ. ಪ್ರಚಾರಕನ ವ್ಯಕ್ತಿತ್ವವು ಆದರ್ಶ ಪ್ರಚಾರ ರಂಗದಲ್ಲಿ ಅತ್ಯಂತ ಪತ್ವಪೂರ್ಣವಾಗಿದೆ. ಸಮಾಜದ ಸುಧಾರಣೆಗೆ ಶ್ರಮಿಸುವವರು ಆದರ್ಶಪ್ರಾಯ ರಬೇಕು. ಹ. ಮುಹಮ್ಮದ್‌ರು(ಸ) ಪ್ರವಾದಿತ್ವ ಪದವಿಗಿಂತ ಮುಂಚೆಯೇ ಳಂಕ ವ್ಯಕ್ತಿತ್ವವನ್ನು ಹೊಂದಿದ್ದರು. ಮಕ್ಕಾ ನಗರವಾಸಿಗಳು ಅವರನ್ನು 'ಅಮೀನ್' ಮಾಣಿಕ) ಮತ್ತು 'ಸಾದಿಕ್' (ಸತ್ಯಸಂಧ) ಎಂಬ ಬಿರುದಿನಿಂದಲೇ ಗುರುತಿಸುತ್ತಿದ್ದರು.

ಈ ಗುಣ ವಿಶೇಷತೆಯಿಂದ ಪ್ರಭಾವಿತರಾಗಿಯೇ ಮಕ್ಕಾದ ಕುಲೀನ ವರ್ತಕ ುಂಬದ ಖದೀಜ ಎಂಬ ಮಹಿಳೆಯು ತನಗಿಂತ ಕಿರಿಯರಾದ ಮುಹಮ್ಮದ್‌ರ ಂದೆ ವಿವಾಹ ಪ್ರಸ್ತಾವನ್ನಿಟ್ಟರು. ತರುವಾಯ, ಹದಿನೈದು ವರ್ಷಗಳ ದಾಂಪತ್ಯ ವನದ ಅವಧಿಯಲ್ಲಿ ಖದೀಜರು ಪತಿಯಲ್ಲಿ ಕಂಡ ವೈಯಕ್ತಿಕ ಗುಣಗಳು ಮಾಜಿಕ ಜೀವನದಷ್ಟೇ ಪ್ರಬಲವಾಗಿ ಪ್ರಭಾವ ಬೀರಿದ್ದುವು. ಇದೇ ಕಾರಣವಾಗಿ ುಹಮ್ಮದ್‌ರಿಗೆ(ಸ) ನಲ್ವತ್ತರ ಹರೆಯದಲ್ಲಿ ದೇವನಿಂದ ಪ್ರವಾದಿತ್ವ ಲಭಿಸಿದಾಗ, ವಚರ ಜಿಬ್ರೀಲ್‌ರ(ಅ) ಆಗಮನ ಮತ್ತು ಆಲಿಂಗನದ ಆಘಾತದಿಂದಾಗಿ ಪಿಸುತ್ತಾ ಮನೆಗೆ ಬಂದು ಪತ್ನಿಯಲ್ಲಿ ವಿಷಯ ಅರುಹಿದಾಗ... ಆ ಕುಲೀನ ಯು ತಕ್ಷಣವೇ ಹೇಳಿದ ಉತ್ತರ, "ನೀವು ಬಂಧು ಬಳಗದವರೊಡನೆ ಸದ್ವರ್ತನೆ ೀರುವವರು, ದೀನದಲಿತರಿಗೆ, ಬಡವರಿಗೆ ನೆರವಾಗುವವರು. ಅತಿಥಿಗಳನ್ನು ರಿಸುವವರು. ಸಂಕಷ್ಟಗಳ ವೇಳೆಯೂ ಸತ್ಯ ಮತ್ತು ನ್ಯಾಯದ ಪರ ವಹಿಸು ರು. ಸತ್ಯಸಂಧರು" ಎಂದಾಗಿತ್ತು. ಹಾಗೆಯೇ ಅವರು ಪತಿಯ ಸಂದೇಶವನ್ನು ಶರತ್ ಒಪ್ಪಿಯೂ ಇದ್ದರು.

ದರೆ ಜನರು ಕಿವಿಗೊಟ್ಟರೇ?

ಪ್ರವಾದಿತ್ವ ಪ್ರಾಪ್ತವಾಗಿ ಮೂರನೆಯ ವರ್ಷ (ಕ್ರಿ.ಶ. 613). ಪ್ರವಾದಿತ್ವ ದೌತ್ಯದ ಾರ್ಯ ಉದಯಿಸಿದ ಪ್ರಾರಂಭಿಕ ಘಟ್ಟವಾಗಿತ್ತದು. ಆಗ ಪ್ರವಾದಿತ್ವ

ಬಹಿರಂಗಗೊಂಡಿರಲೂ ಇಲ್ಲ. ಅಂತಹ ಸಂದರ್ಭದಲ್ಲಿ ಪ್ರವಾದಿವರ್ಯರಿಗೆ ಒಂದು ಆದೇಶಪೂರ್ವಕವಾದ ದಿವ್ಯವಾಣಿ ಅವತೀರ್ಣವಾಗುತ್ತದೆ,

"ಓ ಪೈಗಂಬರರೇ! ನಿಮಗೆ ಕೊಡಲಾಗುತ್ತಿರುವ ಆದೇಶಗಳ ಘಂಟಾಘೋಷವಾಗಿ ಸಾರಿರಿ." **(ಪವಿತ್ರ ಕುರ್‌ಆನ್: 15: 94)**

ಈ ಆದೇಶ ದೊರೆತ ಕೂಡಲೇ ಪ್ರವಾದಿವರ್ಯರು(ಸ) ತಮ್ಮ ನಿ ಸಂಬಂಧಿಕರನ್ನು ಕರೆದು ಸಫಾ ಬೆಟ್ಟದ ಬಳಿ ಒಟ್ಟುಗೂಡಿಸಿದರು. ತರುವಾ ಅವರನ್ನುದ್ದೇಶಿಸಿ ಹೀಗೆ ಕೇಳಿದರು,

"ನನ್ನ ಜನಾಂಗ ಬಾಂಧವರೇ! ನೀವು ನನ್ನನ್ನು ಸತ್ಯವಂತನೆಂದು ಭಾವಿಸುತ್ತೀ ಅಥವಾ ಸುಳ್ಳುಗಾರನೆಂದೇ?"

ಜನರೆಲ್ಲ ಒಕ್ಕೊರಲಿನಿಂದ ಹೇಳಿದರು, "ನೀವು ಸುಳ್ಳು ಹೇಳುವುದನ್ನು ನಾ ಎಂದೂ ಕಂಡಿಲ್ಲ."

ತರುವಾಯ ಪ್ರವಾದಿ(ಸ) ಕೇಳಿದರು, "ಪ್ರೀತಿಯ ಜನರೇ! ಈ ಬೆಟ್ಟದ ಬದಿಯಲ್ಲಿ ಒಂದು ಬೃಹತ್ತಾದ ಸುಸಜ್ಜಿತ ಸೇನೆಯು ನಿಮ್ಮನ್ನು ಆಕ್ರಮಿಸಲಿಕ ಧಾವಿಸುತ್ತಿದೆಯೆಂದು ನಾನು ಹೇಳಿದರೆ ನೀವು ನಂಬುತ್ತೀರಾ?"

ಜನರೆಂದರು, "ನೀವು ಬಾಲ್ಯದಿಂದಲೇ ಸತ್ಯವಂತ ಮತ್ತು ಪ್ರಾಮಾಣಿಕನೆಂ ಖ್ಯಾತರಾಗಿದ್ದೀರಿ. ನಿಮ್ಮ ಮಾತಿನ ಮೇಲೆ ನಾವು ವಿಶ್ವಾಸವಿರಿಸುತ್ತೇವೆ."

ಈ ಉತ್ತರ ಕೇಳಿದ ನಂತರ ಪ್ರವಾದಿವರ್ಯರು(ಸ) ಉಚ್ಚ ಸ್ವರದಲ್ಲಿ ಹ ಹೇಳಿದರು, "ಕೇಳಿರಿ! ಶೀಘ್ರದಲ್ಲೇ ಅತಿಕೆಟ್ಟ ಕಾಲ ಬರಲಿರುವುದು. ಆ ಕುರಿ ಭಯಪಡಿರಿ. ಪ್ರತಿಯೊಂದು ಕೆಟ್ಟ ಮಾತಿನಿಂದ ದೂರವಿರಿ. ನಿಮ್ಮ ಈ ಸತ್ಯನಿಷೆ ಮತ್ತು ಬಹುದೇವ ವಿಶ್ವಾಸವು ಅತ್ಯಂತ ಅರೋಚಕ ಹಾಗೂ ಅಪಾಯಕಾರಿಯಾಗಿ ಎಲ್ಲಾದರೂ ಅಲ್ಲಾಹನ ಕ್ರೋಧ ಎರಗಿಬಿಟ್ಟರೆ... ನಿಮ್ಮ ಈ ಅಧಿಕಾರ, ಈ ವೈಭ ಎಲ್ಲವೂ ಮಣ್ಣು ಪಾಲಾಗಿ ಬಿಡುವುದು. ಆದುದರಿಂದ ಓ ಜನರೇ! ಪಶ್ಚಾತ್ತಾಪಪಡಿ ವಿಗ್ರಹಗಳನ್ನು ತೊರೆದು ಏಕದೇವನ ಮೇಲೆ ವಿಶ್ವಾಸ ತಾಳಿರಿ ಮತ್ತು 'ಅಲ್ಲಾಹನ ಅನ್ಯ ಆರಾಧ್ಯರಿಲ್ಲ, ಅವನು ಏಕೈಕನು, ಅವನಿಗೆ ಯಾರೂ ಸಹಭಾಗಿಗಳಿಲ್ಲ' ಎಂ ಘೋಷಿಸಿದರು."

ಪ್ರವಾದಿವರ್ಯರ(ಸ) ಮಾತು ಮುಗಿಯುವುದಕ್ಕೆ ಮುಂಚೆಯೇ ಅಬ ಲಹಬ್ ಎದ್ದು ಅವರನ್ನು(ಸ) ನಿಂದಿಸತೊಡಗಿದನು ಮತ್ತು ಸಭೆಯಲ್ಲಿ ಗುಲ್ಲೆಬ್ಬಿಸಿದ ಜನರೆಲ್ಲ ಚದುರಿ ಹೋದರು. ಕೆಲವು ದಿನಗಳ ತರುವಾಯ, ಪ್ರವಾದಿವರ್ಯರು(ಹ. ಅಲಿಯವರನ್ನು(ರ) ಕರೆದು ಕುಟುಂಬ ಸಂಬಂಧಿಕರನ್ನು ಒಟ್ಟುಗೂಡಿಸ

ೀಳಿದರು. ಈ ಪ್ರಕಾರ ಅಬ್ದುಲ್ ಮುತ್ತಲಿಬ್‌ರ ಕುಟುಂಬ ಸದಸ್ಯರು ವಿಶೇಷತಃ ಮ್‌ಝಾ, ಅಬೂತಾಲಿಬ್, ಅಬ್ಬಾಸ್ ಮತ್ತಿತರರು ಆಗಮಿಸಿದರು. ಊಟೋಪಚಾರದ ೞಿಕ ಪ್ರವಾದಿವರ್ಯರು(ಸ) ಎದ್ದು ನಿಂತು ಎಲ್ಲರನ್ನುದ್ದೇಶಿಸಿ ಹೀಗೆಂದರು, ಾನು ನಿಮಗೆಲ್ಲರಿಗೂ ಇಹಪರಗಳೆರಡರಲ್ಲೂ ಕಲ್ಯಾಣಕಾರಿಯಾದ ಜೀವನ ಧಾನವನ್ನು ತಂದಿರುವೆನು. ಹೇಳಿರಿ, ಈ ಮಹತ್ಕಾರ್ಯದಲ್ಲಿ ನಿಮ್ಮ ಪೈಕಿ ಯಾರು ನಗೆ ನೆರವಾಗುತ್ತೀರಿ?"

ಯಾರಿ ಅದನ್ನು ಒಪ್ಪಲು ಮುಂದೆ ಬರದಿದ್ದಾಗ ಹ. ಅಲೀ(ರ) ಎದ್ದು ನಿಂತು ೀಳಿದರು, "ನನಗೆ ಕಣ್ಣು ಬೇನೆಯಿದೆ. ನನ್ನ ಕಾಲುಗಳು ಸಣಕಲಾಗಿವೆ. ನಾನು ತರೆಲ್ಲರಿಗಿಂತಲೂ ಕಿರಿಯನು. ಆದರೂ ನಾನು ನಿಮಗೆ ಸಹಾಯ ಮಾಡುವೆನು."

ಸಭೆಯಲ್ಲಿ ಹೆಚ್ಚಿನವರು ಅಲಿಯವರ ಸಣ್ಣ ಪ್ರಾಯ ಮತ್ತು ದುರ್ಬಲ ಸ್ಥಿತಿ ಾಡು ನಕ್ಕುಬಿಟ್ಟಿದ್ದರು. ನಂತರದ ದಿನಗಳಲ್ಲಿ ಸಮಾಜದ ಬಡವರ್ಗದಿಂದ ಹಲವು ಂದಿ ಪ್ರವಾದಿವರ್ಯರ(ಸ) ಸಂದೇಶವನ್ನು ಅಂಗೀಕರಿಸತೊಡಗಿದರು. ಅವರಲ್ಲಿ ಚ್ಚಿನವರು ಜೀತದಾಳು(ಗುಲಾಮರು)ಗಳಾಗಿದ್ದರು.

ುಕುಳ ಆರಂಭ

ಕ್ರಮೇಣ ಮುಸ್ಲಿಮರ ಸಂಖ್ಯೆ ನಲ್ವತ್ತರಷ್ಟಾದಾಗ ಪ್ರವಾದಿವರ್ಯರು(ಸ) ಅಬಾ ಭವನದ ಬಳಿಗೆ ತೆರಳಿ ಏಕದೇವತ್ವದ ಘೋಷಣೆ ಮಾಡಿದರು. ಮಕ್ಕಾದ ತ್ಯನಿಷೇಧಿಗಳು ಕೆರಳಿ ಕೆಂಡವಾದರು. ಈ ಘೋಷಣೆಯು ಅವರ ಪಾಲಿಗೆ ಪಮಾನಕಾರಿಯಾಗಿ ಕಂಡಿತ್ತು. ಕೆಡುಕುಗಳಲ್ಲಿಯೇ ಮುಳುಗಿರುವ, ಕೆಡುಕನ್ನೇ ರ್ವಸ್ವವನ್ನಾಗಿ ಮಾಡಿಕೊಂಡಿರುವ ಜನರು ಸ್ವ-ಹಿತಾಸಕ್ತರೂ ವಿಗ್ರಹಾರಾಧಕರೂ ಂಚಕರೂ ಭೋಗಿಗಳೂ ಆಗಿ ಮಾರ್ಪಟ್ಟಿರುವಾಗ ಸತ್ಯದ ಮಾತಂತಿರಲಿ, ರ್ಮಿಕವಾದ ಒಂದು ಸಣ್ಣ ಕರೆಯೂ ಅವರ ಮಟ್ಟಿಗೆ ಕರ್ಣಕಠೋರವಾಗಿ ೇಳಿಸುತ್ತದೆ. ಮಕ್ಕಾದ ಸತ್ಯನಿಷೇಧಿಗಳ ಸ್ಥಿತಿಯೂ ಅದೇ ರೀತಿ ಆಗಿತ್ತು. ಹಾಗಾಗಿ ಲ್ಲಿ ಕೋಲಾಹಲವೆದ್ದಿತು. ಜನರು ನಾಲ್ದೆಸೆಗಳಿಂದ ಪ್ರವಾದಿವರ್ಯರ(ಸ) ೀಲೆರಗಿದರು. ಆ ಸಂದರ್ಭದಲ್ಲಿ, ಪ್ರವಾದಿವರ್ಯರ(ಸ) ಮಲಮಗ ಹಾರಿಸ್ ನೆಯಲ್ಲಿದ್ದರು. ವಿಷಯ ತಿಳಿದಾಗ, ಅವರು ಪ್ರವಾದಿವರ್ಯರನ್ನು(ಸ) ರಕ್ಷಿಸಲು ಾವಿಸಿದರು. ಆದರೆ ಸತ್ಯನಿಷೇಧಿಗಳ ಖಡ್ಗ ಪ್ರಹಾರವು ಅವರ ಮೇಲೆ ಬೀಳುತ್ತದೆ. ೀವ್ರ ಗಾಯಗೊಂಡು ಅವರು ಸ್ಥಳದಲ್ಲೇ ಹುತಾತ್ಮರಾಗುತ್ತಾರೆ. ಇದು ಇಸ್ಲಾಮಿನ ಾದಿಯಲ್ಲಿ ನಡೆದ ಪ್ರಥಮ ರಕ್ತಪಾತವಾಗಿತ್ತು.

ಈ ಘಟನೆಯಿಂದ ಪ್ರವಾದಿವರ್ಯರ(ಸ) ಸಂಕಲ್ಪ ಮತ್ತು ದೃಢತೆಯಲ್ಲಿ

ಎಳ್ಳಷ್ಟೂ ಹಿಂಜರಿತ ಕಾಣಲಿಲ್ಲ. ಬದಲಾಗಿ ಅಂದಿನಿಂದ ಅವರು(ಸ) ಬಹಿರಂಗವಾಗಿ ವಿಗ್ರಹಾರಾಧನೆಯನ್ನು ಖಂಡಿಸತೊಡಗಿದರು ಮತ್ತು ಸರ್ವಲೋಕಗಳ ಸೃಷ್ಟಿಕರ್ತನಾ ಪಾಲಕ ಪ್ರಭುವಿನ ಏಕತೆಯ ಪ್ರಚಾರ ಮಾಡತೊಡಗಿದರು. ಇದರಿಂದಾಗಿ ಕುರೈಶ ಇನ್ನಷ್ಟು ಕೆರಳಿದರು. ಅಂದಿನ ವರೆಗೂ ಜನರ ಮೇಲೆ ಪ್ರವಾದಿವರ್ಯರ(ಸ) ಸ ಸಂದೇಶದ ಪ್ರಭಾವ ಬೀಳದಂತೆ ಪ್ರಯತ್ನಿಸಲಾಗುತ್ತಿತ್ತು. ಆದರೆ ಕ್ರಮೇಣ ಮಕ್ಕಾ ಎಲ್ಲ ಬಹುದೇವಾರಾಧಕರೂ ಪ್ರವಾದಿವರ್ಯರಿಗೇ(ಸ) ಕಿರುಕುಳ ನೀಡಲಾರಂಭಿಸಿದ ಹಾಗೆಯೇ ಸತ್ಯಧರ್ಮ ಸ್ವೀಕರಿಸಿದವರ ಮೇಲೂ ತರತರವಾಗಿ ಹಿಂ ಮರ್ದನಗಳನ್ನೆಸಗತೊಡಗಿದರು. ❑

ವೀರಕಲಿಗಳ ಸತ್ಯಸ್ವೀಕಾರ

ಈ ಮಧ್ಯೆ ಪ್ರವಾದಿವರ್ಯರು(ಸ) ಸಫಾ ಬೆಟ್ಟದ ಮೇಲೆ ಧ್ಯಾನಮಗ್ನರಾ ಕುಳಿತುಕೊಂಡಿದ್ದಾಗ, ಅಬೂಜಹಲ್ ಬಂದು ಅವರನ್ನು ಜರೆಯತೊಡಗಿದ ಆದರೆ ಪ್ರವಾದಿವರ್ಯರಿಂದ ಯಾವುದೇ ಪ್ರತಿಕ್ರಿಯೆ ಬರದೇ ಹೋದಾಗ ರೋ ಕುಲನಾದ ಅಬೂಜಹಲ್, "ನನ್ನ ಮಾತಿಗೆ ಉತ್ತರವನ್ನೂ ಕೊಡದಿರುವಷ್ಟು ಸೊ ನಿನಗೆ?" ಎಂದು ಚೀರುತ್ತಾನೆ. ಆದರೆ ಪ್ರವಾದಿವರ್ಯರು(ಸ) ಆಗಲೂ ಧ್ಯಾನದ ಮಗ್ನರಾಗುತ್ತಾರೆ. ಇದರಿಂದ ಇನ್ನಷ್ಟು ಕೆರಳಿದ ಅಬೂಜಹಲ್, ಪ್ರವಾದಿವರ್ಯರ(ಮೇಲೆ ಮರಳನ್ನೆಸೆಯ ತೊಡಗುತ್ತಾನೆ. ಆಗಲೂ ಪ್ರವಾದಿವರ್ಯರು(ಮೌನವಾಗಿದ್ದಾರೆ. ಆತ ಮತ್ತೆ ಮತ್ತೆ ಮರಳೆಸೆಯುತ್ತಾ ಪ್ರವಾದಿವರ್ಯರ ಬಯ್ಯುತ್ತಾನೆ, ನಿಂದಿಸುತ್ತಾನೆ. ಕೊನೆಗೆ ಕೋಪ ತಡೆಯಲಾರದೆ ಪ್ರವಾದಿವರ್ಯ ಮೇಲೆ ಕಲ್ಲೆಸೆಯುತ್ತಾನೆ. ಅದು ಅವರ ಹಣೆಗೆ ಬಡಿದು ರಕ್ತ ಚಿಮ್ಮುತ್ತದೆ. ಅಷ್ಟ ಸಂತೃಪ್ತನಾದ ಅಬೂಜಹಲ್ ಬುಸುಗುಡುತ್ತಾ ಹೊರಟು ಹೋಗುತ್ತಾನೆ.

ಇದನ್ನೆಲ್ಲ ಅಬ್ದುಲ್ಲಾ ಬಿನ್ ಜುದ್‌ಆನ್ ಎಂಬವನ ದಾಸಿಯು ದೂರದಿಂ ನೋಡುತ್ತ ಇದ್ದಳು. ಆಕೆ ಸೀದಾ ಹೋಗಿ ಪ್ರವಾದಿವರ್ಯರ ಚಿಕ್ಕಪ್ಪ ಹಮ್‌ಝಾರ ಸಂಧಿಸಿ ವಿಷಯವನ್ನೆಲ್ಲ ಅರುಹುತ್ತಾಳೆ, "ಇಂದು ಸಫಾ ಬೆಟ್ಟದಲ್ಲಿ ನಿಮ್ಮ ಸೋದ ಪುತ್ರನನ್ನು ಅವಮಾನಿಸಲಾಯಿತು. ಆದರೆ ಅವರಾದರೋ ಏನೊಂದ ಮರುಮಾತನಾಡಲಿಲ್ಲ." ಇದನ್ನು ಕೇಳುತ್ತಲೇ ಹಮ್‌ಝಾ ಕೆಂಡಾಮಂಡಲರಾಗುತ್ತಾ "ನನ್ನ ಸೋದರಪುತ್ರನಿಗೆ ಆದ ಅವಮಾನಕ್ಕೆ ಪ್ರತೀಕಾರ ತೀರಿಸುವ ವರೆಗೆ ನನ ಅನ್ನಾಹಾರ ನಿಷಿದ್ಧವಾಗಿದೆ" ಎಂದು ಪ್ರತಿಜ್ಞೆಗೈಯುತ್ತಾರೆ.

ತರುವಾಯ ಅಬೂಜಹಲನ ಬಳಿಗೆ ಧಾವಿಸಿದ ಹಮ್‌ಝಾ ನೇರವಾ ಆತನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಆದರೆ ಅಬೂಜಹಲನು ಉದ್ಧಟತ

ೀರುತ್ತಾನೆ. ಕುಪಿತರಾದ ಹಮ್‌ಝಾ ಆತನ ಮೇಲೆ ಬಾಣದಿಂದ ಹೊಡೆದು ಯಗೊಳಿಸುತ್ತಾರೆ. ಬಳಿಕ ಪ್ರವಾದಿವರ್ಯರ(ಸ) ಬಳಿಗೆ ತಲುಪಿ, "ನಿನಗಾದ ವಮಾನಕ್ಕೆ ಪ್ರತೀಕಾರ ತೀರಿಸಿದ್ದೇನೆ" ಎಂದು ಹೇಳುತ್ತಾರೆ. ಆದರೆ ಪ್ರವಾದಿ ರ್ಯರು(ಸ) ಅದರಿಂದ ಸಂತೋಷವಾಗದೆ ಹೇಳಿದರು, "ಚಿಕ್ಕಪ್ಪಾ! ಇಂತಹ ಷಯಗಳಿಂದ ನನಗೇನೂ ಆನಂದವಾಗುವುದಿಲ್ಲ."

"ಹಾಗಾದರೆ ನಿನಗೆ ಸಂತೋಷವಾಗುವಂತಹ ವಿಷಯವಾದರೂ ಏನು?" ಮ್‌ಝಾ ಭಾವೋದ್ರೇಕಗೊಂಡು ಕೇಳುತ್ತಾರೆ. ಪ್ರವಾದಿವರ್ಯರು(ಸ) ಆರ್ದ್ರರಾಗಿ ಗೆ ಉತ್ತರಿಸುತ್ತಾರೆ, 'ನೀವು ನನ್ನ ಚಿಕ್ಕಪ್ಪನಾಗಿರುವಿರಿ. ಒಂದು ವೇಳೆ ನಿಮ್ಮ ಗಿನ ಅವಸ್ಥೆಯಲ್ಲಿ ಅರೇಬಿಯದ ಬಹುದೇವ ವಿಶ್ವಾಸಿಗಳ ರಕ್ತದಿಂದ ನಾಡಿನಾದ್ಯಂತದ ಮಿಯನ್ನು ತೋಯಿಸಿದರೂ ಅದರಿಂದ ಏನೂ ಪ್ರಯೋಜನವಾಗದು. ಆದರೆ ಕೈಕನಾದ ದೇವನ ಮೇಲೆ ವಿಶ್ವಾಸವಿರಿಸಿ, ಮುಸ್ಲಿಮರಾದ ಸ್ಥಿತಿಯಲ್ಲಿ ಸತ್ಯಧರ್ಮಕ್ಕೆ ಾಯ ಮಾಡಿದರೆ ಅದರಿಂದ ನಿಮಗೆ ಖಂಡಿತವಾಗಿಯೂ ಪುಣ್ಯ ದೊರೆಯುವುದು. ನಗೂ ಸಂತೋಷವಾಗಬಹುದು. ಆದರೆ ನಾನು ನನಗಾಗಿ ಏಕದೇವನ ಹೊರತು ನ್ನವರೋ ಅನ್ಯರೋ ಯಾರಿಂದಲೂ ಸಹಾಯ ಬೇಡಲಾರೆ. ನಾನು ಯಾರಿಗಾಗಿ ಕಾರ್ಯ ಮಾಡುತ್ತಿದ್ದೇನೋ ಅವನೇ ನನಗೆ ಸಾಕು."

ಅದನ್ನು ಕೇಳಿದ ಹಮ್‌ಝಾ, "ಸೋದರ ಪುತ್ರಾ! ನಾನು ಸತ್ಯವಿಶ್ವಾಸ ಕರಿಸುವುದರಲ್ಲಿಯೇ ನಿನಗೆ ಸಂತೋಷವಾಗುವುದಿದ್ದರೆ ಇದೋ ನಾನು ುಸ್ಲಿಮನಾಗುತ್ತೇನೆ" ಎನ್ನುತ್ತಾ ಪವಿತ್ರ ವಚನ ಪಠಿಸುತ್ತಾರೆ.

ಇದಾಗಿ ಮೂರು ದಿನಗಳ ಬಳಿಕ... ಅರೇಬಿಯದ ಮಹಾ ಪರಾಕ್ರಮಿ, ಅದ್ದೀ ೋತ್ರದ ಉಮರ್ ಬಿನ್ ಖತ್ತಾಬ್, ಪ್ರವಾದಿವರ್ಯರನ್ನು ವಧಿಸಲು ಖಡ್ಗ ಹಿಡಿದು ೂರಡುತ್ತಾರೆ. ದಾರಿಯಲ್ಲಿ ಅದೇ ಗೋತ್ರದ ನಈಮ್ ಎಂಬವರು ಅವರನ್ನು ತೆದು, "ಮೊದಲು ನಿಮ್ಮ ಮನೆಯವರನ್ನು ವಿಚಾರಿಸಿರಿ. ನಿಮ್ಮ ತಂಗಿ ಫಾತಿಮಾ ತ್ತು ಭಾವ ಸಈದ್ ಇಬ್ಬರೂ ಮುಸ್ಲಿಮರಾಗಿದ್ದಾರೆ" ಎಂದು ಹೇಳುತ್ತಾರೆ. ಇದನ್ನು ಳಿ ಕಳವಳಗೊಂಡ ಉಮರ್ ತಂಗಿಯ ಮನೆಗೆ ಧಾವಿಸುತ್ತಾರೆ. ಅಲ್ಲಿ ಒಳಗಿಂದ ನನ್ನೋ ಓದುತ್ತಿರುವುದನ್ನು ಕೇಳಿ ಇನ್ನಷ್ಟು ಕೆರಳುತ್ತಾರೆ. ಒಳಗೆ ಧಾವಿಸಿದವರೇ ವನನ್ನು ಯದ್ವಾತದ್ವಾ ಹೊಡೆಯತೊಡಗುತ್ತಾರೆ. ಅಡ್ಡ ಬಂದ ತಂಗಿಗೂ ಚೆನ್ನಾಗಿ ಳಿಸುತ್ತಾರೆ. ದೃಢಕಾಯನಾದ ಅಣ್ಣನ ಪೆಟ್ಟಿಗೆ ಆ ಅಬಲೆ ನಲುಗಿ ಹೋದರೂ ತ್ಯವಿಶ್ವಾಸ ಸ್ಫೂರ್ತಿ ಮತ್ತು ಆವೇಶವು ಆಕೆಯನ್ನು ಸಿಂಹಿಣಿಯಂತೆ ಘರ್ಜಿಸುವಂತೆ ಾಡುತ್ತದೆ, "ಉಮರ್ ನೀನು ಏನು ಬೇಕಾದರೂ ಮಾಡು. ನಾನಂತೂ ತ್ಯಧರ್ಮ ಸ್ವೀಕರಿಸಿಯಾಗಿದೆ!"

ತಂಗಿಯ ಈ ದಿಟ್ಟ ಉತ್ತರಿದಂದ ಒಮ್ಮೆಲೆ ವಿಚಲಿತರಾದ ಉಮರ್ ಬ
ಸಾವರಿಸಿಕೊಂಡು, "ನೀವು ಓದುತ್ತಿರುವುದನ್ನು ತೋರಿಸಿ" ಎನ್ನುತ್ತಾರೆ. ಫಾತಿಮಾ(
ನಡುಗುವ ಕೈಗಳಿಂದ ಕುರ್‌ಆನ್ ವಾಕ್ಯಗಳನ್ನು ಬರೆದ ಹಾಳೆಯನ್ನು ಅಣ್ಣ
ಮುಂದಿಡುತ್ತಾರೆ. ಅದರಲ್ಲಿ ತಾಹಾ ಅಧ್ಯಾಯದ ಆರಂಭದ ಎಂಟು ವಚನಗ
ಬರೆದಿದ್ದುವು.

"ತಾ ಹಾ. ನಾವು ಈ ಕುರ್‌ಆನನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದ
ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ. ಇದು ಭಯವಿರಿಸುವ ಪ್ರತಿಯೊಬ್ಬನಿ
ನೆನಪಿಸುವ ಒಂದು ಸಾಧನವಾಗಿದೆ. ಭೂಮಿಯನ್ನೂ ಉನ್ನತ ಆಕಾಶಗಳನ್ನೂ
ಸೃಷ್ಟಿಸಿದವನ ಕಡೆಯಿಂದ ಇದು ಅವತೀರ್ಣಗೊಂಡಿದೆ. ಆ ದಯಾಮಯನ
(ವಿಶ್ವ) ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದಾನೆ. ಅವನು, ಆಕಾಶಗಳಲ್ಲೂ
ಭೂಮಿಯಲ್ಲೂ ಅವೆರಡರ ನಡುವೆಯೂ ಹಾಗೂ ಮಣ್ಣಿನಡಿಯಲ್ಲಿಯೂ ಇರುವ
ಸಕಲ ವಸ್ತುಗಲ ಮಾಲಿಕನಾಗಿರುತ್ತಾನೆ. ನೀವು ನಿಮ್ಮ ಮಾತನ್ನು ಉಚ್ಚ ಸ್ವರದಲ್ಲೇ
ಹೇಳಿದರೂ ಅವನಂತೂ ಮೆಲುದನಿಯ ಮಾತನ್ನು ಮಾತ್ರವಲ್ಲ ಅದಕ್ಕಿಂತಲೂ
ರಹಸ್ಯವಾದ ಮಾತನ್ನೂ ಅರಿಯುತ್ತಾನೆ. ಅವನು ಅಲ್ಲಾಹ್. ಅವನ ಹೊರತು ಅನ್ಯ
ದೇವನಿಲ್ಲ. ಅವನಿಗೆ ಅತ್ಯುತ್ತಮ ನಾಮಗಳಿವೆ."

ಈ ವಚನಗಳನ್ನು ಓದುತ್ತಿದ್ದಂತೆಯೇ ಉಮರ್ ಬಹಳ ಪ್ರಭಾವಿತರಾಗುತ್ತಾರೆ. "ದೇವನಾಣೆ! ಎಷ್ಟೊಂದು ಉತ್ತಮ ಮತ್ತು ಪರಿಶುದ್ಧ ವಾಣಿಯಿದು!" ಎಂಬ ಉದ್ಗಾರ ಅವರ ಬಾಯಿಯಿಂದ ಹೊರಡುತ್ತದೆ.

ಇದನ್ನು ಕೇಳಿ ಮನೆಯಲ್ಲಿ ಅಡಗಿ ಕುಳಿತಿದ್ದ ಖಬ್ಬಾಬ್ ಬಿನ್ ಅರತ್ ಹೊರಬರುತ್ತಾರೆ. ಅವರು ಫಾತಿಮಾ ಮತ್ತು ಸಈದ್‌ರಿಗೆ ಕುರ್‌ಆನ್ ಕಲಿಸುತ್ತಿದ್ದವರು, ಉಮರ್ ಬರುವುದನ್ನು ಕಂಡು ಅಡಗಿದ್ದರು. ಅವರು ಅವಸರವಾಗಿ ಹೀಗೆ ಹೇಳತೊಡಗಿದರು, "ಉಮರ್! ತಕ್ಷಣವೇ ಮುಹಮ್ಮದ್(ಸ)ರ ಬಳಿಗೆ ಧಾವಿಸಿರಿ. ಅವರು 'ಓ ಅಲ್ಲಾಹ್, ಅಮ್ರ್ ಬಿನ್ ಹಿಶಾಮ್ (ಅಬೂಜಹಲ್) ಅಥವಾ ಉಮರ್ ಬಿನ್ ಖತ್ತಾಬ್‌ರ ಮೂಲಕ ಇಸ್ಲಾಮಿಗೆ ನೆರವಾಗು' ಎಂದು ಪ್ರಾರ್ಥಿಸುವುದನ್ನು ಕೇಳಿದ್ದೇನೆ. ಅಮ್ರ್‌ಗೆ ಈ ಭಾಗ್ಯವಿಲ್ಲವೆಂದು ತೋರುತ್ತದೆ. ಆದ್ದರಿಂದ ಓ ಉಮರ್ ಧಾವಿಸಿರಿ ಅಲ್ಲಾಹನೆಡೆಗೆ...."

"ಅಯ್ಯೋ... ನಾನು ಮುಹಮ್ಮದ್‌ರನ್ನು ವಧಿಸಲು ಹೊರಟಿದ್ದೆ. ಅವರಾದರೋ ನನಗಾಗಿ ಪ್ರಾರ್ಥಿಸುತ್ತಿದ್ದಾರೆ" ಎಂದು ಉದ್ಗರಿಸುತ್ತಾ ಉಮರ್ ಅಲ್ಲಿಂದ ಹೊರಟು ಅರ್ಕಮ್‌ರ ಮನೆಯ ಕಡೆಗೆ ಧಾವಿಸುತ್ತಾರೆ.

ಅದು ಪ್ರವಾದಿತ್ವದ ಆರನೆಯ ವರ್ಷದ ದುಲ್‌ಹಜ್ಜ್ ತಿಂಗಳಾಗಿತ್ತು. ಬಹಿರಂಗವಾಗಿ ಸತ್ಯಸಂದೇಶ ಪ್ರಚಾರಕ್ಕೆ ಬೆದರಿಕೆಯಿದ್ದುದರಿಂದ ಮತ್ತು ಮಕ್ಕಾದ ಸತ್ಯನಿಷೇಧಿಗಳ ಕಿರುಕುಳದಿಂದ ರಕ್ಷಣೆ ಪಡೆಯಲು ಅರ್ಕಮ್‌ರ ಮನೆಯೊಂದೇ ಆಸರೆಯಾಗಿತ್ತು. ಅಲ್ಲಿಗೆ ತಲುಪಿದ ಉಮರ್ ಪ್ರವಾದಿವರ್ಯರ ಹತ್ತಿರಕ್ಕೆ ಹೋದವರೇ, "ಅಲ್ಲಾಹನ ಸಂದೇಶ ವಾಹಕರೇ! ಇದೋ ನಾನು ಸತ್ಯವಿಶ್ವಾಸ ಸ್ವೀಕರಿಸಿದ್ದೇನೆ" ಎಂದು ಪವಿತ್ರ ವಚನ ಪಠಿಸುತ್ತಾರೆ.

ಇದರಿಂದಾಗಿ ಇಸ್ಲಾಮಿಗೆ ಆನೆಯ ಬಲ ಬಂದಂತಾಗುತ್ತದೆ. ಆದರೆ ಕುರೈಶರ ರೋಷಾಗ್ನಿಯೂ ಅಷ್ಟೇ ತೀವ್ರವಾಗಿ ಜ್ವಲಿಸತೊಡಗುತ್ತದೆ. ಅವರು ತಮ್ಮ ರೋಷವನ್ನು ದುರ್ಬಲ, ನಿರ್ಗತಿಕ ಮುಸ್ಲಿಮರ ಮೇಲೆ ತೀರಿಸಿಕೊಳ್ಳತೊಡಗುತ್ತಾರೆ. ಇಸ್ಲಾಮಿನ ಸಮಾನತಾ ಸಂದೇಶದಿಂದ ಪ್ರಭಾವಿತರಾದ ಹಲವು ಮಂದಿ ಗುಲಾಮರು ಮತ್ತು ದಾಸಿಯರು ಸತ್ಯವಿಶ್ವಾಸ ಸ್ವೀಕರಿಸುತ್ತಿದ್ದರು. ಇವರೆಲ್ಲ ಯಾವುದೇ ರೀತಿಯ ಪ್ರಭಾವ, ಶಕ್ತಿ, ಸಾಮರ್ಥ್ಯವಿಲ್ಲದಂತಹ ದುರ್ಬಲ ಜನರಾಗಿದ್ದರು. ಸತ್ಯನಿಷೇಧಿಗಳು ಅವರ ಮೇಲೆ ಮಾನವೀಯತೆಯೂ ನಾಚುವಂತಹ ದೌರ್ಜನ್ಯವೆಸಗಿದರು. ಇತಿಹಾಸದಲ್ಲೆಲ್ಲೂ ಅಂತಹ ಬೇರೆ ಉದಾಹರಣೆ ಸಿಗಲಾರದು. ❑

ಬಡ ಮುಸ್ಲಿಮರ ಮೇಲೆ ದೌರ್ಜನ್ಯ

ಬಹುದೇವಾರಾಧಕರ ಬಳಿ ಗುಲಾಮರಾಗಿದ್ದಂತಹ ಬಡ ಮುಸ್ಲಿಮರ ಮೇಲಂತೂ ವರ್ಣಿಸಲಸಾಧ್ಯವಾದಂತಹ ದೌರ್ಜನ್ಯವನ್ನೆಗಸಲಾಯಿತು. ಸುಡು ಬಿಸಿಲಿನ ಮಧ್ಯಾಹ್ನದ ವೇಳೆ ಕಾದ ಮರಳಿನಲ್ಲಿ ಬರಿ ಮೈಯಲ್ಲಿ ಮಲಗಿಸುವುದು, ಅವರ ಎದೆಯ ಮೇಲೆ ಭಾರವಾದ ಕಲ್ಲು ಚಪ್ಪಡಿಗಳನ್ನಿಡುವುದು, ಮೈಯ ಚರ್ಮ ಕಿತ್ತು ಬರುವಂತೆ ಛಡಿಯೇಟು ಬಾರಿಸುವುದು, ನೀರಿನಲ್ಲಿ ಮುಳುಗಿಸಿ ಉಸಿರುಗಟ್ಟಿಸುವುದು, ಕಾದ ಕಬ್ಬಿಣದ ಸಲಾಕೆಯಿಂದ ಮೈಮೇಲೆ ಬರೆ ಎಳೆಯುವುದು, ಒಂಟೆಯ ಕಾಲುಗಳಿಗೆ ಕಟ್ಟಿ ಅದನ್ನು ಓಡಿಸುವುದು, ಚಾಪೆಯಲ್ಲಿ ಸುತ್ತಿ ಮೆಣಸಿನ ಹೊಗೆ ಬಿಡುವುದು, ಈಟಿಯಿಂದ ತಿವಿದು ಗಾಯಗೊಳಿಸುವುದು ಇತ್ಯಾದಿ ದೌರ್ಜನ್ಯಗಳನ್ನೆಸಲಾಗುತ್ತಿತ್ತು. ಒಮ್ಮೊಮ್ಮೆ ಅಮಾಯಕ ಮುಸ್ಲಿಮರನ್ನು ಎರಡು ಒಂಟೆಗಳಿಗೆ ಕಟ್ಟಿ ಅವುಗಳನ್ನು ಪರಸ್ಪರ ವಿರುದ್ಧ ದಿಕ್ಕಿಗೆ ಓಡಿಸಲಾಗುತ್ತಿತ್ತು.

ಯಾಸಿರ್ ಕುಟುಂಬ

ಯಮನ್‌ನಿಂದ ಮಕ್ಕಾಗೆ ತಮ್ಮ ಕಾಣೆಯಾದ ತಮ್ಮನನ್ನು ಹುಡುಕುತ್ತಾ ಬಂದಿದ್ದ ಯಾಸಿರ್ ಅಲ್ಲೇ ನೆಲೆಸತೊಡಗಿದ್ದರು. ಅವರು ಯಾರದೇ ಗುಲಾಮರಾಗಿರಲಿಲ್ಲ

ವಾದರೂ ತೀರಾ ಬಡವರಾಗಿದ್ದರು. ಅವರಿಗೆ ಅಬೂಹುದೈಫಾ ಮುಖ್ಝೂಮಿ ಎಂ
ಕುರೈಶ್ ಸರದಾರನು ತನ್ನ ದಾಸಿ ಸುಮಯ್ಯರನ್ನು ವಿವಾಹ ಮಾಡಿಸಿಕೊಟ್ಟ
ಆ ದಂಪತಿಗಳಿಗೆ ಜನಿಸಿದ ಪುತ್ರ ಅಮ್ಮಾರ್. ಅಮ್ಮಾರ್ ಬೆಳೆದು ಯುವಕನಾಗು
ವೇಳೆ ಮಕ್ಕಾದಲ್ಲಿ ಹ. ಮುಹಮ್ಮದ್‌ರ(ಸ) ಪ್ರವಾದಿತ್ವದ ಬಗ್ಗೆ ವ್ಯಾಪಕ ಚ
ನಡೆಯತೊಡಗಿತ್ತು. ಪ್ರವಾದಿವರ್ಯರ(ಸ) ಸಮಾನತಾ ಸಂದೇಶವು ಆ ದಂಪತಿ
ಕಿವಿಗೂ ತಲುಪಿತು. ಅವರಿಗೆ ಅದು ಬಹಳ ಹಿಡಿಸಿತ್ತಾದರೂ ಮಕ್ಕಾದ ಸತ್ಯನಿಷೇ
ಗಳಲ್ಲಿದ್ದ ರಿವಾಜಿನಂತೆ ಯಜಮಾನನ ಧರ್ಮವೇ ಗುಲಾಮರ ಧರ್ಮವಾಗಿ
ಆದರೆ ಸತ್ಯವಿಶ್ವಾಸದ ಸಂದೇಶವು ಯಾರ ಹೃದಯಕ್ಕೆ ಮುಟ್ಟಿತ್ತೋ ಅವ
ಅದನ್ನು ಒಪ್ಪದೆ ಇರಲಾಗದು. ಕೊನೆಗೆ ತಂದೆ-ತಾಯಿ ಮತ್ತು ಮಗ ಮೂವ
ಬಹಳ ಚಿಂತನೆ-ಚರ್ಚೆ ನಡೆಸಿದ ಬಳಿಕ ಸತ್ಯಸ್ವೀಕಾರದ ತೀರ್ಮಾನ ಮಾಡಿದ

ಸ್ವಭಾವತಃ ಸಂಭಾವಿತನಾಗಿದ್ದ ಅಬೂಹುದೈಫಾ, ಸಮಯ್ಯರ ಸದ್ಗುಣ, ಸೇ
ಮನೋಭಾವದಿಂದ ಪ್ರಭಾವಿತನಾಗಿದ್ದ. ಆತ ಸುಮಯ್ಯರನ್ನು ದಾಸಿಯ
ನೋಡುತ್ತಿರಲಿಲ್ಲ. ಬದಲು ಅವರಿಗೆ ಮದುವೆ ಪ್ರಾಯವಾದಾಗ ಅವರಿಗೆ ಗುಲಾ
ರಲ್ಲದ ಓರ್ವ ಸಜ್ಜನ ವ್ಯಕ್ತಿಯೊಂದಿಗೆ ವಿವಾಹ ಮಾಡಿಸಿ ಕೊಟ್ಟಿದ್ದನು. ಮಾತ್ರವ
ಅವರಿಗೆ ಮಗುವಾದಾಗ ಆ ಮಗುವನ್ನೂ ಗುಲಾಮರಂತೆ ಕಂಡಿರಲಿಲ್ಲ. ಆ
ಆ ಕುಟುಂಬವು ಸತ್ಯವಿಶ್ವಾಸ ಸ್ವೀಕರಿಸಿದ್ದು ತಿಳಿದಾಗ ಕೆಂಡಾಮಂಡಲನಾ
ಅವರನ್ನು ಪೂರ್ವ ಧರ್ಮಕ್ಕೆ ಮರಳಿಸಲು ತರತರವಾಗಿ ಒತ್ತಡ ಹೇರಿದ. ಅದರಿಂ
ಯಾವುದೇ ಪ್ರಯೋಜನ ಕಾಣದೇ ಹೋದಾಗ ಅವರಿಗೆ ಹಿಂಸೆ ನೀಡಲಾರಂಭಿಸಿ
ಮಧ್ಯಾಹ್ನದ ಬಿಸಿ ಮರಳಿನಲ್ಲಿ ಅವರನ್ನು ಮಲಗಿಸಿ ಇತರ ಗುಲಾಮರಿಂ
ಎಳೆಸುತ್ತಿದ್ದ. ಅಮ್ಮಾರ್‌ರನ್ನಂತೂ ಪ್ರಜ್ಞೆ ತಪ್ಪುವ ತನಕವೂ ಹೊಡೆಯಲಾಗುತ್ತಿ
ಈ ಯಾವ ಹಿಂಸೆ, ಮರ್ದನಕ್ಕೂ ಸುಮಯ್ಯ ಜಗ್ಗದಿದ್ದಾಗ ಅಬೂಹುದೈಫಾ, ಹಿಂ
ನೀಡುವ ಜವಾಬ್ದಾರಿಯನ್ನು ಅಬೂಜಹಲ್‌ನಿಗೆ ವಹಿಸಿಕೊಟ್ಟ.

ಅಬೂಜಹಲನ ದೌರ್ಜನ್ಯವಂತೂ ತೀರಾ ಅಮಾನುಷವಾಗಿತ್ತು. ಆ
ಮೂವರೂ ಸಹನೆ ವಹಿಸುತ್ತಿದ್ದರು. ಇವರಿಗಾಗುತ್ತಿದ್ದ ದೌರ್ಜನ್ಯವನ್ನು ಕೆಲವೊ
ಪ್ರವಾದಿ ವರ್ಯರೂ(ಸ) ಕಾಣುತ್ತಿದ್ದರು. ಅವರು(ಸ) ಯಾಸಿರ್ ಕುಟುಂ
ಸಾಂತ್ವನ ನೀಡುತ್ತಾ ಹೀಗೆನ್ನುತ್ತಿದ್ದರು, "ಯಾಸಿರ್ ಕುಟುಂಬವೇ, ತಾಳ್ಮೆ ವಹಿಸಿ
ನಿಮಗೆ ಸ್ವರ್ಗವೇ ಪ್ರತಿಫಲ."

ತನ್ನ ಯಾವುದೇ ಮರ್ದನಕ್ಕೆ ಬಡಜೀವ ಮಣಿಯದೇ ಹೋದಾ
ರೋಷಾಕುಲ ನಾದ ಅಬೂಜಹಲ್, ಸುಮಯ್ಯರ ಮರ್ಮಾಂಗಕ್ಕೆ ಭರ್ಚಿಯಿಂ
ತಿವಿದು ಗಾಯ ಗೊಳಿಸುತ್ತಾನೆ. ಇದರಿಂದ ತೀವ್ರ ರಕ್ತಸ್ರಾವವಾಗಿ ಸುಮ

ತಾತ್ಮರಾಗುತ್ತಾರೆ. ಹೀಗೆ ಇಸ್ಲಾಮಿನ ಹಾದಿಯಲ್ಲಿ ಹಿಂಸೆ-ಮರ್ದನಗಳನ್ನು ಸಹಿಸಿ ತಾತ್ಮರಾದ ಮಹಿಳೆಯರ ಸಾಲಿನಲ್ಲಿ ಸುಮಯ್ಯ ಮೊದಲಿಗರೆನಿಸುತ್ತಾರೆ. ಯಾಸಿರ್ ಡ ಅಬೂಜಹಲನ ದೌರ್ಜನ್ಯದಿಂದಾಗಿ ಹುತಾತ್ಮರಾಗುತ್ತಾರೆ.

ಅಮ್ಮಾರ್‌ರನ್ನು ಉರಿಯುತ್ತಿದ್ದ ಕೆಂಡದ ಮೇಲೆ ಮಲಗಿಸಿ ಎಳೆಯಲಾಗುತ್ತಿತ್ತು. ರನ್ನು ನೀರಿನಲ್ಲಿ ಪದೇ ಪದೇ ಮುಳುಗಿಸಲಾಗುತ್ತಿತ್ತು. ಮದೀನಕ್ಕೆ ವಲಸೆ ೀಗುವ ತನಕವೂ ಮಕ್ಕಾದ ಕುರೈಶರು ಅಮ್ಮಾರ್‌ರನ್ನು ಹೀಗೆಯೇ ಪೀಡಿಸುತ್ತಿದ್ದರು.

❖ ❖ ❖ ❖

ಉಸ್ಮಾನ್ ಬಿನ್ ಮಝ್‌ಊನ್‌ರು ಇಸ್ಲಾಮ್ ಸ್ವೀಕರಿಸಿದಾಗ, ಅವರೊಡನೆ ಊ ಉಬೈದಾ ಬಿನ್ ಜರ್ರಾಹ್, ಅಬ್ದುರ್ರಹ್ಮಾನ್ ಬಿನ್ ಔಫ್, ಅಬೂ ಉಬೈದಾ ್ ಹಾರಿಸ್ ಮೊದಲಾದವರೂ ಸೇರಿದ್ದರು. ಎಲ್ಲರೂ ಅರ್ಕಮ್‌ರ ಮನೆಯಲ್ಲಿ ್ರಯ ಪಡೆದಿದ್ದರು. ಆ ಹೊತ್ತಿಗೆ ಮುಸ್ಲಿಮರ ಸಂಖ್ಯೆ ಕೇವಲ ಹದಿಮೂರಾಗಿತ್ತು. ಮ್ಮೆ ಕುರೈಶರ ಸಭೆಯಲ್ಲಿ ಕವಿಗೋಷ್ಠಿ ನಡೆಯುತ್ತಿದ್ದಾಗ ಸತ್ಯ ನುಡಿದ ಕಾರಣ ಸ್ಮಾನ್‌ರ ಮೇಲೆ ಹಲ್ಲೆ ನಡೆಸಲಾಯಿತು. ಮದೀನಕ್ಕೆ ವಲಸೆ ಹೋಗುವ ತನಕವೂ ರ ಮೇಲೆ ಹಿಂಸೆ-ದೌರ್ಜನ್ಯ ಮುಂದುವರಿದಿತ್ತು. ಇನ್ನು ಕೆಲವು ಸಹಾಬಿಗಳನ್ನು ೈಶ್ ಸರದಾರರು ದನ ಅಥವಾ ಒಂಟೆಯ ಚರ್ಮದಲ್ಲಿ ಸುತ್ತಿ ಸುಡುಬಿಸಿಲಿನಲ್ಲಿ ದು ಬಿಡುತ್ತಿದ್ದರು. ಮತ್ತೆ ಕೆಲವರನ್ನು ಉಕ್ಕಿನ ಉಡುಪು ತೊಡಿಸಿ ಬಿಸಿ ಬಂಡೆ ಮೇಲೆ ಎಸೆಯ ಲಾಗುತ್ತಿತ್ತು. ಆದರೆ ಈ ಹಿಂಸೆ ದೌರ್ಜನ್ಯಗಳಿಂದ ಯಾವೊಬ್ಬ ುಸ್ಲಿಮನನ್ನೂ ಸತ್ಯಮಾರ್ಗದಿಂದ ದೂರಸರಿಸಲು ಸಾಧ್ಯವಾಗಲಿಲ್ಲ.

❖ ❖ ❖ ❖

ಉಸ್ಮಾನ್ ಬಿನ್ ಅಫ್ಫಾನ್‌ರು ಇಸ್ಲಾಮ್ ಸ್ವೀಕರಿಸಿದಾಗ, ಅವರ ಚಿಕ್ಕಪ್ಪನು ರನ್ನು ಹಗ್ಗದಿಂದ ಕಟ್ಟಿ ಹಾಕಿ ಹೊಡೆಯುತ್ತಿದ್ದನು. ಖರ್ಜೂರದ ಸೋಗೆಯಲ್ಲಿ ತ್ತಿ ಅವರ ಮುಖಕ್ಕೆ ಮೆಣಸಿನ ಹೊಗೆ ಬಿಡುತ್ತಿದ್ದನು. ಇಸ್ಲಾಮ್ ಸ್ವೀಕರಿಸಿದ ನೆಯ ವ್ಯಕ್ತಿಯಾಗಿದ್ದ ಅಬೂದರ್ ಗಿಫ್ಫಾರಿಯವರು, ತಾನು ಮುಸ್ಲಿಮನಾಗಿರು ವಾಗಿ ಕಅಬಾ ಭವನದಲ್ಲಿ ಘೋಷಿಸಿದ್ದರು. ಆಗ ಕುರೈಶರು ಅವರಿಗೆ ಪ್ರಜ್ಞೆ ್ಪುವ ತನಕ ಹೊಡೆದಿದ್ದರು. ಝುಬೈರ್ ಬಿನ್ ಅವ್ವಾಮ್, ಸತ್ಯಸ್ವೀಕರಿಸಿದಾಗ ರ ಚಿಕ್ಕಪ್ಪನು ಅವರನ್ನು ಕಟ್ಟಿ ಮಲಗಿಸಿ, ಅವರ ಮೂಗಿಗೆ ಹೊಗೆ ಬಿಡುತ್ತಿದ್ದ.

❖ ❖ ❖ ❖

ಮುಸ್‌ಅಬ್ ಬಿನ್ ಉಮೈರ್ ಮಕ್ಕಾ ನಗರದ ಶ್ರೀಮಂತ ಕುಲದ ಓರ್ವ ದ್ರೂಪಿ ಯುವಕ. ಅವರು ಇಸ್ಲಾಮ್ ಸ್ವೀಕರಿಸಿದ್ದು ಬಹಳ ಅಪಾಯಕಾರಿಯಾಗಿದ್ದ

ಕಾಲಘಟ್ಟದಲ್ಲಿ. ಕುಟುಂಬದ ಕಣ್ಮಣಿಯಾಗಿದ್ದರೂ ಸತ್ಯಸ್ವೀಕಾರದ ಕಾರಣ ಅ
ಮೇಲೆ ಮನೆಯವರಲ್ಲಿದ್ದ ಪ್ರೀತಿಯು ದ್ವೇಷಕ್ಕೆ ತಿರುಗಿತು. ಸತ್ಯದಿಂದ ಹಿಂಜರಿಸ
ನಾನಾ ತರದ ಆಮಿಷಗಳನ್ನೊಡ್ಡಲಾಯಿತಾದರೂ ಸತ್ಯವಿಶ್ವಾಸದ ರುಚಿ ಅ
ಮನಸ್ಸಿನಿಂದ ದೂರವಾಗಲಿಲ್ಲ. ಕೊನೆಗೆ ದಾರಿಗಾಣದೆ ಮುಸ್‌ಅಬ್‌ರನ್ನು ಗೃ
ಬಂಧನದಲ್ಲಿರಿಸ ಲಾಯಿತು. ಬಂಧನದ ವೇಳೆ ಅವರಿಗೆ ತರತರವಾಗಿ ಪೀಡಿಸಲಾಯಿ
ಅವರು ಅದೆಲ್ಲವನ್ನೂ ಸಹಿಸಿಕೊಂಡರು. ಆದರೆ, ಸೆರೆವಾಸದ ಕರಾಳ ಜೀವನ
ಅವರನ್ನು ಊರು ಬಿಡುವಂತೆ ಮಾಡಿತು.

❖ ❖ ❖ ❖

ಲುಬೈನಾ ಮತ್ತು ಝುನೀರಾ, ಉಮರ್ ಬಿನ್ ಖತ್ತಾಬ್‌ರ ದಾಸಿಗಳಾಗಿದ್ದ
ಉಮರ್(ರ) ಸತ್ಯಸ್ವೀಕರಿಸುವುದಕ್ಕಿಂತ ಮುಂಚೆ ಅವರಿಗೆ ತರತರವಾಗಿ ಹಿ
ನೀಡುತ್ತಿದ್ದರು. ಒಮ್ಮೆ ಅಬೂಜಹಲನ ಚಿತ್ರಹಿಂಸೆಗೆ ತುತ್ತಾದ ಝುನೀರಾ(ರ) ತ
ಕಣ್ಣುಗಳನ್ನು ಕಳಕೊಳ್ಳಬೇಕಾಯಿತು. ಇನ್ನೊಂದೆಡೆ ನಹ್‌ದಿಯ್ಯ ಮತ್ತು ಉ
ಉಬೈಸ್‌ರನ್ನು ಹಿಂಸಿಸಲಾಗುತ್ತಿತ್ತು. ಮತ್ತೊಂದೆಡೆ ಸುಹೈಬ್‌ರನ್ನು ಮರ್ದಿಸಲಾಗುತ್ತಿ
ಇಂತಹ ಇನ್ನೂ ಅನೇಕ ಬಡ ಮುಸ್ಲಿಮರ ಮೇಲೆ ಅಮಾನುಷ ಹಲ್ಲೆ, ಚಿತ್ರಹಿಂ
ದೌರ್ಜನ್ಯಗಳನ್ನೆಸಲಾಗುತ್ತಿತ್ತು.

❖ ❖ ❖ ❖

ತಮೀಮ್ ಗೋತ್ರದವರಾಗಿದ್ದ ಖಬ್ಬಾಬ್ ಬಿನ್ ಅರತ್, ಅಜ್ಞಾನ ಕಾಲದ
ಗುಲಾಮರಾಗಿದ್ದರು. ಅವರನ್ನು ಉಮ್ಮು ಅನ್ಮಾರ್ ಎಂಬವರು ಖರೀದಿಸಿದ್ದ
ಖಬ್ಬಾಬ್, ಇಸ್ಲಾಮ್ ಸ್ವೀಕರಿಸಿದ್ದು ಕೇವಲ ಆರೇಳು ಮಂದಿ ಮುಸ್ಲಿಮರಿ
ಸಂದರ್ಭದಲ್ಲಾಗಿತ್ತು. ಈ ವಿಷಯ ತಿಳಿದಾಗ ಕುರೈಶರು ಅವರ ಮೇಲೆ ನಾ
ರೀತಿಯ ಹಿಂಸೆ–ಮರ್ದನಗಳನ್ನೆಸಗಿದರು. ಒಮ್ಮೆಯಂತೂ ಅವರನ್ನು ಉರಿಯುತ್ತಿರು
ಕೆಂಡದ ಮೇಲೆ ಮಲಗಿಸಲಾಯಿತು. ಮಗ್ಗುಲು ಬದಲಿಸದಿರಲೆಂದು ಒ
ಧೂರ್ತನು ಅವರ ಎದೆಯ ಮೇಲೆ ಕಾಲಿರಿಸಿದ್ದನು. ಎಲ್ಲಿಯ ವರೆಗೆಂದ
ಖಬ್ಬಾಬ್‌ರ ಬೆನ್ನ ಚರ್ಮದೊಂದಿಗೆ ದೇಹ ಕೊಬ್ಬು ಕರಗಿ ಅದರಿಂದ ಕೆ
ತಣ್ಣಗಾಯಿತು. ಹಲವು ವರ್ಷಗಳ ಬಳಿಕ, ಉಮರ್ ಬಿನ್ ಖತ್ತಾಬ್(ರ) ದ್ವಿತೀ
ಖಲೀಫರಾಗಿದ್ದ ವೇಳೆ, ಖಬ್ಬಾಬ್‌ರು ತಮ್ಮ ಈ ವೃತ್ತಾಂತವನ್ನು ಖಲೀಫರ ಮುಂ
ಪ್ರಸ್ತಾಪಿಸಿದ್ದರು ಮತ್ತು ಬೆನ್ನನ್ನು ತೋರಿಸಿದ್ದರು. ಅವರ ಬೆನ್ನ ಮೇಲೆ ಆಗ
ಅಲ್ಲಲ್ಲಿ ತೊನ್ನು ರೋಗದಂತಹ ಕಲೆಗಳಿದ್ದುವು. ಖಲೀಫರು ಅದನ್ನು ಕಂ
ಬಿಕ್ಕಿಬಿಕ್ಕಿ ಅತ್ತುಬಿಟ್ಟರು.

❖ ❖ ❖ ❖

ಅಬೂಫಕೀಹ(ರ), ಸಫ್ವಾನ್ ಬಿನ್ ಉಮಯ್ಯನ ಗುಲಾಮರಾಗಿದ್ದರು. ು ಮತ್ತು ಹ. ಬಿಲಾಲ್(ರ) ಒಟ್ಟಿಗೇ ಸತ್ಯವಿಶ್ವಾಸ ಸ್ವೀಕರಿಸಿದ್ದರು. ಈ ವಿಷಯ ಾಗ ಉಮಯ್ಯ ಅಬೂ ಫಕೀಹರ ಕಾಲುಗಳನ್ನು ಹಗ್ಗದಿಂದ ಕಟ್ಟಿಹಾಕಿ ಬಿಸಿ ಳಲ್ಲಿ ಮಲಗಿಸಲು ತನ್ನ ಇಬ್ಬರು ಸೇವಕರಿಗೆ ಆದೇಶಿಸಿದ. ಮಾರ್ಗದಲ್ಲಿ ಒಂದು ಳ ಅವರಿಗೆದುರಾಯಿತು. ಉಮಯ್ಯ ಕುಹಕದಿಂದ ಕೇಳಿದ, "ಇದೇ ಏನು ಆರಾಧ್ಯ ದೈವ?" ಆಗ ಅಬೂ ಫಕೀಹ ಹೇಳಿದರು, "ನನ್ನ ಮತ್ತು ನಿನ್ನ ಅಲ್ಲಾಹನಾಗಿದ್ದಾನೆ." ಈ ಉತ್ತರದಿಂದ ಕುಪಿತನಾದ ಉಮಯ್ಯ, ಅಬೂ ಹರ ಕತ್ತು ಹಿಸುಕಲಾರಂಭಿಸಿದ. ಎಲ್ಲಿಯ ವರೆಗೆಂದರೆ, ಅವರ ಶ್ವಾಸ ನಿಂತು ಯಿತೆಂದೇ ಜನರು ಭಾವಿಸತೊಡಗಿದರು. ಒಮ್ಮೆ ಅವರ ಎದೆಯ ಮೇಲೆ ಭಾರದ ಕಲ್ಲನ್ನಿರಿಸಲಾಯಿತು. ಇದರಿಂದಾಗಿ ಅವರ ನಾಲಗೆ ಹೊರ ಬಂದಿತ್ತು.

❖ ❖ ❖ ❖

ಮುಸ್ಲಿಮರು ತಮ್ಮ ಮೇಲಾಗುತ್ತಿರುವ ಈ ದೌರ್ಜನ್ಯಗಳನ್ನೇನೋ ಸಹಿಸುತ್ತಿದ್ದರು. ರೆ ಆ ಸಮಯದಲ್ಲಿ ಇಸ್ಲಾಮಿನ ಕಡ್ಡಾಯ ಕರ್ಮಗಳನ್ನೂ ಸ್ವತಂತ್ರ(ಬಹಿರಂಗ)ವಾಗಿ ರಿಸಲು ಸಾಧ್ಯವಿರಲಿಲ್ಲ. ಕಅಬಾ ಭವನದಲ್ಲಿ ಯಾರೂ ಉಚ್ಚ ಸ್ವರದಲ್ಲಿ ಆನ್ ಪಠಿಸುವಂತಿರಲಿಲ್ಲ. ಅಬುರ್ರಹ್ಮಾನ್ ಬಿನ್ ಮಸ್‌ಊದ್(ರ) ಸತ್ಯಸ್ವೀಕರಿಸಿದ ಕ, ಯಾರದೇ ಎಚ್ಚರಿಕೆಯನ್ನು ಕಿವಿಗೆ ಹಾಕಿಕೊಳ್ಳದೆ, ಸೀದಾ ಹರಮ್‌ಗೆ ಹೋಗಿ ಹ್ಮಾನ್' ಅಧ್ಯಾಯವನ್ನು ಉಚ್ಚಸ್ವರದಲ್ಲಿ ಪಠಿಸತೊಡಗಿದರು. ಕೆರಳಿದ ಕುರೈಶರು ರ ಮೇಲೆ ಮುಗಿಬಿದ್ದರು. ಎಲ್ಲರೂ ಸೇರಿ ಅವರ ಮುಖಕ್ಕೆ ಹೊಡೆಯತೊಡಗಿದರು. ರೆ ಅವರು ಪಠಿಸುತ್ತಲೇ ಇದ್ದರು ಮತ್ತು ಎಲ್ಲಿಯ ತನಕ ಪಠಿಸಬೇಕಿತ್ತೋ ನ್ನು ಪಠಿಸಿ ಮುಗಿಸಿದರು.

ಅಬೂಬಕರ್‌ರು(ರ) ಪ್ರಭಾವ ಮತ್ತು ಸ್ಥಾನಮಾನದಲ್ಲಿ ಕುರೈಶ್ ಶ್ರೀಮಂತರ ಯಾರಿಗೂ ಕಡಿಮೆಯಿರಲಿಲ್ಲ. ಆದರೂ ಕುರ್‌ಆನನ್ನು ಬಹಿರಂಗವಾಗಿ, ಚ್ಚಸ್ವರದಲ್ಲಿ ಅವರೂ ಪಠಿಸುವಂತಿರಲಿಲ್ಲ. ಸತ್ಯಸಂದೇಶ ಪ್ರಚಾರ ಮಾಡಿದಾಗ ಶರು ಅವರನ್ನೂ ಹೊಡೆಯದೆ ಬಿಟ್ಟಿರಲಿಲ್ಲ.

ಸೆ–ಮರ್ದನದ ಪರಾಕಾಷ್ಠೆ

ಹ. ಬಿಲಾಲ್(ರ), ಉಮಯ್ಯ ಬಿನ್ ಖಲಫ್‌ನ ಗುಲಾಮರಾಗಿದ್ದರು. ಆ ದಲ್ಲಿ ಹ. ಅಬೂಬಕರ್ ಸಿದ್ದೀಕ್(ರ) ಮತ್ತು ಉಮಯ್ಯ ಬಿನ್ ಖಲಫ್ ರೂ ಮಕ್ಕಾ ನಗರದ ಅತ್ಯಧಿಕ ಶ್ರೀಮಂತರೆಂದು ಗುರುತಿಸಲ್ಪಡುತ್ತಿದ್ದರು. ಆದರೆ ುಯ್ಯ ಮಹಾ ಜಿಪುಣನಾಗಿದ್ದನು. ಮೇಲಾಗಿ ಅವನಿಗೆ ತನ್ನ ಸಂಪತ್ತಿನ ಬಗ್ಗೆ

ಬಹಳ ಅಹಂಕಾರವಿತ್ತು. ಅವನ ಅಹಂಕಾರವನ್ನು ಮುರಿಯಲು ಮತ್ತು ಅಬೂಬ ಸಿದ್ದೀಕ್‌ರ(ರ) ಉದಾರತೆ ಹಾಗೂ ದೇವಮಾರ್ಗದಲ್ಲಿ ಖರ್ಚು ಮಾ ಗುಣವನ್ನು ಲೋಕದ ಜನತೆಗೆ ತಿಳಿಸಿ ಕೊಡಲಿಕ್ಕಾಗಿಯೇ ಅಲ್ಲಾಹನು 'ಅಲ್ಲೀ ಅಧ್ಯಾಯವನ್ನು ಅವತೀರ್ಣಗೊಳಿಸಿದನು.

ಈ ಅಧ್ಯಾಯದ ಅವತೀರ್ಣ ಹಿನ್ನೆಲೆಯನ್ನು ತಿಳಿಸುತ್ತಾ, ಶಾಹ್ ಅಬ ಅಝೀಝ್‌ರವರು(ರ) ತಮ್ಮ 'ತಫ್ಸೀರ್ ಫತ್ಹುಲ್ ಅಝೀಝ್' ಎಂಬ ಗ್ರಂಥ ಉಮಯ್ಯನ ಜಿಪುಣತೆ ಮತ್ತು ಬಿಲಾಲ್‌ರ ಮೇಲೆ ಆತ ಎಸಗಿದ ಕ್ರೌರ್ಯ ವಿವರಿಸಿದ್ದಾರೆ. ಅತ್ಯಂತ ಮಾರ್ಮಿಕವೂ ಸ್ವಾರಸ್ಯಕರವೂ ಮಾಹಿತಿಪೂರ್ಣವೂ ಆ ವಿವರಣೆಯನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ–

ಮಕ್ಕಾದಲ್ಲಿ ಇಬ್ಬರು ಧನಿಕರಿದ್ದರು. ಅಬೂಬಕರ್ ಸಿದ್ದೀಕ್(ರ) ವ ಉಮಯ್ಯ ಬಿನ್ ಖಲಫ್. ಆದರೆ ಹಣದ ವಿಷಯಕ್ಕೆ ಬಂದಾಗ ಇಬ್ಬರ ನೀತಿ ಪರಸ್ಪರ ಭಿನ್ನವಾಗಿರುತ್ತಿತ್ತು. ಉಮಯ್ಯನ ಬಳಿ ಅಪಾರ ಆಸ್ತಿಯಿತ್ತು. ಆತ ಹನ್ನೆ ಗುಲಾಮರನ್ನು ವಿವಿಧ ಕಾರ್ಯಗಳಲ್ಲಿ ನೇಮಿಸಿದ್ದ. ಒಬ್ಬನಿಗೆ ಕೃಷಿಯ ಹೊ ನೀಡಿದ್ದರೆ, ಇನ್ನೊಬ್ಬನಿಗೆ ಹಣ್ಣುಗಳ ತೋಟ ನೋಡಿಕೊಳ್ಳುವ ಹೊಣೆಗಾರಿಕೆಯ ಮತ್ತೊಬ್ಬನು ಬೆಲೆಬಾಳುವ ಬಟ್ಟೆಗಳ ವ್ಯಾಪಾರಕ್ಕಾಗಿ ಸಿರಿಯಾ ಮತ್ತು ಯಮನ್‌ಗ ಸಂಚರಿಸುತ್ತಿದ್ದರೆ, ಮಗದೊಬ್ಬನು ಜಾನುವಾರುಗಳ ರಕ್ಷಣೆಗಾಗಿ ನೇಮಿಸಲ್ಪಟ್ಟಿದ್ದ. ಎಲ್ಲವುಗಳಿಂದ ಉಮಯ್ಯನಿಗೆ ಸಾಕಷ್ಟು ಆದಾಯ ಬರುತ್ತಿತ್ತು. ಆದರೆ ಯಾಚಕ ಆತ ಪುಡಿಗಾಸನ್ನೂ ನೀಡಿದ್ದಿಲ್ಲ. ಇವನ ಯಾರಾದರೊಬ್ಬ ಗುಲಾಮನು ಅಪ್ಪಿ ಯಾರಿಗಾದರೂ ದಾನ ನೀಡಿದರೆ, ಆ ಗುಲಾಮನಿಗೆ ಯಾತನಾಮಯ ಶಿಕ್ಷೆ ನೀ ತ್ತಿದ್ದ. ಯಾರಾದರೂ ಉಮಯ್ಯನೊಡನೆ, "ದೇವನು ನಿನಗೆ ಇಷ್ಟೆಲ್ಲ ಸಂಪತ್ತು ನಿ ದ್ದಾನೆ. ಅದರಿಂದ ಬಡ–ನಿರ್ಗತಿಕರಿಗೆ, ಅನಾಥರಿಗೆ ಮತ್ತು ಅಪೇಕ್ಷಿತರಿಗೆ ನೀ ಇದರಿಂದ ನಿನ್ನ ಪರಲೋಕ ಜೀವನಕ್ಕೆ ಕಿಂಚಿತ್ತಾದರೂ ಪ್ರಯೋಜನ ದೊರೆಯಬಹು ಎಂದು ಉಪದೇಶಿಸತೊಡಗಿದರೆ, ಆತ ಹೇಳುತ್ತಿದ್ದ, "ಮೊದಲು ಪರಲೆ ಅನ್ನುವಂತಹದ್ದು ಎಲ್ಲಿದೆ ಹೇಳಿ. ಒಂದು ವೇಳೆ ಪರಲೋಕ ಇದೆಯೆಂದು ಭಾ ದರೂ ಕೂಡ, ನಾನು ಶೇಖರಿಸಿರುವ ಸಂಪತ್ತೇ ನನಗೆ ಸಾಕು. ನನಗೆ ಸ್ವರ್ಗ ಸಂಪತ್ತಿನ ಅಗತ್ಯವಿಲ್ಲ. ಅದರ ಆಮಿಷವೊಡ್ಡಿಯೇ ತಾನೇ ಮುಹಮ್ಮದ್ ಜನರ ತನ್ನೊಂದಿಗೆ ಸೇರಿಸಿಕೊಳ್ಳುತ್ತಿರುವುದು?"

❖ ❖ ❖ ❖

ಬಿಲಾಲ್‌ರು(ರ), ಸತ್ಯವಿಶ್ವಾಸ ಸ್ವೀಕರಿಸಿದ ಪ್ರಥಮ ಏಳು ಮಂದಿಯ ಒಬ್ಬರು ಎನ್ನಲಾಗುತ್ತದೆ. ಸ್ವಭಾವತಃ ಓರ್ವ ಸಾತ್ವಿಕ ವ್ಯಕ್ತಿಯಾಗಿದ್ದ ಅ

ಉಮಯ್ಯ ಬಿನ್ ಖಲಫ್‌ನ ಗುಲಾಮರಾಗಿದ್ದರು. ಆತನು ಮೂರ್ತಿಗಳ ಮೇಲ್ವಿಚಾರಣೆ ಬಿಲಾಲ್‌ರನ್ನು ನೇಮಿಸಿದ್ದನು. ಸತ್ಯಸ್ವೀಕಾರದ ವಿಷಯ ತಿಳಿದು ಬರುತ್ತಲೇ ಉಮಯ್ಯನು ಬಿಲಾಲ್‌ರನ್ನು ಆ ಕೆಲಸದಿಂದ ತೆಗೆದು ಹಾಕಿ, ಆ ಜಾಗದಲ್ಲಿ ಒಬ್ಬನನ್ನು ನೇಮಿಸಿದನು. ತರುವಾಯ ಬಿಲಾಲ್‌ರನ್ನು ಕರೆಸಿ, "ನೀನು ಬೇರೆ ಯಾವುದೋ ದೇವನನ್ನು ಕಟ್ಟಿಕೊಂಡಿರುವೆಯೆಂದು ಕೇಳಿದೆ. ನಿಜ ಹೇಳು, ಯಾರ ಆರಾಧನೆ ಮಾಡುತ್ತಿರುವೆ ನೀನು?" ಎಂದು ಕೇಳಿದ.

"ಮುಹಮ್ಮದ್‌ರ ದೇವನನ್ನು" ಬಿಲಾಲ್ ಅಳುಕದೆ ಉತ್ತರಿಸಿದರು. ಉಮಯ್ಯ ಕೋಪದಿಂದ ಕಿಡಿಕಿಡಿಯಾದ ಮತ್ತು, "ನೀನು ಧರ್ಮಭ್ರಷ್ಟನಾದೆ! ಅದನ್ನೆಲ್ಲ ಬಿಟ್ಟು ಮರಳಿ ಸರಿದಾರಿಗೆ ಬಾ. ಅನ್ಯಥಾ ಅಪಮಾನಕರ ಶಿಕ್ಷೆಗೆ ಗುರಿಯಾಗಬೇಕಾದೀತು. ಲಾತ್, ಮನಾತ್, ಹುಬಲ್ ದೇವತೆಗಳ ಭಕ್ತನೊಬ್ಬನ ಗುಲಾಮನಾಗಿದ್ದು ಮುಹಮ್ಮದ್‌ನ ದೇವನ ಆರಾಧನೆ ಮಾಡುವುದನ್ನು ನಾನೆಂದಿಗೂ ಸಹಿಸಲಾರೆ" ಎಂದು ಅಬ್ಬರಿಸಿದ.

"ಇಲ್ಲ, ನಾನೆಂದಿಗೂ ಸತ್ಯಮಾರ್ಗವನ್ನು ತೊರೆಯಲಾರೆ. ನಾನು ನಿಮ್ಮ ಗುಲಾಮ ಮಾತ್ರ. ನಿಮಗೆ ನನ್ನ ದೇಹದ ಮೇಲಷ್ಟೇ ಅಧಿಕಾರ. ಆದರೆ ನನ್ನ ಮನಸ್ಸು ಮತ್ತು ಪ್ರಾಣ ಮುಹಮ್ಮದ್ ಮತ್ತು ಏಕನಾದ ದೇವನಿಗೆ ಅರ್ಪಿಸಿದ್ದೇನೆ. ನೀವು ಏನು ಬೇಕಾದರೂ ಮಾಡಿಕೊಳ್ಳಿ."

ಬಿಲಾಲ್‌ರ ಈ ದಿಟ್ಟ ಉತ್ತರದಿಂದ ರೋಷಾಕುಲನಾದ ಉಮಯ್ಯನು ಅವರ ಮೇಲೆ ಹಿಂಸೆ-ದೌರ್ಜನ್ಯಗಳ ಸರಮಾಲೆಯನ್ನೆಸಗಲು ಪ್ರಾರಂಭಿಸಿದ. ಮಕ್ಕಾದ ಹುರ್ರ ಎಂಬ ಸ್ಥಳದ ಮರಳು ತಾಪಕ್ಕೆ ಪ್ರಸಿದ್ಧವಾಗಿದೆ. ಮಧ್ಯಾಹ್ನದ ಸೂರ್ಯ ನಡುನೆತ್ತಿಗೇರಿದಾಗ, ಅಲ್ಲಿನ ಮರಳು ತಾಮ್ರದಂತೆ ಬಿಸಿಯಾಗುತ್ತಿತ್ತು. ಆ ವೇಳೆಗೆ ಉಮಯ್ಯ, ಬಿಲಾಲ್‌ರ ಕೂದಲಿಡಿದು ಎಳೆಯುತ್ತಾ ಆ ಕಾದ ಮರಳಲ್ಲಿ ಅಂಗಾತ ಮಲಗಿಸುತ್ತಿದ್ದ, ಅಲುಗಾಡದಂತೆ ಅವರ ಎದೆಯ ಮೇಲೆ ಭಾರವಾದ ಕಲ್ಲಿಟ್ಟು ಬಿಡುತ್ತಿದ್ದ. ತರುವಾಯ, "ಮುಹಮ್ಮದ್‌ನ ಧರ್ಮವನ್ನು ಬಿಟ್ಟುಬಿಡು. ಇಲ್ಲವಾದರೆ ಹೀಗೆಯೇ ಇರಬೇಕಾದೀತು" ಎನ್ನುತ್ತಿದ್ದ. ಉತ್ತರವಾಗಿ ಬಿಲಾಲ್‌ರು ದೃಢವಾದ ಸ್ವರದಲ್ಲಿ 'ಅಹದ್, ಅಹದ್' (ನನ್ನ ದೇವನು ಏಕನು, ಏಕನು) ಎನ್ನುತ್ತಿದ್ದರು. ಇದರಿಂದ ಉಮಯ್ಯನ ಕ್ರೋಧಾಗ್ನಿಗೆ ಎಣ್ಣೆ ಸುರಿದಂತಾಗುತ್ತಿತ್ತು ಮತ್ತೂ ಆತ ಕ್ರೂರವಾಗಿ ಅವರಿಗೆ ಹೊಡೆಯುತ್ತಿದ್ದನು.

ಇದಾವುದೂ ಫಲಕಾರಿಯಾಗದಿದ್ದಾಗ, ಉಮಯ್ಯನು ತನ್ನ ಇತರ ಗುಲಾಮರನ್ನು ಮತ್ತು ನಗರದ ಪಡ್ಡೆ ಹುಡುಗರನ್ನು ಛೂ ಬಿಟ್ಟು ಬಿಲಾಲ್‌ರನ್ನು ಸತಾಯಿಸುವಂತೆ ಹಾಗೂ ಮುಹಮ್ಮದ್‌ರ ಧರ್ಮವನ್ನು ತೊರೆದು ಮರಳುವ ವರೆಗೂ ಅವರ ಮೇಲೆ

ದೌರ್ಜನ್ಯವೆಸಗುವಂತೆ ಆದೇಶಿಸಿದನು. ಆ ಕಿಡಿಗೇಡಿಗಳು ಬಿಲಾಲ್‌ರನ್ನು ತರತರ ಪೀಡಿಸಿದರು. ಮಧ್ಯಾಹ್ನದ ವೇಳೆ ಹುರ್ರದ ಮರಳಲ್ಲಿ ಮಲಗಿಸಿ, ಸುತ್ತಲೂ ಹಚ್ಚುತ್ತಿದ್ದರು. ರಾತ್ರಿಯಾದಾಗ ಕೈ ಕಾಲುಗಳನ್ನು ಕಟ್ಟಿಹಾಕಿ ಕೋಣೆಯಲ್ಲಿ ಕೂ ರಾತ್ರಿಯಿಡೀ ಸರದಿ ಪ್ರಕಾರ ಛಡಿಯೇಟು ಬಾರಿಸುತ್ತಿದ್ದರು. ಅವರ ಕೊರಳಿಗೆ ಕಟ್ಟಿ ನಗರದ ಬೀದಿಗಳಲ್ಲಿ ಎಳುದಾಡುತ್ತಿದ್ದರು. ಮರಳ ರಾಶಿಯಲ್ಲಿ ಅವ ಕವುಚಿ ಮಲಗಿಸಿ ಕಲ್ಲು ಮಣ್ಣನ್ನು ಅವರ ಮೇಲೆಸೆಯುತ್ತಿದ್ದರು. ಅಷ್ಟಾಗಿ ಬಿಲಾಲ್‌ರವರ ಬಾಯಿಯಿಂದ 'ಅಹದ್, ಅಹದ್' ಎಂದಲ್ಲದೆ ಬೇರೆ ಹೊರಡುತ್ತಿರಲಿಲ್ಲ.

ಒಮ್ಮೆ ಹ. ಅಬೂಬಕರ್ ಸಿದ್ದೀಕ್‌ರು(ರ) ರಾತ್ರಿ ವೇಳೆ ಉಮಯ್ಯನ ಮ ಬಳಿಯಿಂದ ಹಾದು ಹೋಗುತ್ತಿದ್ದಾಗ ಒಳಗಿನಿಂದ ನರಳುವ ಶಬ್ದ ಕೇಳಿ "ಅದು ಯಾರು?" ಎಂದು ವಿಚಾರಿಸಿದಾಗ, "ಅದು ಬಿಲಾಲ್ ಎಂಬ ಗುಲಾ ಧ್ವನಿ... ಆತನಿಗೆ ನಿತ್ಯವೂ ಛಡಿಯೇಟು ಬಾರಿಸಲಾಗುತ್ತದೆ" ಎಂದು ಜ ಉತ್ತರಿಸಿದರು. ಅದನ್ನು ಕೇಳಿ ಮರುಗಿದ ಅಬೂಬಕರ್‌ರು ಮರುದಿನ ಬೆಳಿಗ್ಗೆ ಉಮಯ್ಯನ ಬಳಿಗೆ ತೆರಳಿದರು. ತರುವಾಯ ಆತನೊಡನೆ, "ದೇವನಿಗೆ ಭಯಪ ಈ ಗುಲಾಮ ಸತ್ಯಧರ್ಮ ಸ್ವೀಕರಿಸಿದ್ದಕ್ಕಾಗಿ ಈತನ ಮೇಲೆ ದೌರ್ಜನ್ಯವಸೆಗುತ್ತೀರಲ್ಲ. ಈತ ಒಬ್ಬ ದೇವನನ್ನು ಆರಾಧಿಸಿದರೆ ನಿಮಗಾ ನಷ್ಟವಾದರೂ ಏನು? ಇಂಥ ದೌರ್ಜನ್ಯ ನಿಮ್ಮಂಥವರಿಗೆ ಭೂಷಣವಲ್ಲ" ಎಂ

ಉಮಯ್ಯನಿಗೆ ಕೋಪ ನೆತ್ತಿಗೇರಿತು. ಆತ ಹೇಳಿದ, "ಈತ ನನ್ನ ಗುಲ ನನಗೆ ಇಷ್ಟಬಂದಂತೆ ನಾನು ವರ್ತಿಸುತ್ತೇನೆ. ನೀವು ಯಾರು ಕೇಳುವವರು? ಒ ವೇಳೆ ನಿಮಗೆ ಈತನ ಮೇಲೆ ಅಷ್ಟು ಅನುಕಂಪವಿದ್ದರೆ, ನೀವೂ ಶ್ರೀಮಂತ ಪರಲೋಕ ಎಂಬುದರ ಮೇಲೆ ನಿಮಗೆ ವಿಶ್ವಾಸವಿದೆಯಲ್ಲವೇ? ಅದರ ಪುಣ್ಯ ನೀವೇ ಕಟ್ಟಿಕೊಳ್ಳಿ. ಈ ಗುಲಾಮನನ್ನು ಖರೀದಿಸಿಬಿಡಿರಿ."

ಅಬೂಬಕರ್‌ರಿಗೆ ಅದುವೇ ಬೇಕಾಗಿತ್ತು. ಅವರು ಥಟ್ಟನೆ ಕೇಳಿ "ಹಾಗಾದರೆ ಎಷ್ಟು ಬೆಲೆ ಕೊಡಬೇಕು ಹೇಳಿ."

"ನಿಮ್ಮ ಗುಲಾಮ ಫಿಸ್ತಾಸ್‌ನನ್ನು ನನಗೆ ನೀಡಿರಿ. ಇವನನ್ನು ಪಡಕೊ

ಅಜಾನುಬಾಹುವಾಗಿದ್ದ ಫಿಸ್ತಾಸ್, ಓರ್ವ ಬೆಲೆಬಾಳುವ ಗುಲಾಮನೆ ನಗರದಾದ್ಯಂತ ಗುರುತಿಸಲ್ಪಟ್ಟಿದ್ದ. ಆತ ವ್ಯಾಪಾರದಲ್ಲಿ ಪಳಗಿದವನಾಗಿದ್ದ. ಅಬೂಬಕರ್(ರ) ಕೂಡಲೇ ಒಪ್ಪಿ, ಬಿಲಾಲ್‌ರನ್ನು ಖರೀದಿಸಿದರು ಮತ್ತು ಹಾಗೆ ಬಿಡುಗಡೆಗೊಳಿಸಿದರು. ಮೇಲ್ನೋಟಕ್ಕೆ ಉಮಯ್ಯ ಭಾರೀ ಲಾಭವನ್ನು ಪಡೆ

ೃಸ್‌ನ ಜತೆಯಲ್ಲಿ ನಲ್ವತ್ತು ಬೆಳ್ಳಿಗಟ್ಟಿಗಳನ್ನೂ ಆತ ಅಬೂಬಕರ್‌ರಿಂದ ಪಡೆದಿದ್ದ.

ಅಬೂಬಕರ್‌ರು ಬಿಲಾಲ್‌ರನ್ನು ಬಿಡಿಸಿಕೊಂಡು ಹೋಗುವಾಗ ಉಮಯ್ಯ ಗಹಿಸಿ ನಗುತ್ತಾ ಹೇಳಿದ, "ಅಬೂಬಕರ್ ಬುದ್ಧಿವಂತನೆಂದು ಭಾವಿಸಿದ್ದೆ. ಅವರು ೂರ್ಖರೆಂದು ಈಗ ತಿಳಿಯಿತು. ಎರಡು ಸಾವಿರ ದೀನಾರ್ ಸಂಪತ್ತು ಂದಿರುವ, ದೃಢ ಕಾಯನಾದ ಗುಲಾಮನನ್ನು ಕೊಟ್ಟು ಯಾವುದೇ ಪ್ರಯೋಜನಕ್ಕೆ ದವನನ್ನು ಪಡಕೊಂಡರು. ನಾನಾಗಿದ್ದರೆ ಆತನಿಗಾಗಿ ಕವಡೆ ಕಾಸನ್ನೂ ೊತ್ತಿರಲಿಲ್ಲ."

ಈ ಮಾತನ್ನು ಕೇಳಿದಾಗ ಅಬೂಬಕರ್(ರ) ಇಂತೆಂದರು, "ಉಮಯ್ಯ! ನ ಬೆಲೆ ನಿಮಗೇನು ಗೊತ್ತು. ಈತನಿಗಾಗಿ ನಾನು ಯಮನ್‌ನ ಅರಸೊತ್ತಿಗೆಯನ್ನು ರುವುದಿದ್ದರೂ ನಾನೀತನನ್ನು ಖರೀದಿಸದೆ ಬಿಡುತ್ತಿರಲಿಲ್ಲ." ತರುವಾಯ ು ಬಿಲಾಲ್‌ರನ್ನು(ರ) ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಬಿಟ್ಟರು. ಅಂದಿನಿಂದ ಲ್(ರ) ಪ್ರವಾದಿವರ್ಯರನ್ನು(ಸ) ಅಗಲಿದ್ದೇ ಇಲ್ಲ. ಗಣ್ಯ ಮುಸ್ಲಿಮರ ಸಾಲಿಗೆ ಡೆಯಾದ ಬಿಲಾಲ್‌ರ ಬಗ್ಗೆ ಪ್ರವಾದಿವರ್ಯರು(ಸ) ಹೇಳುತ್ತಿದ್ದರು, "ಸ್ವರ್ಗ ಲ್‌ರನ್ನು ಕಾಯುತ್ತಿದೆ."

ಸತ್ಯಕ್ಕಾಗಿ, ಹಿಂಸೆ, ದೌರ್ಜನ್ಯಗಳನ್ನು ಸಹಿಸಿದುದರ ಪ್ರತಿಫಲವಿದು! ❑

❖ ❖ ❖ ❖

ಮಿತಿಮೀರಿದ ಹಿಂಸೆ, ವಲಸೆ, ಬಹಿಷ್ಕಾರ

ಮುಸ್ಲಿಮರ ಮೇಲಿನ ಕುರೈಶರ ಹಿಂಸೆ, ಮರ್ದನಗಳು ದಿನೇ ದಿನೇ ಹೆಚ್ಚು ಇತ್ತು. ಪ್ರವಾದಿತ್ವಕ್ಕೆ ಐದು ವರ್ಷಗಳಾಗುತ್ತಾ ಬಂತು. ಮೊದಲೆರಡು ವರ್ಷ ಗುಪ್ತವಾಗಿ ಸಂದೇಶ ಪ್ರಚಾರ ನಡೆಸಲಾಗುತ್ತಿತ್ತು ಹಾಗೂ ದೊಡ್ಡ ಪ್ರಮಾಣದ ೋಧವೂ ಇದ್ದಿರಲಿಲ್ಲ. ಆದರೆ ಕ್ರಮೇಣ ಜನರು ಸತ್ಯಧರ್ಮದೆಡೆಗೆ ಆಕರ್ಷಿತ ತೊಡಗಿದಾಗ ವಿರೋಧವು ಹಿಂಸೆಗೆ ತಿರುಗಿತು. ದಿನ ಕಳೆದಂತೆ ಅದು ಮಿತಿ ತೊಡಗಿತು. ಆದಾಗಿಯೂ ಜನರ ಸತ್ಯಸ್ವೀಕಾರದಲ್ಲಿ ಎಳ್ಳಷ್ಟೂ ತಡೆಯಾಗಲಿಲ್ಲ. ಹ ದೌಜನ್ಯಕ್ಕೂ ನಲುಗದಂತಹ ವಿಶ್ವಾಸದಾರ್ಢ್ಯವು ಮುಸ್ಲಿಮರಲ್ಲಿ ಹೇಗೆ ಯಿತು ಎಂಬುದೇ ಸತ್ಯನಿಷೇಧಿಗಳಿಗೆ ಉತ್ತರವಿಲ್ಲದ ಪ್ರಶ್ನೆಯಾಗಿ ಕಾಡತೊಡಗಿತು. ೆ, ಮುಸ್ಲಿಮರ ಮೇಲೆ ಹಿಂಸೆ, ದೌರ್ಜನ್ಯ ತೀವ್ರವಾದಷ್ಟೂ ಆ ಧರ್ಮದಲ್ಲಿಯೇ ು ಸ್ಥಿರವಾಗಿ ನಿಲ್ಲುವಂತಹ ಯಾವ ಲಾಲಸೆಯು ಅವರನ್ನು ಕಟ್ಟಿಹಾಕಿದೆಯೆಂದು ಚಿಸಲು ಮಕ್ಕಾದ ಜನತೆ ಬೀಳುತ್ತಿದ್ದರು.

ಇನ್ನೊಂದು ವಿಚಾರ ಇಲ್ಲಿ ಉಲ್ಲೇಖನೀಯ. ಸತ್ಯಧರ್ಮವನ್ನು ಬಹುಪ ಸಚ್ಚರಿತರೇ ಸ್ವೀಕರಿಸುತ್ತಿದ್ದರು. ಸಮಾಜದಲ್ಲಿ ಸಂಪೂರ್ಣ ಹಬ್ಬಿಕೊಂಡಿದ್ದ ಕೆಡು ಮಧ್ಯೆಯೂ ಬಡವರಾಗಿದ್ದರೂ ಉತ್ತಮ ಚಾರಿತ್ರ್ಯವನ್ನು ಕಾಪಾಡಿಕೊಂಡು ಬಂ ಆ ಮಂದಿ ಸತ್ಯಧರ್ಮ ಸ್ವೀಕರಿಸಿದ ಬಳಿಕವಂತೂ ಇನ್ನಷ್ಟು ಸಚ್ಚರಿತರೂ ಸತ್ಯಸಂಧ ಸುಶೀಲರೂ ಪ್ರಾಮಾಣಿಕರೂ ವ್ಯವಹಾರಶುದ್ಧರೂ ಆಗಿ ಮಾರ್ಪಡುತ್ತಿರುವುದ ಜನ ನೋಡುತ್ತಿದ್ದರು. ಅಲ್ಲದೆ ಮಕ್ಕಾದ ಪ್ರತಿಯೊಂದು ಕುಟುಂಬದಿಂದ ಕನಿಷ್ಠ ನಾದರೂ ಇಸ್ಲಾಮ್ ಸ್ವೀಕರಿಸದೆ ಉಳಿಯಲಿಲ್ಲ. ಕುರೈಶ್ ಸರದಾರರು ಇಸ್ಲಾ ಕುರಿತು ಇನ್ನಷ್ಟು ಸಿಡಿಮಿಡಿಗೊಳ್ಳಲಿಕ್ಕೂ ವಿಷಕಾರಲಿಕ್ಕೂ ಇದುವೇ ಕಾರಣವಾ

ಹೀಗೆ ಕುರೈಶ್ ಸರದಾರರ ಮಿತಿಮೀರಿದ ಹಿಂಸೆ, ದೌರ್ಜನ್ಯದಿಂದ ನಲು ಸಹಾಬಿಗಳು ಪ್ರವಾದಿವರ್ಯರ(ಸ) ಬಳಿ ಮೊರೆಯಿಡತೊಡಗಿದರು. ಒಮ್ಮೆ ಪ್ರ ವರ್ಯರು(ಸ) ಕಅಬಾದ ನೆರಳಲ್ಲಿ ಕುಳಿತಿದ್ದರು. ಸರದಾರರ ದೌರ್ಜನ್ಯದಿಂದ ತರವಾಗಿ ನೊಂದ ಖಬ್ಬಾಬ್ ಬಿನ್ ಅರತ್‌ರು(ರ) ಬಂದು ಹೀಗೆ ನಿವೇದಿಸಿಕೊಳ್ಳು "ಯಾ ರಸೂಲಲ್ಲಾಹ್! ಈ ಹಿಂಸೆ ಮಿತಿಮೀರಿದೆ. ತಾವು ಅಲ್ಲಾಹನಲ್ಲಿ ಪ್ರಾರ್ಥಿಸ ದಿಲ್ಲವೇಕೆ?" ಇದನ್ನು ಕೇಳಿದ ಪ್ರವಾದಿವರ್ಯರು(ಸ) ಮುಖವು ವಿವರ್ಣವಾಗು ಅವರು ಹೀಗೆ ಹೇಳುತ್ತಾರೆ, "ನಿಮಗಿಂತ ಮುಂಚೆ ಗತಿಸಿ ಹೋದ ವಿಶ್ವಾ ಅವಸ್ಥೆ ಇದಕ್ಕಿಂತಲೂ ಶೋಚನೀಯವಾಗಿತ್ತು. ಅವರ ಮೈಮೇಲೆ ಕಬ್ಬಿ ಬಾಚಣಿಗೆಯನ್ನು ಚುಚ್ಚಿ ಮಾಂಸವನ್ನು ಎಳೆಯಲಾಗುತ್ತಿತ್ತು. ಗರಗಸದಿಂದ ಅ ತಲೆಯನ್ನು ಸೀಳಲಾಗುತ್ತಿತ್ತು. ಆದರೂ ಅವರು ತಮ್ಮ ವಿಶ್ವಾಸದಿಂದ ಎಳ್ಳ ಹಿಂಜರಿಯಲಿಲ್ಲ. ಅಲ್ಲಾಹನು ತನ್ನ ಧರ್ಮವನ್ನು ಖಂಡಿತ ಪೂರ್ಣಗೊಳಿಸಿ ತೀರುವನು... ಆದರೆ ನೀವಾದರೋ ಆತುರಪಡುತ್ತಿದ್ದೀರಿ."

ಆದಾಗಿಯೂ ಸರದಾರರ ಹಿಂಸೆ, ದೌರ್ಜನ್ಯ ಅಸಹನೀಯ ಮಟ್ಟಕ್ಕೆ ವ ದಾಗ ಪ್ರವಾದಿವರ್ಯರು(ಸ) ತಮ್ಮ ಸಂಗಾತಿಗಳನ್ನು ಕರೆದು, "ನೀವು ಇಲ್ಲಿ ಹೊರಟು ಅಬಿಸೀನಿಯಕ್ಕೆ ಹೋಗಿರಿ. ಅದು ನಿಮ್ಮ ಮಟ್ಟಿಗೆ ಉತ್ತಮ. ಅಲ್ಲಿನ ದೊರೆ ಸ್ವಭಾವತಃ ಸಜ್ಜನರಾಗಿದ್ದಾರೆ. ಅದು ಒಳಿತುಗಳ ದೇಶ. ಅಲ್ಲಿ ಯ ಮೇಲೂ ಅನ್ಯಾಯ, ದೌರ್ಜನ್ಯ ನಡೆಯಲಾರದು. ಇಲ್ಲಿ ನಿಮ್ಮ ಸಂಕಷ್ಟ ನಿವಾರಿಸುವ ಸ್ಥಿತಿ ಸಂಜಾತವಾಗುವ ತನಕ ನೀವು ಅಲ್ಲೇ ಇರಿ" ಎಂದು ಆದೇಶಿಸಿದರು

ಹೀಗೆ ಮೊದಲಿಗೆ ನಾಲ್ವರು ಮಹಿಳೆಯರನ್ನೊಳಗೊಂಡ ಹದಿನೈದು ಮಂ ತಂಡ ಇತಿಯೋಪಿಯಕ್ಕೆ ತೆರಳಿತು. ಕೆಲವು ತಿಂಗಳ ಬಳಿಕ ಮತ್ತೆ ಸುಮಾರು ನ ಮಂದಿ ಅಲ್ಲಿಗೆ ವಲಸೆ ಹೋದರು. ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ಜತೆ ಕೇ ನಲ್ವತ್ತು ಮಂದಿ ಉಳಿದುಕೊಂಡರು. ಇತಿಯೋಪಿಯಾ ಅನ್ನುವುದು ಆಫ್ರಿ

ರ್ ತೀರದಲ್ಲಿರುವ ದೇಶ. ಮುಸ್ಲಿಮರ ತಂಡಗಳು ಅಲ್ಲಿಗೆ ಸಮುದ್ರ ಮಾರ್ಗವಾಗಿ ಟಟಿದ್ದರು. ಈ ವಲಸೆ ಸುದ್ದಿ ತಿಳಿದ ಕುರೈಶ್ ಸತ್ಯನಿಷೇಧಿಗಳು ಸಮುದ್ರ ತೀರದ ೂ ಬೆಂಬತ್ತಿ ಹೋಗಿದ್ದರು. ಆದರೆ ದೇವಾನುಗ್ರಹದಿಂದ ಹಡಗು ಹೊರಟು ಗಿಯಾಗಿತ್ತು. ಅಷ್ಟರ ಮಟ್ಟಿಗೆ ಮುಸ್ಲಿಮರನ್ನು ಆ ಜನರು ಪೀಡಿಸಿದರು!

ಸರಿ, ಬೇರೆ ದೇಶಕ್ಕೆ ಹೋದವರನ್ನಾದರೂ ನೆಮ್ಮದಿಯಿಂದಿಲು ಮಕ್ಕಾದ ದೇವಾರಾಧಕರು ಬಿಟ್ಟಿದ್ದರಾ? ಅದೂ ಇಲ್ಲ, ನಮ್ಮ ಪರಂಪರಾಗತ ಸಂಸ್ಕೃತಿಯನ್ನು ದು ಜಗದೊಡೆಯನಾದ ಏಕದೇವನನ್ನು ಅಂಗೀಕರಿಸಿದವರು ಎಲ್ಲೂ ಶಾಂತಿಯಿಂದ ರದು ಎಂಬುದೇ ಆ ಸತ್ಯನಿಷೇದಿಗಳ ಆಗ್ರಹವಾಗಿತ್ತು. ಹಾಗಾಗಿ ಇತಿಯೋಪಿಯಕ್ಕೆ ಮಂದಿಯ ನಿಯೋಗವನ್ನು ಕಳುಹಿಸಿ, ಅಲ್ಲಿ ಆಶ್ರಯ ಪಡೆದಿದ್ದ ಮುಸ್ಲಿಮ ಅಪರಾಧಿಗಳೆಂದು ಬಿಂಬಿಸುವ ಮೂಲಕ ಅಲ್ಲಿಂದ ಹೊರಕ್ಕಟ್ಟಿಸುವ ಸಂಚು ಿದರು. ಆದರೆ ಇತಿಯೋಪಿಯದ ನಜ್ಜಾಶಿ(ದೊರೆ)ಯು ನ್ಯಾಯಪ್ರಿಯರಾಗಿದ್ದು ದ ಕುರೈಶರ ನಿಯಗೋದ ಮಾತನ್ನು ಆಲಿಸಿದ ಬಳಿಕ ಮುಸ್ಲಿಮರಿಂದಲೂ ಗ್ಗೆ ಪ್ರತಿಕ್ರಿಯೆ ತಿಳಿಯ ಬಯಸಿದರು.

ಹೀಗೆ ಮುಸ್ಲಿಮರ ನಿಯೋಗದ ಪರವಾಗಿ ಜಅ್‌ಫರ್ ಬಿನ್ ಅಬೀತಾಲಿಬ್‌ರು ಿಯ ಮುಂದೆ ಇಸ್ಲಾಮಿನ ನೈಜ ಸ್ವರೂಪವನ್ನಿರಿಸಿದಾಗ ಅವರು ಪ್ರಭಾವಿತರಾಗದೆ ಯಲಿಲ್ಲ. ಆದರೆ ಸತ್ಯನಿಷೇಧಿಗಳು ನಜ್ಜಾಶಿಯನ್ನು ಮುಸ್ಲಿಮರ ವಿರುದ್ಧ ಲು ಮತ್ತೊಮ್ಮೆ ಪ್ರಯತ್ನಿಸಿದರು. ಆ ಸಂದರ್ಭದಲ್ಲಾದ ಮಾತುಕತೆಯಿಂದ ವಿತರಾದ ನಜ್ಜಾಶಿಯು ಅಲ್ಲೇ ಸತ್ಯವಿಶ್ವಾಸ ಸ್ವೀಕರಿಸಿದರು. ಹೀಗೆ ಕುರೈಶ್ ರರು ಮುಖಭಂಗಕ್ಕೀಡಾಗುವಂತಾಯಿತು.

ಕುರೈಶ್ ಸರದಾರರ ಪ್ರತಿಯೊಂದು ಸಂಚೂ ವಿಫಲವಾಗುತ್ತಿತ್ತು. ಹ. ಉಮರ್ ಹ. ಹಮ್‌ಝಾರ(ಅ) ಸತ್ಯಸ್ವೀಕಾರದ ಬಳಿಕವಂತೂ ಅವರು ಕಂಗೆಟ್ಟು ವರು. ಮುಸ್ಲಿಮರು ಇತಿಯೋಪಿಯದಲ್ಲಿಯೂ ಹಬ್ಬುತ್ತಿರುವುದು ಕಂಡಾಗ ಷ್ಟ ಕೆರಳಿದರು. ಇಸ್ಲಾಮೀ ಆಂದೋಲನವನ್ನು ಹತ್ತಿಕ್ಕಲಿಕ್ಕಾಗಿ ದಿನಂಪ್ರತಿ ಹೊಸ ವಿಧಾನಗಳನ್ನು ಆವಿಷ್ಕರಿಸುತ್ತಿದ್ದರು. ಒಮ್ಮೆ ಅವರೊಂದು ಹಂಚಿಕೆ ದರು. ಆ ಮೂಲಕ ಎಲ್ಲ ಗೋತ್ರಗಳ ಜನರೂ ಒಟ್ಟು ಸೇರಿ ಬನೂಹಾಶಿಮ್* ದವರ ಮೇಲೆ ಸಾಮಾಜಿಕ ಬಹಿಷ್ಕಾರ ಹೇರುವುದು ಅವರೆಲ್ಲರ ಉದ್ದೇಶವಾಗಿತ್ತು. ಾರ ಬನೂಹಾಶಿಮ್ ಗೋತ್ರದವರೊಡನೆ ಯಾವುದೇ ರೀತಿಯ ವ್ಯಾಪಾರ ಧವಾಗಲೀ ವಿವಾಹ ಸಂಬಂಧವಾಗಲೀ ಇರಿಸಬಾರದು, ಅವರೊಡನೆ ಬಾರದು, ಆಹಾರ ಮತ್ತು ಪಾನೀಯ ವಸ್ತುಗಳನ್ನು ಕೊಡಬಾರದು ಎಂದು

* ದಿವರ್ಯರ(ಸ) ಕುಟುಂಬದ ಹೆಸರು.

ಒಪ್ಪಂದ ಮಾಡಲಾಯಿತು. ಹ. ಮುಹಮ್ಮದ್‌ರನ್ನು(ಸ) ತಮ್ಮ ವಶಕ್ಕೆ ಬನೂಹಾಶಿಮ್ ಗೋತ್ರದವರೇ ತಂದೊಪ್ಪಿಸುವ ತನಕ ಈ ಬಹಿಷ್ಕಾರ ಜಾರಿ ರುವುದೆಂದು ಬರೆದು ಕಅಬಾದ ದ್ವಾರದಲ್ಲಿ ತೂಗುಹಾಕಲಾಯಿತು.

ಕೊನೆಗೆ ಅಬೂತಾಲಿಬ್‌ರು ಬನೂಹಾಶಿಮ್ ಗೋತ್ರದವರೆಲ್ಲರನ್ನೂ ಪವ ಕಣಿಯೊಂದಕ್ಕೆ ಕರೆದುಕೊಂಡು ಹೋಗುತ್ತಾರೆ. ಅದು ಬನೂಹಾಶಿಮ್ ಗೋತ್ರ ವಾರೀಸು ಸೊತ್ತಿನಲ್ಲಿ ಒಳಪಡುವ ಅಬೂತಾಲಿಬ್ ಕಣಿವೆಯಾಗಿತ್ತು. ಅಲ್ಲಿ ಮ ವರ್ಷಗಳ ಕಾಲ ಬಹಿಷ್ಕೃತ ಜೀವನ ಬಾಳಬೇಕಾಯಿತು. ಅವರಿಗೆ ವ್ಯಾ ಸಂಬಂಧವನ್ನು ಬಹಿಷ್ಕರಿಸಿದ್ದು ಮಾತ್ರವಲ್ಲ, ಹೊರನಾಡಿನಿಂದ ಬರುವ ವ್ಯಾಪಾರಿ ಸಂಧಿಸುವ ಅವಕಾಶವನ್ನೂ ಮುಚ್ಚಿಬಿಡಲಾಗಿತ್ತು. ಎಲ್ಲಾದರೂ ಹಾಶಿಮ್ ಕುಟು ವ್ಯಕ್ತಿ ಯಾರಾದರೂ ಹೊರ ನಾಡಿನ ವ್ಯಾಪಾರಿಯಿಂದ ಧಾನ್ಯ ಖರೀದಿಸು ಕಂಡರೆ ಅಬೂಲಹಬ್ ಕೂಗಿ ಹೀಗೆ ಹೇಳುತ್ತಿದ್ದ, "ಇವರಿಂದ ಪಾವತಿಸಲಾಗ ಹೆಚ್ಚು ಬೆಲೆಯನ್ನು ಹೇಳಿರಿ. ಬಳಿಕ ನಾನು ನಿಮ್ಮಿಂದ ಅದೇ ಬೆಲೆಗೆ ಧಾನ್ಯ ಖ ಸುವೆನು. ನಿಮಗೇನೂ ನಷ್ಟವುಂಟಾಗದು."

ಆದಾಯದ ಎಲ್ಲ ಮೂಲಗಳೂ ಕಡಿದು ಹೋಗಿದ್ದುವು. ಪ್ರವಾದಿ(ಸ) ಖದೀಜರು(ರ) ತಮ್ಮಲ್ಲಿದ್ದ ಎಲ್ಲ ಸಂಪತ್ತನ್ನೂ ಪೀಡಿತರಿಗೆ ನೀಡಿದರು. ಕ ತಿನ್ನಲು ಏನೂ ಸಿಗದಿದ್ದಾಗ ಕೆಲವೊಮ್ಮೆ ಮರದ ಎಲೆಗಳನ್ನು ತಿಂದೋ ಅ ಚರ್ಮವನ್ನು ಬೇಯಿಸಿ ತಿಂದೋ ಹಸಿವನ್ನು ಇಂಗಿಸುತ್ತಿದ್ದರು. ಮಕ್ಕಳು ರ ರೋದಿಸುತ್ತಿರುವುದನ್ನು ಕಂಡು ಮಕ್ಕಾದ ಸತ್ಯನಿಷೇಧಿಗಳು ಗಹಗಹಿಸುತ್ತಿ ಆದರೆ ಅವರ ಮಧ್ಯೆಯೇ ಅಲ್ಲಾಹನು ಕೆಲವರ ಮನದಲ್ಲಿ ದಯೆ-ದಾಕ್ಷಿಣ್ಯವನ್ನಿರಿಸಿ ಅಂತಹ ಕೆಲವು ಮಂದಿ ಅಬೂತಾಲಿಬ್ ಕಣಿವೆಗೆ ಜನರ ಕಣ್ಣು ತಪ್ಪಿಸಿ ಆ ಸಾಮಗ್ರಿಗಳನ್ನು ಕಳುಹಿಸಿದ್ದರು.

ಪ್ರವಾದಿ ಪತ್ನಿ ಖದೀಜರ(ರ) ಸೋದರಳಿಯ ಹಕೀಮ್ ಬಿನ್ ಹಿಝ ತನ್ನ ಗುಲಾಮರೊಡನೆ ಕೆಲವು ಆಹಾರ ಧಾನ್ಯಗಳನ್ನು ಅಬೂತಾಲಿಬ್‌ರ ಕ ಕೊಂಡೊಯ್ಯುತ್ತಿದ್ದರು ದಾರಿ ಮಧ್ಯೆ ಅಬೂಜಹಲ್ ತಡೆದು ಅವರನ್ನು ತ ತೆಗೆದುಕೊಳ್ಳ ತೊಡಗಿದನು. ಅಷ್ಟರಲ್ಲಿ ಅಬುಲ್ ಬಖ್ತರಿ ಎಂಬವರು ಅಲ್ಲಿಗಾಗಮಿ ಸತ್ಯ ನಿಷೇಧಿಯಾಗಿದ್ದರೂ ಅವರ ಹೃದಯದಲ್ಲಿ ನ್ಯಾಯಕ್ಕೆ ಕಿಂಚಿತ್ ಬೆಲೆ ಅವರು, "ಆ ವ್ಯಕ್ತಿ ತನ್ನ ಸೋದರತ್ತೆಗೆ ಆಹಾರ ಕೊಂಡೊಯ್ಯುತ್ತಿದ್ದಾನೆ. ಅ ತಡೆಯುತ್ತೀ?" ಎಂದು ಅಬೂಜಹಲ್‌ನನ್ನೇ ಪ್ರಶ್ನಿಸುತ್ತಿದ್ದರು. ಇದರಿ ಅವರಿಬ್ಬರ ಮಧ್ಯೆ ಮಾತಿಗೆ ಮಾತು ಬೆಳೆದು ಹೊಯ್ಕೆಯವರೆಗೂ ಮುಟ್ಟಿತು. ಆ ಹಮ್‌ಝಾ ಅತ್ತ ಕಡೆಯಿಂದ ಹಾದು ಹೋದರು. ಅದನ್ನು ಕಂಡು, "ಅ

ಬಹಿಷ್ಕೃತನು ನಮ್ಮನ್ನು ನೋಡಿಬಿಟ್ಟನು. ಹಾಶಿಮ್ ಮನೆತನದವರಿಗೆ ನಮ್ಮ ಗಳ ಕಂಡು ನಗುವ ಸಂದರ್ಭ ಒದಗಿತು" ಎಂದು ಹಲುಬುತ್ತಾ ಇಬ್ಬರೂ ಲ್ಲಿಂದ ಕಾಲ್ಕಿತ್ತರು. ಆದರೆ ನಿರಂತರ ಮೂರು ವರ್ಷಗಳಲ್ಲಿ ಹಾಶಿಮ್ ಕುಟುಂಬ ರರು ಬಹಿಷ್ಕಾರದ ಸಂಕಷ್ಟ ಅನುಭವಿಸುತ್ತಿದ್ದಂತೆಯೇ ಇತ್ತ ಮಕ್ಕಾದ ಜನರಲ್ಲಿಯೂ ಮೇಣ ಅವರ ಮೇಲೆ ದಯೆ–ದಾಕ್ಷಿಣ್ಯ ಹುಟ್ಟತೊಡಗಿತು. ಕೊನೆಗೆ ಒಂದು ದಿನ ಬಹಿಷ್ಕಾರವು ತಾನಾಗಿಯೇ ಕೊನೆಗೊಂಡಿತು.

ಹೀಗೆ ಕೆಲವು ಸಮಯದ ಮಟ್ಟಿಗೆ ಕುರೈಶರ ಹಿಂಸೆ–ದೌರ್ಜನ್ಯ ನಿಂತು ಂಗಿತ್ತು. ಪ್ರವಾದಿತ್ವದ ಹತ್ತನೆಯ ವರ್ಷ ಅಬೂತಾಲಿಬ್ ಮತ್ತು ಖದೀಜಾ(ರ) ನರಾದರು. ಅಲ್ಲಿಯವರೆಗೆ ಅಬೂತಾಲಿಬ್‌ರ ಮೇಲಿನ ಗೌರದಿಂದಾಗಿ ಪ್ರವಾದಿ ರ್ಯರನ್ನು(ಸ) ದೈಹಿಕವಾಗಿ ಹಿಂಸಿಸಲು ಹಿಂದೇಟು ಹಾಕುತ್ತಿದ್ದ ಸತ್ಯನಿಷೇಧಿಗಳು ಂರಂಗವಾಗಿ ಅವರ(ಸ) ಮೇಲೆ ಹಲ್ಲೆ–ದೌರ್ಜನ್ಯಕ್ಕೆ ಇಳಿದರು. ❑

ಸತ್ಯವಿಶ್ವಾಸದಿಂದ ವಂಚಿತ ವಿಶ್ವಾಸಿ!

ಪ್ರವಾದಿವರ್ಯರನ್ನು(ಸ) ಬಾಲ್ಯದಿಂದಲೇ ಅನಾಥ ಪ್ರಜ್ಞೆ ಕಾಡದಂತೆ ೀಡಿಕೊಂಡಿದ್ದ ಮುದಿಜೀವ ಅಬೂತಾಲಿಬ್. ಹುಟ್ಟುವುದಕ್ಕಿಂತ ಎರಡು ತಿಂಗಳು ಂದಲೇ ತಂದೆಯನ್ನು ಕಳಕೊಂಡ ಬಾಲಕ ಮುಹಮ್ಮದ್‌ರ ಮೇಲಿನ ತಾಯಿಯ ರೆಯೂ ಆರನೆಯ ವರ್ಷ ಪ್ರಾಯದಲ್ಲಿ ಹೊರಟು ಹೋಗಿತ್ತು. ತಾಯಿಯ ನಾನಂತರ ಅಜ್ಜ ಅಬ್ದುಲ್ ಮುತ್ತಲಿಬ್‌ರು ಅವರ ಪಾಲನೆ–ಪೋಷಣೆಯ ಣೆ ಹೊತ್ತರು. ಆದರೆ ಎರಡು ವರ್ಷಗಳ ನಂತರ ಅವರೂ ಕೊನೆಯುಸಿರೆಳೆದರು. ಗೆ ಎಂಟು ವರ್ಷ ಪ್ರಾಯದಲ್ಲಿಯೇ ಅನಾಥ, ತಬ್ಬಲಿಯಾದ ಮುಹಮ್ಮದ್‌ರ ಣೆಯನ್ನು ದೊಡ್ಡಪ್ಪ ಅಬೂತಾಲಿಬ್ ಹೊತ್ತುಕೊಂಡರು. ಅಬ್ದುಲ್ ಮುತ್ತಲಿಬ್‌ರ ನಾನಂತರ ಗೋತ್ರದ ನಾಯಕತ್ವದ ಹೊಣೆಯೂ ಅವರ ಹೆಗಲಿಗೇರಿತು.

ಅಬೂತಾಲಿಬ್‌ರು ಸೋದರ ಪುತ್ರ ಮುಹಮ್ಮದ್‌ರನ್ನು ಬಾಲ್ಯದಲ್ಲಿಯೇ ್ಯಾಪಾರ, ವಹಿವಾಟುಗಳ ಚಾತುರ್ಯ ಗಳಿಸಲಿ ಎಂಬ ಉದ್ದೇಶದಿಂದ ಅಬೂ ಲಿಬ್‌ರು, ಸಿರಿಯಕ್ಕೆ ವ್ಯಾಪಾರ ಹೊರಟಾಗಲೆಲ್ಲ ಒಟ್ಟಿಗೇ ಕರೆದೊಯ್ಯುತ್ತಿದ್ದರು. ಗೆ ಚಿಕ್ಕಂದಿನಲ್ಲಿಯೇ ವ್ಯಾಪಾರ ವಹಿವಾಟುಗಳ ಜ್ಞಾನ ಗಳಿಸಿಕೊಂಡಿದ್ದ ುಹಮ್ಮದ್‌ರು(ಸ) ಯುವಕರಾಗು ವಷ್ಟರಲ್ಲಿ ಪ್ರಾಮಾಣಿಕ (ಅಲ್‌ಅಮೀನ್) ಮತ್ತು ್ಯಸಂಧ (ಅಸ್ಸಾದಿಕ) ಎಂಬ ವಿಶೇಷಣಗಳಿಗೆ ಭಾಜನರಾಗುತ್ತಾರೆ. ಈ ರೀತಿಯಾಗಿ ುಹಮ್ಮದ್‌ರ(ಸ) ದೇವದತ್ತ ಚಾರಿತ್ರ್ಯ ಮತ್ತು ಸ್ವಯಾರ್ಜಿತ ವ್ಯವಹಾರ ತುರ್ಯದಿಂದ ಪ್ರಭಾವಿತರಾಗಿ ಹ. ಖದೀಜ ವಿವಾಹ ಪ್ರಸ್ತಾಪವನ್ನಿಡುತ್ತಾರೆ.

ಇದರ ಶ್ರೇಯಃ ಅಬೂತಾಲಿಬ್‌ರಿಗೆ ಸಲ್ಲುತ್ತದೆ ಎಂದರೆ ಬಹುಶಃ ಅತಿಶಯೊ ಯಾಗಲಾರದು.

ಎರಡು ಬಾರಿ ವಿಧವೆಯಾಗಿದ್ದ, ಕುಲೀನ ಮನೆತನದ ಖದೀಜಾ(ಪ್ರಾಯದಲ್ಲಿ ಮುಹಮ್ಮದ್‌ರಿಗಿಂತ ಹದಿನೈದು ವರ್ಷ ಹಿರಿಯರಾಗಿದ್ದರೂ ಪ್ರಸ್ತಾಪವ ಒಪ್ಪಲು ಅಬೂತಾಲಿಬ್‌ರೇ ಸೂಚಿಸಿದ್ದರು. ಇದರ ಹಿಂದೆ ಪ್ರಮುಖವಾ ಕಾರಣವೊಂದಿತ್ತು. ಮುಹಮ್ಮದ್‌ರು ಬಾಲಕರಾಗಿದ್ದಾಗ ಸಿರಿಯಕ್ಕೆ ವ್ಯಾಪಾ ತಂಡದೊಂದಿಗೆ ಹೊರಟಿದ್ದಾಗಿನ ಘಟನೆ... ಪ್ರಖರ ಬೇಸಿಗೆಯ ಸಮ ಮೋಡದ ಒಂದು ಚೂರು ಆಗಸದಲ್ಲಿರದಿದ್ದ ಕಾಲ... ಆದರೆ ಅಬೂತಾಲಿಬ ಸೋದರ ಪುತ್ರನ ಮೇಲೆ ಮೋಡ ಆಚ್ಛಾದಿಸಿದಂತೆ ನೆರಳು ಚಲಿಸುತ್ತಿ ಸೂರ್ಯನ ತಾಪ ಬಾಲಕ ಮುಹಮ್ಮದ್‌ರ ಮೇಲೆ ನೇರ ಪ್ರಭಾವ ಬೀರದ ಆ ಪವಾಡ ಜರಗುತ್ತಿತ್ತು. ಅಲ್ಲದೆ ಅವರು ಸವಾರರಾಗಿದ್ದ ಒಂಟೆಯೂ ಯಾವು ಬಳಲಿಕೆಯಿಲ್ಲದೆ ಸರಾಗವಾಗಿ ನಡೆಯುತ್ತಿತ್ತು.

ಈ ಯಾತ್ರಾ ತಂಡವು ಬಸ್ರಾಕ್ಕೆ ಸಮೀಪದ ಪರ್ವತ ತಪ್ಪಲಿನಲ್ಲಿ ತಂಗುತ್ತ ಅಲ್ಲಿ ಕುಟೀರವೊಂದರಲ್ಲಿ ಧ್ಯಾನಾಸಕ್ತರಾಗಿರುತ್ತಿದ್ದ ಕ್ರೈಸ್ತ ಸನ್ಯಾಸಿ ಬಹೀರಾ ಎಂಬವ ಬಾಲಕ ಮುಹಮ್ಮದ್‌ರನ್ನು ಕಾಣುತ್ತಾರೆ. ಈ ಹುಡುಗನ ರಕ್ಷಕ ಯಾರು ಎಂ ವಿಚಾರಿಸುತ್ತಾರೆ. ಅಬೂತಾಲಿಬ್ ಎಂದು ತಿಳಿದಾಗ ಅವರನ್ನು ಏಕಾಂತಕ್ಕೆ ಕರೆ ಹೀಗೆನ್ನುತ್ತಾರೆ, "ನಾನು ಅಂತ್ಯಪ್ರವಾದಿಯ ಕುರಿತು 'ಝಬೂರ್', 'ತೌರಾತ್' ಮ 'ಇಂಜೀಲ್'ಗಳಲ್ಲಿ ಓದಿದ ಎಲ್ಲ ಕುರುಹುಗಳೂ ನಿಮ್ಮ ಸೋದರ ಪುತ್ರನ ಮೇಳೈಸಿವೆ. ಖಂಡಿತವಾಗಿಯೂ ಇವರೇ ಅಂತಿಮ ಪ್ರವಾದಿಯಾಗಿರುವ ಇವರನ್ನು ರಕ್ಷಿಸಿರಿ. ಯಹೂದಿಗಳು ಇವರ ಶತ್ರುಗಳಾಗಿದ್ದಾರೆ. ಅವರು ಇವ ಏನಾದರೂ ಕೇಡು ಮಾಡದಿರಲಿ."

ಈ ಮಾತನ್ನು ಸ್ಮರಿಸಿಯೇ ಖದೀಜರ ವಿವಾಹ ಪ್ರಸ್ತಾಪವನ್ನು ಅಂಗೀಕರಿಸ ಸೋದರ ಪುತ್ರನಿಗೆ ಅಬೂತಾಲಿಬ್ ಸೂಚಿಸುತ್ತಾರೆ. ಒಂದು ವೇಳೆ ಪ್ರವಾದಿತ್ವ ಕಾರ್ಯಭಾರವನ್ನು ಹೊರುವ ಪ್ರಸಂಗ ಎದುರಾದರೆ, ಅವರ ಜತೆಯಲ್ಲಿ ಖದೀಜರಂತ ಪ್ರಭಾವಿ ವ್ಯಕ್ತಿಯ ಆಸರೆ ಇರಲಿ ಎಂಬುದಾಗಿತ್ತು ಅಬೂತಾಲಿಬ್‌ರ ಆಗ್ರಹ. ಯಲ್ಲಿ ಸಂಕಷ್ಟಗಳೆದುರಾದಾಗ ಹೆಚ್ಚಿನ ವೇಳೆ ಸಂಪತ್ತೇ ಮಿತ್ರನಾಗಿರುತ್ತದೆಂಬ ಲೊ ಜ್ಞಾನವೂ ಅವರಲ್ಲಿ ಇತ್ತು. ಹಾಗೆಯೇ ಖದೀಜರ ಸಂಪತ್ತು ಮೂರು ವರ್ಷ ಬಹಿಷ್ಕೃತ ಜೀವನದಲ್ಲಿ ಸಂಪೂರ್ಣವಾಗಿ ಹಾಶಿಮ್ ಮನೆತನದ ಉಪಯೋ ಬಂದಿತ್ತು. ಆ ಮೂರು ವರ್ಷಗಳಲ್ಲಿ ಖದೀಜ ಮತ್ತು ಅಬೂತಾಲಿಬ್‌ರೀವ ಸಂಪತ್ತು ಸಂಪೂರ್ಣ ಕರಗಿ ಹೋಗಿತ್ತು. ಉಳಿದವರಲ್ಲಿ ಬಹುತೇಕ ಮ

ಕವರಾಗಿದ್ದರು.

ಆದರೆ ಪ್ರಸ್ತುತ ಘಟನೆಗೆ ಸುಮಾರು ಹತ್ತು ವರ್ಷಗಳ ಹಿಂದೆ ಸೋದರ ತ್ರ ನಲ್ವತ್ತನೆಯ ವಯಸ್ಸಿನಲ್ಲಿ ದೇವನ ಸಂದೇಶವಾಹಕರಾಗಿ ಮೂಡಿ ಬಂದಿದ್ದಾಗ ೂತಾಲಿಬ್‌ರು ಬಯಸಿಯೂ ಆ ಸಂದೇಶವನ್ನು ಅಂಗೀಕರಿಸದೆ ಹೋದರು. ೀ ವೇಳೆ ಅವರ ಪುತ್ರ ಅಲಿ ಮತ್ತು ಪ್ರವಾದಿ ಪತ್ನಿ ಖದೀಜ(ರ) ತಕ್ಷಣವೇ ನ್ನೊಪ್ಪಿದರು. ತರುವಾಯ ಪ್ರವಾದಿವರ್ಯರು(ಸ) ಬಹಿರಂಗವಾಗಿ ಸತ್ಯಸಂದೇಶ ಾರ ಕಾರ್ಯ ಆರಂಭಿಸಿದಾಗ ಕುರೈಶ್ ಸರದಾರರು ಪ್ರತಿರೋಧಿಸಿದರು. ಆದರೆ ಾದಿವರ್ಯರು(ಸ) ಯಾವುದೇ ರೀತಿಯ ವಿರೋಧವನ್ನು ಲೆಕ್ಕಿಸದಿದ್ದಾಗ, ದಾರರ ಪೈಕಿ ಪ್ರಮುಖರು ಅಬೂತಾಲಿಬ್‌ರನ್ನು ಭೇಟಿಯಾಗುತ್ತಾರೆ. ಆ ವೇಳೆಗೆ ೂತಾಲಿಬ್‌ರು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ಆಗಂತುಕರ ಪೈಕಿ ಉತ್ಬಾ ಬಿನ್ ರಬೀಅ ಹತ್ತಿರಕ್ಕೆ ಬಂದು, ಅಬೂತಾಲಿಬ್‌ರೊಡನೆ ಗೆ ಹೇಳುತ್ತಾನೆ, "ನೋಡಿ ಸರದಾರರೇ! ನಿಮ್ಮ ಸೋದರ ಪುತ್ರ ನಮ್ಮ ಯರನ್ನು ಮೂರ್ಖರೆನ್ನುತ್ತಾನೆ. ಪೂರ್ವಜರನ್ನು ಪಥಭ್ರಷ್ಟರೆನ್ನುತ್ತಾನೆ. ನಮ್ಮ ವರುಗಳನ್ನು ಅವಮಾನಿಸುತ್ತಾನೆ, ಅವುಗಳನ್ನು ಖಂಡಿಸುತ್ತಾನೆ. ಇದನ್ನೆಲ್ಲ ಆತ ರಂಗವಾಗಿಯೇ ಮಾಡುತ್ತಿದ್ದಾನೆ. ಈಗ ನೀವು ಆತನನ್ನು ತಡೆಯುತ್ತೀರೋ ವಾ ನಾವೇ ನೋಡಿಕೊಳ್ಳಲೋ?"

ಅಬೂತಾಲಿಬ್ ಚಿಂತೆಗೀಡಾಗುತ್ತಾರೆ. ಆದರೆ ಕುರೈಶ್ ಸರದಾರರನ್ನು ಾಧಾನ ಪಡಿಸುತ್ತಾ, "ಸರಿ ನಾನು ಮಗನೊಡನೆ ಹೇಳುತ್ತೇನೆ" ಎಂದು ಹೇಳಿ ರನ್ನು ಮರಳಿಸುತ್ತಾರೆ. ಆದರೆ ಪ್ರವಾದಿವರ್ಯರ(ಸ) ಸಂದೇಶ ಪ್ರಚಾರಕಾರ್ಯ ್ಯಾಹತವಾಗಿ ಮುಂದುವರಿಯುತ್ತದೆ. ಪ್ರವಾದಿ ಸಂಗಾತಿಗಳಿಗೆ ನಾನಾ ತರದ ಕುಳ ನೀಡುತ್ತಿದ್ದರೂ ಅವರಲ್ಲಿರುವ ಸತ್ಯವಿಶ್ವಾಸದೃಢತೆಯು ಇತರರನ್ನೂ ಧರ್ಮದ ಕುರಿತು ಚಿಂತಿಸುವಂತೆ ಮಾಡುತ್ತಿತ್ತು. ಇದರಿಂದಾಗಿ ರೋಸಿಹೋದ ೈಶ್ ಸರದಾರರು ಪುನಃ ಅಬೂತಾಲಿಬ್‌ರನ್ನು ಭೇಟಿಯಾಗುತ್ತಾರೆ. ಅವರ ೇಕ್ಷೆಯಂತೆ ಪ್ರವಾದಿವರ್ಯರನ್ನೂ ಸಭೆಗೆ ಕರೆಯಲಾಗುತ್ತದೆ.

ಹೀಗೆ ಕುರೈಶರ ಪೈಕಿ ಓರ್ವರು ಈ ರೀತಿ ಭಿನ್ನವಿಸುತ್ತಾರೆ, "ಅಬೂತಾಲಿಬರೇ! ್ಮ ಆರಾಧ್ಯರುಗಳನ್ನು ದೂಷಿಸುವುದರಿಂದ ನಿಮ್ಮ ಸೋದರ ಪುತ್ರನನ್ನು ಯಿರಿ. ನಾವೂ ಅವರ ಆರಾಧ್ಯನನ್ನು ಅವರ ಪಾಡಿಗೆ ಬಿಟ್ಟು ಬಿಡುತ್ತೇವೆ."

ಅಬೂತಾಲಿಬ್‌ರು ಪ್ರವಾದಿವರ್ಯರೆಡೆಗೆ ನೋಡುತ್ತಾರೆ. ಆಗ ಅವರು(ಸ) ೆನ್ನುತ್ತಾರೆ, "ನಾನು ಅದಕ್ಕಿಂತಲೂ ಉತ್ತಮವಾದ ವಿಷಯವನ್ನು ಹೇಳಲೇ?

ನಾನು ಒಂದು ವಚನವನ್ನು ನಿಮ್ಮ ಮುಂದಿಡುತ್ತೇನೆ. ಅದನ್ನು ನೀವು ಒಪ್ಪಿ
ನೀವು ಅರೇಬಿಯದ ಅಧಿಪತಿಗಳಾಗುವಿರಿ. ಅರಬೇತರರೂ ನಿಮ್ಮ ಅಧೀನಕ
ಪಡುತ್ತಾರೆ. ಕೇಳಿರಿ, 'ಅಲ್ಲಾಹನಲ್ಲದೆ ಬೇರೆ ಆರಾಧ್ಯರಿಲ್ಲ' ಎಂಬುದೇ ಆ ವಚ

ಇದನ್ನು ಕೇಳಿ ರೋಷಾಕುಲನಾದ ಅಬೂಜಹಲ್, "ಆ ಒಂದು ವಚ
ವಿರುದ್ಧವಲ್ಲವೇ ನಮ್ಮ ಹೋರಾಟ? ಅದನ್ನು ಅಂಗೀಕರಿಸಿದರೆ ನಮ್ಮ ವ
ಜಗಳವೆಲ್ಲಿದೆ? ಇದಂತೂ ನಮ್ಮ ಆರಾಧ್ಯರುಗಳ ಸ್ಪಷ್ಟ ಅವಹೇಳನವಾಗಿದೆ. ನಾ
ಎಂದಿಗೂ ಅದನ್ನು ಅಂಗೀಕರಿಸಲಾರೆವು."

ಈ ಮಾತುಕತೆಯ ಬಳಿಕವೇ ಪ್ರವಾದಿಯ(ಸ) ಸಂಗಾತಿಗಳ ಮೆ
ದೌರ್ಜನ್ಯ ಮಿತಿಮೀರತೊಡಗುತ್ತದೆ. ಕೊನೆಗೆ ಬೇರೆ ದಾರಿ ಕಾಣುವ ವ
ಇತಿಯೋಪಿಯಕ್ಕೆ ವಲಸೆ ಹೋಗಲು ಪ್ರವಾದಿವರ್ಯರು(ಸ) ಅನುಯಾಯಿಗ
ಸೂಚಿಸುತ್ತಾರೆ. ಇತಿಯೋಪಿಯದಲ್ಲಿ ಸಂಭವಿಸಿದ ವಿಷಯಗಳನ್ನು ಈ ಹಿಂದೆ
ಓದಿದ್ದೆವಷ್ಟೇ.

ಕೊನೆಗೆ ಆಮಿಷವೊಡ್ಡುವ ಯತ್ನ ಮಾಡಲಾಗುತ್ತದೆ. ಸರದಾರರು ನೇರವ
ಪ್ರವಾದಿವರ್ಯರನ್ನುದ್ದೇಶಿ ಹೇಳುತ್ತಾರೆ, "ನಿಮಗೆ ಸಂಪತ್ತು ಗಳಿಸುವ ಇರಾದೆಯಿ
ಹೇಳಿ, ನಾವು ನಿಮಗೆ ಮಕ್ಕಾದ ಅತಿದೊಡ್ಡ ಶ್ರೀಮಂತನಾಗುವಷ್ಟು ಧನಕನಕಗಳ
ನೀಡುತ್ತೇವೆ. ಸುಂದರ ಸ್ತ್ರೀಯು ಬೇಕಾಗಿದ್ದರೆ ನಗರದಾದ್ಯಂತ ಅತಿ ಸುಂದರಿಯ
ವಳನ್ನು ನಿಮಗೆ ನಿಕಾಹ್ ಮಾಡಿಸಿಕೊಡುತ್ತೇವೆ. ಅಧಿಕಾರ ಬೇಕಿದ್ದರೆ ನಿ
ಆಧಿಪತ್ಯವನ್ನೂ ಒದಗಿಸಿ ಕೊಡುವೆವು. ಆದರೆ ನೀವು ನಮ್ಮ ದೇವರುಗಳ
ಅಲ್ಲಗಳೆಯುವ ಧೋರಣೆಯನ್ನು ಬಿಟ್ಟು ಬಿಡಬೇಕು."

ಇದನ್ನು ಕೇಳಿ ಪ್ರವಾದಿವರ್ಯರು(ಸ) ಹೀಗೆ ಉತ್ತರಿಸುತ್ತಾರೆ, "ನನಗೆ ನಿ
ಧನಕನಕಗಳ ಅಗತ್ಯವಿಲ್ಲ. ನಾಯಕತ್ವದ ಆಕಾಂಕ್ಷೆಯೂ ಇಲ್ಲ. ಅಲ್ಲಾಹನು ನನ್ನ
ತನ್ನ ಸಂದೇಶವಾಹಕನನ್ನಾಗಿ ಮಾಡಿ ಕಳುಹಿಸಿದ್ದಾನೆ. ಜನರಿಗೆ ಸುವಾರ್ತೆಯ
ಎಚ್ಚರಿಕೆಯನ್ನೂ ನೀಡಬೇಕಾದುದು ನನ್ನ ದೌತ್ಯವಾಗಿದೆ. ನಾನು ನಿಮಗೆ ಸಂ
ಮುಟ್ಟಿಸಿರುವೆನು. ಇನ್ನು ನಿಮ್ಮ ಇಷ್ಟ."

ತಮ್ಮ ಯೋಜನೆ ಫಲಕಾಣದಾದಾಗ ಸರದಾರರು ಸಂಧಾನಕ್ಕೆ ಮುಂದಾಗುತ
"ಹಾಗಾದರೆ ನಮ್ಮ ಸಲಹೆಯನ್ನು ಒಪ್ಪಿಕೊಳ್ಳಿರಿ. ಅದರಿಂದ ಎರಡೂ ಕಡೆಯವ
ಒಳಿತಿದೆ. ಒಂದು ವರ್ಷ ನೀವು ನಮ್ಮ ದೇವರುಗಳಾದ ಲಾತ್, ಮನಾ
ಉಝ್ಝಾಗಳನ್ನು ಆರಾಧಿಸಿರಿ. ಇನ್ನೊಂದು ವರ್ಷ ನಾವು ನಿಮ್ಮ ಆರಾಧ್ಯನ
ಪೂಜಿಸುತ್ತೇವೆ."

ಆಗ ಪ್ರವಾದಿವರ್ಯರ(ಸ) ಮೇಲೆ ದಿವ್ಯವಾಣಿ ಅವತೀರ್ಣವಾಗುತ್ತದೆ, ೀಳಿರಿ, ಓ ಸತ್ಯನಿಷೇಧಿಗಳೇ! ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ ತ್ತು ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ... ನನ್ನ ಧರ್ಮ ಗೆ, ನಿಮ್ಮ ಧರ್ಮ ನಿಮಗೆ." (ಪವಿತ್ರ ಕುರ್‌ಆನ್: 109: 1–7)

ಇದರಿಂದ ನಿರುತ್ತರಾದ ಕೈರುಶರು ಮೊಂಡುವಾದಗಳನ್ನು ಮಂಡಿಸತೊಡಗುತ್ತಾರೆ. ಾದಿವರ್ಯರು(ಸ) ಅತ್ಯಂತ ಭಾರವಾದ ಹೃದಯದೊಂದಿಗೆ ತಮ್ಮ ಮನೆಗೆ ರಳುತ್ತಾರೆ.

ಇನ್ನು ಏನಾದರಾಗಲಿ ಮುಹಮ್ಮದ್‌ರನ್ನು ತಡೆಯಲೇಬೇಕೆಂದು ತೀರ್ಮಾನಿಸಿದ ್ರೈಶ್ ಸರದಾರರು ಅಬೂತಾಲಿಬ್‌ರನ್ನು ಭೇಟಿಯಾಗಿ ಪ್ರಾಣ ಬೆದರಿಕೆಯನ್ನೊಡ್ಡುತ್ತಾರೆ. ಬೂತಾಲಿಬ್‌ರು ಪ್ರವಾದಿವರ್ಯರನ್ನು ಕರೆಸಿ, "ಪ್ರಿಯಪುತ್ರಾ ನನಗಾಗಲಿ, ನಿನಗಾಗಲಿ ರಲಾಗದಂತಹ ಹೊರೆಯನ್ನು ನನ್ನ ಮೇಲೆ ಹೊರಿಸಬೇಡ. ಆದ್ದರಿಂದ ಾಂಗ ದವರಿಗೆ ಇಷ್ಟವಿಲ್ಲದಂತಹ ಮಾತನ್ನಾಡುವುದನ್ನು ಬಿಟ್ಟುಬಿಡು" ಎನ್ನುತ್ತಾರೆ.

ಪ್ರವಾದಿವರ್ಯರಿಗೆ(ಸ) ಅಬೂತಾಲಿಬರಲ್ಲದೆ ಬೇರೆ ಯಾರೂ ಆಶ್ರಯ ಡುವವರಿಲ್ಲ. ಒಂದರ್ಥದಲ್ಲಿ ಅಬೂತಾಲಿಬರು ಪ್ರವಾದಿವರ್ಯರ(ಸ) ಪಾಲಿಗೆ ಗಳೆದುರು ಗುರಾಣಿಯಂತಿದ್ದರು. ಆದರೆ ಅವರ ಮನೋದೃಢತೆಯು ದುರ್ಬಲ ಗುತ್ತಿರುವುದನ್ನು ಗ್ರಹಿಸಿದ ಪ್ರವಾದಿವರ್ಯರು(ಸ) ಹೀಗೆನ್ನುತ್ತಾರೆ, "ಅಲ್ಲಾಹನಾಣೆ, ್ಡಪ್ಪಾ! ಇವರು ನನ್ನ ಒಂದು ಕೈಯಲ್ಲಿ ಸೂರ್ಯನನ್ನು, ಇನ್ನೊಂದು ಕೈಯಲ್ಲಿ ದ್ರನನ್ನು ತಂದಿರಿಸಿದರೂ ನಾನು ನನ್ನ ಕರ್ತವ್ಯದಿಂದ ಹಿಂಜರಿಯಲಾರೆ. ಷ್ಯದ ಒತ್ತಡಕ್ಕೆ ಮಣಿದೋ ಜೀವಭಯದಿಂದಲೋ ಸತ್ಯವನ್ನು ಮರೆಮಾಚಲಾರೆ. ದೋ ಅಲ್ಲಾಹನು ಈ ಕಾರ್ಯವನ್ನು ಪೂರ್ತೀಕರಿಸಿಯೇ ತೀರುವನು. ಇಲ್ಲವೇ ು ಈ ಹಾದಿಯಲ್ಲಿ ಹುತಾತ್ಮನಾಗುವೆನು."

ಪ್ರವಾದಿವರ್ಯರ(ಸ) ಈ ಮಾತುಗಳು ಅಬೂತಾಲಿಬ್‌ರ ಮೇಲೆ ಬಹಳ ಾವ ಬೀರುತ್ತವೆ. ಅವರು ಕೊನೆಗೆ ಹೀಗೆನ್ನುತ್ತಾರೆ, "ಪ್ರೀತಿಯ ಮಗನೇ! ೀಗು. ನಿನ್ನ ಕರ್ತವ್ಯ ನೀನು ಮಾಡು. ಯಾರೂ ನಿನ್ನನ್ನು ತಡೆಯದಂತೆ ನೋಡಿ ಳ್ಳಲು ನಾನಿದ್ದೇನೆ."

ಈ ರೀತಿ ಪ್ರವಾದಿವರ್ಯರಿಗೆ(ಸ) ತಮ್ಮ ಕೊನೆಯುಸಿರಿನ ತನಕವೂ ಬೆಂಬಲ ಿದ್ದ ಅಬೂತಾಲಿಬ್‌ರು ಅಂತಿಮ ಕ್ಷಣದಲ್ಲಿದ್ದಾಗ ತಮ್ಮ ಮಕ್ಕಳನ್ನು ಕರೆದು ಾದಿವರ್ಯರನ್ನು(ಸ) ಅನುಸರಿಸಲು ಉಪದೇಶಿಸುತ್ತಾರೆ. ಆಗ ಪ್ರವಾದಿವರ್ಯರು, ಡ್ಡಪ್ಪಾ! ನೀವು ಸ್ವಂತದ ಬಗ್ಗೆ ಅನಾಸ್ಥೆ ತೋರುತ್ತೀರಿ" ಎನ್ನುತ್ತಾರೆ. "ಇಲ್ಲ

ನನ್ನ ಸೋದರ ಪುತ್ರಾ! ಅಬೂತಾಲಿಬ್ ಮರಣ ಭಯದಿಂದ 'ಕಲಿ
ಪಠಿಸಿದನೆಂದು ಜನರಾಡಿಕೊಳ್ಳುವರೆಂಬ ಭಯ ನನಗಿಲ್ಲದಿರುತ್ತಿದ್ದರೆ ನಾನು ಖಂ
ನಿನ್ನ ಮಾತನ್ನು ಒಪ್ಪುತ್ತಿದ್ದೆ" ಎನ್ನುತ್ತಾ ಕೊನೆಯುಸಿರೆಳೆದರು.

ಹೀಗೆ ಅಬೂತಾಲಿಬ್‌ರ ಆಶ್ರಯವೂ ಹೊರಟು ಹೋದ ಬಳಿಕ ಕುರೈ
ಪ್ರವಾದಿವರ್ಯ‌ರ(ಸ) ಮೇಲೆ ದೌರ್ಜನ್ಯವನ್ನು ತೀವ್ರಗೊಳಿಸತೊಡಗುತ್ತಾರೆ.

ದುಃಖದ ವರ್ಷ

ಬಹಿಷ್ಕಾರದ ಮೂರು ವರ್ಷಗಳಲ್ಲಿ ಪ್ರವಾದಿ ಪತ್ನಿ ಖದೀಜರ(ರ) ಸಂಪ
ಸಂಪೂರ್ಣವಾಗಿ ಕರಗಿ ಹೋದ ಕುರಿತು ಈಗಾಗಲೇ ಅರಿತಿರುವಿರಿ. ಖದೀಜಾ
ಕೇವಲ ಸಂಪತ್ತಿನ ಮೂಲಕ ಮಾತ್ರವೇ ಪ್ರವಾದಿವರ್ಯರಿಗೆ ನೆರವಾದವ
ತನಗಿಂತ ಹದಿನೈದು ವರ್ಷ ಕಿರಿಯರಾಗಿದ್ದ ಪತಿಯೊಂದಿಗೆ ಅವರ ದಾಂ
ಜೀವನವು ಹದಿನೈದು ವರ್ಷಗಳ ಮಟ್ಟಿಗೆ ಸರಳವಾಗಿಯೇ ಸಾಗಿತ್ತು. ಅವರು
ತಾನೋರ್ವ ಶ್ರೀಮಂತೆ, ಪತಿಗಿಂತ ಹಿರಿಯಳು ಎಂಬ ಅಹಂಭಾವದ ಲವಲೇಶ
ಇಲ್ಲದ ಓರ್ವ ಸಚ್ಚರಿತ ಪತಿವ್ರತೆಯಾಗಿದ್ದರು.

ಅಷ್ಟೇ ಅಲ್ಲ, ಪತಿಯು ಲೌಕಿಕ ಜಂಜಡಗಳಿಂದ ದೂರವುಳಿಯುವುದರೊಂ
ನಿತ್ಯ ಹಿರಾ ಗುಹೆಯಲ್ಲಿ ಧ್ಯಾನಾಸಕ್ತರಾಗಿರುತ್ತಿದ್ದಾಗಲೂ ಏನೊಂದೂ ಚಕಾರವೆ
ಅವರಿಗೆ ಆಹಾರ ಸಾಮಾಗ್ರಿಗಳನ್ನು ಒದಗಿಸುತ್ತಾ ಇದ್ದವರು... ಒಮ್ಮೆ ಪತಿ ಹಿ
ಗುಹೆಯಿಂದ ಮರಳುವಾಗ ಅತೀವ ಭಯಾಶಂಕೆಯಿಂದ ನಡುಗುತ್ತಿದ್ದುದು ಕಂ
ಬಂತು. 'ನನಗೆ ಹೊದಿಸಿರಿ' ಎಂದು ಬಡಬಡಿಸುತ್ತಿದ್ದರು. ಸ್ವಲ್ಪ ಹೊತ್ತಿನ ಬ
ಸಮಾಧಾನಗೊಂಡ ತರುವಾಯ, ಹಿರಾ ಗುಹೆಯಲ್ಲಿ ಜಿಬ್ರೀಲ್ ಎಂಬ ದೇವ
ಬಂದು ತನಗೆ ದೇವನ ವತಿಯಿಂದ ಪ್ರವಾದಿತ್ವ ಪದವಿ ಲಭಿಸಿರುವುದ
ತಿಳಿಸಿದರೆಂದು ಪತಿ ಹೇಳಿದಾಗ, ಸ್ವಲ್ಪವೂ ಧೃತಿಗೆಡದೆ, ಸಂಶಯ ಪ
ಖದೀಜಾ(ರ) ಉತ್ತರಿಸಿದ್ದೇನು? "ನೀವು ಅನಾಥರಿಗೆ, ವಿಧವೆಯರಿಗೆ ಸಹಾ
ಮಾಡುತ್ತೀರಿ... ಎಂದಿಗೂ ಸುಳ್ಳು ಹೇಳದವರು... ಸಮಾಧಾನ ಪಡೆದುಕೊಳ್ಳಿ

ಜಗತ್ತಿಡೀ ಅಜ್ಞಾನದ ಅಂಧಕಾರದಲ್ಲಿ, ನೈತಿಕತೆಯ ಅಧಃಪತನದಲ್ಲಿ ಮು
ರುವಾಗ ಪತಿಯಲ್ಲಿ ಕೇವಲ ಸಚ್ಚಾರಿತ್ರ್ಯವನ್ನಷ್ಟೇ ಕಂಡಿರುವ ಖದೀಜರು ತಕ್ಷಣ
ಅವರ ಪ್ರವಾದಿತ್ವವನ್ನು ಅಂಗೀಕರಿಸಿ ಬಿಟ್ಟಿದ್ದರು. ಹೀಗೆ ಪ್ರವಾದಿವರ್ಯರ(ಸ)
ಯಾಯಿ ಆಗಿ ಮಾರ್ಪಟ್ಟು ಪ್ರಥಮ ಸತ್ಯವಿಶ್ವಾಸಿನಿ ಎಂಬ ಹೆಗ್ಗಳಿಕೆಗೂ
ರಾದರು. ಆ ಬಳಿಕದ ಹತ್ತು ವರ್ಷಗಳಲ್ಲಿ ಪ್ರವಾದಿವರ್ಯರ(ಸ) ವಿ
ಅನುಯಾಯಿಯಾಗಿ ಸಕಲ ರೀತಿಯ ಸಹಾಯ ಸಹಕಾರ ನೀಡಿದರು.

ಖದೀಜರಿಗೆ ಪತಿಯಲ್ಲಿದ್ದ ಪ್ರೀತಿಗೆ ಒಂದೇ ಉದಾಹರಣೆ ಸಾಕು. ಜಗತ್ತಿನ ಾವ ಮಹಿಳೆಯೂ ಸಂಕಷ್ಟದ ವೇಳೆ ಕನಿಷ್ಠ ಒಂದು ಬಾರಿಯಾದರೂ ಜೀವ ನದಲ್ಲಿ ಪತಿಯ ವಿರುದ್ಧ ಮಾತನಾಡದೆ ಇರಲಾರಳು. ಆದರೆ ಖದೀಜ(ರ), ಯ ಪ್ರವಾದಿತ್ವದ ಮೊದಲ ಹತ್ತು ವರ್ಷಗಳಲ್ಲಿ ಅದರೊಂದಿಗೆ ತಾವು ಪಟ್ಟ ಕಷ್ಟ ಒಂದೆರಡಲ್ಲ. ಪತಿಯನ್ನು ನಾಡಿನಾದ್ಯಂತದ ಗಣ್ಯರು ವಿರೋಧಿಸಿದರು... ನಾ ರೀತಿಯಲ್ಲಿ ಅವರನ್ನು ಹೀಯಾಳಿಸಲು, ಹೀನವಾಗಿ ತೋರಿಸಲು ಯತ್ನಪಟ್ಟರು... ಮೂರು ವರ್ಷಗಳ ತನಕ ಹಾಶಿಮ್ ಮನೆತನದ ಮಂದಿಯ ೇಲೆ, ಸಾಮಾಜಿಕ ಬಹಿಷ್ಕಾರ ಹಾಕಿದರು.. ಆ ಎಲ್ಲ ಸಂಬಂರ್ಭಗಳಲ್ಲಿಯೂ ೀಜ(ರ) ಪತಿಯ ಬೆಂಬಲಕ್ಕೆ ನಿಂತರು...

ಪತಿಯು ದೇವನೊಬ್ಬನೇ ಎಂದಾಗ, ಅವರೂ ಹೌದೆಂದರು. ಪತಿಯು ಲೋಕದ ಶಿಕ್ಷೆ-ರಕ್ಷೆಯ ಬಗ್ಗೆ ವಿವರಿಸಿದಾಗ ಕಣ್ಣರಳಿಸಿ ಆಶ್ಚರ್ಯ ಪಡಲಿಲ್ಲ... ಲಾಗಿ ತಕ್ಷಣವೇ ಒಪ್ಪಿದರು. ಏಕೆಂದರೆ ಪತಿಯಲ್ಲಿ ಕೇವಲ ಸತ್ಯಸಂಧತೆಯನ್ನೇ ರು ಕಂಡಿದ್ದರು... ಮಿಅ್‌ರಾಜ್ (ಗಗನಾರೋಹನ) ವೇಳೆ ಖದೀಜಾ ಬದುಕಿರಲಿಲ್ಲ. ದ್ದಾ ಅಬೂಬಕರ್ ಸಿದ್ದೀಕ್‌ರಿಗಿಂತ ಮುಂಚೆಯೇ ಆ ಘಟನೆಯನ್ನು ಮೋದಿಸುವವರಾಗುತ್ತಿದ್ದರು ಎಂದರೆ ಅತಿಶಯೋಕ್ತಿಯೆನಿಸದು.

ಇಂತಹ ಸರಳ ಸಜ್ಜನಿಕೆಯ ಪತ್ನಿಯಿಂದ ಮಾತ್ರವೇ ಪ್ರವಾದಿವರ್ಯರಿಗೆ ತಾನ ಭಾಗ್ಯ ಲಭಿಸಿತ್ತು. ಅದಲ್ಲದೆ, ಖದೀಜರು ಬದುಕಿರುವ ತನಕ ಪ್ರವಾದಿ ರ್ಯರು(ಸ) ಇನ್ನೊಂದು ಮದುವೆಯ ಬಗ್ಗೆ ಆಲೋಚಿಸಿರಲೇ ಇಲ್ಲ. ಅಬೂತಾಲಿಬ್ ವೆಯಲ್ಲಿ ಮೂರು ವರ್ಷಗಳ ಬಹಿಷ್ಕೃತ ಜೀವನ ಸಾಗಿಸಿದ ಬಳಿಕ ನಗರಕ್ಕೆ ಳಿದ ಕೆಲವೇ ದಿನಗಳ ನಂತರ ಅಬೂತಾಲಿಬ್ ನಿಧನರಾದರು. ಅದಾಗಿ ಕೆಲವು ಗಳ ಬಳಿಕ ಖದೀಜರೂ ಇಹಲೋಕಕ್ಕೆ ವಿದಾಯ ಕೋರಿದರು. ಹೀಗೆ ಪ್ರವಾದಿ ರ್ಯರಿಗೆ ಕಾಯಾ-ವಾಚಾ-ಮನಸಾ ಬೆಂಬಲ ನೀಡುತ್ತಿದ್ದ ಪತ್ನಿಯ ಆಸರೆಯೂ ವಾಯಿತು. ಕೇವಲ ಕೆಲವೇ ದಿನಗಳ ಅಂತರದಲ್ಲಿ ಈರ್ವರು ಬೆಂಬಲಿಗರು ಂಗತರಾದಾಗ ಪ್ರವಾದಿವರ್ಯರೂ(ಸ) ಕೊಂಚ ಮಟ್ಟಿಗೆ ಅಧೀರರಾಗಿದ್ದರು. ವರ್ಷವನ್ನು ಅವರು 'ದುಃಖದ ವರ್ಷ'ವೆಂದೇ ನೆನಪಿಸುತ್ತಿದ್ದರು.

ಪ್ರವಾದಿವರ್ಯರು(ಸ) ಮಕ್ಕಳ ಪೋಷಣೆಗಾಗಿ ಮರು ವಿವಾಹವಾದರು. ದಲು ತಮ್ಮದೇ ಪ್ರಾಯದ ಓರ್ವ ವಿಧವೆ ಸೌದಾರನ್ನು, ಬಳಿಕ ಕನ್ಯೆ ಆಯಿಶಾ ್ನ ವಿವಾಹವಾದರು. ಆ ನಂತರ ನಡೆದ ವಿವಾಹ ಬಂಧಗಳಲ್ಲಿ ಒಂದೋ ವೆ ಅಥವಾ ವಿಚ್ಛೇಧಿತೆಯರೇ ಇದ್ದರು. ಕನ್ಯೆ ಆಯಿಶಾರನ್ನು ವರಿಸಿದ ಬಳಿಕವೂ ದಿವರ್ಯರಲ್ಲಿ(ಸ) ಖದೀಜರ ಮೇಲಿದ್ದ ಮಮಕಾರ ಹೋಗಿರಲಿಲ್ಲ. ಅವರು

ಖದೀಜರನ್ನು ಸದಾ ಸ್ಮರಿಸುತ್ತಿದ್ದರು. ಒಮ್ಮೆ ಆಯಿಶರು(ರ) "ಆ ಮುದುಕಿಯನ್ನು! ಇನ್ನೂ ನೀವು ನೆನಪಿಸುತ್ತಿದ್ದೀರಲ್ಲ" ಎಂಬಂತೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆಗ ಪ್ರವಾದಿವರ್ಯರು(ಸ),

"ಅಲ್ಲ ಆಯಿಶಾ! ನನಗೆ ಖದೀಜರಲ್ಲಿ ಸಿಕ್ಕಿದ ಭಾಗ್ಯ ಬೇರಾವ ಪತ್ನಿಯಿಂದಲೂ ದೊರೆತಿಲ್ಲ. ಅವರಲ್ಲಿ ಮಾತ್ರವೇ ನನಗೆ ಸಂತಾನವಾಗಿದೆ. ಅವರಲ್ಲಿನ ಪ್ರೀತಿಯು ನನ್ನಲ್ಲಿ ಅಮರವಾಗಿದೆ" ಎಂದೇ ಪ್ರತಿಕ್ರಿಯಿಸಿದ್ದರು. ❑

ತನ್ನವರಿಂದಲೇ ಪೀಡನೆಗೊಳಗಾದಾಗ...

ಮಕ್ಕಾದ ಹದಿಮೂರು ವರ್ಷಗಳ ಪ್ರವಾದಿತ್ವ ದೌತ್ಯದಲ್ಲಿ ಅಲ್ಲಾಹನ ಅಂತಿಮ ಸಂದೇಶವಾಹಕರನ್ನು(ಸ) ಬಹುತೇಕ ಮಕ್ಕಾದ ಬಹುದೇವವಿಶ್ವಾಸಿಗಳು ಸುಳ್ಳುಗಾರ, ಕಪಟಿ, ಜಾದೂಗಾರ, ಹುಚ್ಚ (ನಊದುಬಿಲ್ಲಾಹ್!) ಎಂದೆಲ್ಲ ಹಂಗಿಸುತ್ತಿದ್ದರು, ಮೂದಲಿಸುತ್ತಿದ್ದರು. ಆದರೆ ಒಂದು ಮಾತಂತೂ ಸ್ಪಷ್ಟ ಅದೇ ಜನ ಪ್ರವಾದಿ ವರ್ಯರ(ಸ) ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಮನಸಾರೆ ಒಪ್ಪುತ್ತಿದ್ದರು. ಇದಕ್ಕಿಂತ ಘೋರವಾದ ವಿಡಂಬನೆ ಬೇರೇನಿದ್ದೀತು?

ಬಾಲ್ಯದಿಂದ ಪ್ರವಾದಿತ್ವ ಘೋಷಣೆ ಮಾಡುವ ವರೆಗಿನ ಅಂದರೆ ನಲ್ವತ್ತು ವರ್ಷ ಪ್ರಾಯದ ವರೆಗೂ ಪ್ರವಾದಿವರ್ಯರು(ಸ) ಮಕ್ಕಾ ನಿವಾಸಿಗಳ ಕಣ್ಮಣಿಯಾಗಿದ್ದರು. ತಮ್ಮ ಬೆಲೆಬಾಳುವ ವಸ್ತುಗಳನ್ನು ಸ್ವಂತ ಮನೆಯಲ್ಲೂ ಇರಿಸಲು ಹಿಂದುಮುಂದು ನೋಡುವ ಆ ಮಂದಿ ಅವುಗಳನ್ನು ಇದೇ ಪ್ರವಾದಿ ಮುಹಮ್ಮದ್(ಸ)ರ ಬಳಿ ಸುರಕ್ಷಿತವಾಗಿರಿಸುತ್ತಿದ್ದರು. ಪ್ರವಾದಿತ್ವ ಘೋಷಣೆಯ ಬಳಿಕದ ಹದಿಮೂರು ವರ್ಷಗಳ ಮಕ್ಕಾ ಜೀವನದಲ್ಲಿ ಪ್ರವಾದಿವರ್ಯರನ್ನು ಹಂಗಿಸಿದವರು, ಬೈದಾಡಿದವರು, ಹಲವೊಮ್ಮೆ ಕಲ್ಲು ಮಣ್ಣುಗಳನ್ನೆಸೆದು ಅವಮಾನಿಸಿದವರು ಕೂಡ ತಮ್ಮ ಬೆಲೆಬಾಳುವ ವಸ್ತುಗಳನ್ನು ಸುರಕ್ಷಿತವಾಗಿರಿಸಲು ಯೋಗ್ಯ ವ್ಯಕ್ತಿಯಾಗಿ ಪ್ರವಾದಿವರ್ಯರನ್ನೇ ಕಂಡಿದ್ದರು. ಆದ್ದರಿಂದಲೇ ಹಿಜಿರಾ (ವಲಸೆ) ಹೋಗುವಾಗ ಜನರ ಸ್ವತ್ತನ್ನು ಮರಳಿ ಸಲು ಪ್ರವಾದಿವರ್ಯರು ಅಲೀ ಬಿನ್ ಅಬೂತಾಲಿಬ್‌ರನ್ನು ತಮ್ಮ ಜಾಗದಲ್ಲಿ ಮಲಗಲು ಹೇಳಿ ಹೊರಟಿದ್ದರು.

ವಿಪರ್ಯಾಸವೆಂದರೆ, ವಿರೋಧಿಗಳ ಪೈಕಿ ಮುಂಚೂಣಿಯಲ್ಲಿದ್ದವ ಪ್ರವಾದಿವರ್ಯರ(ಸ) ನೆರೆ ಮನೆಯಲ್ಲಿದ್ದ ಅಬೂಲಹಬ್‌ನಾಗಿದ್ದ. ಪ್ರವಾದಿತ್ವ ಘೋಷಣೆಯಾದ ತಕ್ಷಣವೇ ವಿರೋಧಿಸಿದ್ದಲ್ಲದೆ ಇಸ್ಲಾಮಿನ ಮೊತ್ತ ಮೊದಲ ಶತ್ರು ಎಂಬ ವಿಶೇಷಣಕ್ಕೂ ಅಬೂಲಹಬ್ ಪಾತ್ರನಾಗುತ್ತಾನೆ. ಅಬೂಲಹಬ್ ಬೇರಾರೂ ಅಲ್ಲ, ಪ್ರವಾದಿವರ್ಯರ(ಸ) ಸ್ವಂತ ಚಿಕ್ಕಪ್ಪ. ಅಣ್ಣ ಅಬ್ದುಲ್ಲಾರಿಗೆ ಗಂಡು ಮಗು

ುತೆಂದು ತಿಳಿದಾಗ ಅತಿಯಾಗಿ ಸಂತೋಷಪಟ್ಟವ. ಈ ಸಿಹಿ ಸುದ್ದಿ ತಿಳಿಸಿದ ಗೆ ತನ್ನ ಕೊರಳಲ್ಲಿದ್ದ ಹಾರವನ್ನು ಉಡುಗೊರೆಯಾಗಿ ನೀಡಿದವ! ಅಲ್ಲಾಹನ ೇಶವಾಹಕರು(ಸ) ಸಫಾ ಬೆಟ್ಟದ ಮೇಲೇರಿ ತಮ್ಮ ಪ್ರವಾದಿತ್ವದ ಘೋಷಣೆ ಿದಾಗ ಮೊತ್ತ ಮೊದಲು 'ಸುಳ್ಳು' ಎಂದು ಕಿರುಚಿದವ. ಆ ಬಳಿಕ ಾದಿವರ್ಯರು(ಸ) ಎಲ್ಲೆಲ್ಲಿಗೆ ಹೋದರೋ ಅಲ್ಲಿಗೆಲ್ಲ ಅವರನ್ನು ಹಿಂಬಾಲಿಸುತ್ತಾ ಬೆಂಕಿ ಮುಖದವ (ಅಬೂಲಹಬ್), 'ಈತ ಸುಳ್ಳುಗಾರ, ಈತನ ಮಾತನ್ನು ಬೇಡಿ' ಎಂದು ಪ್ರಚಾರ ಮಾಡುತ್ತಿದ್ದ!

ಪವಿತ್ರ ಕುರ್‌ಆನ್ ಮಾನವರ ಪೈಕಿ ಕೇವಲ ಅಬೂಲಹಬ್‌ನ ಹೆಸರೆತ್ತಿ ಶಾಪ ರುವುದರಿಂದಲೇ ಆತನ ಉಪಟಳದ ತೀವ್ರತೆಯನ್ನು ಅರಿಯಬಹುದಾಗಿದೆ. ಆ ಕಿರುಕುಳಕ್ಕೆ ಸಂಪೂರ್ಣ ಸಹಕಾರ ನೀಡಿದ ಆತನ ಪತ್ನಿ ಹಿಂದಃಳಿಗೂ ಹಾಕುತ್ತಾ ಕಟ್ಟಿಗೆ 'ಹೊರುವವಳು' ಎಂದು ಹೇಳಲಾಗಿದೆ. ಅಂದರೆ ಅರಬಿ ಯಲ್ಲಿ ಕುಪ್ರಚಾರ ಮಾಡುವವರಿಗೆ ಈ ವಿಶೇಷಣವನ್ನು ಬಳಸಲಾಗುತ್ತದೆ. ತ್ರ ಕುರ್‌ಆನಿನಲ್ಲಿ ಈ ರೀತಿ ಹೇಳಲಾಗಿದೆ,

"ಅಬೂಲಹಬನ ಕೈಗಳು ಮುರಿದು ಹೋದವು ಮತ್ತು ಅವನು ನಾಶವಾದನು. ನ ಸಂಪತ್ತಾಗಲಿ, ಅವನ ಸಂಪಾದನೆಯಾಗಲಿ ಅವನ ಯಾವ ಕೆಲಸಕ್ಕೂ ಿಲ್ಲ. ಖಂಡಿತವಾಗಿಯೂ ಅವನು ಧಗಧಗಿಸುವ ಅಗ್ನಿಯಲ್ಲಿ ಹಾಕಲ್ಪಡುವನು ು (ಅವನ ಜೊತೆ) ಕುಪ್ರಚಾರಕಳಾದ ಅವನ ಪತ್ನಿ ಕೂಡಾ. ಅವಳ ಕೊರಳಲ್ಲಿ ಹುಲ್ಲಿನ ಹಗ್ಗವಿರುವುದು." (ಪವಿತ್ರ ಕುರ್‌ಆನ್: 111: 1–5)

ಹೀಗೆ ಇಬ್ಬರಿಗೂ ನರಕದ ಸುವಾರ್ತೆ ಇಹ ಜೀವನದಲ್ಲಿಯೇ ನೀಡಿರುವುದು ಲ್ಲೂ ಲೋಕಾಂತ್ಯದ ತನಕ ಓದಲ್ಪಡುವ ಗ್ರಂಥದಲ್ಲಿ ಉಲ್ಲೇಖಿಸಿರುವುದರಲ್ಲಿಯೇ ಬ್ಬರು ಇಸ್ಲಾಮಿನ ವಿರುದ್ಧ ಎಂತೆಂತಹ ಅಪಚಾರವೆಸಗಿದ್ದರೆಂದು ತಿಳಿಯ ದು. ಇಸ್ಲಾಮಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಚಾರಿತ್ರ್ಯಕ್ಕೆ ಕಳಂಕ ು ಹಾಗೂ ಅವರಿಗೆ ಯಾವ ರೀತಿಯಿಂದಲೂ ಉಪಟಳ ನೀಡಲು ಹಿಂದೇಟು ದವರಿವರು. ಉಮ್ಮು ಜಮೀಲ್ ಎಂದೇ ಸಮಾಜದಲ್ಲಿ ಗುರುತಿಸಲ್ಪಡುತ್ತಿದ್ದ ಃ ದಿನನಿತ್ಯ ಪ್ರವಾದಿವರ್ಯರು(ಸ) ನಡೆಯುವ ಹಾದಿಯಲ್ಲಿ ಕಂಟಕವಾಗಲು ಶಿಸುತ್ತಿದ್ದಳು. ಪ್ರವಾದಿವರ್ಯರು(ಸ) ಬೆಳಗಾತ ಮನೆಯಿಂತ ಹೊರಡುವುದಕ್ಕೆ ನಲೇ ಎದ್ದು ಅವರ(ಸ) ಬಾಗಿಲ ಹೊರಗೆ ಮುಳ್ಳುಗಂಟಿಗಳನ್ನು ಹರಡುತ್ತಿದ್ದಳು. ಾದಿವರ್ಯರು(ಸ) ಕತ್ತಲಲ್ಲಿ ಅರಿಯದೆ ಅದರ ಮೇಲೆ ಕಾಲಿಟ್ಟು ತೊಂದರೆ ವಾಗ ಕೇಕೆ ಹಾಕಿ ನಗುತ್ತಿದ್ದಳು.

ಪ್ರವಾದಿವರ್ಯರ(ಸ) ಮೇಲಿನ ದ್ವೇಷದಿಂದ ಕುರೈಶ್ ಸರದಾರರು ಹಾಶಿಮ್

ಮನೆತನದವರ ಮೇಲೆ ಸತತ ಮೂರು ವರ್ಷಗಳ ಕಾಲ ಸಾಮಾಜಿಕ ಬಹಿ
ಹೇರಿದ್ದರು. ಆ ಮೂರು ವರ್ಷಗಳಲ್ಲಿ ಪ್ರವಾದಿವರ್ಯರ ಬೆಂಬಲಕ್ಕೆ ನಿಂತ ದೊ
ಅಬೂತಾಲಿಬ್ ಮತ್ತು ಮುಸ್ಲಿಮರಾದ ಪತ್ನಿ ಖದೀಜಾ, ಅಳಿಯ ಉಸ್ಮಾನ್
ಅಫ್ಫಾನ್, ಆಪ್ತಮಿತ್ರ ಅಬೂಬಕರ್ ಸಿದ್ದೀಕ್ ಇವರೆಲ್ಲರೂ ತಮ್ಮ ಸಂಪತ್ತುಗ
ಪೀಡಿತರಿಗೆ ಸಾದ್ಯಂತ ಸಹಾಯ ಮಾಡಿದರು. ಅದೇ ವೇಳೆ ಪ್ರವಾದಿವ
ಚಿಕ್ಕಪ್ಪನೆನಿಸಿಕೊಂಡ ಅಬೂಲಹಬ್ ತನ್ನ ಸಂಪತ್ತನ್ನು ಮುಸ್ಲಿಮರನ್ನು ಪೀಡಿಸಲಿಕ್ಕಾಗಿ
ಕೈ-ಮನ ಬಿಚ್ಚಿ ವ್ಯಯಿಸಿದನು. ಮುಸ್ಲಿಮರು ಧಾನ್ಯ ಖರೀದಿಸಲು ಮುಂದಾದಾಗ
ಆತ ದುಪ್ಪಟ್ಟು ಬೆಲೆಗೆ ವರ್ತಕರಿಂದ ಖರೀದಿಸುತ್ತಿದ್ದ. ಮುಸ್ಲಿಮರ ಆದ
ಮೂಲವಂತೂ ಬಹಿಷ್ಕಾರದಿಂದ ಸ್ಥಗಿತವಾಗಿತ್ತು. ಇದ್ದ ಸಂಪತ್ತಿನಿಂದಲಾ
ಹಸಿದವರ ಹೊಟ್ಟೆ ತಣಿಸೋಣವೆಂದರೆ ಅದಕ್ಕೂ ಅಡ್ಡಾಗಾಲು ಹಾಕುವ
ಅಬೂಲಹಬ್ ಮುಂಚೂಣಿಯಲ್ಲಿದ್ದ.

❖ ❖ ❖ ❖

ಉಮ್ಮು ಜಮೀಲ್‌ಳನ್ನು ಅನುಸರಿಸಿ ಇತರ ಕಿಡಿಗೇಡಿಗಳೂ ಪ್ರವಾದಿವರ್ಯ
ಮನೆ ಬಾಗಿಲ ಮುಂದೆ ಕಲ್ಲು ಮತ್ತು ಸೆಗಣಿ ಹಾಕುತ್ತಿದ್ದರು. ಅವರು(ಸ) ಬೆಳ
ಮನೆಯಿಂದ ಹೊರಬರುವಾಗ ಕಲ್ಲೆಡವಿ ಬಿದ್ದು ಮೈಯೆಲ್ಲಾ ಸೆಗಣಿ ಮೆತ್ತು
ಕುರೈಶ್ ಮಹಿಳೆಯರು ಮಾಳಿಗೆಯ ಮೇಲಿನಿಂದ ಪ್ರವಾದಿವರ್ಯರ ಪ
ಕಸಕಡ್ಡಿಗಳನ್ನು ಎಸೆಯುತ್ತಿದ್ದರು. ಯಾವ ಸಂತೋಷಕರ ಮಾತುಕತೆ ನಡೆಯುತ್ತಿ
ಪ್ರವಾದಿ ವರ್ಯರ(ಸ) ಮುಖದರ್ಶನವಾಗುತ್ತಲೇ ತಮ್ಮ ನಗುವನ್ನು
ಪ್ರವಾದಿವರ್ಯರಿಗೆ ಬಯ್ಯುತ್ತಿದ್ದರು. ಮೂದಲಿಕೆ, ತೆಗಳಿಕೆಯಂತೂ ವ್ಯಾಪಕವಾ

ಒಮ್ಮೆ ಪ್ರವಾದಿವರ್ಯರು(ಸ) ಕಅಬಾದ ಬಳಿ ನಮಾಝ್ ನಿರ್ವಹಿಸುತ್ತಿ
ಉಕ್ಬಾ ಬಿನ್ ಅಬೀ ಮುಈತ್ ಎಂಬವನು ಅವರ ಕೊರಳಿಗೆ ಕಂಬಳಿ
ಸುತ್ತಿ ಜೋರಾಗಿ ಹಿಡಿದೆಳೆದನು. ಇದರಿಂದಾಗಿ ಪ್ರವಾದಿವರ್ಯರು(ಸ) ಉಸಿರ
ಹಿಂದಕ್ಕೆ ವಾಲಿ ಬಿದ್ದು ಬಿಟ್ಟರು. ಅಷ್ಟಕ್ಕೂ ತೃಪ್ತನಾಗದ ಆತ ಪ್ರವಾದಿವರ್ಯ
ಕತ್ತು ಹಿಸುಕಲು ಪ್ರಯತ್ನಿಸಿದ್ದ. ಆದರೆ ಪ್ರವಾದಿವರ್ಯರು(ಸ) ಅವನ ತೆಕ್ಕೆಯಿ
ಹೇಗೋ ತಪ್ಪಿಸಿ ಪಾರಾದರು.

❖ ❖ ❖ ❖

ಅಬೂಲಹಬ್ ಮತ್ತು ಉಕ್ಬಾ ಇಬ್ಬರ ಮನೆಯೂ ಪ್ರವಾದಿವರ್ಯರ ಮ
ಅಕ್ಕಪಕ್ಕದಲ್ಲಿದ್ದುವು. ಒಮ್ಮೆ ಇತ್ತ ಅಬೂಲಹಬ್ ಆಡಿನ ಕರುಳನ್ನು ತಂದು ಪ
ಕೈಯಲ್ಲಿರಿಸಿದನು. ಆಕೆ ಮನೆಯ ಆವರಣಗೋಡೆಯ ಮೇಲಿಂದ ಪ್ರವಾದಿವರ್ಯ

ೆಯ ಕಡೆಗೆ ಇಣುಕುತ್ತಿದ್ದಳು. ಅವರು(ಸ) ನಮಾಝ್ ನಿರ್ವಹಿಸುವುದನ್ನು ುವಾಗ ಅವರ ಮೇಲೆ ಆಡಿನ ಕರುಳನ್ನು ಹಾಕಿದಳು. ಅವರ ಮೈಯೆಲ್ಲ ೆಯಾಗಿ ಬಿಡುತ್ತದೆ. ಆದರೂ ಅವರು ನಮಾಝ್‌ನಲ್ಲಿ ತಲ್ಲೀನರಾಗಿದ್ದರು. ಆಚೆ ೆಯ ಉಕ್ಬಾ ಪ್ರವಾದಿವರ್ಯರ(ಸ) ಮನೆಯ ಒಲೆಯ ಮೇಲಿಟ್ಟ ನೀರಿನ ್ರೆಯ ಮೇಲೆ ಹೊಲಸನ್ನೆಸೆಯುತ್ತಿದ್ದ. ಈ ದೃಶ್ಯ ಕಂಡು ನೆರೆಹೊರೆಯವರು ಹಾಕುತ್ತಾ ನಗತೊಡಗಿದರು. ಅಷ್ಟರಲ್ಲಿ ಒಳಗಿನಿಂದ ಧಾವಿಸಿ ಬಂದ ೀಜಾ(ರ), ಪತಿಯ ಮೈಮೇಲೆ ಬಿದ್ದ ಕರುಳನ್ನು ಎತ್ತಿ ದೂರ ಎಸೆದರು. ಅವರ ಾದ ಕೊಳೆಯನ್ನು ನೀಗಿಸಲು ನೀರಿನ ಪಾತ್ರೆಯತ್ತ ಹೊರಳಿದಾಗ ಅದರಲ್ಲಿ ಲಸು ಬಿದ್ದಿರುವುದು ಕಂಡು ಹತಾಶರಾಗುತ್ತಾರೆ. ಆದರೆ ಪ್ರವಾದಿವರ್ಯರ ಯಿಯಿಂದ, "ಅಬ್ದುಮನಾಫ್ ಗೋತ್ರದವರೇ! ನೀವು ನೆರೆಕರೆಯವರ ಹಕ್ಕು ಸುವ ವಿಧಾನ ಇದುವೇ ಏನು?" ಎಂಬ ಮಾತಷ್ಟೇ ಹೊರಡುತ್ತದೆ.

❖ ❖ ❖ ❖

ಪ್ರವಾದಿವರ್ಯರಿಗೆ(ಸ) ಅನೇಕ ಬಾರಿ ವಿಷವುಣಿಸಲೂ ಪ್ರಯತ್ನಿಸಲಾಗಿತ್ತು. ೆ ದೇವವಿಧಿಯಂತೆ ಆ ಯಾವ ಪ್ರಯತ್ನವೂ ಫಲ ನೀಡಲಿಲ್ಲ. ಅಬೂ ಬ್‌ರ ನಿಧನದ ನಂತರವಂತೂ ಕಿರುಕುಳಗಳು ಮಿತಿಮೀರಿದವು. ಒಮ್ಮೆ ಓರ್ವ ಪ್ರವಾದಿವರ್ಯರ ತಲೆಗೆ ಬೂದಿ ಎರಚಿದ. ಅವರು ಅದೇ ಸ್ಥಿತಿಯಲ್ಲಿ ಮನೆಗೆ ದರು. ಅದನ್ನು ಕಂಡು ಪುತ್ರಿ ಫಾತಿಮಾ(ರ) ನೀರು ತಂದು ತಂದೆಯ ುನ್ನು ತೊಳೆಯ ತೊಡಗಿದರು. ಹಾಗೆಯೇ ದುಃಖ ಒತ್ತರಿಸಿ ಬಂದು ೊಡಗಿದರು. ಪ್ರವಾದಿ ವರ್ಯರು(ಸ) ಮಗಳನ್ನು ಸಮಾಧಾನಪಡಿಸುತ್ತಾ, ಬೇಡ ಮಗಳೇ! ಅಲ್ಲಾಹನು ನಿನ್ನ ತಂದೆಯನ್ನು ಕಾಪಾಡುವನು" ಎಂದರು.

ಒಮ್ಮೆ ಪ್ರವಾದಿವರ್ಯರು(ಸ) ಕಅಬಾ ಭವನದ ಬಳಿ ನಮಾಝ್‌ನಲ್ಲಿ ಮಗ್ನ ದ್ದರು. ಅದೇ ವೇಳೆ ಕುರೈಶ್ ಸರದಾರರೂ ಅಲ್ಲಿಗೆ ಆಗಮಿಸಿದರು. ಅಬೂ ್‌ಗೆ ಏನನ್ನಿಸಿತೋ, ಆತ ಕುಹಕ ನಗೆಯೊಂದಿಗೆ ಎಲ್ಲರನ್ನೂ ನಿಲ್ಲಿಸಿ ಹೀಗೆ ದ, "ಇಂತಿತಹ ಕಡೆಗಳಲ್ಲಿ ಒಂಟೆ ಕಡಿಯಲಾಗುತ್ತಿದೆ. ಯಾರಾದರೂ ಹೋಗಿ ಕರುಳನ್ನು ತಂದು ಈ ವ್ಯಕ್ತಿಯ ಮೇಲೆ ಎಸೆದರೆ ಎಷ್ಟು ಚೆನ್ನ!"

ಉಕ್ಬಾ ಕೂಡಲೇ ಹೋಗಿ ಕರುಳನ್ನೆತ್ತಿ ತಂದನು. ಪ್ರವಾದಿವರ್ಯರು(ಸ) ್ಟಾಂಗವೆರಗಿದ ವೇಳೆ ಅದನ್ನು ಅವರ ಮೇಲೆಸೆದು ಬಿಟ್ಟನು. ಇದಾವುದರ ೆಯೂ ಇಲ್ಲದೆ ನಮಾಝ್‌ನಲ್ಲಿ ತಲ್ಲೀನರಾಗಿದ್ದ ಪ್ರವಾದಿವರ್ಯರು(ಸ) ತಲೆ ಾಗದೆ ಸಾಷ್ಟಾಂಗದ ಸ್ಥಿತಿಯಲ್ಲಿಯೇ ಇದ್ದು ಬಿಟ್ಟರು. ಪ್ರವಾದಿವರ್ಯರ(ಸ)

ಓರ್ವ ಸಂಗಾತಿ ಇಬ್ನು ಮಸ್‌ಊದ್‌ರು(ರ) ಅಲ್ಲಿ ಉಪಸ್ಥಿತರಿದ್ದರಾದರೂ ಕುರೈಶರು ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಅವರಿಂದೇನೂ ಮಾಡಲಾಗಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಧಾವಿಸಿ ಬಂದ ಫಾತಿಮಾ, ಆ ಭಾರದ ಕರುಳನ್ನು ಎಳೆದು ಆಚೆಗೆಸೆದರು. ಅದೇ ವೇಳೆ, ಈ ಎಲ್ಲ ಕಾಠಿಣ್ಯಗಳು ಎದುರಾದಷ್ಟೇ ತೀವ್ರವಾಗಿ ಪ್ರವಾದಿವರ್ಯರ(ಸ) ಧರ್ಮ ಪ್ರಚಾರ ಹುಮ್ಮಸ್ಸು, ಉತ್ಸಾಹ ಇಮ್ಮಡಿಗೊಳ್ಳುತ್ತಿತ್ತು. ಹಾಗೆಯೇ ಮುಸ್ಲಿಮರ ಸಂಖ್ಯೆಯೂ ಮೆಲ್ಲಮೆಲ್ಲನೆ ಏರುತ್ತಿತ್ತು. ಇದು ಮಕ್ಕಾದ ಬಹುದೇವ ವಿಶ್ವಾಸಿಗಳನ್ನು ಇನ್ನಷ್ಟು ಕೆರಳಿಸುತ್ತಿತ್ತು. ❑

ಶತ್ರುವಾತ್ಸಲ್ಯದ ಉಜ್ವಲ ಮಾದರಿ

ಪ್ರವಾದಿವರ್ಯರಿಗೆ(ಸ) ಯಾವೆಲ್ಲ ರೀತಿಯ ಕಿರುಕುಳ ನೀಡಲಾಗಿತ್ತೆಂಬುದನ್ನು ಈ ಸಣ್ಣ ಪುಟದಲ್ಲಿ ಉಲ್ಲೇಖಿಸುವುದು ಬಹಳ ಕಷ್ಟ. ಆದರೆ ತಮ್ಮ ಯಾವುದೇ ಹಿಂಸೆ, ದೌರ್ಜನ್ಯವೂ ಪ್ರವಾದಿ(ಸ) ಮತ್ತವರ ಸಂಗಾತಿಗಳನ್ನು ಏಕದೇವ ವಿಶ್ವಾಸದಿಂದ ಹಿಂದೆ ಸರಿಸಲು ಸಾಧ್ಯವಾಗದೆಂದು ಕುರೈಶರಿಗೆ ಮನವರಿಕೆಯಾದಾಗ, ಅವರು ದಾರುನ್ನದ್‌ವದಲ್ಲಿ ಸಭೆ ಸೇರುತ್ತಾರೆ. ಅರೇಬಿಯದ ಬಹುತೇಕ ಎಲ್ಲ ಗೋತ್ರಗಳ ಸರದಾರರೂ ಸೇರಿರುವ ಈ ಸಭೆಯಲ್ಲಿ ಅಬೂ ಜಹಲ್, ಉತ್ಬಾ, ಅಬೂ ಸುಫ್ಯಾನ್, ಜಬೀರ್ ಬಿನ್ ಮುತ್‌ಈಮ್, ನದರ್ ಬಿನ್ ಹಾರಿಸ್ ಬಿನ್ ಅಕ್ಲಾಹ್, ಅಬುಲ್ ಬಖ್ತರೀ, ಇಬ್ನು ಹಿಶಾಮ್, ರಮ್‌ಗಾ ಬಿನ್ ಅಸ್ವಹ್ ಬಿನ್ ಮುತ್ತಲಿಬ್, ಹಕೀಮ್ ಬಿನ್ ಹಿಝಾಮ್, ಬುನೈಸಾ, ಮುನೈಸಾ, ಉಮಯ್ಯ ಬಿನ್ ಖಲಫ್ ಮತ್ತಿತರರು ಪ್ರಮುಖರಾಗಿದ್ದರು.

ಸಭೆಯಲ್ಲಿ ಒಬ್ಬೊಬ್ಬರೂ ಎದ್ದು ನಿಂತು 'ಹೊಸ ಧರ್ಮ'ದಿಂದ ಮುಕ್ತಿ ಹೊಂದಲಿಕ್ಕಾಗಿ ಏನು ಮಾಡಬೇಕೆಂಬ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಿದರು. ಆದರೆ ಆ ಯಾವೊಂದು ಸಲಹೆಯೂ ಫಲಕಾರಿಯೆಂದೆಣಿಸಲಿಲ್ಲ. ಕೊನೆಗೆ ಅಬೂ ಜಹಲ್ ನೀಡಿದ ಸಲಹೆ ಎಲ್ಲರಿಗೂ ಇಷ್ಟವಾಯಿತು. ಆತನೆಂದ, "ಪ್ರತಿಯೊಂದು ಗೋತ್ರದಿಂದಲೂ ಒಬ್ಬ ಪರಾಕ್ರಮಿಯನ್ನು ಆರಿಸಬೇಕು ಮತ್ತು ಅವರೆಲ್ಲರೂ ಸೇರಿ, ಮುಹಮ್ಮದ್ ಬೆಳ್ಳಂಬೆಳಗ್ಗೆ ಮನೆಯಿಂದ ಹೊರಡುವಾಗ ಒಟ್ಟಿಗೆ ಮುಗಿಬಿದ್ದು ಆತನನ್ನು ವಧಿಸಬೇಕು. ಈ ಕೊಲೆಯ ಆರೋಪವು ಪ್ರತಿಯೊಂದು ಗೋತ್ರದ ಮೇಲೂ ಹಂಚಿ ಹೋಗುತ್ತದೆ. ಹಾಗಾಗಿ ಹಾಶಿಮ್ ಮನೆತನದವರಿಗೆ ಆ ಎಲ್ಲ ಗೋತ್ರಗಳೊಂದಿಗೆ ಪ್ರತೀಕಾರ ತೀರಿಸಲು ಸಾಧ್ಯವಾಗಲಾರದು. ಅವರು ರಕ್ತ ಪರಿಹಾರಕ್ಕೆ ಒಪ್ಪಲೇ ಬೇಕಾಗುತ್ತದೆ. ಹೀಗೆ ನಮ್ಮ ಸಮಸ್ಯೆ ಪರಿಹಾರವಾಗುತ್ತದೆ."

ಹೀಗೆ ರಹಸ್ಯವಾಗಿ ನಡೆದ ಸಭೆಯು ಬರ್ಖಾಸ್ತುಗೊಂಡು ಎಲ್ಲರೂ ತಮ್ಮ

ೀಜನೆಯನ್ನು ಕಾರ್ಯರೂಪಕ್ಕಿಳಿಸುವ ಸಿದ್ಧತೆಯಲ್ಲಿ ತೊಡಗಿದರು. ಮಕ್ಕಾದಿಂದ ದೀನಕ್ಕೆ ವಲಸೆ ಹೋಗಲು ಪ್ರಮುಖ ಕಾರಣವೂ ಇದುವೇ ಆಗಿತ್ತು. ಇದು ಕ್ಕಾದಲ್ಲಿ ಪ್ರವಾದಿವರ್ಯರ(ಸ) ವಿರೋಧಿಗಳು ನಡೆಸಿದ ಸಂಚಿನ ಚರಮ ಪವಾಗಿತ್ತು. ಹೀಗೆ ಶತ್ರುಗಳು ಪ್ರವಾದಿವರ್ಯರಿಗೆ ಕಿರುಕುಳ ನೀಡಲು ಯಾವುದೇ ರತೆಯನ್ನಿಟ್ಟಿರಲಿಲ್ಲ ಮತ್ತು ಕೊಲೆ ನಡೆಸಲೂ ಮುಂದಾಗಿದ್ದರೆಂಬುದನ್ನು ತಿಳಿಸು ವೇ ಈ ಮೇಲಿನ ಟಿಪ್ಪಣಿಯ ಉದ್ದೇಶ.

ಆದರೆ ಅದೇ ಜನರು ಅಧೀನರೂ ಕೈದಿಗಳೂ ಆಗಿ ಪ್ರವಾದಿವರ್ಯರ(ಸ) ಂದೆ ಹಾಜರುಗೊಳಿಸಲ್ಪಟ್ಟಾಗ ಮತ್ತು ಅವರ ಜೀವ-ಸೊತ್ತುಗಳಿಗೆ ಯಾವುದೇ ಣೆಯಿಲ್ಲವಾದಾಗ ಪ್ರವಾದಿವರ್ಯರು(ಸ) ಅವರೊಡನೆ ಯಾವ ರೀತಿ ವರ್ತಿಸಿದರು? ವಾದಿ(ಸ) ಮತ್ತು ಸಂಗಾತಿಗಳೊಡನೆ ಯಾರೆಲ್ಲ ಅತಿರೇಕದ ವರ್ತನೆ ತೋರಿದ್ದರೋ ಎಲ್ಲರೊಡನೆ ಪ್ರವಾದಿವರ್ಯರ(ಸ) ವರ್ತನೆ ಹೇಗಿತ್ತು? ಅವೆಲ್ಲವನ್ನೂ ಸಂಕ್ಷಿಪ್ತ ಗಿ ಮುಂದಿನ ಪುಟಗಳಲ್ಲಿ ತಿಳಿಸಲಾಗುವುದು. ಅದರಿಂದ ಪ್ರವಾದಿವರ್ಯರಿಗೆ ವಲ ಸಂಗಾತಿಗಳೊಂದಿಗೆ ಮಾತ್ರವಲ್ಲ ಶತ್ರುಗಳೊಂದಿಗೂ ಎಷ್ಟು ವಾತ್ಸಲ್ಯವಿತ್ತೆಂಬುದನ್ನು ತುಕೊಳ್ಳಬಹುದಾಗಿದೆ. ಪ್ರವಾದಿವರ್ಯರ(ಸ) ದಯೆ ಕರುಣೆಯು ವೈಯಕ್ತಿಕ ಗಿರಲಿಲ್ಲ, ಬದಲಾಗಿ ಸಾಮೂಹಿಕವಾಗಿತ್ತು. ಯಾರೆಲ್ಲ ಪ್ರವಾದಿವರ್ಯರಿಗೆ(ಸ) ಕುಳ ನೀಡಿದ್ದರೋ ಮತ್ತು ಇಸ್ಲಾಮಿಗೆ ಹಾನಿಯನ್ನುಂಟು ಮಾಡಲು ಪ್ರಯತ್ನಿಸಿ ರೋ ಅವರೆಲ್ಲರನ್ನೂ ಮಕ್ಕಾ ವಿಜಯದ ದಿನ ಸಾಮೂಹಿಕವಾಗಿ ಕ್ಷಮಿಸಲಾಯಿತು. ತೀಕಾರದ ಲವಲೇಶವೂ ಅಲ್ಲಿ ಗೋಚರಿಸಲಿಲ್ಲ. ಕೇವಲ ಆರೇಳು ಮಂದಿ ಗಲಭೆ ೀರರನ್ನು ಗಲ್ಲಿಗೇರಿಸಲಾಯಿತು. ಅದರಲ್ಲೂ ಪ್ರಾಣ ಶತ್ರುಗಳನೇಕರಿಗೆ ನಿಕಟವರ್ತಿಗಳ ಪೇಕ್ಷೆಯ ಮೇರೆಗೆ ಕ್ಷಮಾದಾನ ನೀಡಲಾಯಿತು.

ಯಿಫ್‌ನ ಪೇಟೆಯಲ್ಲಿ

ಪ್ರವಾದಿವರ್ಯರು(ಸ) ಮಕ್ಕಾ ನಗರವಾಸಿಗಳಿಂದ ನಿರಾಶರಾಗಿ ತಾಯಿಫ್ ಗರದೆಡೆಗೆ ಮುಖ ಮಾಡಿದರು. ಬಹುಶಃ ಅಲ್ಲಿನ ಜನರಾದರೂ ಸತ್ಯ ಕರಿಸಿಯಾರೆಂಬ ದೂರದ ನಿರೀಕ್ಷೆಯು ಪ್ರವಾದಿವರ್ಯರದ್ದಾಗಿತ್ತು. ತಾಯಿಫ್‌ನಲ್ಲಿ ನೇಕ ಪ್ರಭಾವಿ ಮತ್ತು ಸ್ಥಿತಿವಂತ ಗಣ್ಯರಿದ್ದರು. ಅಂತಹ ಮಂದಿ ಸತ್ಯವಿಶ್ವಾಸ ಕರಿಸಿದರೆ ಇತರರ ಮೇಲೆ ಪ್ರಭಾವವುಂಟಾದೀತೆಂಬ ಶುಭ ನಿರೀಕ್ಷೆಯೂ ವಾದಿವರ್ಯರಲ್ಲಿತ್ತು. ಆ ಪೈಕಿ ಉಮೈರ್ ಕುಟುಂಬವು ಅತ್ಯಂತ ಶ್ರೀಮಂತ ಮತ್ತು ಭಾವಿ ಗೋತ್ರವಾಗಿತ್ತು. ಉಮೈರ್‌ರ ಪುತ್ರರಾದ ಅಬ್ದ್‌ಯಾಲೈಲ್, ಮಸ್‌ಊದ್ ತ್ತು ಹಬೀಬ್ ತಾಯಿಫ್‌ನ ಪ್ರಮುಖ ಸರದಾರರಾಗಿದ್ದರು.

ಮಕ್ಕಾದಿಂದ 75 ಕಿ.ಮೀ. ದೂರದಲ್ಲಿರುವ ಆ ತಾಯಿಫ್ ಪಟ್ಟಣಕ್ಕೆ ಝೈದ್

ಬಿನ್ ಹಾರಿಸರನ್ನು ಜತೆಗೂಡಿಸಿ ಕಾಲ್ನಡಿಗೆಯಲ್ಲಿಯೇ ತೆರಳಿದ್ದ ಪ್ರವಾದಿವರ್ಯರು(ಮೊತ್ತ ಮೊದಲು ಉಮೈರ್‌ರ ಮಕ್ಕಳನ್ನು ಸಂಪರ್ಕಿಸಿದರು. ಅವರ ಮು(ಇಸ್ಲಾಮಿನ ಏಕದೇವ ವಿಶ್ವಾಸದ ಸಂದೇಶವನ್ನಿಟ್ಟರು. ಆದರೆ ಸಂಪತ್ತು ಹಾ(ಅಧಿಕಾರವು ಮಾನವರ ಮನಸ್ಸನ್ನು ಎಷ್ಟರ ಮಟ್ಟಿಗೆ ಕೆಡಿಸಿ ಬಿಡುತ್ತದೆಂಬುದ ಅವರು ನೀಡಿದ ಉತ್ತರದಿಂದ ತಿಳಿಯಬಹುದಾಗಿದೆ. ಅವರ ಪೈಕಿ ಒಬ್ಬ ಹೇಳಿ "ಅಲ್ಲಾಹನು ನಿನ್ನನ್ನು ತನ್ನ ಪ್ರವಾದಿಯನ್ನಾಗಿ ಮಾಡಿದ್ದರೆ, ನಾನು ಕಅಬಾ ಭವ(ಪರದೆಯನ್ನು ಪರಚಿಬಿಡುವೆನು." ಇನ್ನೊಬ್ಬ ಹೇಳಿದ, "ದೇವನಿಗೆ ನಿನ್ನ ಹೊ(ಬೇರೆ ಯಾರೂ ಸಿಗಲಿಲ್ಲವೇ?" ಮತ್ತೊಬ್ಬ ಹೇಳಿದ, "ಸದ್ಯಕ್ಕೆ ನಾನು ನಿನ್ನೊ(ಮಾತನಾಡಲಾರೆ, ಒಂದು ವೇಳೆ ನೀನು ಸತ್ಯವಂತನಾಗಿದ್ದರೆ ನಿನ್ನೊಡನೆ ವಾದಿಸುವು ಶಿಷ್ಟಾಚಾರಕ್ಕೆ ವಿರುದ್ಧವಾಗಿದೆ. ಒಂದು ವೇಳೆ ನೀನು ಸುಳ್ಳುಗಾರನಾಗಿದ್ದರೆ, ನೀ(ಮಾತುಕತೆಗೆ ಅರ್ಹನಲ್ಲ."

ಒಂದೆಡೆ ಜನರು ಗುಂಪುಗೂಡಿರುವುದನ್ನು ಕಂಡು ಪ್ರವಾದಿವರ್ಯರು(ಅವರ ಬಳಿಗೆ ತೆರಳಿ ಅವರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟರು ಮ ವಿಗ್ರಹಾರಾಧನೆಯನ್ನು ತೊರೆಯುವಂತೆ ಉಪದೇಶಿಸಿದರು. ಜನರು ಕ್ರುದ್ಧರಾದ("ಮಕ್ಕಾದವರು ನಿಮ್ಮನ್ನು ಓಡಿಸಿದ್ದರಿಂದ ಇಲ್ಲಿ ಬಂದು ಜನರನ್ನು ಹಾಳುಗೆಡಹ(ಪ್ರಯತ್ನಿಸುತ್ತೀರಾ?" ಎಂದು ಪ್ರವಾದಿವರ್ಯರ(ಸ) ಮೇಲೆ ಹರಿಹಾಯ್ದರು.

ತರುವಾಯ ಅಲ್ಲಿ ನೆರೆದಿದ್ದ ಶ್ರೀಮಂತರು ಹೊರಟು ಹೋದರು. ಹೋಗುವಾ(ತಮ್ಮ ಗುಲಾಮರು, ಅಜ್ಞಾನಿಗಳು, ಪುಂಡ-ಪೋಕರಿಗಳನ್ನು ಪ್ರವಾದಿವರ್ಯರ(ವಿರುದ್ಧ ಎತ್ತಿ ಕಟ್ಟಿದರು. ಅವರೆಲ್ಲ ಸೇರಿ ಪ್ರವಾದಿವರ್ಯರ(ಸ) ಮೇಲೆ ಕಲ್ಲೆಸೆ(ತೊಡಗಿದರು. ಪ್ರವಾದಿವರ್ಯರು(ಸ) ನಡೆಯುವಾಗ ಎರಡೂ ಬದಿಗಳಿಂದ ಅ(ಮೇಲೆ ಕಲ್ಲುಗಳ ಸುರಿಮಳೆಗೆರೆಯಲಾಯಿತು. ಕಲ್ಲೇಟಿನಿಂದ ಗಾಯಗೊಂಡು ಬಳ(ಕುಳಿತುಕೊಂಡಾಗ ರಟ್ಟೆ ಹಿಡಿದು ಎತ್ತಿ ನಿಲ್ಲಿಸಿ ಮತ್ತೆ ಕಲ್ಲೆಸೆಯಲಾಯಿತು. ಜ(ಬೈಗುಳ, ಮೂದಲಿಕೆಗಳಿಂದ ಅವರ(ಸ) ಮನಸ್ಸಿಗೆ ಘಾಸಿಯನ್ನುಂಟು ಮಾಡಲಾಯಿ(ಹೀಗೆ ಕಲ್ಲೇಟಿನ ಗಾಯದಿಂದಾಗಿ ಪ್ರವಾದಿವರ್ಯರ(ಸ) ವಸ್ತ್ರವಿಡೀ ರಕ್ತಮಯವಾಯಿ(

ಹೇಗೂ ಅಲ್ಲಿಂದ ಪಾರಾಗಿ ನಗರ ಹೊರವಲಯಕ್ಕೆ ತಲಪಿದ ಪ್ರವಾದಿವರ್ಯ(ಆಕಾಶದಲ್ಲಿ ದಟ್ಟ ಮೋಡಕಾಣಿಸಿತು. ಅದರಿಂದ ದೇವಚರ ಜಿಬ್ರೀಲ್‌ರ(ಅ) ಸ್ವ(ಕೇಳಿಸಿತು, "ಅಲ್ಲಾಹನ ಸಂದೇಶವಾಹಕರೇ! ಇದೋ ಪರ್ವತಗಳ ದೇವಚರರ(ಅಲ್ಲಾಹನು ನಿಮಗಾಗುತ್ತಿರುವ ಸಂಕಷ್ಟಗಳನ್ನು ಕಂಡು ನಿಮ್ಮ ಸಹಾಯಕ್ಕಾ(ಇವರನ್ನು ಕಳುಹಿಸಿದ್ದಾನೆ."

ಪರ್ವತಗಳ ದೇವಚರರು ಮುಂದೆ ಬಂದು, "ನೀವು ಆದೇಶಿಸಿರಿ. ನಾ(

ಜನಾಂಗವನ್ನು ನಗರದ ಇಕ್ಕೆಲಗಳಲ್ಲಿರುವ ಪರ್ವತಗಳ ನಡುವೆ ಅಮುಕಿ ಸುತ್ತೇವೆ ಅಥವಾ ಪರ್ವತಗಳನ್ನು ಬೀಳಿಸಿ ಇವರನ್ನು ಅದರಡಿ ಸಿಲುಕಿಸಿ ನಾಶ ಮಾಡುತ್ತೇವೆ" ಎಂದರು.

ಆದರೆ ಲೋಕಾನುಗ್ರಹಿಯಾಗಿ ಕಳುಹಿಸಲ್ಪಟ್ಟಿರುವ ಪ್ರವಾದಿವರ್ಯರಿಂದ(ಸ) ಯಾವ ರೀತಿಯ ಉತ್ತರವನ್ನು ನಿರೀಕ್ಷಿಸಲಾದೀತು? ಅವರು ತಾಯಿಫ್‌ನವರಿಗೆ ಶಾಪ ಹಾಕುವುದರ ಬದಲು ಅವರಿಗಾಗಿ ಪ್ರಾರ್ಥಿಸಿದರು, "ಓ ಅಲ್ಲಾಹ್! ನೀನು ಈ ಜನರಿಗೆ ಮಾರ್ಗದರ್ಶನ ನೀಡು ಮತ್ತು ನನಗೆ ಸತ್ಯಮಾರ್ಗದಲ್ಲಿ ಸಹಾಯ ಮಾಡು. ನಿನ್ನ ಸಹಾಯದ ಹೊರತು ನನಗೆ ಯಶಸ್ಸು ದೊರಕುವುದು ಸಾಧ್ಯವಿಲ್ಲ. ನಾನು ಈ ಜನರ ವಿನಾಶವನ್ನು ಬಯಸಲಾರೆ. ಇವರಲ್ಲದಿದ್ದರೆ ಇವರ ಮುಂದಿನ ತಲೆಮಾರಿಗೆಯಲ್ಲಿಯಾದರೂ ಏಕದೇವ ವಿಶ್ವಾಸ ತಾಳಿಯಾರೆಂಬ ಭರವಸೆ ನನಗಿದೆ. ಇವರು ನನ್ನನ್ನು ಸರಿಯಾಗಿ ಅರಿತಿಲ್ಲ."

ಉಹುದ್‌ನಲ್ಲಾದ ಗಾಯಕ್ಕೆ ಕರುಣೆಯ ಪ್ರತೀಕಾರ

ಹ. ಶಾಹ್ ಅಬ್ದುಲ್ ಅಝೀಝ್‌ರು ತಮ್ಮ ತಫ್ಸೀರ್ ಫತ್ಹುಲ್ ಅಝೀಝ್ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ.

ಉಹುದ್ ಯುದ್ಧದಲ್ಲಿ ಸತ್ಯನಿಷೇಧಿಗಳು ಪ್ರವಾದಿವರ್ಯರ(ಸ) ಚಿಕ್ಕಪ್ಪ ಹಮ್‌ಝರನ್ನು(ರ) ವಧಿಸಿ, ಅವರ ಕರುಳನ್ನು ಕಿತ್ತು ಜಗಿದಿದ್ದರು. ಈ ಯುದ್ಧದಲ್ಲಿ 70 ಮಂದಿ ವಿಶ್ವಾಸಿಗಳು ಹುತಾತ್ಮರಾಗಿದ್ದರು. ಮೃತದೇಹಗಳ ಕಣ್ಣು, ಕಿವಿಗಳನ್ನು ಕತ್ತರಿಸಿ ವಿರೂಪಗೊಳಿಸಲಾಗಿತ್ತು. ಪ್ರವಾದಿವರ್ಯರ(ಸ) ಹಣೆಗೆ ಕಲ್ಲೇಟು ಬಿದ್ದಿದ್ದು ಮಾತ್ರವಲ್ಲ ಎರಡು ಹಲ್ಲುಗಳೂ ಉದುರಿಹೋದವು. ಹಣೆ ಮತ್ತು ಬಾಯಿಯಿಂದ ರಕ್ತ ಜಿನುಗಿತು. ಅವರ(ಸ) ಈ ಸ್ಥಿತಿ ಕಂಡು ಸಂಗಾತಿಗಳು ತೀವ್ರವಾಗಿ ಆತಂಕಗೊಂಡರು. ಅವರು(ರ) ಪ್ರವಾದಿವರ್ಯರೊಡನೆ(ಸ) ಹೇಳಿದರು, "ಅಲ್ಲಾಹನ ಸಂದೇಶವಾಹಕರೇ! ಸತ್ಯನಿಷೇಧಿಗಳ ಅತಿರೇಕ ಮೇರೆ ಮೀರುತ್ತಿದೆ. ತಾವು ಅವರಿಗೆ ಶಾಪ ಹಾಕುವುದಿಲ್ಲವೇಕೆ?"

ಆಗ ಪ್ರವಾದಿವರ್ಯರು(ಸ) ಹೀಗೆಂದರು, "ಅಲ್ಲಾಹನು ನನ್ನನ್ನು ಶಾಪ ಹಾಕಲಿಕ್ಕೆ ಕಳುಹಿಸಿದ್ದಲ್ಲ. ಬದಲಾಗಿ ಕರುಣೆ ಮತ್ತು ದಯೆಯೊಂದಿಗೆ ಮಾರ್ಗದರ್ಶನ ನೀಡಲು ಕಳುಹಿಸಿದ್ದಾನೆ." ತರುವಾಯ ಕರಗಳನ್ನೆತ್ತಿ ಹೀಗೆ ಪ್ರಾರ್ಥಿಸಿದರು, "ಓ ಅಲ್ಲಾಹ್! ನನ್ನ ಜನಾಂಗವನ್ನು ಕ್ಷಮಿಸು ಮತ್ತು ಅವರಿಗೆ ಮಾರ್ಗದರ್ಶನ ನೀಡು. ಅವರೇನೂ ಅರಿವಿಲ್ಲದೆ ಈ ಮಾತನ್ನು ಆಡುತ್ತಿದ್ದಾರೆ."

ತನ್‌ಈಮ್ ಗೋತ್ರದವರು ಪ್ರವಾದಿವರ್ಯರನ್ನು(ಸ) ಕೊಲೆಗೈಯುವ ಸಂಚು

ಹೂಡಿದ್ದರು. ಆದರೆ ಅವರು ಬಂಧಿಸಲ್ಪಟ್ಟು ಪ್ರವಾದಿವರ್ಯ(ಸ) ಮುಂ ತರಲ್ಪಟ್ಟಾಗ ಅವರಿಗೆ ಕ್ಷಮೆ ನೀಡಿ ಬಿಡುಗಡೆಗೊಳಿಸಲಾಯಿತು.

ದೌಸ್ ಗೋತ್ರವು ಯಮನ್‌ನಲ್ಲಿ ನೆಲೆಸಿತ್ತು. ತುಫೈಲ್ ಬಿನ್ ಅಮ್ರ್ ದೌ ಆ ಗೋತ್ರದವರಾಗಿದ್ದರು. ಆದರೆ ಆ ಜನಾಂಗವು ಸತ್ಯನಿಷೇಧದಲ್ಲೇ ಸ್ಥಿರವಾಗಿ ಬಿಟ್ಟಿತು. ಕೊನೆಗೆ ತುಫೈಲ್‌ರು(ರ) ಹತಾಶರಾಗಿ ಪ್ರವಾದಿವರ್ಯರ(ಸ) ಬಳ ಬಂದು, ತನ್ನ ಜನಾಂಗದ ಸ್ಥಿತಿಗತಿಗಳನ್ನು ವಿವರಿಸಿದರು ಮತ್ತು ಅವರ ಮೇ ಶಾಪ ಹಾಕುವಂತೆ ವಿನಂತಿಸಿದರು. ಇದನ್ನು ಆಲಿಸಿದ ಜನರು, "ಇನ್ನು ದೌ ಗೋತ್ರವು ನಾಶವಾದಂತೆಯೇ ಸರಿ" ಎಂದು ಆಡಿಕೊಳ್ಳತೊಡಗಿದರು. ಆದ ಪ್ರವಾದಿವರ್ಯರು(ಸ) ಶಾಪ ಹಾಕುವ ಬದಲು ಕೈಗಳನ್ನೆತ್ತಿ ಪ್ರಾರ್ಥಿಸಿದರು.

"ಓ ಅಲ್ಲಾಹ್! ದೌಸ್ ಗೋತ್ರದವರಿಗೆ ಸನ್ಮಾರ್ಗದರ್ಶನ ಕರುಣಿಸು."

ಪ್ರಾಣ ಶತ್ರುಗಳು

ಅಬೂ ಜಹಲ್, ಅಬೂ ಸುಫಿಯಾನ್, ಅಬೂ ಲಹಬ್, ಅಸ್ವದ್ ಬಿ ಅಬ್ದುಲ್ ಯಗೂಸ್, ಹಾರಿಸ್ ಬಿನ್ ಕೈಸ್ ಬಿನ್ ಅದೀ, ವಲೀದ್ ಬಿ ಮುಗೀರಾ, ಉಮಯ್ಯ ಬಿನ್ ಉಬೈ ಬಿನ್ ಖಲಫ್, ಅಬೂ ಕೈಸ್ ಬಿನ್ ಮುಗೀರ ಆಸ್ ಬಿನ್ ವಾಯಿಲ್, ನಥರ್ ಬಿನ್ ಹಾರಿಸ್ ಬಿನ್ ಹಜ್ಜಾಜ್, ಝುಬೈ ಬಿನ್ ಅಬೀ ಉಮಯ್ಯ, ಸಾಯಿಬ್ ಬಿನ್ ಹೈಫೀ, ಅಸ್ವದ್ ಬಿನ್ ಅಬ್ದುಲ್ ಅಸದ ಆಸ್ ಬಿನ್ ಸಈದ್ ಬಿನ್ ಆಸ್, ಆಸ್ ಬಿನ್ ಹಾಶಿಮ್, ಉಕ್ಬಾ ಬಿನ್ ಅ ಮುಈತ್, ಇಬ್ನುಲ್ ಅಸದೀ, ಹಕಮ್ ಬಿನ್ ಅಬೀ ಆಸ್, ಅದೀ ಬಿನ್ ಅಮ ಸುರಾಕಾ ಬಿನ್ ಮಾಲಿಕ್, ಸುಹೈಲ್ ಬಿನ್ ಅಮ್ರ್, ಸಫ್ವಾನ್ ಬಿನ್ ಉಮಯ ಇಕ್ರಿಮಾ ಬಿನ್ ಅಬೂ ಜಹಲ್ ಮುಂತಾದವರು ಪ್ರವಾದಿವರ್ಯರ(ಸ) ವಿರೋಧಿ ಸಾಲಿನಲ್ಲಿ ಮುಂಚೂಣಿಯಲ್ಲಿದ್ದವರು. ಇವರ ಪೈಕಿ ಕೆಲವರು ಬಳಿಕದ ದಿನಗಳ ಸತ್ಯವಿಶ್ವಾಸ ಸ್ವೀಕರಿಸಿ ಪುನೀತರಾದರು. ಆದರೆ ಅವರು ಪ್ರವಾದಿವರ್ಯರಿ ಕಿರುಕುಳ ನೀಡಿದ್ದಕ್ಕೆ ಎಣೆಯಿದ್ದಿರಲಿಲ್ಲ.

ಅದೇ ವೇಳೆ, ಶತ್ರುತ್ವವನ್ನೇ ನೆಚ್ಚಿಕೊಂಡಿದ್ದು, ಇಸ್ಲಾಮ್ ಮತ್ತು ಪ್ರವಾ ವರ್ಯರನ್ನು(ಸ) ವಿರೋಧಿಸುತ್ತಲೇ ಪ್ರಾಣ ಕಳಕೊಂಡವರಲ್ಲಿ ಅಬೂ ಜಹ ಪ್ರಥಮ ಪಂಕ್ತಿಯಲ್ಲಿ ಗುರುತಿಸಲ್ಪಡುತ್ತಾನೆ. ಆತ ಪ್ರವಾದಿವರ್ಯರ(ಸ) ವಿರು ಯಾವ ತರದ ವೈರ ಕಟ್ಟಿಕೊಂಡಿದ್ದ ಎಂಬುದು ಯಾರಿಂದಲೂ ಮರೆಯಾಗಿ ಪ್ರವಾದಿವರ್ಯರ(ಸ) ಮೇಲೆ ಆಕ್ರಮಣ ನಡೆಸಲು ಇತರರಿಗೆ ಕುಮ್ಮಕ್ಕು ನೀಡಿ ಅವರ(ಸ) ಮೇಲೆ ಒಂಟೆಯ ಕರುಳನ್ನು ಹಾಕಿಸಿದ ಮತ್ತು ಹಿಜ್ರತ್(ವಲಸೆ)

ಂಚೆ ಪ್ರವಾದಿವರ್ಯರನ್ನು(ಸ) ಹತ್ಯೆಗೈಯುವಂತೆ ಸಲಹೆ ನೀಡಿದವನು ಇದೇ ಉಜಹಲನಾಗಿದ್ದ. ಪ್ರವಾದಿವರ್ಯರು(ಸ) ವಲಸೆ ಹೋದ ಬಳಿಕವೂ ಇವನ ವು ಎಳ್ಳಷ್ಟೂ ಕಡಿಮೆಯಾಗಲಿಲ್ಲ. ಈತ ಯಾವ ಮುಸ್ಲಿಮನನ್ನೂ ನೋಡಲಿಕ್ಕೆ ಕ ಸಿದ್ಧನಿಲ್ಲದಂತಹ ಜಿಗುಟು ಸ್ವಭಾವವನ್ನು ಹೊಂದಿದ್ದ.

ಹಿಜ್ರತ್‌ನ ಬಳಿಕ ಒಮ್ಮೆ ಔಸ್ ಜನಾಂಗದ ಶ್ರೀಮಂತ ವ್ಯಕ್ತಿಯಾಗಿದ್ದ ಹ. ನ್ ಬಿನ್ ಮಆಝ್‌ರು(ರ) ಉಮ್ರಾ ನಿರ್ವಹಿಸಲು ಮಕ್ಕಾಕ್ಕೆ ತೆರಳುತ್ತಾರೆ. ರಿಗೆ ಉಮಯ್ಯ ಬಿನ್ ಖಲಫ್‌ನೊಡನೆ ಬಹಳ ಹಿಂದಿನಿಂದಲೂ ಗೆಳೆತನವಿತ್ತು. ಮ್ ಸ್ವೀಕರಿಸಿದ ಬಳಿಕವೂ ಈ ಗೆಳೆತನವು ಮುಂದುವರಿದಿತ್ತು. ಆ ಣವಾಗಿಯೇ ಅವರು ಉಮ್ರಾ ನಿರ್ವಹಿಸಲು ಬಂದಾಗ ಉಮಯ್ಯನ ಯಲ್ಲಿ ತಂಗಿದರು. ಒಂದು ದಿನ ಸಅದ್‌ರು ಉಮಯ್ಯನೊಂದಿಗೆ ಕಅಬಾ ನ ದೆಡೆಗೆ ಹೊರಟಾಗ ಅಬೂಜಹಲ್ ಅವರಿಗೆದುರಾದ. ಆತ ಕೇಳಿದ, "ಈ ಯಾರು?"

"ಇವರು ಸಅದ್ ಬಿನ್ ಮಆಝ್ ಆಗಿರುವರು" ಎಂದು ಉಮಯ್ಯ ರಿಸಿದ. ಆಗ ಅಬೂಜಹಲ್ ಕ್ರುದ್ಧನಾಗಿ ಸಅದ್‌ರೊಡನೆ ಹೇಳಿದ, "ನೀವು ್ಮ ಶತ್ರುಗಳಿಗೆ ನಿಮ್ಮ ನಾಡಿನಲ್ಲಿ ಆಶ್ರಯ ನೀಡಿದ್ದೀರಿ. ನಿಮ್ಮಂಥವರು ಕಅಬಾದ ಗೆ ಬರುವುದೂ ಕೂಡ ನನಗಿಷ್ಟವಿಲ್ಲ. ಒಂದು ವೇಳೆ ನೀವು ಉಮಯ್ಯರ ಥಿಯಾಗಿರದೆ ಹೋಗಿದ್ದರೆ, ಇಲ್ಲಿಂದ ನೀವು ಮರಳಿ ಹೋಗಲು ಸಾಧ್ಯವಿರುತ್ತಿರಲಿಲ್ಲ."

ಸಅದ್(ರ) ಹೇಳಿದರು, "ಒಂದು ವೇಳೆ ನೀವು ನನ್ನನ್ನು ಕಅಬಾ ದರ್ಶನದಿಂದ ತಡೆದರೆ, ನಾವು ನಿಮಗೆ ಮದೀನದ ದಾರಿಯನ್ನು ಮುಚ್ಚುವೆವು."*

ರಮ ಯುದ್ಧಕ್ಕಿದ್ದುದು ಕುಂಟು ನೆಪ

ಹಿಜರಿ 2ರ ಶಅಬಾನ್ ತಿಂಗಳ ಕೊನೆಯ ದಿನಗಳು. ಮಕ್ಕಾದ ವ್ಯಾಪಾರಿ ಡವು ಸಿರಿಯದಿಂದ ವ್ಯಾಪಾರ ಮುಗಿಸಿ ಮರಳುತ್ತಿತ್ತು. ಅಬೂ ಸುಫ್ಯಾನ್ ಆ ಡದ ನಾಯಕರಾಗಿದ್ದರು. ಅವರೊಡನೆ, "ಮುಸ್ಲಿಮರು ನಿಮ್ಮ ವ್ಯಾಪಾರಿ ಡವನ್ನು ಹೊಂಚು ಹಾಕಿ ಕಾಯುತ್ತಾ ಇದ್ದಾರೆ. ನೀವು ದೋಚಲ್ಪಡುವಿರಿ" ದು ಯಾರೋ ಹೇಳಿದರು. ಇದನ್ನು ಆಲಿಸಿದ ಕೂಡಲೇ ಅಬೂ ಸುಫಿಯಾನ್‌ರು ಓರ್ವ ದೂತನನ್ನು ಸಹಾಯ ಪಡೆಯಲು ಸೂಚಿಸಿ ಮಕ್ಕಾಕ್ಕೆ ಕಳುಹಿಸಿದರು.

ಈ ವಿಷಯ ತಿಳಿಯುತ್ತಲೇ ಅಬೂ ಜಹಲ್, ಪ್ರವಾದಿವರ್ಯರ(ಸ) ವಿರುದ್ಧ

ಂದರೆ ಮಕ್ಕಾದಿಂದ ಸಿರಿಯಾಗೆ ವ್ಯಾಪಾರಿ ತಂಡವು ಮದೀನ ಮಾರ್ಗವಾಗಿಯೇ ಹೋಗಬೇಕಾಗಿತ್ತು. ನ್ನು ತಡೆಯುವುದಾಗಿ ಸಅದ್(ರ) ಹೆದರಿಸಿದರು.

ಸಮರ ಸಾರಲು ಸನ್ನದ್ಧನಾದನು. ಆತ ಮಕ್ಕಾದ ಸರದಾರರನ್ನು ಯು
ಪ್ರಚೋದಿಸಿದನು.

ಹೀಗೆ ಅಪಾರ ಯುದ್ಧ ಸಾಮಗ್ರಿಗಳೊಂದಿಗೆ ನಗರದಿಂದ ಸಾವಿರಕ್ಕೂ ಮಿ
ಶಸ್ತ್ರ ಸಜ್ಜಿತ ಯೋಧರು ಮದೀನದೆಡೆಗೆ ಹೊರಟರು. ವಾಸ್ತವದಲ್ಲಿ ಪ್ರವಾದಿವರ್ಯ‌ರು
ಮಕ್ಕಾದಿಂದ ವಲಸೆ ಹೋದಾಗಿನಿಂದಲೂ ಕುರೈಶರು ಮದೀನದ ಮೇಲೆ ಆಕ್ರಾ
ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ಸೇನೆಯಲ್ಲಿ ನೂರು ಮ
ಸವಾರರಿದ್ದರು. ಕುರೈಶ್ ಜನಾಂಗದ ಸರದಾರರೆಲ್ಲರೂ ಅದರಲ್ಲಿ ಭಾಗವಹಿಸಿದ್ದ
ಅವರು ತಮ್ಮೊಂದಿಗೆ ಅಪಾರ ಆಹಾರ ಸಾಮಗ್ರಿಗಳನ್ನು ಹೊತ್ತೊಯ್ದಿದ್ದರು.

ಕುರೈಶ್ ಸರದಾರರುಗಳಾದ ಅಬ್ಬಾಸ್ ಬಿನ್ ಮುತ್ತಲಿಬ್, ಉತ್ಬಾ
ರಬೀಅ, ಹಾರಿಸ್ ಬಿನ್ ಆಮಿರ್, ನಘರ್ ಬಿನ್ ಹಾರಿಸ್, ಅಬೂಜಹ
ಉಮಯ್ಯ ಮತ್ತಿತರರು ಪ್ರತಿದಿನ ಸರದಿಯಂತೆ ತಲಾ ಹತ್ತು ಒಂಟೆಗಳನ್ನು ಕೊಂ
ಯೋಧರಿಗೆ ಉಣಬಡಿಸುತ್ತಿದ್ದರು. ಅವರ ಬಳಿ ಆಹಾರ ಧಾನ್ಯವೆಷ್ಟಿತೆಂಬುದ
ಇದರಿಂದಲೇ ಊಹಿಸಬಹುದಷ್ಟೇ.

ಕುರೈಶರ ಸೇನೆಯು ಬದ್ರ್‌ನ ಸಮೀಪ ತಲುಪಿದಾಗ, ಅಬೂ ಸುಫ್ಯಾ
ವ್ಯಾಪಾರೀ ತಂಡವು ಅಪಾಯದಿಂದ ಪಾರಾಗಿ ಬಂದುದಾಗಿ ತಿಳಿದು ಬಂತು.
ಝುಹ್ರ ಮತ್ತು ಅದೀ ಗೋತ್ರಗಳ ಸರದಾರರು, "ಇನ್ನು ಯುದ್ಧಕ್ಕೆ ಹೊರಡ
ಅಗತ್ಯವೇನಿದೆ?" ಎನ್ನುತ್ತಾ ಮರಳ ಬಯಸಿದರು. ಆದರೆ ಅವರ ಮಾತ
ಅಬೂಜಹಲ್ ಒಪ್ಪಲು ಸಿದ್ಧನಾಗಲಿಲ್ಲ. ಹಾಗಾಗಿ ಅದೀ ಮತ್ತು ಝುಹ್ರ ಗೋ
ದವರನ್ನುಳಿದು ಇತರರು ಮುಂದುವರಿದರು.

ಮಕ್ಕಾದ ಬಹುದೇವಾರಾಧಕರು ಮದೀನದ ಮೇಲೆ ದಾಳಿ ಎಸಗಲು ಬ
ರುವ ಸುದ್ದಿ ತಲುಪುತ್ತಲೇ ಪ್ರವಾದಿವರ್ಯ‌ರೂ(ಸ) ಯುದ್ಧದ ಸಿದ್ಧತೆ ನಡೆಸಿದ
ಹೀಗೆ ಮುಸ್ಲಿಮರ ಸೇನೆಯು ಕಲೀಬ್ ಎಂಬಲ್ಲಿಗೆ ತಲಪಿದಾಗ ಅಲ್ಲಿ ಕುರೈ
ಒಂಟೆಗಳಿಗೆ ನೀರುಣಿಸಲಾಗುತ್ತಿರುವುದನ್ನು ಕಂಡರು. ಇಸ್ಲಾಮೀ ಸೇನೆಯನ್ನು ಕಂ
ಒಂಟೆಗಳಿಗೆ ನೀರುಣಿಸುತ್ತಿದ್ದ ಮಂದಿ ಓಡಿ ಹೋದರು. ಅವರ ಪೈಕಿ ಉಬೈ
ಗುಲಾಮ ಅಬೂಲಿಯಾ, ಮುನೀರ್ ಬಿನ್ ಹಜ್ಜಾಜ್‌ನ ಗುಲಾಮ ಅಸ್ಲ
ಉಮಯ್ಯ ಬಿನ್ ಖಲಫ್‌ನ ಗುಲಾಮ ಅಬೂರಾಫಿಅ ಮತ್ತಿತರರನ್ನು ಆ
ಬಂಧಿಸಿದರು. ಓಡಿ ಹೋದ ಗುಲಾಮರ ಪೈಕಿ ಉಜೈರ್ ಎಂಬವನು ಕುರೈಶರನ್ನುದ್ದೇ
ಹೇಳಿದನು, "ಸರದಾರರೇ! ಮುಹಮ್ಮದ್‌ರ ಸೇನೆಯು ಇಲ್ಲಿಗೆ ತಲುಪಿದೆ. ಅವ
ನಮ್ಮ ಕೆಲವು ಸಂಗಾತಿಗಳನ್ನು ಬಂಧಿಸಿದ್ದಾರೆ."

್ರೈಶರ ಸೇನೆಯಲ್ಲಿ ಆತಂಕ

ಈ ವಿಷಯ ತಿಳಿಯುತ್ತಲೇ ಕುರೈಶರ ಸೇನೆಯಲ್ಲಿ ಕೋಲಾಹಲವೆದ್ದಿತು. ನಾರರು ಪರಸ್ಪರ ಸಮಾಲೋಚಿಸತೊಡಗಿದರು. ಉತ್ಬಾ ಬಿನ್ ರಬೀಅನು ಮ್ ಬಿನ್ ಹಿಝಾಮ್ ರೊಡನೆ ಹೇಳಿದ, "ಅಬೂ ಖಾಲಿದ್! ಗಂಡಾಂತರ ಯಿತಲ್ಲ. ನಾವು ಪೂರ್ವಾಪರ ಯೋಚಿಸದೆ ಶತ್ರುಗಳ ನಾಡಿಗೆ ಕಾಲಿರಿಸಿದ್ದೇವೆ!" ್ರವಾಗಿ ಹಕೀಮ್, "ಇರಲಿ, ಇದು ವಿಧಿಯಾಟವಷ್ಟೇ. ಆದರೆ ನಾವು ೂಜಹಲ್‌ನ ಅಭಿಪ್ರಾಯದಂತೆ ಯಾವುದೇ ಕಾರ್ಯಕ್ಕಿಳಿದರೂ ಅದರಲ್ಲಿ ಮಾನವಲ್ಲದೆ ನಮಗೆ ಬೇರೇನೂ ದೊರೆತಿಲ್ಲ. ಇನ್ನು ನಾವು ರಾತ್ರಿಯಿಡೀ ರದಿಂದಿರ ಬೇಕು. ಶತ್ರುಗಳು ನಿಶಾಕ್ರಮಣ ಮಾಡಲೂ ಬಹುದು."

ಉತ್ಬಾನಿಗೆ ಹಕೀಮ್‌ರ ಅಭಿಪ್ರಾಯ ಸರಿಯೆನಿಸಿತು. ಆದರೆ ಅವರ ಮಾತನ್ನು ಸಿಕೊಂಡ ಅಬೂಜಹಲನು ಜನರೊಡನೆ ಹೇಳಿದ, "ನೋಡಿದಿರಾ? ಉತ್ಬಾ ಿಯಾಗಿ ಬಿಟ್ಟ. ನೀವು ನಿಶಾಕ್ರಮಣದಿಂದ ಭಯಪಡುತ್ತೀರೆಂದಾದರೆ, ನಾನು ್ಮಂದ ಬೇರ್ಪಡುವೆನು. ನನಗೆ ಯಾರದೇ ಭಯವಿಲ್ಲ."

ಹಾ ನತದೃಷ್ಟ

ಮಕ್ಕಾದ ಈ ಕುರೈಶ್ ಸೇನೆಯಲ್ಲಿ ಕೆಲವು ಮಂದಿ ರಕ್ತಪಾತಕ್ಕೆ ಅತೀವ ುಪಟ್ಟುಕೊಳ್ಳುತ್ತಿದ್ದರು. ಅಂತಹವರಲ್ಲಿ ಹಕೀಮ್ ಬಿನ್ ಹಿಝಾಮ್ ಕೂಡಾ ್ರು. ನಂತರದ ದಿನಗಳಲ್ಲಿ ಅವರು ಇಸ್ಲಾಮ್ ಸ್ವೀಕರಿಸಿದರು. ಅವರು ತಮ್ಮ ಾ ನಾಯಕ ಉತ್ಬಾನ ಬಳಿಗೆ ತೆರಳಿ, "ನೀವು ಬಯಸಿದರೆ ನಿಮ್ಮ ಖ್ಯಾತಿಯು ್ಚುವುದು" ಎಂದರು. ಅದು ಹೇಗೆಂದು ಉತ್ಬಾ ಕೇಳಿದ. ಹಕೀಮ್ ಹೇಳಿದರು, ್ರೈಶರ ಬೇಡಿಕೆಯೇನಿದ್ದರೂ ಅದು ಹಝ್ರಮಿಯ ರಕ್ತಪರಿಹಾರವಾಗಿದೆಯಷ್ಟೇ. ನಿಮ್ಮ ಮಿತ್ರನೂ ಆಗಿದ್ದನಲ್ಲವೇ. ಆದ್ದರಿಂದ ನೀವೇ ಈಗ ಆತನ ರಕ್ತ ಪರಿಹಾರ ಸಿರಿ."

ಉತ್ಬಾ ನೇರ ಮನಸ್ಸಿನವ. ಹಾಗಾಗಿ ಈ ಸಲಹೆಯನ್ನು ಆತ ಕೂಡಲೇ ರಿಸಿದ. ಆದರೆ ಅದಕ್ಕೆ ಅಬೂಜಹಲನ ಸಮ್ಮತಿಯೂ ಬೇಕಿತ್ತು. ಅವನೊಡನೆ ಪ್ರಾಯ ಕೇಳುವಾಗ, ಆತ ತನ್ನ ಬಾಣವನ್ನು ಪರಿಶೀಲಿಸುತ್ತಿದ್ದ. ವಿಷಯ ದಾಗ, "ಹೌದು, ಉತ್ಬಾನ ಧೈರ್ಯ ಉಡುಗಿ ಹೋಗಿದೆ" ಎಂದು ಅಣಕಿಸಿದ. ್ಬಾನ ಪುತ್ರ ಅಬೂಹುದೈಫಾ ಇಸ್ಲಾಮ್ ಸ್ವೀಕರಿಸಿದ್ದರು. ಅವರು ಈ ಯುದ್ಧದಲ್ಲಿ ಾದಿವರ್ಯರ(ಸ) ಪಕ್ಷದಲ್ಲಿದ್ದರು. ಆದ್ದರಿಂದ ತನ್ನ ಪುತ್ರನಿಗೆ ಕೇಡುಂಟಾಗದಿರಲಿ ದು ಉತ್ಬಾ ಯುದ್ಧದಿಂದ ಹಿಂಜರಿಯುತ್ತಿದ್ದಾನೆಂದು ಅಬೂಜಹಲ್‌ನಲ್ಲಿ

ಸಂಶಯ ಮೂಡಿತು.

ಅಬೂಜಹಲನು ಹಝ್ರಮಿಯ ಸೋದರ ಆಮಿರ್‌ರನ್ನು ಕರೆದು, "ನೋ
ದೆಯಾ? ನಿನ್ನ ಸಹೋದರನ ರಕ್ತ ಪರಿಹಾರವು ಕೈ ತಪ್ಪಿ ಹೋಗುತ್ತಿದೆ" ಎಂ
ಹೇಳಿದ. ಆಮಿರ್, ಅಂದಿನ ಅರಬ್ ಸಂಪ್ರದಾಯದಂತೆ ತನ್ನ ವಸ್ತ್ರವನ್ನು ಹರಿ
ಧೂಳೆಬ್ಬಿಸುತ್ತಾ 'ವಾ ಅಮುವಾ... ವಾ ಅಮುವಾ...' ಎಂದು ಕಿರುಚಾಡತೊಡ
ಇದರಿಂದಾಗಿ ಇಡೀ ಸೇನೆಯಲ್ಲಿ ಉದ್ರೇಕದ ಕಿಡಿ ಹೊತ್ತಿಕೊಂಡಿತು. ಅಬೂಜಹ
ತನ್ನನ್ನು ಹಂಗಿಸುತ್ತಿರುವುದನ್ನು ಉತ್ಬಾ ಕೇಳಿಕೊಂಡಿದ್ದನು. ಆತನೂ ಕ
ಭಾವಾವೇಶದೊಂದಿಗೆ ಯುದ್ಧರಂಗದಲ್ಲಿ ಧುಮುಕಿದನು. ಆದರೆ ಕೆಲವೇ ಕ್ಷಣಗ
ವಧಿಸಲ್ಪಟ್ಟನು. ಅಬೂಜಹಲ್ ಕೂಡಾ, ಇಬ್ಬರು ನವ ತರುಣರಾದ ಮಉ
ಮತ್ತು ಮಿಆದ್‌ರಿಂದ ಕೊಲ್ಲಲ್ಪಟ್ಟನು.

ಈ ಒಂದು ಸಣ್ಣ ವಿವರಣೆಯಿಂದ ಅಬೂಜಹಲ್‌ನ ಇಸ್ಲಾಮ್ ದ್ವೇ
ಸಂಪೂರ್ಣ ಚಿತ್ರಣ ದೊರೆಯಲಾರದಾದರೂ ಆತ ಎಂತಹ ಉದ್ಧಟಿಯಾಗಿದ್ದನೆಂ
ದಂತೂ ತಿಳಿದು ಬರುತ್ತದೆ. ಯಾವ ಕಾರಣಕ್ಕೂ ಆತ ಇಸ್ಲಾಮ್ ಮತ್ತು ಇಸ್ಲಾವ
ಪ್ರವಾದಿಯನ್ನು ಸಹಿಸಲು ಸಿದ್ಧನಿರಲಿಲ್ಲ. ಆತ ತನ್ನ ಕೊನೆಯ ಕ್ಷಣದ ವರೆ
ಪ್ರವಾದಿಯವರ್ಯರನ್ನು(ಸ) ವಿರೋಧಿಸುತ್ತಿದ್ದನು.

ಇಂತಹ ಶತ್ರುವಿನೊಡನೆ ಯಾರಾದರೂ ಮಾತನಾಡಲು ಮುಂದಾಗುವ
ತನ್ನನ್ನು ಹತ್ಯೆಗೈಯಲು ಸಂಚು ಹೂಡುತ್ತಿದ್ದವನೇ ಸಂಕಷ್ಟದಲ್ಲಿ ಸಿಲುಕಿದರೆ ಅಂ
ವನನ್ನು ಯಾರಾದರೂ ರಕ್ಷಿಸಲು ಹೊರಡುವರೇ? ಇಲ್ಲ... ಆದರೆ ಲೋಕಾನುಗ್ರಹಿಯ
ಪ್ರವಾದಿ ಮುಹಮ್ಮದ್‌ರು(ಸ) ಅವನಿಗೆ ಸಂಕಷ್ಟದ ವೇಳೆ ನೆರವಾಗಿದ್ದರು. ತ
ಸಹಚರರಿಗೆ ಮಾತ್ರವಲ್ಲ, ತಮ್ಮನ್ನು ಪೀಡಿಸಿದವರಿಗೂ ಕಷ್ಟಕಾಲದಲ್ಲಿ ಸಹಾಯ
ನೀಡುವುದು ಪ್ರವಾದಿವರ್ಯರ(ಸ) ಸಹಜ ಗುಣಗಳಲ್ಲಿ ಒಂದಾಗಿತ್ತು. ಅ
ಅನುಗ್ರಹದ ಪುತ್ಥಳಿಯಾಗಿದ್ದರು. ಅವರು ಯಾರದೇ ಶತ್ರುವಾಗಿರಲಿಲ್ಲ. ಅ
ಶತ್ರುತ್ವಕ್ಕೆ ಆದ್ಯತೆ ನೀಡುವವರಂತೂ ಆಗಿರಲೇ ಇಲ್ಲ. ಜನರನ್ನು ದೇವೇತ
ಆರಾಧನೆಯಿಂದ ಏಕದೇವಾರಾಧನೆಯ ಕಡೆಗೆ ಆಹ್ವಾನಿಸುವುದು ಮತ್ತು ಮಾನ
ಯನ್ನು ಅಜ್ಞಾನಾಂಧಕಾರದ ಕೂಪದಿಂದ ಉನ್ನತಿಯ ಶಿಖರಕ್ಕೇರಿಸುವುದೇ ಅ
ಕರ್ತವ್ಯವಾಗಿತ್ತು.

ಅವಕಾಶ ವಂಚಿತ

ಪ್ರವಾದಿವರ್ಯರು 'ಅಮರೈನ್' ಅಂದರೆ ಅಮ್ರ್ ಬಿನ್ ಹಿಶಾಮ್ (ಅ
ಜಹಲ್) ಮತ್ತು ಉಮರ್ ಬಿನ್ ಖತ್ತಾಬ್‌ರ ಪೈಕಿ ಒಬ್ಬರನ್ನಾದರೂ ಇಸ್ಲಾ

ಯಾಗಿ ಕರುಣಿಸೆಂದು ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು. ಆ ಪ್ರಾರ್ಥನೆಯು ಓರ್‌ರ ಮೂಲಕ ಫಲಿಸಿತು. ಆದರೆ ಅಬೂಜಹಲ್‌ನಿಗೆ ಮತ್ತೊಮ್ಮೆ ಆ ಅವಕಾಶ ಸಿತ್ತು. ಆತ ಪ್ರವಾದಿವರ್ಯರನ್ನು ಸಂಕಷ್ಟಕ್ಕೀಡು ಮಾಡುವ ಉದ್ದೇಶದಿಂದ ಮನೆಯ ಸಮೀಪ ಆಳವಾದ ಬಾವಿಯನ್ನು ತೋಡಿ, ಅದರ ಮೇಲೆ ಹುಲ್ಲು, ಗೆಲ್ಲುಗಳನ್ನು ಹಾಕಿ ಮುಚ್ಚಿದನು. ತರುವಾಯ ರೋಗ ಬಾಧಿತನಂತೆ ನಟಿಸಿ . ಪ್ರವಾದಿವರ್ಯರು(ಸ) ನಗರದಲ್ಲಿ ಶತ್ರು-ಮಿತ್ರರೆಂಬ ಭೇದವಿಲ್ಲದೆ ಎಲ್ಲ ರ ರೋಗಿಗಳನ್ನು ಸಂದರ್ಶಿಸುತ್ತಿದ್ದರು.

ಹೀಗೆ ಅಬೂಜಹಲ್ ರೋಗ ಪೀಡಿತನಾದನೆಂದು ತಿಳಿದು ಪ್ರವಾದಿವರ್ಯರು(ಸ) ನನ್ನು ಕಾಣಲು ಹೊರಟರು. ಆದರೆ ಅವರು ಆ ಮುಚ್ಚಿದ ಬಾವಿಯ ಬಳಿಗೆ ಪುತ್ತಲೇ ದೇವಚರ ಜಿಬ್ರೀಲ್‌ರು(ಅ) ಆಗಮಿಸಿ ಅಬೂಜಹಲ್‌ನ ಸಂಚನ್ನು ದರು. ಪ್ರವಾದಿವರ್ಯರು(ಸ) ಅಲ್ಲಿಂದಲೇ ಮರಳಿದರು. ಅದನ್ನು ಕಂಡು ೂಜಹಲ್ ಗಡಿಬಿಡಿಯಿಂದ, ಪ್ರವಾದಿವರ್ಯರನ್ನು ಕೂಗಿ ಕರೆಯುತ್ತಾ ಅವರ ನಿಂದ ಓಡಿ ಬಂದ. ಈ ಮಧ್ಯೆ, ತಾನೇ ತೋಡಿದ ಬಾವಿಯನ್ನು ಗಮನಿಸದೆ, ರಲ್ಲಿ ಬಿದ್ದು ಬಿಟ್ಟ.

ಮನೆಯವರು ಆತನನ್ನು ಅಲ್ಲಿಂದ ಎತ್ತಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯ ಲಿಲ್ಲ. ಕೊನೆಗೆ ಅಬೂಜಹಲನೇ 'ಮುಹಮ್ಮದ್ ಬಿನ್ ಅಬ್ದುಲ್ಲಾನನ್ನು ಕರೆಯಿರಿ. ಮಾತ್ರವೇ ನನ್ನನ್ನು ರಕ್ಷಿಸಬಲ್ಲ' ಎಂದು ಹೇಳಿಬಿಟ್ಟ. ಹೀಗೆ ಪ್ರವಾದಿಯವರು(ಸ) ಅಲ್ಲಿಗೆ ಆಗಮಿಸಿ ಅಬೂಜಹಲ್‌ನನ್ನು ರಕ್ಷಿಸಿದರು. ಈ ಘಟನೆಯ ನಂತರ ರೂ ಅಬೂಜಹಲ್ ಸತ್ಯದ ಮೇಲೆ ವಿಶ್ವಾಸ ತಾಳಬಹುದಿತ್ತು. ಆದರೆ ಆತ ರವೂ ಪ್ರವಾದಿವರ್ಯರ(ಸ) ಶತ್ರುವಾಗಿಯೇ ಮುಂದು ವರಿದು ಮಹಾ ನೃಷ್ಟನೆನಿಸಿಕೊಂಡ. ಇಂತಹ ಕ್ರೂರಿಯೂ ಉದ್ಧಟನೂ ಆಗಿರುವ ಪ್ರಾಣ ಶತ್ರು ್ನ ಸಂಕಷ್ಟದ ವೇಳೆ ನೆರವಾಗಲು ದೇವ ಸಂದೇಶವಾಹಕರಿಂದಷ್ಟೇ ಸಾಧ್ಯ. ❑

್ಲಾಮಿನ ಮೂಲೋತ್ಪಾಟನೆಯ ಪಣ ತೊಟ್ಟವರು

ಇಸ್ಲಾಮಿನ ಶತ್ರುಗಳ ಪೈಕಿ ಪ್ರಥಮ ಪಂಕ್ತಿಯಲ್ಲಿದ್ದ ಇನ್ನೋರ್ವ ವ್ಯಕ್ತಿ ಸುಖ್ರಾ! ರ ಮನೆತನವು ಅಜ್ಞಾನ ಕಾಲದಲ್ಲಿ ಉನ್ನತ ಮತ್ತು ಗೌರವಾನ್ವಿತವಾಗಿತ್ತು. ಮಿಗೆ ಮುಂಚೆ ಅಂದರೆ ಅಲ್ಲಾಹನ ಸಂದೇಶವಾಹಕರಿಗೆ(ಸ) ಪ್ರವಾದಿ ದೌತ್ಯ ಸುವುದಕ್ಕೆ ಮುಂಚೆ ಅರಬದಲ್ಲಿ ನಿರಂತರ ನಡೆಯುತ್ತಿದ್ದಂತಹ ಯುದ್ಧಗಳ ಪೈಕಿ ಜಾರ್' ಯುದ್ಧವು ಅತಿ ಭೀಕರವೂ ವಿನಾಶಕಾರಿಯೂ ಆಗಿತ್ತು. ಆ ಯುದ್ಧವು ಖೈನ್ ಕೈಸ್ ಮತ್ತು ಕುರೈಶ್ ಗೋತ್ರಗಳ ನಡುವೆ ಸಂಭವಿಸಿತ್ತು. ಕುರೈಶ್

ಗೋತ್ರದ ಎಲ್ಲ ಮನೆತನದ ಪ್ರಮುಖ ವ್ಯಕ್ತಿಗಳು ಅದರಲ್ಲಿ ಭಾಗವಹಿಸಿದ್ದ ಹಾಶಿಮ್ ಮನೆತನದದ ನೇತೃತ್ವವನ್ನು ಝುಬೈರ್ ಬಿನ್ ಅಬ್ದುಲ್ ಮುತ್ತಲಿಬ ವಹಿಸಿದ್ದರು. ಅವರ ಜತೆಯಲ್ಲಿ ಹದಿಹರೆಯದವರಾಗಿದ್ದ ಹ. ಮುಹಮ್ಮದ್‌ರೂ ಪಾಲ್ಗೊಂಡಿದ್ದರು. ಸುಖ್ರಾರ ತಂದೆಯೂ ಅಮೀರ್ ಮುಆವಿಯವರ ಪಿತಾಮಹ ಆದ ಹರಬ್ ಬಿನ್ ಉಮಯ್ಯಾ ಈ ಯುದ್ಧದಲ್ಲಿ ಕುರೈಶ್ ಗೋತ್ರದ ನಾಯ ವನ್ನು ವಹಿಸಿದ್ದರು. ಈ ಯುದ್ಧವು ದಿನ–ತಿಂಗಳುಗಳಲ್ಲ, ಬದಲಾಗಿ ಹ ವರ್ಷಗಳ ತನಕ ಮುಂದುವರಿದಿತ್ತು.

ಇಸ್ಲಾಮ್ ಉದಯವಾದಾಗ ಅದನ್ನು ಉಗ್ರವಾಗಿ ವಿರೋಧಿಸಿದವರು ಪ್ರ ವರ್ಯರ(ಸ) ಗೋತ್ರದವರೇ ಆದ ಕುರೈಶ್ ಸರದಾರರು. ಸುಖ್ರಾ ಅವರಲ್ಲೊಬ್ಬ ದ್ದರು. ಪ್ರವಾದಿವರ್ಯರು(ಸ) ಸಫಾ ಬೆಟ್ಟದ ಮೇಲೆ ಪ್ರಥಮವಾಗಿ ಸತ್ಯ ಸಂ ವನ್ನು ಜನರ ಮುಂದಿಟ್ಟಾಗಲೂ ಅಬೂ ತಾಲಿಬ್‌ರ ಬಳಿ 'ನಮ್ಮ ಆರಾಧ್ಯ ಮುಹಮ್ಮದ್ ನಿಂದಿಸುತ್ತಿದ್ದಾನೆ' ಎಂದು ದೂರಿತ್ತಾಗಲೂ ಸುಖ್ರಾ, ವಿರೋಧಿ ಗುಂಪಿನಲ್ಲಿದ್ದರು. ಹಿಜ್ರತ್‌ಗೆ ಮುಂಚೆ ಪ್ರವಾದಿವರ್ಯರ(ಸ) ಕೊಲೆಯ ಸಂ ರೂಪಿಸಲು 'ದಾರುನ್ನದ್‌ವ'ದಲ್ಲಿ ಸಭೆ ಸೇರಿದ್ದ ಕುರೈಶ್ ಮುಖಂಡರಲ್ಲಿ ಸು ಕೂಡಾ ಇದ್ದರು.

ಮೂಲ ಹೆಸರು ಸುಖ್ರಾ ಎಂದಾಗಿದ್ದರೂ ಅಬೂ ಸುಫಿಯಾನ್ ಎ ರೂಢನಾಮದಿಂದಲೇ ಕರೆಯಲ್ಪಡುತ್ತಿದ್ದ ಇವರು ಬದ್ರ್ ಯುದ್ಧ ನಡೆಯ ಮೂಲ ಕಾರಣಕರ್ತರಾಗಿದ್ದರು. ಒಂದು ವೇಳೆ ಅವರು, 'ನಮ್ಮ ವ್ಯಾಪಾರಿ ತಂ ಮುಸ್ಲಿಮರ ತಂಡದಿಂದ ದೋಚಲ್ಪಡಲಿದೆ' ಎಂಬ ಕಲ್ಪಿತ ಸುದ್ದಿಯನ್ನು ಮ ಸರದಾರರಿಗೆ ಕಳುಹಿಸದೆ ಇರುತ್ತಿದ್ದರೆ, ಬದ್ರ್ ಯುದ್ಧ ಸಂಭವಿಸುತ್ತಲೇ ಇರ ಅದಕ್ಕೆ ಮುಂಚಿನ ವರೆಗೂ ಕುರೈಶರು ಹಝ್ರಮಿ ಎಂಬವನ ರಕ್ತ ಪ್ರತೀಕಾರವ ನೆಪವಾಗಿ ತೋರಿಸುತ್ತಿದ್ದರು. ಆದರ ಬದ್ರ್ ಯುದ್ಧದಲ್ಲಾದ ಹೀನಾಯ ಸೋ ಬಳಿಕ ಅವರ ಎಲ್ಲ ನೆವನ, ಸುಳ್ಳು ಸುದ್ದಿಗಳು ಕೆಲಸಕ್ಕೆ ಬಾರದವುಗಳಾಗಿ ಉಳಿದು ಇನ್ನಿದ್ದುದು ಒಂದೇ ನೆಪ. ಬದ್ರ್ ಯುದ್ಧ ನಂತರ ಕುರೈಶರ ಹೆಚ್ಚಿನ ಮನೆಗ ಸೂತಕದ ಕಳೆ ಆವರಿಸಿತ್ತು. ಈಗ ಬದ್ರ್ ಯುದ್ಧದಲ್ಲಿ ಹತರಾದ ಕು ಸರದಾರರಿಗಾಗಿ ಪ್ರತೀಕಾರ ತೀರಿಸುವುದೇ ಅವರ ಪ್ರಮುಖ ಗುರಿಯಾಯಿ ಅವರೆಲ್ಲರೂ ಸೇರಿ ಅಬೂ ಸುಫಿಯಾನ್‌ರನ್ನು ತಮ್ಮ ಸರದಾರರನ್ನಾಗಿ ಮಾಡುತ ಅಬೂ ಸುಫಿಯಾನ್, "ಬದ್ರ್‌ನಲ್ಲಿ ಹತರಾದವರ ರಕ್ತ ಪ್ರತೀಕಾರ ತೀರಿಸದೆ ನ ಸ್ನಾನ ಮಾಡಲಾರೆ. ತಲೆಗೆ ಎಣ್ಣೆಯನ್ನು ಹಚ್ಚಲಾರೆ" ಎಂದು ಶಪಥ ಹಾಕುತ

ತರುವಾಯ ಇನ್ನೂರು ಮಂದಿ ಕುದುರೆ ಸವಾರರೊಡಗೂಡಿ ಮದೀನದ

ರಟರು. ಯಹೂದಿಗಳು ಮುಸ್ಲಿಮರ ಹಿತ ಶತ್ರುಗಳಾಗಿದ್ದು, ತನಗೆ ಯುದ್ಧದಲ್ಲಿ ು ಸಹಾಯ ಮಾಡುವರೆಂಬ ಭರವಸೆ ಅಬೂ ಸುಫಿಯಾನರಿಗಿತ್ತು. ಹೀಗೆ ು ಮದೀನದ 'ಬನೂ ನಝೀರ್' ಎಂಬ ಯಹೂದಿ ಗೋತ್ರದ ಸರದಾರ ಮ್ ಬಿನ್ ಮುಶ್ಕಮ್‌ನ ಮನೆಯ ಕದ ತಟ್ಟಿದರು. ಆತ ಅಬೂ ಸುಫಿಯಾನ್ ಆದರ ಪೂರ್ವಕ ಬರಮಾಡಿಕೊಂಡನಲ್ಲದೆ, ಮದೀನದ ಪ್ರಮುಖ ರಹಸ್ಯಗಳನ್ನು ರಂಗ ಪಡಿಸಿದನು. ಬೆಳಗಾತ ಅಬೂ ಸುಫಿಯಾನ್ ಮದೀನಕ್ಕೆ ಸಮೀಪದ ಸಃ ಎಂಬಲ್ಲಿಗೆ ಹೊರಟರು. ಅವರಿಗೆ ಅಲ್ಲಿ ಸಅದ್ ಬಿನ್ ಅಮ್ರ್ ಅನ್ಸಾರಿ ರು ಎದುರಾದರು. ಅವರನ್ನು ಹಿಡಿದು ಹತ್ಯೆಗೈಯಲಾಯಿತು. ಬಳಿಕ ಸನಿಹದ ು ಮನೆಗಳಿಗೆ ಕೊಳ್ಳಿಯಿಡಲಾಯಿತು. ಹೀಗೆ ತನ್ನ ಪ್ರತಿಜ್ಞೆ ಈಡೇರಿತೆಂದು ೊ ಸುಫಿಯಾನ್ ಭಾವಿಸಿದರು. ಈ ವಿಷಯ ಪ್ರವಾದಿವರ್ಯರಿಗೆ(ಸ) ತಿಳಿ , ಅವರು ತಮ್ಮ ಕೆಲವು ಸಂಗಾತಿಗಳೊಂದಿಗೆ ಅಬೂ ಸುಫಿಯಾನ್‌ರ ವನ್ನು ಹಿಂಬಾಲಿಸಿದರು. ಅಬೂ ಸುಫಿಯಾನ್ ಹಿಮ್ಮೆಟ್ಟಿ ಓಡಿದರು. ಆಹಾರ ್ಯಗಳ ಪೈಕಿ ಅವರ ಬಳಿ ಕೇವಲ ಹುರಿದ ಧಾನ್ಯದ ಹಿಟ್ಟಿನ ಚೀಲಗಳಿದ್ದುವು. ಭೀತಿಯಿಂದಾಗಿ, ಅವರು ಆ ಚೀಲಗಳನ್ನೇ ಮುಸ್ಲಿಮರೆಡೆಗೆ ಎಸೆಯುತ್ತಾ ಯನ ಮಾಡಿದರು. ಮುಸ್ಲಿಮರು ಅವುಗಳನ್ನೆಲ್ಲ ವಶಪಡಿಸಿಕೊಂಡರು. ಹುರಿದ ್ಯಕ್ಕೆ ಅರಬಿ ಭಾಷೆಯಲ್ಲಿ 'ಸವೀಕ್' ಎನ್ನುತ್ತಾರೆ. ಆದ್ದರಿಂದ ಈ ಘಟನೆಯನ್ನು ್ವಯೆ ಸವೀಕ್' ಅರ್ಥಾತ್ 'ಸವೀಕ್ ಸಮರ' ಎಂದು ನೆನಪಿಸಲಾಗುತ್ತದೆ.

ಾದಿವರ್ಯರನ್ನು(ಸ) ವಧಿಸುವವನಿಗೆ ಬಹುಮಾನ ಘೋಷಣೆ

ಅದಾದ ಬಳಿಕ ಮಕ್ಕಾ ನಗರಕ್ಕೆ ತೆರಳಿದ ಅಬೂ ಸುಫಿಯಾನ್ ಪಲಾಯನದ ಮಾನದಿಂದ ತಲೆ ತಪ್ಪಿಸಲಿಕ್ಕಾಗಿ "ಮುಹಮ್ಮದ್‌ನನ್ನು ಕೊಲ್ಲುವ ವ್ಯಕ್ತಿಗೆ ವಷ್ಟು ಬಹುಮಾನ ಕೊಡುತ್ತೇನೆ" ಎಂದು ಘೋಷಿಸಿದರು. ತರುವಾಯ ಬದ್ರ್ ನ್ಧದಲ್ಲಾದ ಸೋಲಿಗೆ ಪ್ರತೀಕಾರವಾಗಿ ಪುನಃ ಮದೀನದೆಡೆಗೆ ದಂಡೆತ್ತಿ ಹೋಗ ುತು. ಈ ಬಾರಿ ಮೂರು ಸಾವಿರ ಯೋಧರೊಂದಿಗೆ ಕುರೈಶರ ಬಹುದೇವ ಿ ಮಹಿಳೆಯರೂ ಭಾಗವಹಿಸಿದ್ದರು. ಅವರ ನೇತೃತ್ವವನ್ನು ಅಬೂ ಸುಫಿಯಾನರ ಹಿಂದಃ ವಹಿಸಿದ್ದರು. ಆ ಮಹಿಳೆಯರು ಪುರುಷ ಯೋಧರನ್ನು ಹುರಿದುಂಬಿಸಲು ುತ್ತಿದ್ದರು. ಅದರ ಭಾವಾರ್ಥ ಹೀಗಿದೆ–

ವು ಆಕಾಶದ ತಾರೆಗಳ ಪುತ್ರಿಯರು

ರತ್ನ ಗಂಬಳಿಗಳಲ್ಲಿ ನಡೆಯುವವರು

ರಿ ನಮ್ಮ ಹಣೆಗಳಲ್ಲಿ ತುಂಬಿದೆ

ಕ್ಯವು ದಾವಣಿಗಳಲ್ಲಿ ಪೋಣಿಸಲ್ಪಟ್ಟಿದೆ

ನೀವು ಮುಂದುವರಿದು ಶತ್ರುಗಳನ್ನೆದುರಿಸಿದರೆ,
ನಾವು ನಿಮ್ಮನ್ನು ಆಲಿಂಗಿಸುವೆವು
ಬೆನ್ನು ತುರಿಗಿಸಿದರೆ, ಪಲಾಯನ ಮಾಡಿದರೆ
ನಿಮ್ಮಿಂದ ಬೇರ್ಪಟ್ಟು ಹಂಗಿಸುವೆವು."

ಹೀಗೆ ಕುರೈಶ್ ತಂಡ ಮತ್ತು ಮುಸ್ಲಿಮ್ ಯೋಧರ ಪಡೆಯು ಉಹ ಬೆಟ್ಟದ ಕಣಿವೆಗಳಲ್ಲಿ ಮುಖಾಮುಖಿಯಾದುವು. ಘನ ಗೋರ ಯುದ್ಧ ಆರಂಭವಾಂ ಆದರೆ ಮುಸ್ಲಿಮ್ ಯೋಧರು ಮಕ್ಕಾದ ಬಹುದೇವವಿಶ್ವಾಸಿಗಳನ್ನು ಹಿಮ್ಮೆಟ್ಟಿಸಿ ಆಕ್ರಮಣ ಕೋರ ಸೇನೆ ಪಲಾಯನ ಮಾಡುತ್ತದೆ. ಆಗ ಯುದ್ಧ ಮುಗಿಯಿತೆ ಭಾವಿಸಿದ ಹೆಚ್ಚಿನ ಮುಸ್ಲಿಮರು ಸಮರಾರ್ಜಿತ ಸೊತ್ತನ್ನು ಶೇಖರಿಸುವು ಮಗ್ನರಾದರು. ಈ ಅವಕಾಶವನ್ನು ಅಬೂ ಸುಫ್ಯಾನ್ ಬಳಸಿಕೊಂಡರು. ಅ ಹಿಂದಿನಿಂದ ಮುಸ್ಲಿಮರ ಮೇಲೆ ದಾಳಿಯೆಸಗುತ್ತಾರೆ. ಇದರಿಂದಾಗಿ ಮುಸ್ಲಿ ಗೆಲುವು ಸೋಲಾಗಿ ಪರಿಣಮಿಸುತ್ತದೆ. ಈ ಮಧ್ಯೆ ಶತ್ರುಗಳು ಪ್ರವಾದಿವರ್ಯ ಸುತ್ತುವರಿಯುತ್ತಾರೆ. ಅವರ ಪೈಕಿ ಮಾಲಿಕ್ ಬಿನ್ ಝುಬೈರ್ ಎಂಬ ಪ್ರವಾದಿವರ್ಯರೆಡೆಗೆ ಬಾಣ ಬಿಡುತ್ತಾರೆ. ಅದನ್ನು ಹ. ತಲ್ಹಾ(ರ) ಬರಿಗೈಯಿಂ ತಡೆದು ಬಿಡುತ್ತಾರೆ. ಅಷ್ಟರಲ್ಲಿ ಬಹುದೇವ ವಿಶ್ವಾಸಿಗಳು ಕಲ್ಲೆಸೆಯಲು ಆರಂಭಿಸು ಇಬ್ನು ಕಮಿಯ್ಯ ಎಂಬವನು ಎಸೆದ ಒಂದು ಕಲ್ಲು ಪ್ರವಾದಿವರ್ಯರ(ಸ) ಮು ಬಡಿಯುತ್ತದೆ. ಅವರ(ಸ) ಒಂದು ಹಲ್ಲು ಉದುರಿ ಹೋಗುತ್ತದೆ. ತುಟಿ ಹಣೆಗೆ ಗಾಯವಾಗಿ ರಕ್ತ ಒಸರುತ್ತದೆ. ಅಷ್ಟರಲ್ಲಿ ಸಹಾಬಿಗಳು ಪ್ರವಾದಿವ ಸುತ್ತು ಗುರಾಣಿಯಂತೆ ನೆರೆಯುತ್ತಾರೆ. ತರುವಾಯ ಪ್ರವಾದಿವರ್ಯರ ಹತರಾದರೆಂದು ಭಾವಿಸಿದ ಇಬ್ನು ಕಮಿಯ್ಯನು, "ನಾನು ಮುಹಮ್ಮದ್ ಕೊಂದೆ""ಎಂದು ಬೊಬ್ಬಿರಿಯ ತೊಡಗುತ್ತಾನೆ. ಇದರಿಂದಾಗಿ ಮುಸ್ಲಿಮ್ ಯೋ ನಿರಾಶೆ ಮತ್ತು ಹತಾಶೆಯ ಕಾರ್ಮೋಡ ಕವಿಯುತ್ತದೆ.

ಯೋಧರು ಹತಾಶರಾಗಿ ಕೈ ಚೆಲ್ಲುತ್ತಿರುವುದನ್ನು ಕಂಡು ಪ್ರವಾದಿವರ್ಯರ ಒಂದು ಬೆಟ್ಟದ ಮೇಲಕ್ಕೇರಿದರು. ನಿರಾಶರಾದ ಯೋಧರಲ್ಲಿ ಉತ್ಸಾಹ ತುಂಬು ಪ್ರವಾದಿವರ್ಯರ(ಸ) ಉದ್ದೇಶವಾಗಿತ್ತು. ಅದನ್ನು ಕಂಡು ಅಬೂ ಸುಫಿಯ ತಮ್ಮ ಸೇನೆಯೊಂದಿಗೆ ಪ್ರವಾದಿವರ್ಯರನ್ನು(ಸ) ಹಿಂಬಾಲಿಸಿದರು. ಆದರೆ ಉಮ ಮತ್ತಿತರ ಸಂಗಾತಿಗಳು ಶತ್ರು ಯೋಧರ ಮೇಲೆ ಕಲ್ಲುಗಳನ್ನೆಸೆಯ ತೊಡಗಿ ಇದರಿಂದಾಗಿ ಶತ್ರು ಸೇನೆ ಹಿಮ್ಮೆಟ್ಟಿತು. ಅಬೂ ಸುಫಿಯಾನ್ ಇನ್ನೊಂದು ಬ ಮೇಲಕ್ಕೇರಿ, "ಇಲ್ಲಿ ಮುಹಮ್ಮದ್ ಇಲ್ಲವಲ್ಲ" ಎಂದು ಜೋರಾಗಿ ಹೇಳು ಬಳಿಕ ಸ್ವಲ್ಪ ಹೊತ್ತು ಮೌನ ಆವರಿಸುತ್ತದೆ. ತರುವಾಯ ಅವರು ಉಮರ

ತ್ತು ಅಬೂಬಕರ್‌ರ(ರ) ಹೆಸರಿಡಿದು ಕರೆಯುತ್ತಾರೆ. ಯಾರೂ ಉತ್ತರಿಸದಿದ್ದಾಗ, ಹೋ! ಎಲ್ಲರೂ ಹತರಾಗಿದ್ದಾರೆ" ಎಂದು ಅಬೂ ಸುಫಿಯಾನ್ ಕಿರುಚಿಕೊಳ್ಳುತ್ತಾರೆ. ನನ್ನು ಕೇಳಿ ಉಮರ್‌ರಿಂದ ತಡೆಯಲಾಗಲಿಲ್ಲ. ಅವರು, ಏರು ಧ್ವನಿಯಲ್ಲಿ ಳಿದರು, "ನಾವು ಜೀವಿಂತಿದ್ದೇವೆ." ಅಬೂ ಸುಫಿಯಾನ್ ಹೇಳಿದರು, "ಓ ಬಲ್* ನೀನು ಉನ್ನತನಾಗಿರು."

ಸಹಾಬಿಗಳು ಪ್ರವಾದಿವರ್ಯರ ಸೂಚನೆಯಂತೆ, "ಅಲ್ಲಾಹನು ಉನ್ನತನೂ ಹಾನನೂ ಆಗಿದ್ದಾನೆ" ಎಂದು ಜೋರಾಗಿ ಹೇಳಿದರು.

"ನಮ್ಮ ಬಳಿ ಉಝ್ಝಾ* ಇದೆ. ನಿಮ್ಮ ಬಳಿಯೇನಿದೆ?" ಅಬೂ ಸುಫಿಯಾನ್ ಶ್ನಿಸಿದರು.

ಸಹಾಬಿಗಳು ಹೀಗೆ ಉತ್ತರಿಸುತ್ತಾರೆ, "ಅಲ್ಲಾಹನು ನಮ್ಮ ಒಡೆಯ, ನಿಮಗಾರೂ ಡೆಯರಿಲ್ಲ."

ಆಗ ಅಬೂ ಸುಫಿಯಾನ್ ಹೇಳುವರು, "ಈ ದಿನವು ಬದ್ರ್ ಯುದ್ಧಕ್ಕೆ ತ್ತರವಾಗಿದೆ. ನಮ್ಮ ಸೈನಿಕರು ತಮ್ಮ ಕಿವಿ, ಮೂಗುಗಳನ್ನು ಕತ್ತರಿಸಿರುವರು. ಆದರೆ ನು ಅವರಿಗೆ ಹಾಗೆ ಮಾಡಲು ಆದೇಶಿಸಿರಲಿಲ್ಲ. ಅದಾಗಿಯೂ ನನಗೆ ಆ ಬಗ್ಗೆ ಕ್ಷೇಪವಿಲ್ಲ."

ಆದರೆ ಯಾಕೋ ಅವರು ಯುದ್ಧ ಭೂಮಿಯಿಂದ ಪಲಾಯನ ಮಾಡುತ್ತಾರೆ.

ಹುದ್ ಯುದ್ಧಕ್ಕೆ ಪ್ರತೀಕಾರದ ಸಂಚು

ಅಬೂ ಸುಫಿಯಾನ್ ಮತ್ತು ಇತರ ಕುರೈಶ್ ಸರದಾರರು ಉಹುದ್ ಯುದ್ಧದ ನಾಶ ನಷ್ಟದಿಂದಲೂ ಪಾಠ ಕಲಿಯಲಿಲ್ಲ. ಅವರು ಯುದ್ಧದಲ್ಲಿ ಹತರಾದ ಹುದೇವ ವಿಶ್ವಾಸಿಗಳ ರಕ್ತ ಪ್ರತೀಕಾರಕ್ಕಾಗಿ ಷಡ್ಯಂತ್ರ ರಚಿಸಿದರು. ಉಹುದ್ ಯುದ್ಧ ನಡೆದು ನಾಲ್ಕು ತಿಂಗಳು ಕಳೆಯುವಷ್ಟರಲ್ಲಿ ಅಂದರೆ ಹಿ.ಶ. 4ರ ಸಫರ್ ಗಳಲ್ಲಿ ಅಝ್ಲ್ ಮತ್ತು ಕಾರಃ ಗೋತ್ರಗಳ ಕೆಲವು ಮಂದಿ ಪ್ರವಾದಿವರ್ಯರನ್ನು ಧಿಸಿದರು. ತರುವಾಯ, "ನಮ್ಮವರು ಇಸ್ಲಾಮ್ ಸ್ವೀಕರಿಸಿದ್ದಾರೆ. ಆದರೆ ಅವರಿಗೆ ಸ್ಲಾಮಿನ ಕುರಿತು ಹೆಚ್ಚೇನೂ ತಿಳಿದಿಲ್ಲ. ಆದ್ದರಿಂದ ನಮ್ಮ ಜತೆಯಲ್ಲಿ ಧರ್ಮದ ಗ್ಗೆ ತಿಳುವಳಿಕೆಯಿರುವ ಯಾರನ್ನಾದರೂ ಕಳುಹಿಸಿರಿ. ಅವರು ನಮಗೆ ಧಾರ್ಮಿಕ ಷಯಗಳನ್ನು ಕಲಿಸಲಿ" ಎಂದು ವಿನಂತಿಸಿದರು.

ಹೀಗೆ ಪ್ರವಾದಿವರ್ಯರು(ಸ) ಹ. ಆಸಿಮ್ ಬಿನ್ ಸಾಬಿತ್‌ರ(ರ) ನೇತೃತ್ವದಲ್ಲಿ

ಕುರೈಶ್ ಬಹುದೇವವಿಶ್ವಾಸಿಗಳು ಆರಾಧಿಸುತ್ತಿದ್ದ ದೇವತೆಗಳ ಹೆಸರು.

ಹತ್ತು ಮಂದಿ ಸಹಾಬಿಗಳನ್ನು ಅವರೊಡನೆ ಕಳುಹಿಸಿದರು. ಆದರೆ ಈ ಯಾ
ತಂಡವು ರಜೀಅ್ ಎಂಬಲ್ಲಿಗೆ ತಲಪುವಷ್ಟರಲ್ಲಿ ಆ ನಯವಂಚಕರು ವಚನ ಭ
ಮಾಡಿದರು. ಬನೂ ಹಯ್ಯಾನ್ ಗೋತ್ರದ ಇನ್ನೂರು ಮಂದಿ ಶಸ್ತ್ರಸ
ಯೋಧರು ಮುಸ್ಲಿಮರ ತಂಡವನ್ನು ಸುತ್ತುವರಿದರು. ಮುಸ್ಲಿಮರು ಸಮೀಪ
ಗುಡ್ಡವನ್ನೇರಿ ಆಶ್ರಯ ಪಡೆದರು.

ಆ ಬಹುದೇವ ವಿಶ್ವಾಸಿಗಳ ಸರದಾರರು, "ನಾವು ನಿಮಗೆ ಆಶ್ರಯ ನೀ
ತ್ತೇವೆ" ಎಂದು ಮುಸ್ಲಿಮರಿಗೆ ಆಶ್ವಾಸನೆ ನೀಡಿದರು. ಆದರೆ ಆಸಿಮ್‌ರು(ರ), "ನಾ
ನಿಮ್ಮ ಆಶ್ರಯದಲ್ಲಿ ಬರಲಾರೆವು" ಎನ್ನುತ್ತಾ ಅಲ್ಲಾಹನಲ್ಲಿ ಹೀಗೆ ಪ್ರಾರ್ಥಿಸಿದ
"ಓ ಅಲ್ಲಾಹ್! ನಮ್ಮ ಈ ಸಂಧಿಗ್ಧತೆಯ ಸುದ್ದಿಯನ್ನು ನಿನ್ನ ಸಂದೇಶವಾಹಕ
ಮುಟ್ಟಿಸು."

ಅಲ್ಲಾಹನು ಆಸಿಮ್‌ರ(ರ) ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಇಲ್ಲಿ
ಪರಿಸ್ಥಿತಿಯ ಬಗ್ಗೆ ಪ್ರವಾದಿವರ್ಯರು ತಿಳಿದು ಕೊಂಡರು. ತರುವಾಯ ಆಸಿಮ್‌ರು(
ಶತ್ರುಗಳ ಮೇಲೆ ಬಾಣ ಬಿಟ್ಟರು. ಬಾಣಗಳು ಮುಗಿದಾಗ ಭರ್ಚಿಯಿಂದ ಹೋರಾ
ದರು. ಅದು ತುಂಡಾದಾಗ ಖಡ್ಗವೆತ್ತಿದರು. ಹೀಗೆ ವೀರಾವೇಶದಿಂದ ಹೋರಾಡು
ಹುತಾತ್ಮರಾದರು. ಕೊನೆಯ ಗಳಿಗೆಯಲ್ಲಿ ಅವರು, "ಪ್ರಭೂ, ನಾನು ನಿನ್ನ ಧರ್ಮ
ಸಂರಕ್ಷಣೆಯಲ್ಲಿ ಜೀವತೆತ್ತವನೆಂದಾದರೆ ನನ್ನ ಮೃತ ದೇಹ ಶತ್ರುಗಳ ಕೈ
ಸಿಗದಂತಾಗಲಿ" ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದರು.

ವಾಸ್ತವದಲ್ಲಿ ಆ ಶತ್ರುಗಳು ಆಸಿಮ್‌ರನ್ನು(ರ) ಬಂಧಿಸಿ ಮಕ್ಕಾ ನಗ
ಕೊಂಡೊಯ್ಯಲು ಬಂದಿದ್ದರು. ಉಹುದ್ ಯುದ್ಧದಲ್ಲಿ ಮಕ್ಕಾದ ಬಹುದೇವಾರಾಧ
ಪೈಕಿ ಸಿಲಾಕಾ ಬಿಂತಿ ಸಅದ್‌ಳ ಪುತ್ರ ಹತನಾಗಿದ್ದ. ಆಕೆ ತನ್ನ ಮಗನ ಕೊಲೆಗಾ
ಪೈಕಿ ಆಸಿಮ್‌ರ ತಲೆ ಕಡಿದು ತರಬಲ್ಲವನಿಗೆ ಅತ್ಯುತ್ತಮ ತಳಿಯ ನೂ
ಒಂಟೆಗಳನ್ನು ಬಹುಮಾನವಾಗಿ ನೀಡುತ್ತೇನೆಂದು ಘೋಷಿಸಿದ್ದಳು. ಆದರೆ ಅಲ್ಲಾಹ
ಆಸಿಮ್‌ರ(ರ) ಕೊನೆಯ ಪ್ರಾರ್ಥನೆಯನ್ನು ಸ್ವೀಕರಿಸಿದನು. ಜೇನ್ನೊಣಗಳ ಹಿಂ
ಆಸಿಮ್‌ರ(ರ) ಮೃತ ದೇಹವನ್ನು ಮುತ್ತಿಕೊಳ್ಳುವ ಮೂಲಕ ಅವರ ಪಾವ
ಶರೀರವು ಶತ್ರುಗಳ ಕೈಗೆ ಸಿಗದಂತಹ ಏರ್ಪಾಟನ್ನು ಅಲ್ಲಾಹನು ಮಾಡಿದನು. ರಾ
ವೇಳೆ ಎದ್ದ ಚಂಡಮಾರುತದಿಂದಾಗಿ ಆಸಿಮ್‌ರ ದೇಹವು ನೆಲದಡಿಯ
ಯಾವುದೇ ಕುರುಹು ಇಲ್ಲದಂತೆ ಹೂತು ಹೋಯಿತು. ಹೀಗೆ ಬಹುದೇ
ವಿಶ್ವಾಸಿಗಳ ಹೀನ ಉದ್ದೇಶ ಈಡೇರದಂತಾಯಿತು. ಬಳಿಕ ಆ ನಯವಂಚಕ
ಸಿಲಾಕಾಳಿಂದ ಬಹುಮಾನ ಕೇಳಲು ಹೋದಾಗ, "ನಾನು ಆಸಿಮ್‌ನ ತಲೆ ಕಡಿ
ತರಬೇಕೆಂದು ಶರ್ತ ವಿಧಿಸಿದ್ದೆ. ಆದ್ದರಿಂದ ನಿಮಗೆ ಬಹುಮಾನ ಸಿಗುವಂತಿ

ಮ ಹೇಳಿ ಆಕೆ ಕೈ ತೊಳೆದುಕೊಂಡಳು.

ಆಸಿಮ್‌ರೊಂದಿಗೆ ಅವರ ಇನ್ನೂ ಏಳು ಮಂದಿ ಸಂಗಾತಿಗಳು ಶತ್ರುಗಳ ರಿಯಿಂದಾಗ ಹುತಾತ್ಮರಾಗಿದ್ದರು. ಉಳಿದ ಇಬ್ಬರು ಖುಬೈಬ್(ರ) ಬಿನ್ ಅದೀ ಟ್ಟ ಝೈದ್(ರ) ಬಿನ್ ವಸ್ನಿಯ ಬಂಧಿಸಲ್ಪಟ್ಟರು. ಅವರಿಬ್ಬರನ್ನೂ ಮಕ್ಕಾ ರಕ್ಕೆ ಕೊಂಡೊಯ್ದು ಮಾರಲಾಯಿತು. ಖುಬೈಬ್(ರ) ಉಹುದ್ ಯುದ್ಧದಲ್ಲಿ ರಿಸ್ ಬಿನ್ ಆಮಿರ್‌ನನ್ನು ವಧಿಸಿದ್ದರು. ಆದ್ದರಿಂದ ಹಾರಿಸ್‌ನ ಪುತ್ರರು ತಮ್ಮ ನೆಯ ಹತ್ಯೆಗೆ ಪ್ರತೀಕಾರ ಪಡೆಯಲು ಖುಬೈಬ್‌ರನ್ನು ಖರೀದಿಸಿದರು. ಕೆಲವು ಅವರಿಗೆ ಅನ್ನ–ಪಾನೀಯ ನೀಡದೇ ಸತಾಯಿಸಲಾಯಿತು. ಒಮ್ಮೆ ಹಾರಿಸ್‌ನ ಮಗು ಚೂರಿಯೊಂದಿಗೆ ಆಟವಾಡುತ್ತಾ ಖುಬೈಬ್‌ರ ಬಳಿಗೆ ತಲುಪಿತು. ಬೈಬ್ ಮಗುವನ್ನೆತ್ತಿ ಮಡಿಲಲ್ಲಿರಿಸಿ ಆಟವಾಡಿಸತೊಡಗಿದರು ಮತ್ತು ಚೂರಿಯನ್ನು ಬದಿಯಲ್ಲಿರಿಸಿದರು. ಅಷ್ಟರಲ್ಲಿ ಹಾರಿಸ್‌ನ ಪತ್ನಿಯು ಮಗುವನ್ನು ಹುಡುಕುತ್ತಾ ಕಡೆ ಬಂದಳು. ತನ್ನ ಮಗು ಶತ್ರುವಿನ ಮಡಿಲಲ್ಲಿ ಕುಳಿತಿದೆ... ಆತನ ಬಳಿ ರಿಯೂ ಇದೆ... ಆತನೊಡನೆ ತಾನು ಎಂದೂ ಸದ್ವರ್ತನೆ ತೋರಿಲ್ಲವೆಂಬುದನ್ನು ರಿಸಿದ ಆಕೆಯು ಭಯದಿಂದ ಕಿಟಾರನೆ ಕಿರುಚಿದಳು. ಇದನ್ನು ನೋಡಿ ಬೈಬ್ ಹೇಳಿದರು, "ನಾನು ಈ ಮಗುವನ್ನು ಕೊಲ್ಲುವೆನೆಂದು ನೀನು ಭಾವಿಸು ಯಾ? ಇಲ್ಲ. ಅದು ನಮ್ಮ ಚಾರಿತ್ರ್ಯ ಅಲ್ಲ."

ಹಾರಿಸ್‌ನ ಸಂಬಂಧಿಕರು ಖುಬೈಬ್‌ರನ್ನು ವಧಿಸುವ ಉದ್ದೇಶದಿಂದ ಅವರನ್ನು ಕ್ಕಾ ನಗರದ ಹೊರವಲಯಕ್ಕೆ ಕೊಂಡೊಯ್ದರು. ಅಲ್ಲಿ ಅವರನ್ನು ಇಸ್ಲಾಮ್ ರೆಯಲು ಒತ್ತಾಯಿಸಲಾಯಿತು. ಆದರೆ ಖುಬೈಬ್ ನಿರಾಕರಿಸುತ್ತಾ ಎರಡು ಅತ್ ನಮಾಝ್ ನಿರ್ವಹಿಸಲು ಅನುಮತಿ ಕೇಳಿದರು. ಹಂತಕರು ಸಮ್ಮತಿಸಿದರು. ರು ನಮಾಝ್ ನಿರ್ವಹಿಸಿಯಾದ ಬಳಿಕ ಹೇಳಿದರು, "ನನಗೆ ದೀರ್ಘವಾಗಿ ಮಾಝ್ ಮಾಡಲು ಇಚ್ಛೆಯಾಗಿತ್ತು. ಆದರೆ ಮರಣಭಯದಿಂದ ಹಾಗೆ ಡುತ್ತಿದ್ದೇನೆಂದು ನೀವು ಭಾವಿಸಬಹುದಾದ್ದರಿಂದ ಹಾಗೆ ಮಾಡಲಿಲ್ಲ." ಬಳಿಕ ರು ಪದ್ಯವೊಂದನ್ನು ಹಾಡಿದರು. ಅದರ ಭಾವಾರ್ಥ ಹೀಗಿದೆ, "ನಾನು ಸ್ಲಿಮಿಗಾಗಿ ಕೊಲ್ಲಲ್ಪಡುವಾಗ, ಯಾವ ರೂಪದಲ್ಲಿ ಕೊಲ್ಲಲ್ಪಡುವೆನೆಂಬ ಚಿಂತೆ ಇಲ್ಲ. ನನ್ನದೆಲ್ಲವೂ ಅಲ್ಲಾಹನಿಗೇ ಅರ್ಪಿತ. ಅಲ್ಲಾಹನಿಚ್ಛಿಸಿದರೆ, ನನ್ನ ದೇಹದ ಕಣಕ್ಕೂ ಸಮೃದ್ಧಿ ದಯಪಾಲಿಸಿಯಾನು."

ಇನ್ನೊಬ್ಬ ಸೆರೆಯಾಳು ಹ. ಝೈದ್‌ರನ್ನು(ರ) ವಧಿಸುವುದಕ್ಕಾಗಿಯೇ ಫ್ವಾನ್ ಬಿನ್ ಉಮಯ್ಯ ಖರೀದಿಸಿದ್ದನು. ಅವರ ವಧೆಯನ್ನು ಕಂಡು ಂದಿಸಲು ಕುರೈಶರ ಅನೇಕ ಸರದಾರರು ಜಮಾಯಿಸಿದ್ದರು. ಅವರಲ್ಲಿ ಅಬೂ

ಸುಫಿಯಾನ್ ಇದ್ದರು. ಹಂತಕನು ಖಡ್ಗವನ್ನೆತ್ತಿದಾಗ ಆತನನ್ನು ತಡೆದು ಅ
ಸುಫಿಯಾನ್, ಝೈದ್‌ರೊಡನೆ ಕೇಳುತ್ತಾರೆ, "ನಿಜವಾಗಿ ಹೇಳು ನಿನ್ನ ಜಾಗ
ಮುಹಮ್ಮದ್ ವಧಿಸಲ್ಪಟ್ಟರೆ ನೀನದನ್ನು ನಿನ್ನ ಸೌಭಾಗ್ಯವೆಂದು ಭಾವಿಸುತ್ತೀಯಲ್ಲವೆ

ಝೈದ್(ರ) ಹೇಳುತ್ತಾರೆ, "ನನ್ನ ಪ್ರಾಣವನ್ನು, ಪ್ರವಾದಿವರ್ಯರ(ಸ) ಕಾ
ಮುಳ್ಳು ಚುಚ್ಚುವುದಕ್ಕೂ ಸಮಾನವೆಂದು ನಾನು ಭಾವಿಸುವುದಿಲ್ಲ."

ಸಫ್ವಾನ್‌ನ ಗುಲಾಮ ಫಸ್ತಾಸನು ಝೈದ್‌ರ ಮೇಲೆ ಖಡ್ಗ ಬೀಸುತ
ಝೈದ್ ಹುತಾತ್ಮರಾಗುತ್ತಾರೆ.

ಇಸ್ಲಾಮನ್ನು ಅಬೂಸುಫಿಯಾನ್ ಎಷ್ಟು ದ್ವೇಷಿಸುತ್ತಿದ್ದರೆಂದರೆ, ಪ್ರವ
ವರ್ಯರ(ಸ) ಕುರಿತು ಯಾವುದಾದರೂ ಒಳ್ಳೆಯ ಮಾತು ಕೇಳಿಸಿಕೊಂ
ಅಥವಾ ಅವರಿಂದ(ಸ) ಯಾವುದಾದರು ಪವಾಡ ಸಂಭವಸಿದರೆ, ಅದು ಪ್ರಚ
ವಾದೀತೆಂಬ ಭಯದಿಂದ ಅದನ್ನು ಜನರಿಂದ ಮುಚ್ಚಿಡಲು ಪ್ರಯತ್ನಿಸುತ್ತಿದ್ದ

ಯಹೂದಿಯರೊಂದಿಗೆ ಸೇರಿ ಒಳ ಸಂಚು

ಉಹುದ್ ಯುದ್ಧ ಬಳಿಕ ಯಹೂದಿಯರೂ ಗರಿಗೆದರತೊಡಗಿದರು ವ
ಮುಸ್ಲಿಮರ ವಿರುದ್ಧ ಆಂದೋಲನವನ್ನೇ ಆರಂಭಿಸಿದರು. ಆ ಪ್ರಕಾರ, ಯಹೂದಿ
ಬನೂ ನದೀರ್ ಗೋತ್ರದವರು ವಿದ್ರೋಹ ನಡೆಸಿದರು. ಪ್ರವಾದಿವರ್ಯರು
ಅವರಿಗೆ ಮದೀನ ತೊರೆಯುವ ಶಿಕ್ಷೆ ವಿಧಿಸಿದರು. ಆ ಬಳಿಕ ಯಹೂದಿಯ
ಖೈಬರ್‌ನಲ್ಲಿ ಆಶ್ರಯ ಪಡೆದರು. ಅಲ್ಲಿಂದ ಮಕ್ಕಾದ ಕುರೈಶ್ ಸರದಾರರೊಂ
ಒಳಸಂಚು ನಡೆಸತೊಡಗಿದರು. ತಮ್ಮ ಇಪ್ಪತ್ತು ಮಂದಿಯ ನಿಯೋಗವ
ಅಬೂಸುಫಿಯಾನ್‌ರ ಬಳಿಗೆ ಕಳುಹಿಸುತ್ತಾರೆ. ಅರ ಪೈಕಿ ಸಲ್ಲಾಮ್ ಬಿನ್ ಅಬ
ಹಕೀಮ್ ಎಂಬ ಸರದಾರನು ಹೇಳುತ್ತಾನೆ,

"ಮುಸ್ಲಿಮರು ನಮ್ಮೆಲ್ಲರ ಪಾಲಿಗೆ ಅಪಾಯವಾಗಿದ್ದಾರೆ. ನಾವೆಲ್ಲ
ಸಂಘಟಿತರಾಗಿ ಅವರನ್ನು ಮೂಲೋತ್ಪಾಟಿಸದಿದ್ದರೆ, ನಾವು ಖಂಡಿತ ನಾಶವಾಗುವ
ನೀವು ಮದೀನದ ಮೇಲೆ ಆಕ್ರಮಣ ಮಾಡುವುದಾದರೆ ನಾವು ನಿಮಗೆ ಸಂಪೂ
ರೀತಿಯಲ್ಲಿ ಬೆಂಬಲ ನೀಡುವೆವು. ನಾವು ನಿಮ್ಮನ್ನು ಮುಹಮ್ಮದ್‌ರಿಗಿಂತ
ಸತ್ಯಸಂಧರನ್ನಾಗಿ ಕಾಣುತ್ತಿದ್ದೇವೆ."

ಈ ಮಾತು ಕೇಳಿ ಅಬೂಸುಫಿಯಾನ್ ಮತ್ತಿತರ ಕುರೈಶ್ ಗಣ್ಯರ ಮ
ಅರಳುತ್ತದೆ. ಅವರು ಕೂಡಲೇ ಒಪ್ಪಿಗೆ ಸೂಚಿಸುತ್ತಾರೆ. ಯಹೂದಿಯರು ತ
ವಿಜಯ ಸನ್ನಿಹಿತವಾಯಿತೆಂದು ಭಾವಿಸುತ್ತಾ, ಗತ್‌ಫಾನ್ ಗೋತ್ರದವರ
ಸಂಧಿಸುತ್ತಾರೆ. ಸ್ವಲ್ಪ ಚರ್ಚೆಯ ಬಳಿಕ ಅವರನ್ನೂ ತಮ್ಮೆಡೆಗೆ ಸೆಳೆಯುತ್ತಾ

ಈ ಪ್ರಕಾರ ಮಕ್ಕಾರ ಕುರೈಶ್ ಜನಾಂಗವನ್ನು ಅಬೂಸುಫಿಯಾನ್ ಒಟ್ಟುಗೂಡಿಸಿ , ಬನೀ ಗತ್‌ಫಾನ್ ಗೋತ್ರದವರನ್ನು ಉತ್ಸಾ ಸಜ್ಜುಗೊಳಿಸುತ್ತಾನೆ. ಕೆಲವೇ ಗಳಲ್ಲಿ ಆ ಎಲ್ಲ ಗೊತ್ರಗಳ ಒಟ್ಟು ಇಪ್ಪತ್ತನಾಲ್ಕು ಸಾವಿರ ಯೋಧರ ಬೃಹತ್ ೈವು ಮದೀನದ ಮೇಲೆ ಆಕ್ರಮಣ ಮಾಡಲು ಸಿದ್ಧವಾಗುತ್ತದೆ. ಈ ಸೇನೆಯನ್ನು ರು ವಿಭಾಗಳಾಗಿ ವಿಂಗಡಿಸಲಾಗುತ್ತದೆ. ಗತ್‌ಫಾನ್‌ನ ಸೇನೆಯನ್ನು ಐನ ಬಿನ್ ಖ್ ಫೈರೋಝಿ ಮುನ್ನಡೆಸುತ್ತಿದ್ದನು. ಬನೂ ಅಸದ್‌ನ ಸೇನೆಯು ತಲ್ಹಾನ ತೃತ್ವದಲ್ಲಿತ್ತು ಮತ್ತು ಇಡೀ ಸೇನೆಯ ದಂಡನಾಯಕನಾಗಿ ಅಬೂ ಸುಫಿಯಾನ್ ಂಚೂಣಿಯಲ್ಲಿದ್ದರು.

ಪ್ರವಾದಿವರ್ಯರಿಗೆ(ಸ) ಈ ಸೇನಾಕಾರ್ಯಾಚರಣೆಯ ಬಗ್ಗೆ ತಿಳಿದಾಗ ಸಭೆ ದರು. ಇಷ್ಟು ಬೃಹತ್ ಸೇನೆಯನ್ನು ದೇಹ ಬಲದಿಂದ ಎದುರಿಸುವ ಸ್ಥಿತಿಯಲ್ಲಿ ಮುಸ್ಲಿಮರಿರಲಿಲ್ಲ. ಅವರ ಬಳಿ ಅಷ್ಟು ಜನಬಲವೂ ಇದ್ದಿರಲಿಲ್ಲ. ಹಾಗಾಗಿ ಲ್ಮಾನ್ ಫಾರಸಿಯವರ ಸಲಹೆಯ ಮೇರೆಗೆ, ಮದೀನಾ ನಗರದ ಸುತ್ತ ಕಂದಕ ಡುವುದಾಗಿ ನಿರ್ಣಯಿಸಲಾಯಿತು. ಹೀಗೆ ತಲಾ ಹತ್ತು ಮಂದಿಯ ತಂಡಗಳನ್ನು ಸಿ ಪ್ರತಿಯೊಂದು ತಂಡಕ್ಕೂ ಹತ್ತು ಗಜಗಳಷ್ಟು ನೆಲದಲ್ಲಿ ಕಂದಕ ತೋಡಲು ಶಿಸಲಾಯಿತು. ಮಸ್ಜಿದುನ್ನಬವಿಯ ನಿರ್ಮಾಣ ಕಾರ್ಯದಲ್ಲಿ ಪ್ರವಾದಿ ರ್ಯರು(ಸ) ಕಾರ್ಮಿಕನಂತೆ ಪಾಲ್ಗೊಂಡಿದ್ದರು. ಈಗಲೂ ಅವರು(ಸ) ಕಂದಕ ಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತೀವ್ರ ಚಳಿಯ ರಾತ್ರಿಗಳು ಮತ್ತು ರು ದಿನಗಳು ಹೊಟ್ಟೆಗೆ ಹಿಟ್ಟಿಲ್ಲದೆ ಹಸಿದಿದ್ದರಿಂದಾಗ ಮುಸ್ಲಿಮರ ಬೆನ್ನು ುತ್ತಿತ್ತು. ಆಗ ಅವರು ಒಕ್ಕೊರಳಿನಿಂದ, “ನಾವು ಪ್ರವಾದಿವರ್ಯರಲ್ಲಿ(ಸ) ದೆಂದಿಗೂ ಜಿಹಾದ್ ಮಾಡುವ ಪ್ರತಿಜ್ಞೆಗೈದವರು” ಎಂಬ ಅರ್ಥ ಬರುವ ಪದ್ಯ ಾಡುತ್ತಿದ್ದರು.

ಕುರೈಶ್ ಸೇನೆಯನ್ನು ಮುನ್ನಡೆಸುವ ಹೊಣೆಯು ಖ್ಯಾತ ಸೇನಾದಂಡನಾಯಕರು ದ ಅಬೂಸುಫಿಯಾನ್, ಖಾಲಿದ್ ಬಿನ್ ವಲೀದ್, ಅಮ್ರ್ ಬಿನ್ ಆಸ್, ರಾರ್ ಬಿನ್ ಖತ್ತಾಬ್ ಮತ್ತು ಹಬೀಬ್ ಬಿನ್ ಅಬೀ ವಹಬ್‌ರ ಹೆಗಲ ಲಿತ್ತು. ಪ್ರತಿಯೊಬ್ಬ ದಂಡನಾಯಕನೂ ಸರದಿ ಪ್ರಕಾರ, ಕಂದಕವನ್ನು ದಾಟಲು ುತ್ನಿಸುತ್ತಿದ್ದರು.

ುದ್ಧ ರಂಗದಿಂದ ಪಲಾಯನ

ಯುದ್ಧ ಆರಂಭವಾಗಿ, ತೀವ್ರತರ ದಾಳಿ-ಪ್ರತಿದಾಳಿ ನಡೆಯತೊಡಗಿತು. ಈ ೈ ನುಐಮ್ ಬಿನ್ ಮಸ್‌ಊದ್ ಸತ್ಯವಿಶ್ವಾಸ ಸ್ವೀಕರಿಸಿದ್ದರು. ಆದರೆ ಈ ಯ ಯಾರಿಗೂ ತಿಳಿದಿರಲಿಲ್ಲ. ಅವರು ಗತ್‌ಫಾನ್ ಗೋತ್ರದ ಓರ್ವ

ಸರದಾರರಾಗಿದ್ದರು. ಕುರೈಶ್ ಮತ್ತು ಯಹೂದ್ಯರೀರ್ವರಲ್ಲೂ ಗೌರವಾರ್ಹರ
ಗುರುತಿಸಲ್ಪಡುತ್ತಿದ್ದ ಅವರು ಯಹೂದಿ ಮತ್ತು ಕುರೈಶ್ ಗೋತ್ರಗಳ ನಡ
ಒಡಕನ್ನುಂಟು ಮಾಡುತ್ತಾರೆ. ಕುರೈಶರು ಒಂದು ವೇಳೆ ಉಹುದ್ ಯುದ್ಧ
ಮಾಡಿದಂತೆ ಈಗಲೂ ಯುದ್ಧ ನಡೆಯುತ್ತಿದ್ದಾಗಲೇ ಪಲಾಯನ ಮಾಡಿ
ನಿಮಗೆ ಉಳಿಗಾಲವಿಲ್ಲವೆಂದು ಯಹೂದಿಯರನ್ನು ಬೆದರಿಸುತ್ತಾರೆ.

ಇನ್ನೊಂದೆಡೆ ಚಳಿಯ ತೀವ್ರತೆಯು ಹೆಚ್ಚುತ್ತಿರುವುದನ್ನು ಕಂಡು ಕುರೈ
ಪೈಕಿ ಇಕ್ರಿಮ ಬಿನ್ ಅಬೂ ಜಹಲ್‌ರು ಯಹೂದ್ಯರನ್ನು ಸಂಧಿಸಿ, "ಇ
ಚಳಿಯನ್ನು ನಮಗೆ ತಡೆಯಲಾಗುತ್ತಿಲ್ಲ. ಆದ್ದರಿಂದ ನಾಳೆಯೇ ನಿರ್ಣಾಯಕ ದ
ನಡೆಸಿ ಬಿಡೋಣ" ಎನ್ನುತ್ತಾರೆ. ಆಗ ಯಹೂದಿಯರ ಸರದಾರ ಕಅಬ್ ಬಿ
ಅಸದ್ ಉಹುದ್ ಯುದ್ಧದ ಫಲಿತಾಂಶವನ್ನು ನೆನಪಿಸುತ್ತಾ, "ನಿಮ್ಮ ಕೇ
ಮಂದಿಯನ್ನು ನಮ್ಮ ಬಳಿ ಒತ್ತೆಯಾಳುಗಳಾಗಿ ಇರಿಸಿರಿ" ಎಂಬ ಬೇಡಿಕೆಯನ್ನಿಡುತ
ಇದನ್ನು ಕೇಳಿ ಇಕ್ರಿಮ ಕೆಂಡಾಮಂಡಲರಾಗಿ ಮರಳುತ್ತಾರೆ.

ಈ ರೀತಿ ಮಾನಸಿಕವಾಗಿ ಗೊಂದಲಕ್ಕೀಡಾದ ಶತ್ರು ಸೇನೆಯ ಮೇಲೆ ತಿ
ಚಳಿ ಮತ್ತು ಬಿರುಗಾಳಿಯ ರೂಪದಲ್ಲಿ ಆಪತ್ತೆರಗುತ್ತದೆ. ಅವರ ಆಹಾರ ಧಾನ್ಯ
ಚೆಲ್ಲಾಪಿಲ್ಲಿಯಾಗಿ ಬಿಡುತ್ತದೆ, ಡೇರೆಗಳು ಕಿತ್ತು ಹೋಗುತ್ತವೆ, ಸವಾರಿಯ ಜಾನುವಾರು
ಸಾಯತೊಡಗುತ್ತವೆ... ಕುರೈಶರ ಧೈರ್ಯ ಉಡುಗಿ ಹೋಗುತ್ತದೆ. ಈ ಸ್ಥಿತಿಯ
ಅಬೂಸುಫಿಯಾನ್ ತಮ್ಮ ಜನರನ್ನು ಸೇರಿಸಿ, "ಯೋಧರೇ! ಆಹಾರ ಸಾ
ಮುಗಿಯುತ್ತಾ ಬಂದಿದೆ. ಜತೆಗೆ ಈ ಕೆಟ್ಟ ಬಿರುಗಾಳಿ... ಮೇಲಾಗಿ ಯಹೂದಿಯ
ನಮಗೆ ಮೋಸ ಮಾಡುವ ಎಲ್ಲ ಸೂಚನೆಗಳೂ ಕಾಣುತ್ತಿವೆ. ಇನ್ನು ಮು
ಮುಂದುವರಿಸುವುದು ಅಸಾಧ್ಯ" ಎಂದು ಹೇಳಿ ಮರಳುವ ಘೋಷಣೆ ಮಾಡುತ
ಗತ್‌ಫಾನ್ ಗೋತ್ರಜರೂ ಅವರೊಡನೆ ಸೇರುತ್ತಾರೆ. ಇವರು ಮರಳುವುದ
ಕಂಡು ಯಹೂದ್ಯರೂ ತಮ್ಮ ಕೋಟೆಗಳೆಡೆಗೆ ಪಲಾಯನ ಮಾಡುತ್ತಾರೆ. ಈ ಪ್ರ
ಬೃಹತ್ ಸೈನ್ಯದ ಹೊರತಾಗಿಯೂ ಅವರ ಹೀನ ಉದ್ದೇಶ ಈಡೇರದೆ ಹೋಗುತ್

ಹರ್ಕ್ಯುಲಿಸ್‌ನ ದರಬಾರಿನಲ್ಲಿ

ಹಿಜರಿ 6ರಲ್ಲಿ ಪ್ರವಾದಿವರ್ಯರು(ಸ) ನೆರೆರಾಷ್ಟ್ರಗಳ ರಾಜ ಮಹಾರಾಜಂದಿ
ಸತ್ಯ ಸಂದೇಶ ಹೊತ್ತ ಪತ್ರಗಳನ್ನು ರವಾನಿಸಿದರು. ಆ ಪೈಕಿ ಒಂದು
ರೋಮ್‌ನ ದೊರೆ ಹರ್ಕ್ಯುಲಿಸ್‌ನ ಹೆಸರಿಗಿತ್ತು. ಹರ್ಕ್ಯುಲಿಸ್, ಪ್ರವಾದಿವರ್ಯರ
ಕುರಿತು ಮಾಹಿತಿ ಸಂಗ್ರಹಿಸಬಯಸಿದನು. ಆ ಸಂದರ್ಭದಲ್ಲಿ ಮಕ್ಕಾದ ಕುರೈ
ಒಂದು ವ್ಯಾಪಾರಿ ತಂಡವು ಸಿರಿಯದಲ್ಲಿ ಬೀಡು ಬಿಟ್ಟಿತ್ತು. ಹರ್ಕ್ಯುಲಿಸನು

ಾರಿ ತಂಡವನ್ನು ತನ್ನ ಬಳಿಗೆ ಕರೆಸಿಕೊಂಡನು. ಜತೆಗೆ ಸಾಮ್ರಾಜ್ಯದಾದ್ಯಂತದ ತ್ರಿಗಳನ್ನು ಕರೆಸಿ, ಎಲ್ಲರನ್ನು ಸಾಕ್ಷ್ಯವಿರಿಸಿಕೊಂಡೇ ಪ್ರಶ್ನಿಸತೊಡಗಿದನು,

"ನಿಮ್ಮಲ್ಲಿ ಮುಹಮ್ಮದ್‌ರ(ಸ) ಸಂಬಂಧಿಕರು ಯಾರಿದ್ದಾರೆ?"

ಆಗ ಅಬೂ ಸುಫಿಯಾನ್ ಮುಂದೆ ಬಂದು "ನಾನವರ ಸಂಬಂಧಿಕ" ರು.

ಹರ್ಕ್ಯುಲಿಸನು ಅವರನ್ನು ತನ್ನ ಬಳಿಯೇ ಕುಳ್ಳಿರಿಸಿದನು. ಬಳಿಕ ನೆರೆದವರೊಡನೆ, ಿ ಇವರೊಡನೆ ಕೆಲವು ಪ್ರಶ್ನೆ ಕೇಳುವೆನು. ಇವರೊಂದು ವೇಳೆ ಏನಾದರೂ ಮಾಹಿತಿ ನೀಡಿದರೆ ನೀವು ತಡೆಯಬೇಕು, ಎಂದು ಹೇಳಿದನು."

ತರುವಾಯ ಅಬೂ ಸುಫಿಯಾನರೆಡೆಗೆ ಹೊರಳಿ ಕೇಳಿದ, "ಕುರೈಶರಲ್ಲಿ ಮ್ಮದ್‌ರದು ಯಾವ ತರದ ವಂಶವಾಗಿದೆ?"

"ತುಂಬಾ ಕುಲೀನವಾದ ವಂಶ" ಅಬೂ ಸುಫಿಯಾನ್ ಉತ್ತರಿಸುತ್ತಾರೆ.

"ಅವರ ವಂಶದಲ್ಲಿ ಅವರಿಗಿಂತ ಮುಂಚೆ ಯಾರಾದರೂ ಪ್ರವಾದಿತ್ವವನ್ನು ಂದಿಸಿದ್ದಾರೆಯೇ?"

"ಇಲ್ಲ."

"ಅವರ ಅನುಯಾಯಿಗಳು ಬಲಾಢ್ಯರೋ ಅಥವಾ ದುರ್ಬಲರೋ?"

"ದುರ್ಬಲರು."

"ಅವರ ಸಂಘಟನೆಯು ಬೆಳೆಯುತ್ತಿದೆಯೇ ಅಥವಾ ಕುಂಠಿತವಾಗುತ್ತಿದೆಯೇ?"

"ಬೆಳೆಯುತ್ತಿದೆ."

"ಯಾರಾದರೂ ಅವರ ಧರ್ಮ ಸ್ವೀಕರಿಸಿದ ಬಳಿಕ ಅದನ್ನು ತೊರೆದಿದ್ದಾರೆಯೇ?"

"ಇಲ್ಲ."

"ಅವರ ಮತ್ತು ನಿಮ್ಮ ನಡುವೆ ಯುದ್ಧ ನಡೆದಿದೆಯೇ?"

"ಹೌದು, ನಡೆದಿದೆ."

"ಯುದ್ಧದ ಪರಿಣಾಮವೇನಾಗುತ್ತಿತ್ತು?"

"ಒಮ್ಮೆ ಅವರು ಮೇಲುಗೈ ಸಾಧಿಸಿದರೆ, ಇನ್ನೊಮ್ಮೆ ನಾವು ಜಯಗಳಿಸುತ್ತಿದ್ದೆವು."

"ಅವರು ನಿಮಗೆ ಯಾವ ವಿಷಯಗಳನ್ನು ಬೋಧಿಸುತ್ತಾರೆ?"

"ಏಕದೇವನ ಆರಾಧನೆ ಮಾಡಬೇಕು, ಅವರ ದಾಸ್ಯಾರಾಧನೆಯಲ್ಲಿ ಇತರ

ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬಾರದು, ನಿಮ್ಮ ಪೂರ್ವಜರ ಧ ವಿಧಾನವನ್ನು ತೊರೆಯಿರಿ, ನಮಾಝ್ ನಿರ್ವಹಿಸಿರಿ, ದಾನ ಧರ್ಮ ಮಾ ಪರಸ್ಪರ ಸದ್ವರ್ತನೆ ತೋರಿರಿ, ಪಾಪಗಳಿಂದ ದೂರವಿರಿ ಎಂಬಿತ್ಯಾದಿ ಬೋ ನೀಡುತ್ತಾರೆ."

ಪ್ರವಾದಿವರ್ಯರ(ಸ) ಕುರಿತು ಯಾರೇ ಆಗಲಿ ಒಳ್ಳೆಯ ಮಾತುಗ ಹೇಳಲು ಮುಂದಾದರೆ, ಅದಕ್ಕೆ ಅಬೂ ಸುಫಿಯಾನ್ ಅಡ್ಡಿಯಾಗುತ್ತಿದ್ದರು. ಪ್ರ ವರ್ಯರ(ಸ) ಒಳಿತುಗಳು ಪ್ರಚಾರವಾಗದಂತೆ ನೋಡಿಕೊಳ್ಳುತ್ತಿದ್ದರು. ಅ ಕಡುವೈರಿಯಾಗಿದ್ದರು ಅವರು. ಇನ್ನೊಂದು ಬಗೆಯ ದ್ವೇಷವೂ ಅವರ ಪ್ರೀತಿಯ ಮಗಳು ರಮ್ಲಾ ಮತ್ತು ಅಳಿಯ ಉಬೈದುಲ್ಲಾ ಇಸ್ಲಾಮ್ ಸ್ವೀಕರಿ ಇದು ಮದೀನಾ ವಲಸೆಗಿಂತ ಎಂಟು-ಹತ್ತು ವರ್ಷಗಳಷ್ಟು ಹಿಂದೆ ನಡೆದ ಘ ಯಾಗಿತ್ತು.

ತನ್ನ ಮನೆಯಲ್ಲೇ ಇಸ್ಲಾಮಿಗೆ ಮಾನ್ಯತೆ ದೊರೆಯುತಿರುವುದು ಕಂಡು ಸುಫಿಯಾನ್ ಹೌಹಾರಿದ್ದರು. ಮಗಳನ್ನು ಸತ್ಯ ಧರ್ಮ ತೊರೆಯುವಂತೆ ತರದ ಆಮಿಷಗಳನ್ನೊಡ್ಡಿದರು. ಆದರೆ ಸತ್ಯವನ್ನು ಮನಸಾರೆ ಅರಿತು ಅದರ ವಿಶ್ವಾಸ ತಾಳಿದವರು ಯಾವ ಭೌತಿಕ ಆಮಿಷಕ್ಕೂ ಬಲಿ ಬೀಳಲಾರರೆಂಬ ರಮ್ಲಾ ಸ್ಪಷ್ಟ ಉದಾಹರಣೆಯಾದರು. ಹೀಗೆ ಇಸ್ಲಾಮಿನ ಕಡು ವೈ ಕುಟುಂಬದಲ್ಲೇ ಇಸ್ಲಾಮ್ ಬೆಳೆಯ ತೊಡಗಿತು. ತರುವಾಯ ಮುಸ್ಲಿಮರ ವಿರೋಧಿಗಳ ಕಿರುಕುಳ ಮಿತಿಮೀರಿದಾಗ ಇತಿಯೋಪಿಯಕ್ಕೆ ವಲಸೆ ಹೋ ಪ್ರವಾದಿವರ್ಯರಿಂದ ಅನುಮತಿ ದೊರೆಯಿತು. ಹೀಗೆ ವಲಸೆ ಹೋದ ಎರಡ ತಂಡದ ಜತೆ ರಮ್ಲಾ-ಉಬೈದುಲ್ಲಾ ದಂಪತಿ ಹೊರಟರು.

ಕೆಲವು ತಿಂಗಳಲ್ಲಿ ಅವರಿಗೆ ಹೆಣ್ಣು ಮಗು ಹುಟ್ಟುತ್ತದೆ. ಹಬೀಬಾ ಹೆಸರಿಡುತ್ತಾರೆ. ಆ ಬಳಿಕ ಅವರು ಅರಬ್ ಸಂಪ್ರದಾಯದಂತೆ ಉಮ್ಮು ಹ ಎಂದು ಕರೆಯಲ್ಪಡುತ್ತಾರೆ. ಆದರೆ ಅವರ ಆಹ್ಲಾದಕರ ಜೀವನವು ಹೆಚ್ಚು ಬಾಳುವುದಿಲ್ಲ. ದುರದೃಷ್ಟವಶಾತ್, ಉಬೈದುಲ್ಲಾ ಇಸ್ಲಾಮ್ ತೊರೆದು ಕ್ರೈಸ್ತ ಸ್ವೀಕರಿಸುತ್ತಾರೆ. ಒಂದೆಡೆ ರಾಜ ನಜ್ಜಾಶಿಯು ಇಸ್ಲಾಮಿನ ಬೋಧನೆ ಪ್ರಭಾವಿತರಾಗಿ ತನ್ನ ರಾಜ್ಯದಲ್ಲಿ ಇಸ್ಲಾಮಿನ ಪ್ರಚಾರಕ್ಕೆ ಮುಕ್ತ ಅವಕಾಶ ಕೊಡು ಇನ್ನೊಂದೆಡೆ ಮಕ್ಕಾದಲ್ಲಿ ಸತ್ಯನಿಷೇಧಿಗಳ ನಡುವೆಯಿದ್ದೂ ಇಸ್ಲಾಮಿನ ಸಾರ್ವ ಬೋಧನೆಯನ್ನು ಸ್ವಇಚ್ಛೆಯಿಂದ ಸ್ವೀಕರಿಸಿ ಇತಿಯೋಪಿಯಕ್ಕೆ ವಲಸೆ ಉಬೈದುಲ್ಲಾ ಇಸ್ಲಾಮ್ ತೊರೆಯುತ್ತಾರೆ. ಇದಕ್ಕಿಂತ ಮಿಗಿಲಾದ ವಿಪರ ಬೇರೆನಿದ್ದೀತು?

ಆದರೆ ರಮ್ಲರ ಪಾಲಿಗೆ ಅದು ಮಹಾನ್ ಸೌಭಾಗ್ಯವಾಗಿ ಪರಿಣಮಿಸುತ್ತದೆ. ಯೋಪಿಯವೆಂಬ ಅಪರಿಚಿತ ನಾಡಿನಲ್ಲಿ, ಪತಿ ತೊರೆದು ಹೋದಾಗ ಪುಟ್ಟ ಮವಿನೊಂದಿಗೆ ಒಂಟಿ ಮಹಿಳೆ ಹೇಗೆ ಜೀವಿಸುವುದೆಂದು ಕಳವಳಗೊಂಡಿದ್ದಾಗಲೇ, ವಿಷಯವನ್ನು ತಿಳಿದುಕೊಂಡ ಪ್ರವಾದಿಯವರು(ಸ) ರಮ್ಲರನ್ನು ವಿವಾಹವಾಗುವ ಚ್ಛೆ ವ್ಯಕ್ತಪಡಿಸುತ್ತಾರೆ. ಹೀಗೆ ಅಮ್ರ್ ಬಿನ್ ಉಮಯ್ಯರ ಮೂಲಕ ಹೊರಟ ವಿವಾಹ ಪ್ರಸ್ತಾಪವು ಖಾಲಿದ್ ಬಿನ್ ಸಈದ್ ಮತ್ತು ಜಅ್‌ಫರ್ ಬಿನ್ ಅಬೀತಾಲಿಬ್‌ರ ಮಧ್ಯಸ್ಥಿಕೆಯಲ್ಲಿ ರಮ್ಲರ ಹೊಸ ಜೀವನಕ್ಕೆ ಮುನ್ನುಡಿಯಾಗುತ್ತದೆ. ಯ ತಿಳಿದ ಅಬೂ ಸುಫಿಯಾನ್ ಪ್ರತಿಕ್ರಿಯಿಸಿದ್ದು ಹೀಗೆ,

"ಅದೇನಿದ್ದರೂ ಮುಹಮ್ಮದ್ ಬಹಳ ಒಳ್ಳೆಯ ಮನುಷ್ಯ."

ಆದರೆ ಇಸ್ಲಾಮಿನ ಕಡು ವೈರಿ, ಪ್ರವಾದಿವರ್ಯರ ಸದ್ಗುಣಗಳ ಪ್ರಚಾರಕ್ಕೆ ಯಾಗುತ್ತಿದ್ದ ಒಬ್ಬ ವ್ಯಕ್ತಿಯಿಂದ ಇಂಥ ಪ್ರತಿಕ್ರಿಯೆ ವ್ಯಕ್ತವಾದುದಾದರೂ ಹೇಗೆ?

ಪ್ರವಾದಿವರ್ಯರ(ಸ) ಕುರಿತು ರೋಮ್‌ನ ದೊರೆ ಪ್ರಶ್ನಿಸಿದಾಗ ಅವರೊಡನೆ ವನ್ನೇ ನುಡಿಯಲು ಪ್ರೇರೇಪಿಸಿದ್ದಾದರೂ ಏನು? ಹಾಗೆಯೇ ಉಹುದ್ ದ್ಧದಲ್ಲಿ ಸ್ಪಷ್ಟ ವಿಜಯ ಮುಂದಿದ್ದರೂ ಯುದ್ಧರಂಗದಿಂದ ಓಡಿ ಹೋಗಲು ಣವಾದರೂ ಏನು? ಆತ್ಮಸಾಕ್ಷಿಯೆಂಬುದೇ ಉತ್ತರ. ಹೌದು, ಸತ್ಯವನ್ನು ವೆಂದು ತಿಳಿದಿದ್ದರೂ ಕುಲ ಮಹಿಮೆ, ಅಧಿಕಾರ ಮೋಹ ಅವರನ್ನು ಸತ್ಯವನ್ನು ಗೀಕರಿಸು ವುದರಿಂದ ತಡೆದಿತ್ತು.

ಬಳಿಕ ಪ್ರವಾದಿವರ್ಯರು(ಸ) ಮಕ್ಕಾದ ಮೇಲೆ ಮುತ್ತಿಗೆ ಹಾಕಿದಾಗ, ವರೆಗೂ ಮೊದಲು ಮುತ್ತಿಗೆ ಹಾಕುತ್ತಿದ್ದ ಈ ಕುರೈಶ್ ಸರದಾರ ಅಬೂ ಯಾನರು ಸ್ವಯಂ ತನ್ನನ್ನು ಪ್ರಶ್ನಿಸಲಾರಂಭಿಸುತ್ತಾರೆ. ಮುಹಮ್ಮದ್ ಅದು ಗೂ ಪ್ರತಿರೋಧದ ಯದ್ಧವನ್ನಷ್ಟೇ ಮಾಡಿದ್ದರು. ಎಲ್ಲ ಸಂದರ್ಭದಲ್ಲೂ ನಾವೇ ತ್ತಿಗೆ ಹಾಕಿದ್ದೆವು. ಈಗ ಅವರೇ ನಮ್ಮ ಮೇಲೆ ಮುತ್ತಿಗೆ ಹಾಕಲು ಬಂದಿದ್ದಾರೆಂದರೆ, ು ಇದುವರೆಗೂ ವಿರೋಧಿಸಿದ್ದು ತಪ್ಪಾಗಿತ್ತೇ? ಮುಹಮ್ಮದ್ ಸತ್ಯವಂತನೆಂದು ಗೆ ಹಿಂದೆಯೇ ತಿಳಿದಿರಲ್ಲವೇ? ಮುಹಮ್ಮದ್ ಪ್ರವಾದಿಯಲ್ಲದಿರುತ್ತಿದ್ದರೆ ಇಷ್ಟೆಲ್ಲ ನ್ಯವಿತ್ತೇ?

ಮನಸ್ಸಿನ ಸಂದೇಹಗಳು ಅಳಿಯುತ್ತಾ ಹೋಗಿ, ಆತ್ಮಸಾಕ್ಷಿ ಜಾಗೃತವಾದಾಗ ೂ ಸುಫಿಯಾನರು ಹ. ಅಬ್ಬಾಸ್‌ರ ಜತೆಗೂಡಿ ಪ್ರವಾದಿವರ್ಯರನ್ನು ಸಂಧಿಸುತ್ತಾರೆ ತ್ತು ಸತ್ಯವಚನವನ್ನು ಉಚ್ಚರಿಸುತ್ತಾರೆ. ಬಳಿಕ ಅಬ್ಬಾಸ್‌ರು(ರ), "ಅಬೂ ಯಾನರು ಬಹಳ ಸ್ವಾಭಿಮಾನಿ. ಅವರಿಗಾಗಿ ತಾವು ಪ್ರತ್ಯೇಕವಾದ ಆದೇಶ

ನೀಡಿರಿ" ಎಂದು ಪ್ರವಾದಿವರ್ಯರಲ್ಲಿ ವಿನಂತಿಸುತ್ತಾರೆ. ಈ ಪ್ರಕಾರ, "ಅಬ ಸುಫಿಯಾನರ ಮನೆಯೊಳಗೆ ಪ್ರವೇಶಿಸಿದರವರಿಗೆ ಅಭಯವಿದೆ. ತನ್ನ ಮನೆ ಬಾಗಿಲು ಮುಚ್ಚಿದವರಿಗೆ ಅಭಯವಿದೆ. ಮಸ್ಜಿದುಲ್ ಹರಮ್‌ನಲ್ಲಿ ಆಶ್ರ ಪಡೆದವರಿಗೂ ಅಭಯವಿದೆ" ಎಂದು ಪ್ರವಾದಿವರ್ಯರು ಘೋಷಿಸುತ್ತಾರೆ.

ಇಸ್ಲಾಮಿನ ಕಡುವೈರಿ, ತನ್ನ ಕೊಲೆಯ ಸಂಚಿನಲ್ಲಿಯೂ ಭಾಗಿಯಾದ ವ ಮದೀನದ ಮೇಲೆ ಆದ ಪ್ರಥಮ ಆಕ್ರಮಣದ ಭಾಗಿ, ಬಳಿಕದ ಯುದ್ಧಗ ಶತ್ರು ಸೇನೆಯ ದಂಡನಾಯಕ... ಇಷ್ಟೆಲ್ಲ ಅಪರಾಧ ವಿಶೇಷತಃ ಯುದ್ಧಾಪರಾ ಗಳನ್ನೆಸಗಿದ ಪ್ರಾಣ ಶತ್ರುವನ್ನು ಈ ರೀತಿ ಕ್ಷಮಿಸಿದ ಉದಾಹರಣೆ ನವ ಬೇರೆಲ್ಲಾದರೂ ದೊರೆತೀತೇ? ಬಳಿಕ ಇಸ್ಲಾಮಿನ ಕಟ್ಟಾ ಅನುಯಾಯಿಯ ಮಾರ್ಪಟ್ಟ ಅಬೂ ಸುಫಿಯಾನರು ನಂತರ ನಡೆದ ಹುನೈನ್ ಯುದ್ಧ ಭಾಗವಹಿಸಿದರು. ಪ್ರವಾದಿವರ್ಯರು(ಸ) ಅವರಿಗೆ ಸಮರಾರ್ಜಿತ ಸೊತ್ತಿ ನೂರು ಒಂಟೆಗಳನ್ನು ನೀಡಿದರು. ತಾಯಿಫ್‌ನ ಯುದ್ಧದಲ್ಲಿ ಪಾಲ್ಗೊಂಡು ತ ಒಂದು ಕಣ್ಣನ್ನು ಕಳೆದು ಕೊಂಡರು. ತರುವಾಯ ಬನೂ ಸಕೀಫ್‌ನ ವಿಗ್ರಹಗಳ ಒಡೆಯಲು ಹ. ಮುಗೀರಾ ಬಿನ್ ಶುಐಬ್‌ರೊಡನೆ ಕಳುಹಿಸಲ್ಪಟ್ಟರು.

ಹ. ಉಮರ್‌ರ(ರ) ಕಾಲದಲ್ಲಿ ಸಿರಿಯದ ಮೇಲೆ ಸೈನಿಕ ಕಾರ್ಯಾಚ ನಡೆಸಲಾಯಿತು. ಅದರಲ್ಲಿ ಅಬೂ ಸುಫಿಯಾನರು ಕುಟುಂಬ ಸಮೇತ ಪಾಲ್ಗೊಂಡ ಯರ್ಮೂಕ್ ಯುದ್ಧದಲ್ಲಂತೂ ವೀರಾವೇಶ ಮೆರೆದರು ಮತ್ತು ಮುಸ್ಲಿ ಯೋಧರನ್ನು ಹುರಿದುಂಬಿಸುವಲ್ಲಿ ಪ್ರಧಾನ ಪಾತ್ರ ವಹಿಸಿದರು. ಅವರ ಹಿಂದ್‌ರೂ ಅತ್ಯುತ್ಸಾಹದೊಂದಿಗೆ ಪಾಲ್ಗೊಂಡು ಸೈನಿಕರನ್ನು ಹುರಿದುಂಬಿಸಿದ ಈ ಯುದ್ಧದಲ್ಲಿ ಅಬೂ ಸುಫಿಯಾನರು ತಮ್ಮ ಇನ್ನೊಂದು ಕಣ್ಣನ್ನೂ ಕಳಕೊಂಡ ತೃತೀಯ ಖಲೀಫಾ ಹ. ಉಸ್ಮಾನ್‌ರ(ರ) ಆಡಳಿತ ಕಾಲದಲ್ಲಿ, ತಮ್ಮ 88 ವ ಪ್ರಾಯದಲ್ಲಿ ನಿಧನರಾದರು. ಖಲೀಫಾ ಉಸ್ಮಾನರೇ ಅವರ ಜನಾಝಾ ನಮಾಝ ನೇತೃತ್ವ ವಹಿಸಿದರು. ❑

ಹಮ್‌ಝರ(ರ) ಕರುಳು ಜಗಿದವರು!

ಪ್ರವಾದಿವರ್ಯರ(ಸ) ಪ್ರೀತಿಯ ಚಿಕ್ಕಪ್ಪ ಹ. ಹಮ್‌ಝರ(ರ) ಕರುಳು ಜಗಿ ಗುಳಿದವರು ಕ್ಷಮೆಗೆ ಅರ್ಹರು!? ಜಗಿದವರು ಬೇರಾರೂ ಅಲ್ಲ. ಅಬ ಸುಫಿಯಾನರ(ರ) ಪತ್ನಿ ಹಿಂದ್! ಅಷ್ಟೆಲ್ಲ ಯೋಧರು ಹುತಾತ್ಮರಾಗಿ ಬಿದ್ದಿರುವ ಅವರಾರ ಪಾರ್ಥಿವ ಶರೀರವನ್ನೂ ಮುಟ್ಟದೆ ಹಮ್‌ಝರ ದೇಹವನ್ನು ಸಿ ಈ ರೀತಿಯ ಸೇಡು ತೀರಿಸಿಕೊಳ್ಳಲು ಕಾರಣವೇನಿತ್ತು? ಘಟನೆಯ ಹಿನ್ನೆಲೆಯ

ಯಲು ಪುನಃ ಬದ್ರ್ ಯುದ್ಧದ ಸನ್ನಿವೇಶಕ್ಕೆ ಮರಳಬೇಕಾಗುತ್ತದೆ.

ಹಿಜರಿ 2ರ ರಮಝಾನ್ ತಿಂಗಳ ಹದಿನೇಳನೆಯ ತಾರೀಕು. ಬದ್ರ್‌ನ ಂಗಣ. ಕುರೈಶ್ ಸರದಾರರುಗಳ ಸಾವಿರಕ್ಕೂ ಮಿಕ್ಕಿದ ಯೋಧರನ್ನೊಳಗೊಂಡ ಜ್ಜಿತ ಸೇನೆ ಮತ್ತು ಮುನ್ನೂರ ಹದಿಮೂರು ಮಂದಿಯಿದ್ದ ಆವಶ್ಯಕ ಯುದ್ಧ ಾಗ್ರಿಗಳಿಲ್ಲದ ಮುಸ್ಲಿಮ್ ಸೇನೆ ಮುಖಾಮುಖಿಯಾಗಿವೆ. ಹಿಂದ್‌ರ ಪಿತ ಉತ್ಬಾ, ಕ್ಕದ ಸತ್ಯ ನಿಷೇಧಿಗಳ ಸೇನೆಯ ಸರದಾರನಾಗಿದ್ದನು. ಅಬೂ ಜಹಲನ ಕುಮ್ಮಕ್ಕಿ ಾಗಿ ಉತ್ಬಾ ತನ್ನ ಸಹೋದರ ಮತ್ತು ಮಗನೊಂದಿಗೆ ಯುದ್ಧ ರಂಗಕ್ಕಳಿದನು ೂ ಮುಸ್ಲಿಮರಿಗೆ ಪಂದ್ಯಾಹ್ವಾನ ನೀಡಿದನು. ಅರಬ್ ಸಂಪ್ರದಾಯದಂತೆ ಾರರು ಪ್ರತ್ಯೇಕವಾಗಿ ಗುರುತಿಸಿಸಲ್ಪಡಲಿಕ್ಕಾಗಿ ಏನಾದರೂ ವಿಶಿಷ್ಟ ಚಿಹ್ನೆಯನ್ನು ವಸ್ತ್ರದಲ್ಲಿ ಇರಿಸಿಕೊಳ್ಳುತ್ತಿದ್ದರು. ಆ ಪ್ರಕಾರ ಉತ್ಬಾ ಉಷ್ಟ್ರ ಪಕ್ಷಿಯ ರೆಕ್ಕೆಯನ್ನು ದ್ಧ ಕವಚದ ಎದೆಯ ಭಾಗದಲ್ಲಿ ಕಟ್ಟಿಕೊಂಡಿದ್ದನು.

ಆ ಮೂವರನ್ನು ಎದುರಿಸಲು ಅಬ್ದುರ್ರಹ್ಮಾನ್ ಬಿನ್ ಹ. ಔಫ್, ಮಆಝ್ ಜಬಲ್ ಮತ್ತು ಅಬ್ದುಲ್ಲಾ ಬಿನ್ ರವಾಹ(ರ) ಮುಂದೆ ಬರುತ್ತಾರೆ. ಅವರು ವರೂ ಮದೀನದ ಅನ್ಸಾರರೆಂದು ತಿಳಿದಾಗ ಉತ್ಬಾ, "ನಾವು ನಿಮ್ಮನ್ನು ರಿಸುವುದಿಲ್ಲ" ಎನ್ನುತ್ತಾ ಪ್ರವಾದಿವರ್ಯರೆಡೆಗೆ, "ಮುಹಮ್ಮದ್! ಇವರು ಗೆ ತಕ್ಕವರಲ್ಲ" ಎಂದು ಮೂದಲಿಸುತ್ತಾನೆ.

ಪ್ರವಾದಿವರ್ಯರು(ಸ) ಕೈಸನ್ನೆಯಿಂದ ಅನ್ಸಾರರನ್ನು ಹಿಂದಕ್ಕೆ ಕರೆಸುತ್ತಾರೆ. ಮುಹಾಜಿರರ ಪೈಕಿ ಹ. ಹಮ್‌ಝಾ, ಅಲೀ ಮತ್ತು ಉಬೈದಾ(ರ) ದಡಿಯಿಡುತ್ತಾರೆ. ಆಗ ಉತ್ಬಾ, "ಸರಿ, ಇವರು ನಮಗೆ ತಕ್ಕವರು" ಎಂದು ರಿಸುತ್ತಾನೆ. ಈ ಮೂಲಕ ಕುರೈಶ್‌ರನ್ನು ಕುರೈಶರೇ ಎದುರಿಸುವಂತಾಗುತ್ತದೆ. ಮುಂದುವರಿದ ಹಮ್‌ಝಾರ ಒಂದೇ ಏಟಿಗೆ ಉತ್ಬಾ ಧರಾಶಾಯಿಯಾಗುತ್ತಾನೆ. ಇಬ್ಬರೂ ಹತರಾಗುತ್ತಾರೆ. ಈ ಯುದ್ಧದಲ್ಲಿ ಅಬೂಜಹಲ್ ಮಹಾ ಪರಾಕ್ರಮಿ ಗಿದ್ದರೂ ನವತರುಣರಾದ ಮುಆದ್ ಮತ್ತು ಮಊದ್‌ರಿಂದ ಪೆಟ್ಟು ತಿಂದು ಯುತ್ತಾನೆ. ಆತನ ತಲೆ ಕಡಿದು ಪ್ರವಾದಿವರ್ಯರ ಮುಂದೆ ತಂದಾಗ, "ಈತ ಜನಾಂಗದ ಫಿರ್‌ಔನ್ ಆಗಿದ್ದ. ಸತ್ಯ ನಿಷೇಧವೆಂಬ ಸೌಧದ ಮುಕುಟವಾಗಿದ್ದ" ು ಪ್ರತಿಕ್ರಿಯಿಸುತ್ತಾರೆ.

ಯುದ್ಧದಲ್ಲಿ ಉತ್ಬಾ, ವಲೀದ್, ಶೀಬಾ, ಅಬೂ ಜಹಲ್ ಮತ್ತಿತರ ಕ್ರಮಿಗಳ ಹೀನಾಯ ಅಂತ್ಯವನ್ನು ಕಂಡು ಸತ್ಯನಿಷೇಧಿಗಳು ಹಿಮ್ಮೆಟ್ಟುತ್ತಾರೆ. ರ್ಯ ಅಸ್ತಮಿಸುವುದಕ್ಕೆ ಮುಂಚೆಯೇ ಶತ್ರುಪಡೆ ಪಲಾಯನಗೈಯುತ್ತದೆ. ಇದಕ್ಕೆ ಕಾರವಾಗಿ ಮರುವರ್ಷ ಮಕ್ಕಾದ ಸತ್ಯನಿಷೇಧಿಗಳು ಪುನಃ ಮದೀನವನ್ನು

ಆಕ್ರಮಿಸಲು ಮುಂದಾಗುತ್ತಾರೆ. ಈ ವಿಷಯ ತಿಳಿದು ಬಂದಾಗ ಒ ಸಾವಿರದಷ್ಟು ಮುಸ್ಲಿಮ್ ಯೋಧರು ಉಹುದ್ ಬೆಟ್ಟಗಳ ಕಣಿವೆಯಲ್ಲಿ ತಮ ಮುಪ್ಪಟ್ಟು ಸಂಖ್ಯೆಯಲ್ಲಿದ್ದ ಸತ್ಯನಿಷೇಧಿಗಳನ್ನು ಎದುರಿಸುತ್ತಾರೆ.

ಉಹುದ್ ಯುದ್ಧದಲ್ಲಿ ಹಮ್‌ಝಾ, ಅಬೂ ದುಜಾನಾ ಮತ್ತು ಅಲೀ ಶತ್ರು ಸೇನೆಯೊಳಗೆ ನುಗ್ಗಿ ವೀರಾವೇಶದಿಂದ ಹೋರಾಡುತ್ತಾರೆ. ಒಂದೆಡೆ ಅ ದುಜಾನರು(ರ) ಶತ್ರು ಯೋಧರ ಮೇಲೆ ಮುಗಿ ಬಿದ್ದು ಹೆಣಗಳನ್ನುರುಳಿಸ ಸಾಗುತ್ತಾರೆ. ಅಷ್ಟರಲ್ಲಿ ಕುರೈಶರ ಸೇನಾದಂಡನಾಯಕ ಅಬೂ ಸುಫಿಯಾನರ ಹಿಂದ್ ಎದುರಾಗುತ್ತಾರೆ. ಅವರನ್ನೂ ಹೊಡೆಯಲು ಖಡ್ಗವೆತ್ತಿದ ಅಬೂದುಜಾ ತಕ್ಷಣವೇ ಹಿಂದಡಿಯಿಟ್ಟು, "ಪ್ರವಾದಿವರ್ಯರ(ಸ) ಖಡ್ಗವು ಒಂದು ಹೆಣ್ಣಿನ ವ ಚಲಾಯಿಸಲ್ಪಡದು" ಎಂದು ಹೇಳುತ್ತಾ ಮರಳುತ್ತಾರೆ. ಹಿಂದ್ ಬದುಕಿದೆ ಬಡಜೀವವೇ ಎಂದುಕೊಳ್ಳುತ್ತಾ ಓಡಿ ಕುರೈಶ್ ಸೇನೆಯ ಆಯಕಟ್ಟಿನ ಜಾಗ ಹೋಗಿ ಸೇರುತ್ತಾರೆ.

ಹಿಂದ್ ಈ ಯುದ್ಧದಲ್ಲಿ ಯೋಧರ ಶುಶ್ರೂಷೆಗಾಗಿ ಬಂದಿರಲಿಲ್ಲ ಅ ಪತಿಯ ಮೇಲಿನ ಅಭಿಮಾನದಿಂದಲೂ ಆಗಿರಲಿಲ್ಲ. ಬದಲಾಗಿ, ಸತ್ಯನಿಷೇಧಿ ಯುದ್ಧೋನ್ಮಾದ ಹೆಚ್ಚಿಸಲು ಮತ್ತು ಮಡಿದು ಬಿದ್ದ ಮುಸ್ಲಿಮ್ ಯೋಧರ ದೇಹಗಳನ್ನು ವಿರೂಪಗೊಳಿಸಲಿಕ್ಕೆ ಬಂದಿದ್ದರು. ಇಂತಹ ಕೃತ್ಯ ಸತ್ಯ ನಿಷೇಧಿ ಅತೀವ ಆನಂದವನ್ನು ನೀಡುತ್ತಿತ್ತು. ಈ ರೂಪದಲ್ಲೂ ಇಸ್ಲಾಮಿನ ಕುರಿತಾದ ರೋಷವನ್ನು ಪ್ರಕಟಿಸಲಾಗುತ್ತಿತ್ತು.

ಇನ್ನೊಂದೆಡೆ ಹಮ್‌ಝಾ(ರ) ಶತ್ರುಪಾಳಯದ ಪರಾಕ್ರಮಿಗಳನ್ನೇ ಹೆಕ್ಕಿ ವಧಿಸುತ್ತಿದ್ದರು. ಈ ರೀತಿ ಹೆಚ್ಚು ಹೊತ್ತು ಕಳೆಯದೆ, ಘೋರ ಘರ್ಜನೆಯೊ ಬಂದಿದ್ದ ಕುರೈಶ್ ಸೇನೆಯು ಮೈದಾನ ಬಿಟ್ಟು ಓಟಕ್ಕೀಳುತ್ತದೆ. ಯುದ್ಧ ಜಯಿ ಮುಸ್ಲಿಮರು ಸಮರಾರ್ಜಿತ ಸೊತ್ತನ್ನು ವಶಪಡಿಸುವ ಭರಾಟೆಯಲ್ಲಿದ್ದಾಗ, ಶಾಲಿಯಾದ ಅಬೂಸುಫಿಯಾನ್ ಮತ್ತು ಖಾಲಿದ್ ಬಿನ್ ವಲೀದ್‌ರು ವ ಮುಸ್ಲಿಮರ ಮೇಲೆ ದಾಳಿಯಿಡುತ್ತಾರೆ. ಇದರಿಂದ ಗೊಂದಲಕ್ಕೀಡಾದ ಮುಸ್ಲಿ ಸೇನೆಯು ಸೋಲಿನ ಅಂಚಿಗೆ ತಲಪುತ್ತದೆ.

ಈ ಸಂದಿಗ್ಧತೆ ಮತ್ತು ಗೊಂದಲದ ನಡುವೆ ಹ. ಹಮ್‌ಝಾ(ರ) ಅರ್ ಬಿನ್ ಶಬೇಶಲ್‌ನನ್ನು ವಧಿಸಿ ಸಬಾಅ್ ಗಸ್ಸಾನಿಯ ಕಡೆಗೆ ಧಾವಿಸುತ್ತಿ ಯುದ್ಧಾವೇಶದಲ್ಲಿ ಅವರಿಗೆ ಪರಿಸರದ ಬಗ್ಗೆ ಗಮನವಿರಲಿಲ್ಲ. ದೂರದಲ್ಲಿ ಜು ಬಿನ್ ಮುತ್‌ಇಮ್‌ನ ಗುಲಾಮ ವಹ್‌ಶೀ ಬಂಡೆಗಲ್ಲೊಂದರ ಮರೆಯಲ್ಲಿ ನಿ ಹಮ್‌ಝರೆಡೆಗೇ ದೃಷ್ಟಿನೆಟ್ಟಿದ್ದಾನೆ. ಆತ ಒಳ್ಳೆಯ ಗುರಿಕಾರ. ಹಮ್‌ಝರ

ಯಾಗಿ ಜೀತವಿಮೋಚನೆಯ ವಾಗ್ದಾನವನ್ನು ಆತ ತನ್ನೊಡೆಯನಿಂದ ಪಡೆದಿದ್ದನು. ಹ. ಹಮ್‌ಝ ಸಬಾಅ್‌ನನ್ನು ವಧಿಸಿ ಮುಂದುವರಿಯುವಾಗ ವಹ್‌ಶೀ ಯಲ್ಲಿದ್ದುಕೊಂಡೇ ಭರ್ಚಿಯನ್ನು ಎಸೆಯುತ್ತಾನೆ. ಅದು ಹಮ್‌ಝರ ನಾಭಿಯ ಯಿಂದ ಹೊಕ್ಕು ಬೆನ್ನಿನಿಂದ ಹೊರಬರುತ್ತದೆ. ಈ ಪೆಟ್ಟಿನಿಂದ ತೀವ್ರವಾಗಿ ರಿತರಾದ ಹಮ್‌ಝಾ ಕುಸಿದು ಬೀಳುತ್ತಾರೆ. ಅವರ ಪ್ರಾಣ ಪಕ್ಷಿ ಹಾರುವು ೀ ಕಾಯುತ್ತಿದ್ದ ವಹ್‌ಶೀ ಓಡಿ ಹೋಗಿ ಯಜಮಾನನಿಗೆ ತಿಳಿಸುತ್ತಾನೆ. ೋಷಗೊಂಡ ಜುಬೈರ್ ಕೂಡಲೇ ವಹ್‌ಶಿಯನ್ನು ವಿಮೋಚಿಸಿ ಬಿಡುತ್ತಾನೆ.

ಇನ್ನೊಂದೆಡೆ ಹಿಂದ್ ಮತ್ತು ಅವರ ಸಂಗಡಿವಿದ್ದ ಕುರೈಶ್ ಸ್ತ್ರೀಯರು ಸ್ಲಿಮರ ಮೃತ ದೇಹಗಳ ಕಿವಿ, ಮೂಗುಗಳನ್ನು ತುಂಡರಿಸುತ್ತಾ ಸಾಗುತ್ತಿದ್ದಾರೆ. ಮುಂದುವರಿಯುವಾಗ ಹಮ್‌ಝರ ಪಾರ್ಥಿವ ಶರೀರ ಕಂಡು ಹಿಂದ್‌ರಲ್ಲಿ ಚ್ಚ ಆವೇಶ ಉಕ್ಕುತ್ತದೆ. ಆಕೆ, ಹಮ್‌ಝರ ಕಿವಿ, ಮೂಗುಗಳನ್ನು ಕತ್ತರಿಸಿದ್ದಲ್ಲದೆ ಟ್ಟೆ ಸೀಳಿ ಕರುಳು ಹೊರ ತೆಗೆದು ಕೊರಳಿಗೆ ಹಾರದಂತೆ ಹಾಕುತ್ತಾರೆ ಮತ್ತು ನ್ನು ಜಗಿ ಜಗಿದು ಉಗುಳುತ್ತಾರೆ. ಅವರ ಈ ರೌದ್ರಾವತಾರ ಕಂಡು ಸಂಗಡ ವರು ಹೌಹಾರುತ್ತಾರೆ. ಆದರೆ ಹಿಂದ್‌ರಿಗೆ ತನ್ನ ತಂದೆಯನ್ನು ಕೊಂದ ್‌ಝರಲ್ಲಿ ಎಷ್ಟು ಸೇಡಿತ್ತೆಂಬುದು ಇತರರಿಗೆ ತಿಳಿಯುವುದಾದರೂ ಹೇಗೆ? ಈ ರ ಹಿಂದ್, ಸಂತೋಷಾತಿರೇಕದಿಂದಾಗಿ ತನ್ನಲ್ಲಿದ್ದ ಒಡವೆಗಳನ್ನೆಲ್ಲ ವಹ್‌ಶಿಗೆ ುತ್ತಾರೆ.

ಹಮ್‌ಝಾ ಹುತಾತ್ಮರಾದ ಸುದ್ದಿ ತಿಳಿದಾಗ ಅವರ ಸಹೋದರಿ ಸಫಿಯ್ಯರು(ರ) ದ್ಧ ರಂಗದೆಡೆಗೆ ಧಾವಿಸುತ್ತಾರೆ. ಆಗ ಪ್ರವಾದಿವರ್ಯರು(ಸ) ಸಫಿಯ್ಯರ ಪುತ್ರ ಬೈರ್‌ರನ್ನು ಕರೆದು, ತಾಯಿಗೆ ಹಮ್‌ಝರ ಪಾರ್ಥಿವ ಶರೀರವನ್ನು ತೋರಿಸದಂತೆ ಚಿಸುತ್ತಾರೆ. ಆದರೆ ಪ್ರವಾದಿವರ್ಯರ(ಸ) ಆದೇಶವನ್ನು ತಿಳಿದಾಗ ಸಫಿಯ್ಯ ಹೇಳುತ್ತಾರೆ, "ನಾನು ನನ್ನ ಸಹೋದರನ ಮಯ್ಯಿತನ್ನು ನೋಡಲು ುತ್ತಿದ್ದೇನೆ... ದೇವ ಮಾರ್ಗದಲ್ಲಿ ಹುತಾತ್ಮರಾದವರ ಮಟ್ಟಿಗೆ ಅದು ದೊಡ್ಡ ಯವೇ ಅಲ್ಲ." ಪ್ರವಾದಿವರ್ಯರು(ಸ) ಅವರಿಗೆ ಹಮ್‌ಝರ ಮೃತದೇಹವನ್ನು ಡುವ ಅನುಮತಿ ನೀಡಿದರು. ಸಫಿಯ್ಯ(ರ) ಸಹೋದರನ ಮೃತ ದೇಹವನ್ನು ಪಿಸಿದರು. ಅವರ ವಿರೂಪಗೊಂಡ ದೇಹ ಕಂಡು ಮಮ್ಮಲ ಮರುಗಿದರು. ಕ ಸಾವರಿಸಿಕೊಂಡು, 'ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್' (ನಾವು ಹನ ಕಡೆಯಿಂದಲೇ ಬಂದವರು ಮತ್ತು ಅವನೆಡೆಗೇ ಮರಳಲಿರುವವರು) ನು ಹೇಳಿ ಮೌನವಾಗಿ ಸಹೋದರನ ಸದ್ಗತಿಗಾಗಿ ಪ್ರಾರ್ಥಿಸಿದರು.

ತರುವಾಯ ಯುದ್ಧರಂಗದಿಂದ ಹೊರಟು ಮದೀನಾ ನಗರ ಪ್ರವೇಶಿಸಿದಾಗ

ಎಲ್ಲೆಡೆ ಶೋಕಾಚರಣೆ ನಡೆಯುತ್ತಿರುವುದನ್ನು ಪ್ರವಾದಿವರ್ಯರು(ಸ) ಕಂಡ ಆದರೆ ಹಮ್‌ಝರಿಗಾಗಿ ಶೋಕಿಸುವವರು ಯಾರೂ ಇರಲಿಲ್ಲ. ತಮ್ಮ ಸ್ನೇಹಮ ಚಿಕ್ಕಪ್ಪನ ಮೇಲಿನ ಪ್ರೀತ್ಯಾದರದಿಂದಾಗಿ ಪ್ರವಾದಿವರ್ಯರ(ಸ) ಬಾಯಿಯಿ ಆಯಾಚಿತರಾಗಿ, "ಅಯ್ಯೋ! ಹಮ್‌ಝರಿಗಾಗಿ ರೋದಿಸುವವರು ಯಾ ಇಲ್ಲವಲ್ಲ" ಎಂಬ ಉದ್ಗಾರ ಹೊರಟಿತು.

ಪ್ರವಾದಿವರ್ಯರ(ಸ) ಬಾಯಿಯಿಂದ ಈ ಮಾತುಕೇಳಿ ಅನ್ಸಾರರು ವ್ಯಾ ಗೊಂಡರು. ಅವರೆಲ್ಲರೂ ತಂತಮ್ಮ ಪತ್ನಿಯರನ್ನು ಕರೆದು ಹಮ್‌ಝರಿ ರೋದಿಸಲು ತಿಳಿಸುತ್ತಾರೆ. ಹೀಗೆ ಕೆಲವು ಮಂದಿ ಪರ್ದಾ ಧಾರಿಣಿಯರು ಒಂ ಕಲೆತು ಹಮ್‌ಝರಿಗಾಗಿ ರೋದಿಸತೊಡಗಿದರು. ಅದನ್ನು ಪ್ರವಾದಿವರ್ಯ ಗಮನಿಸಿದರು. ಅವರು ಆ ಮಹಿಳೆಯರಿಗಾಗಿ ಪ್ರಾರ್ಥಿಸಿದರು ಮತ್ತು ಹೀಗೆಂಡ "ನಿಮ್ಮ ಅನುಕಂಪಕ್ಕಾಗಿ ನಾನು ಬಹಳ ಋಣಿಯಾಗಿದ್ದೇನೆ. ಆದರೆ ಈ (ರೋದಿಸುವುದು ಧರ್ಮಸಮ್ಮತವಲ್ಲ."

ಮಡಿದವರಿಗಾಗಿ ಸ್ತ್ರೀಯರು ಒಂದೆಡೆ ಸೇರಿ ಜೋರಾಗಿ ಚೀರ ರೋದಿಸುವುದು, ವಸ್ತ್ರವನ್ನು ಹರಿಯುವುದು, ಗಲ್ಲ ಪರಚುವುದು ಮತ್ತು ಕೆ ಹೊಡೆಯುವುದು ಅರಬರಲ್ಲಿ ಅಜ್ಞಾನ ಕಾಲದಿಂದಲೇ ನಡೆದು ಬಂದಿದ್ದಂ ಸಂಪ್ರದಾಯವಾಗಿತ್ತು. ಪ್ರವಾದಿವರ್ಯರ(ಸ) ಪ್ರಸ್ತುತ ಪ್ರತಿಕ್ರಿಯಿಯಿಂದಾಗಿ ಸಂಪ್ರದಾಯವು ಅಲ್ಲಿಗೇ ಕೊನೆಗೊಂಡಿತು. ❑

ಕ್ಷಮೆಗೆ ಕರಗಿದ ಕಲ್ಲು ಹೃದಯಗಳು

ಹಮ್‌ಝಾರಂತಹ ಪರಾಕ್ರಮಿಯನ್ನು ಕೊಂದು ದಾಸ್ಯವಿಮೋಚನೆ ಪ ವಹ್‌ಶಿಯ ಮುಂದಿನ ಜೀವನ ಯಾವ ತಿರುವು ಪಡೆಯಿತು? ವಹ್‌ಶಿಗೆ ಆ ವೊಡ್ಡಿದ್ದಲ್ಲದೆ, ಮಾತು ಕೊಟ್ಟಂತೆ ವಹ್‌ಶಿಯನ್ನು ತನ್ನ ದಾಸ್ಯದಿಂದ ಬಿಡುಗಡೆಗೊಳಿ ಜುಬೈರ್ ಬಿನ್ ಮುತ್‌ಇಮ್ ಯಾವ ರೀತಿಯ ಪರಿವರ್ತನೆ ಹೊಂದಿದರು? ಕಲಿಯ ಕರುಳು ಕಿತ್ತು ಜಗಿದೊಗೆದ ಹಿಂದ್‌ರ ಸ್ಥಿತಿ ಏನಾಯಿತು? ಇಸ್ಲಾ ಕಡುವೈರಿ, ಬದ್ರ್ ರಣಾಂಗಣದಲ್ಲಿ ಮುಸ್ಲಿಮರ ವಿರುದ್ಧ ಹೋರಾಡಿದ, ಉಹುದ್ ಶತ್ರುಬಣದ ನೇತೃತ್ವ ವಹಿಸಿದ, ಅಹ್‌ಝಾಬ್ ಯುದ್ಧದಲ್ಲಿ ಇಪ್ಪತ್ತ ನಾ ಸೇನೆಗಳಿಗೆ ಮಹಾ ದಂಡನಾಯಕರಾಗಿದ್ದ ಮತ್ತು ಪ್ರವಾದಿವರ್ಯರಿಗೆ(ಸ) ಸುಮ ಇಪ್ಪತ್ತು ವರ್ಷಗಳ ಕಾಲ ಜಿದ್ದಿಗೆ ಬಿದ್ದವರಂತೆ ಕಿರುಕುಳ ನೀಡಿದ ಅ ಸುಫಿಯಾನ್ ಸತ್ಯ ಸ್ವೀಕರಿಸಿ ಕೃತಾರ್ಥರಾದರು. ಈಗ ಅವರ ಹಿಂಬಾಲಕರಾಗಿದ್ದ ಸ್ಥಿತಿಯನ್ನು ಸಂಕ್ಷಿಪ್ತವಾಗಿ ಅವಲೋಕಿಸೋಣ–

ಮಕ್ಕಾ ವಿಜಯದ ಸಂದರ್ಭ... ಖಡ್ಗ ಕೆಳಗಿರಿಸಿದವರಿಗೆ ಅಭಯ, ಕಅಬಾಲಯ ೀಶಿಸಿದವರಿಗೆ ಅಭಯ, ಅಬೂ ಸುಫಿಯಾನರ ಮನೆಯರಲ್ಲಿ ಆಶ್ರಯ ಪಡೆದ ಗೆ ಅಭಯ, ತಂತಮ್ಮ ಮನೆಯ ಬಾಗಿಲು ಮುಚ್ಚಿದವರಿಗೆ ಅಭಯ– ಹೀಗೆ ೀಷಣೆ ಸಾಗುತ್ತಿದೆ. ಆದರೆ ಜನರು ರಕ್ತಪಾತವಿಲ್ಲದೆ ವಿಜಯಶಾಲಿಯಾದ ಾದಿ ಮುಹಮ್ಮದ್‌ರನ್ನು(ಸ) ಕಣ್ಣಾರೆ ಕಾಣಲು ಹಾತೊರೆಯುತ್ತಾ ದಾರಿಯ ಲಗಳಲ್ಲಿ ಕಾದು ನಿಂತಿದ್ದಾರೆ. ಎಲ್ಲರ ಕಣ್ಣಲ್ಲೂ ಕಾತರ... ಏನಾಗುವುದೋ... ಂತರ ಹದಿಮೂರು ವರ್ಷಗಳ ಕಾಲ ನಾವು ಅವರನ್ನು(ಸ) ಕಾಡಿದ್ದೇವೆ, ಡಿಸಿದ್ದೇವೆ, ಲೇವಡಿ ಮಾಡಿದ್ದೇವೆ... ಕೊನೆಗೆ ಹುಟ್ಟೂರು ತೊರೆದು ವಲಸೆ ೀಗುವಷ್ಟಕ್ಕೂ ಮುಂದುವರಿದಿತ್ತು ನಮ್ಮ ಕಿರುಕುಳ. ನಂತರವಾದರೂ ತೆಪ್ಪಗಿದ್ದೆವಾ? ತ್ಮದಿಯಿಂದ ಧರ್ಮ ಪ್ರಚಾರ ಮಾಡಿಕೊಂಡಿದ್ದ ಯಸ್ರಿಬ್ ನಗರದ ಮೇಲೆ ಡೆತ್ತಿ ಹೋಗಿದ್ದೇವೆ. ಅಲ್ಲೂ ಅವರಿಗೆ ನಷ್ಟವಾಗುವಂತೆ ನೋಡಿಕೊಂಡಿದ್ದೇವೆ.

ಆಗ ಪ್ರತಾಪ ಮೆರೆದ ಜನರು ಈಗ ಅಸಹಾಯಕರಾಗಿ ನಿಂತಿದ್ದಾರೆ. ಹಾಯಕರಂತೆ ನಗರದಿಂದ ವಲಸೆ ಹೋದವರು ನಗರವನ್ನು ಪ್ರವೇಶಿಸುತ್ತಿದ್ದಾರೆ. ರೆ ಇದೇನು? ವಿಜಯದ ದರ್ಪ, ಪ್ರತಾಪ, ಬಲ ಪ್ರದರ್ಶನವೇನೂ ಇಲ್ಲದೆ ರ ನಾಯಕ(ಸ) ಓರ್ವ ಸಾಮಾನ್ಯ ಪೌರನಂತೆ ತಲೆ ತಗ್ಗಿಸಿ ಕೊಂಡು ುತ್ತಿದ್ದಾರಲ್ಲ. ದೇವನಿಗೆ ಕೃತಜ್ಞತೆ ಸಲ್ಲಿಸುತ್ತಾ, ಜನರೆಡೆಗೆ ಆರ್ದ್ರ ನೋಟ ರುತ್ತಾ ಜನರನ್ನುದ್ದೇಶಿಸಿ ಕೇಳುತ್ತಾರೆ, "ನಿಮ್ಮ ಅಭಿಪ್ರಾಯವೇನು? ನಾನು ಮ್ಮೊಂದಿಗೆ ಹೇಗೆ ವರ್ತಿಸಬೇಕು?"

ಈ ಪ್ರಶ್ನೆಯು ಮಕ್ಕಾ ನಗರ ವಾಸಿಗಳ ಹೃದಯಗಳನ್ನು ಸೀಳಿ ಬಿಡುತ್ತದೆ. ಯ ಆರ್ದ್ರತೆಯಿಂದ ಅವರಲ್ಲಿದ್ದ ಭಯದೊಂದಿಗೆ ದ್ವೇಷದ ಕಿಡಿಯೂ ನಂದಿ ೀಗುತ್ತದೆ. ಕೆಲವು ಕ್ಷಣಗಳ ಬಳಿಕ ಅವರೆಲ್ಲರೂ ಒಕ್ಕೊರಲಿನಿಂದ ಹೇಳುತ್ತಾರೆ, ವು ನಿಮ್ಮಿಂದ ಒಳಿತಲ್ಲದೆ ಬೇರೇನೂ ಕಂಡಿರಲಿಲ್ಲ. ಈಗಲೂ ಅದನ್ನೇ ೀಕ್ಷಿಸುತ್ತೇವೆ."

"ಸರಿ, ನಾನೀಗ ನನ್ನ ಸಹೋದರ ಯೂಸುಫರು(ಅ) ತಮ್ಮ ಸಹೋದರರಿಗೆ ಿದ ಉತ್ತರವನ್ನೇ ನಿಮಗೂ ನೀಡುತ್ತಿದ್ದೇನೆ. ಹೋಗಿ, ನೀವೆಲ್ಲರೂ ಸ್ವತಂತ್ರರು. ಗೆಲ್ಲರಿಗೂ ಕ್ಷಮೆ ನೀಡಲಾಗಿದೆ."

ಆಶ್ಚರ್ಯ! ಕೌತುಕ!! ನಂಬಲಾರದ ಪ್ರತಿಕ್ರಿಯೆ!!! ಈ ಉತ್ತರದಿಂದ ಅಲ್ಲಿದ್ದ ತೇಕ ಮಂದಿ ನಿಂತಲ್ಲೇ ಸತ್ಯ ವಚನ ಪಠಿಸಿ ದೇವ ನಿಯಮಕ್ಕೆ ಶರಣಾಗುತ್ತಾರೆ. ರೂ ಕೆಲವು ಮಂದಿ ಅತ್ಯಧಿಕ ಪೀಡಿಸಿದ ಕೆಲವರು... ಅಳುಕುತ್ತಾ ಅಂಜುತ್ತಾ

ಪ್ರವಾದಿವರ್ಯರ(ಸ) ಸನ್ನಿಧಿಗೆ ಬಂದು ಸತ್ಯ ಸ್ವೀಕರಿಸುತ್ತಾರೆ. ಅವರಿಗೂ ಕ್ಷ
ದಾನ ನೀಡಲಾಗುತ್ತದೆ.

ಹಮ್‌ಝ(ರ)ರ ಕರುಳು ಜಗಿದುಗುಳಿದ ಹಿಂದ್

ಮಕ್ಕಾ ವಿಜಯದ ವೇಳೆ ಕೆಲವು ಮಂದಿ ಪರ್ದಾಧಾರಿಣಿ ಸ್ತ್ರೀಯರು ಪ್ರವ
ವರ್ಯರ(ಸ) ಸನ್ನಿಧಿಗೆ ಬಂದು ಸತ್ಯ ಸ್ವೀಕರಿಸಿದರು. ಅವರ ಜತೆಯಲ್ಲಿ ಹಿ
ಕೂಡಾ ಪರ್ದಾ ಧರಿಸಿ ಬಂದಿದ್ದರು. ಆ ಹೊತ್ತಿಗೆ ಅವರಲ್ಲಿ ತನ್ನೊಂದಿಗೆ ಪ್ರತೀ
ತೀರಿಸಲಾಗುವುದೋ ಎಂಬ ಅಳುಕು ಇತ್ತಾದರೂ ಉದ್ಧಟತನ ಆಗಲೂ ಬಿ
ಲಿಲ್ಲ. ಅವರೊಡನೆಯೂ ಇತರ ಸ್ತ್ರೀಯರಂತೆ ಪ್ರತಿಜ್ಞೆಗಳನ್ನು ಪಡೆಯಲಾಯಿ

ಪ್ರವಾದಿ(ಸ) ಹೇಳಿದರು, "ಅಲ್ಲಾಹನೊಡನೆ ಇತರ ಯಾರನ್ನೂ ಸಹಭ
ಗೊಳಿಸಬಾರದು."

"ಈ ವಚನವನ್ನು ನೀವು ಪುರುಷರಿಂದ ಪಡೆದಿಲ್ಲವಲ್ಲ. ಆದರೂ ನಾ
ಪ್ರತಿಜ್ಞೆ ಮಾಡುತ್ತೇನೆ" ಹಿಂದ್‌ರ ಉತ್ತರ ಹೀಗಿತ್ತು.

"ಕಳ್ಳತನ ಮಾಡಬಾರದು" ಎಂದಾಗ, "ನಾನು ನನ್ನ ಪತಿಯ ಸಂಪತ್ತಿನಿ
ಸ್ವಲ್ಪಂಶ ತೆಗೆದುಕೊಳ್ಳುತ್ತೇನೆ. ಅದು ಸಮ್ಮತವೋ ಅಲ್ಲವೋ ತಿಳಿದಿಲ್ಲ" ಎಂ
ಹಿಂದ್ ಪ್ರತಿಕ್ರಿಯಿಸಿದರು.

"ಸಂತಾನವನ್ನು ವಧಿಸಬಾರದು" ಎಂದಾಗ, "ನಾವು ನಮ್ಮ ಮಕ್ಕಳನ್ನು ಸ
ಸಲಹಿ, ಬೆಳೆಸಿದೆವು. ಬದ್ರ್ ಯುದ್ಧದಲ್ಲಿ ನೀವು ಅವರನ್ನು ಕೊಂದಿರಿ. ಈಗ ನಾ
ನೀವೂ ಒಂದೇ ಪ್ರಕಾರ!" ಎಂಬುದು ಹಿಂದ್‌ರ ಉತ್ತರವಾಗಿತ್ತು.

ಈ ಉದ್ಧಟತನದ ಉತ್ತರ ಕೇಳಿದಾಗ, ಪ್ರವಾದಿವರ್ಯರು ಹಿಂದ್‌
ಗುರುತಿಸಿದರು. ಅವರಿಗೆ ಪ್ರೀತಿಯ ಚಿಕ್ಕಪ್ಪ ಹಮ್‌ಝರ ನೆನಪಾಗಿ, ದುಃಖದಿ
ಕರುಳು ಕಿತ್ತು ಬಂದಂತಾಯಿತು. ಆದರೂ ಅವರು ಹಿಂದ್‌ರನ್ನು ಕ್ಷಮಿಸಿದ
ಇದರಿಂದ ಪ್ರಭಾವಿತರಾದ ಹಿಂದ್‌ರ ಬಾಯಿಯಿಂದ ಅಪ್ರಯತ್ನವಾಗಿ, "ಅಲ್ಲಾ
ಸಂದೇಶವಾಹಕರೇ! ಇದುವರೆಗೂ ನನಗೆ ನಿಮ್ಮ ನಿವಾಸವು ಅತ್ಯಂತ ಅಪ್ರಿ
ಮತ್ತು ಅರೋಚಕವಾಗಿ ಕಾಣುತ್ತಿತ್ತು. ಆದರೀಗ ಅದಕ್ಕಿಂತ ಉತ್ತಮವಾದ ನಿ
ನನ್ನ ದೃಷ್ಟಿಯಲ್ಲಿ ಬೇರೆ ಇಲ್ಲ" ಎಂಬ ಉದ್ಗಾರ ಹೊರಟಿತು.

ಹಮ್‌ಝರನ್ನು ಕೊಂದ ವಹ್‌ಶೀ

ಮಕ್ಕಾ ವಿಜಯದ ವೇಳೆ ಕೆಲವು ಬೆರಳೆಣಿಕೆಯ ಮಂದಿಗೆ ಅವರ ಮ
ಅಪರಾಧಕ್ಕಾಗಿ ಮರಣದಂಡನೆಯನ್ನು ಘೋಷಿಸಲಾಗಿತ್ತು. ಅವರ ಪೈಕಿ ಒಬ್ಬರಾ

ಶೀ ಮಕ್ಕಾದಿಂದ ಪಲಾಯನಗೈದು ತಾಯಿಫ್‌ನಲ್ಲಿ ಆಶ್ರಯ ಪಡೆದಿದ್ದರು. ೃ ಕಾಲ ಕಳೆದ ಬಳಿಕ ತಾಯಿಫ್‌ನವರಲ್ಲಿ ಸತ್ಯ ಧರ್ಮದ ಬಗ್ಗೆ ಒಲವುಂಟಾಗುತ್ತದೆ. ಅಲ್ಲಿಂದ ಕೆಲವು ಮಂದಿ ರಾಯಭಾರಿಗಳು ಪ್ರವಾದಿವರ್ಯರನ್ನು ಭೇಟಿಯಾಗಲು ರಟು ನಿಲ್ಲುತ್ತಾರೆ. ಜನರ ಸಲಹೆಯ ಮೇರೆಗೆ ವಹ್‌ಶೀ ಕೂಡ ಆ ತಂಡದಲ್ಲಿ ಕೊಳ್ಳುತ್ತಾರೆ. ಪ್ರವಾದಿವರ್ಯರು(ಸ) ಯಾತ್ರಿಕರೊಡನೆ ಉತ್ತಮವಾಗಿ ಹರಿಸುತ್ತಾರೆಂದು ವಹ್‌ಶಿಗೂ ತಿಳಿದಿತ್ತು. ಹೀಗೆ ಮದೀನ ತಲುಪಿದ ಅವರು ವಚನ ಪಠಿಸುತ್ತಾ ಪ್ರವಾದಿವರ್ಯರ ಸನ್ನಿಧಿಯಲ್ಲಿ ಹಾಜರಾಗುತ್ತಾರೆ. ಪ್ರವಾದಿ ರ್ಯರಲ್ಲಿ(ಸ) ಆಗಲೂ ಹಮ್‌ಝರ(ರ) ಹುತಾತ್ಮತೆಯ ದುಃಖವಿತ್ತು. ಆದರೆ ಶೀ, ಯಾತ್ರಾ ತಂಡದೊಂದಿಗೆ ಅದರಲ್ಲೂ ಮುಸ್ಲಿಮರಾಗಿ ಬಂದಿರುವ ಕಾರಣ, ರನ್ನು ಪ್ರವಾದಿವರ್ಯರು(ಸ) ಕ್ಷಮಿಸಿದರು. ಅವರು(ಸ) ವಹ್‌ಶಿಯೊಡನೆ, ಮ್‌ಝರನ್ನು ವಧಿಸಿದ್ದು ನೀನೇ ತಾನೇ?" ಎಂದು ವಿಚಾರಿಸುತ್ತಾರೆ. ಹೌದೆಂದು ಶೀ ಉತ್ತರಿಸಿದಾಗ, ಪ್ರವಾದಿವರ್ಯರು(ಸ) ಹೇಳುತ್ತಾರೆ, "ನಿನ್ನನ್ನು ಕಂಡಾಗ ್‌ಝರ ನೆನಪಾಗಿ ನನಗೆ ದುಃಖ ಉಮ್ಮಳಿಸಿ ಬರುತ್ತದೆ. ಆದ್ದರಿಂದ ಸಾಧ್ಯ ಷ್ಟರ ಮಟ್ಟಿಗೆ ನನ್ನ ಮುಂದೆ ಬರಬೇಡ."

ವಹ್‌ಶೀ ತಕ್ಷಣವೇ ಅಲ್ಲಿಂದ ಹೊರಡುತ್ತಾರೆ. ಆದರೆ ಅತೀವ ವ್ಯಾಕುಲತೆ ರನ್ನು ಆವರಿಸಿರುತ್ತದೆ. ಹಮ್‌ಝರ ಕೊಲೆಗೆ ಪರಿಹಾರವಾಗುವಂತಹ ವುದಾದರೂ ಸತ್ಕರ್ಮ ಮಾಡಬೇಕೆಂಬ ಹಂಬಲ ಅವರಲ್ಲಿ ಉಂಟಾಗುತ್ತದೆ. ಕ್ಕಾಗಿ ಅವರು ಬಹಳಷ್ಟು ಸತ್ಕಾರ್ಯ ಮಾಡುತ್ತಾರೆ. ಆದರೂ ಅವರಿಗೆ ಾಧಾನವಿರುವುದಿಲ್ಲ. ವ್ಯಾಕುಲತೆ ಅವರಿಂದ ದೂರವಾಗುತ್ತಿರಲಿಲ್ಲ. ಹೀಗೆ ಾದಿವರ್ಯರ(ಸ) ಜೀವಿತಾವಧಿಯಲ್ಲಿಯಂತೂ ಅದಕ್ಕೆ ಅವಕಾಶದ ದೊರೆಯಲಿಲ್ಲ. ರೆ ಅಬೂಬಕರ್(ರ) ಆಡಳಿತಾವಧಿಯಲ್ಲಿ ಅಂತಹ ಒಂದು ಸುಸಂದರ್ಭ ಗಿ ಬರುತ್ತದೆ. ಪ್ರವಾದಿವರ್ಯರ ಅಂತ್ಯ ಕಾಲದಲ್ಲಿಯೇ ಇಸ್ಲಾಮಿನ ಅತಿದೊಡ್ಡ ವಾಗಿ ಮೂಡಿಬಂದಿದ್ದ ಮುಸೈಲಿಮ ಕದ್ದಾಬ್ ಎಂಬ ಕಪಟ ಪ್ರವಾದಿಯು, ೂಬಕರ್‌ರ ಖಿಲಾಫತ್ ಕಾಲದಲ್ಲಿ ಹೆಚ್ಚೆಚ್ಚು ಪ್ರಬಲವಾಗ ತೊಡಗಿದ್ದ. ವಹ್‌ಶಿಯು ೃ ಅವಕಾಶ ಪಡೆದು ಹಮ್‌ಝರ ಕೊಲೆಗೆ ಬಳಸಿದ ಭರ್ಚಿಯಿಂದಲೇ ಸೈಲಿಮನನ್ನು ತಿವಿದು ಕೊಲ್ಲುತ್ತಾರೆ. ಹೀಗೆ ಹಮ್‌ಝರ ಕೊಲೆಗೆ ಪರಿಹಾರ ಸಿದೆನೆಂದು ಭಾವಿಸಿ ವಹ್‌ಶೀ, ಇನ್ನಾದರೂ ನನಗೆ ಕ್ಷಮೆ ದೊರೆತೀತು ಎಂದು ಾಧಾನಪಟ್ಟುಕೊಳ್ಳುತ್ತಾರೆ.

ಮ್‌ಝರ ವಧೆಗೆ ಕಾರಣವಾದ ಜುಬೈರ್ ಬಿನ್ ಮುತ್‌ಇಮ್

ಬದ್ರ್ ಯುದ್ಧದಲ್ಲಿ ಕೈದಿಗಳಾಗಿ ಮದೀನಕ್ಕೆ ತರಲ್ಪಟ್ಟವರನ್ನು ಬಿಡುಗಡೆಗೊಳಿಸ

ಬೇಕೆಂದು ಪ್ರವಾದಿವರ್ಯರವರಲ್ಲಿ ಕೇಳಿ ಕೊಳ್ಳಲು ಖುರೈಶರು ಇದೇ ಜುಬೈರ್
ಮುತ್‌ಇಮ್‌ರನ್ನು ಕಳುಹಿಸಿದ್ದರು. ಸ್ವಭಾವತಃ ಮೃದು ಹೃದಯಿಯಾಗಿದ್ದ
ಅಜ್ಞಾನ ಜನ್ಯ ಆಚಾರ–ವಿಚಾರಗಳನ್ನು ದೂರ ಮಾಡಿರದ ಜುಬೈರ್‌ರಲ್ಲಿ
ಜನಾಂಗದ ಬಗ್ಗೆ ಸ್ವಲ್ಪ ಮಟ್ಟದ ಕುರುಡು ಪ್ರೇಮವೂ ಇತ್ತು. ಅವರು ಮ
ತಲುಪಿದಾಗ ಪ್ರವಾದಿವರ್ಯರು(ಸ) ಮಸ್ಜಿದುನ್ನಬವಿಯಲ್ಲಿ ನಮಾಝ್
ತಲ್ಲೀನರಾಗಿದ್ದರು. ಆ ಹೊತ್ತಿಗೆ ಮಸೀದಿ ಪ್ರವೇಶಿಸಿದ ಜುಬೈರ್‌ರ ಕಿವಿ
ಪ್ರವಾದಿವರ್ಯರು(ಸ) ಪಠಿಸುತ್ತಿದ್ದ ಅತ್ತೂರ್ ಅಧ್ಯಾಯದ ವಚನಗಳು ಸೋಕಿದ
ಆಗಲೇ ಅವರು ಪ್ರಭಾವಿತರಾಗದೆ ಉಳಿಯಲಿಲ್ಲ. ಆದರೆ ಬಳಿಕ ಕೈದಿ
ಬಿಡುಗಡೆಯ ಕುರಿತು ಪ್ರವಾದಿವರ್ಯರೊಡನೆ(ಸ) ನಡೆಸಿದ ಮಾತುಕತೆ ವಿಫಲವಾ
ಅಸಮಾಧಾನ ಗೊಂಡ ಅವರು ಹಮ್‌ಝರ ವಧೆಗೆ ವಹ್‌ಶಿಯನ್ನು ಪ್ರೇರೇಪಿಸಿ

ಉಹುದ್ ಯುದ್ಧದಲ್ಲಿ ತಮ್ಮ ಈ ಹೀನ ಉದ್ದೇಶ ಈಡೇರಿದಾಗ, ಜು
ಸಂತೋಷಗೊಂಡಿದ್ದರೂ ಬಳಿಕ ಅವರ ಆತ್ಮ ಸಾಕ್ಷಿಯು ಅವರನ್ನು ನಿರ
ಹಳಿಯುತ್ತಿತ್ತು. ಸಮಾಧಾನವೆನ್ನುವುದು ಅವರಿಗೆ ಮರೀಚಿಕೆಯಾಗುತ್ತಿತ್ತು. ಕೊನ
ಹುದೈಬಿಯಾ ಸಂಧಿ ಮತ್ತು ಮಕ್ಕಾ ವಿಜಯದ ಮಧ್ಯ ಕಾಲದಲ್ಲಿ ಅವರು ಪ್ರ
ವರ್ಯರನ್ನು ಪುನಃ ಸಂಧಿಸಿ ಸತ್ಯವಿಶ್ವಾಸ ಸ್ವೀಕರಿಸುವ ಇಚ್ಛೆ ವ್ಯಕ್ತಪಡಿಸಿ
ಪ್ರವಾದಿವರ್ಯರು(ಸ) ಜುಬೈರ್‌ರ ಪ್ರಮಾದಗಳನ್ನು ಕ್ಷಮಿಸಿದರು. ಇಸ್ಲಾ
ಸ್ವೀಕರಿಸಿದ ಬಳಿಕ ಜುಬೈರ್‌ರು ಹುನೈನ್ ಯುದ್ಧದಲ್ಲಿ ಭಾಗವಹಿಸಿದರು. ಅಲ್ಲಿ
ಮರಳುವಾಗ ಅವರು ಪ್ರವಾದಿವರ್ಯರ(ಸ) ಜತೆಯಲ್ಲೇ ಇದ್ದರು. ಆ ಬಳಿಕದ
ಅವರಿಗೆ ಪ್ರವಾದಿವರ್ಯರ(ಸ) ಸಾಂಗತ್ಯ ಹೆಚ್ಚು ಕಾಲದ ವರೆಗೆ ದೊರೆತಿರ
ಆದರೆ ಅವರು ಅಪಾರ ಸ್ಮರಣ ಶಕ್ತಿಯನ್ನು ಹೊಂದಿದ್ದರು. ಹಾಗಾಗಿ ಅ
ಬಹಳಷ್ಟು ಹದೀಸ್‌ಗಳು ನೆನಪಿದ್ದುವು. ಅವು ಹದೀಸ್ ಗ್ರಂಥಗಳಲ್ಲಿ ಇಂದಿ
ಸುರಕ್ಷಿತವಾಗಿವೆ. ಹಿ. ಶ. 57ರಲ್ಲಿ ಅವರು ನಿಧನರಾದರು. ❑

ಮಹಾಶತ್ರುವಿನ ಮಗ

ಇಸ್ಲಾಮಿನ ಮಹಾಶತ್ರುವಾಗಿದ್ದ ಅಬೂ ಜಹಲ್‌ನ ಮಗ ಇಕ್ರಿಮಾ ಕ
ಮುಸ್ಲಿಮರ ಕಡುವೈರಿಯಾಗಿದ್ದರು. ಅವರು ಬದ್ರ್ ಯುದ್ಧದಲ್ಲಿ ತಂದೆಯೊಡಗ
ಇಸ್ಲಾಮೀ ಸೇನೆಯ ವಿರುದ್ಧ ಕಾದಾಡಿದ್ದರು. ಯುದ್ಧದಲ್ಲಿ ಮಊದ್ ಪ
ಮುಆದ್ ಎಂಬೀರ್ವರು ತರುಣರಿಂದ ಅಬೂ ಜಹಲ್ ಹತನಾದಾಗ, ಇಕ್ರಿ
ಹಿಂದಿನಿಂದ ಮುಆದ್‌ರ ಮೇಲೆ ಹಲ್ಲೆ ನಡೆಸಿದರು. ಅದರಿಂದ ಮುಆದ್‌ರ ಬ
ತುಂಡಾಗಿ ನೇತಾಡತೊಡಗಿತು. ತರುಣರಿಬ್ಬರೂ ತಿರುಗಿ ಆಕ್ರಮಿಸುವಷ್ಟರಲ್ಲಿ ಇಕ್ರಿ

ಂದ ಓಡಿ ತಪ್ಪಿಸಿಕೊಂಡರು. ಬಳಿಕ ಮುಆದ್ ಯುದ್ಧ ಮುಂದುವರಿಸಲು ಡಕಾಗದಿರಲಿ ಎಂದು ನೇತಾಡುತ್ತಿದ್ದ ಕೈಯನ್ನು ತನ್ನೆರಡೂ ಕಾಲಿನ ಮಧ್ಯೆ ಂಕಿಸಿ ಎಳೆದು ಬೇರ್ಪಡಿಸಿದ್ದರು.

ಬದ್ರ್ ಯುದ್ಧದಿಂದಾಗಿ ಕುರೈಶರು ಸಾಕಷ್ಟು ಪಾಠ ಕಲಿತಿದ್ದರು. ಅವರ ದೊಡ್ಡ ಡ್ಡ ನೇತಾರರು ಹತರಾಗಿದ್ದರು. ಆದ್ದರಿಂದ ಅವರು ಉಹುದ್ ಯುದ್ಧದಲ್ಲಿ ಕ್ತಿಯಿಂದ ಮುನ್ನಡೆದರು. ಸಂಪೂರ್ಣ ಸೇನೆಗೆ ಅಬೂ ಸುಫಿಯಾನ್ ದಂಡ ಯಕರಾಗಿದ್ದರೆ ಕೆಲವು ಪ್ರಮುಖ ಸೇನಾ ತುಕಡಿಗಳಿಗೆ ಖಾಲಿದ್ ಬಿನ್ ವಲೀದ್, ಮಾ ಬಿನ್ ಅಬೂ ಜಹಲ್ ಮತ್ತಿರರರು ನೇತೃತ್ವವನ್ನು ವಹಿಸಿದ್ದರು. ಸವಾರ ೆಯ ನೇತೃತ್ವವನ್ನು ಸಫ್ವಾನ್ ಬಿನ್ ಉಮಯ್ಯ ವಹಿಸಿದ್ದರು.

ಮಕ್ಕಾ ವಿಜಯದ ವೇಳೆ, ಕುರೈಶ್ ಸರದಾರರು ಯಾವುದೇ ರೀತಿಯ ರೋಧ ತೋರಿರಲಿಲ್ಲ. ಕೆಲವರು ಅನುಸರಣೆಯ ಕರಾರು ಮಾಡಿದರೆ ಇನ್ನು ವರು ಮಕ್ಕಾ ಬಿಟ್ಟು ಹೊರಟು ಹೋದರು. ಆದರೆ ಇಕ್ರಿಮಾ ಮತ್ತಿರರು ಪದ ಹಳ್ಳಿಯೊಂದರಲ್ಲಿ ಒಟ್ಟು ಸೇರಿದರು. ಅವರೆಲ್ಲರೂ ಮುಸ್ಲಿಮರನ್ನು ಮಕ್ಕಾ ಶಕ್ಕೆ ಅಡಿಯನ್ನುಂಟು ಮಾಡಿದರು. ಮುಸ್ಲಿಮರು ಅವರನ್ನು ಸಮರ್ಥವಾಗಿ ರಿಸಿದರು. ಹೀಗೆ ಶತ್ರುಗಳ ಪೈಕಿ 28 ಮಂದಿ ಹತರಾದರು ಮತ್ತು ಮುಸ್ಲಿಮರ ಮೂರು ಮಂದಿ ಹುತಾತ್ಮರಾದರು. ಒಟ್ಟಿನಲ್ಲಿ ಇಕ್ರಿಮಾ, ಕೊನೆಯುಸಿರಿನವರೆಗೂ ಸ್ಲಿಮರ ವಿರುದ್ಧ ಹೋರಾಡುವ ಪಣ ತೊಟ್ಟಿದ್ದರು.

ಹಾರಿಸ್ ಬಿನ್ ಹಿಶಾಮ್‌ರ ಮಗಳು ಉಮ್ಮು ಹಕೀಮ್‌ರವರು ಇಕ್ರಿಮರ ಯಾಗಿದ್ದರು. ಅವರು ಮಕ್ಕಾ ವಿಜಯದ ದಿವಸವೇ ಇಸ್ಲಾಮ್ ಸ್ವೀಕರಿಸಿದ್ದರು. ರೆ ಇಕ್ರಿಮಾ ಮುಸ್ಲಿಮರ ಪ್ರತಿರೋಧದ ತೀವ್ರತೆ ಕಂಡು, ಇನ್ನು ತನಗೆ ಗಾಲವಿಲ್ಲವೆಂದು ಯಮನ್‌ನ ಕಡೆಗೆ ಓಟಕಿತ್ತಿದ್ದರು. ಈ ವಿಷಯ ತಿಳಿದಾಗ ಮ್ಮು ಹಕೀಮ್ ಪ್ರವಾದಿವರ್ಯರ(ಸ) ಸನ್ನಿಧಿಗೆ ಬಂದು, "ಇಕ್ರಿಮರು ಶಿಕ್ಷೆಯ ಯಿಂದಾಗಿ ಯಮನ್‌ಗೆ ಹೊರಟಿದ್ದಾರೆ" ಎಂದರು. ಆಗ ಪ್ರವಾದಿವರ್ಯರು, ಮರಿಗೆ ಅಭಯ ನೀಡಿರುವುದಾಗಿ ತಿಳಿಸಿದರು. ತರುವಾಯ ಉಮ್ಮು ಹಕೀಮ್‌ರು ಮರನ್ನು ಸಂಧಿಸಿ ಹೇಳಿದರು, "ನಾನು ಅತ್ಯಂತ ಸಚ್ಚರಿತರೂ ಅತ್ಯುತ್ತಮರೂ ಾಸಾಗರರೂ ಆದವರ ಬಳಿಯಿಂದ ಬರುತ್ತಿದ್ದೇನೆ. ಅವರು ನಿಮಗೆ ಅಭಯ ದ್ದಾರೆ."

ಈ ಮಾತಿನಿಂದ ಸಮಾಧಾನಗೊಂಡ ಇಕ್ರಿಮಾ, ಪತ್ನಿಯೊಡಗೂಡಿ ಮಕ್ಕಾ ಕ್ಕೆ ಮರಳಿದರು. ಪ್ರವಾದಿವರ್ಯರು(ಸ) ಇಕ್ರಿಮರನ್ನು ಕಾಣುತ್ತಲೇ ಸಂತೋಷದಿಂದ ಅವರೆಡೆಗೆ ಧಾವಿಸಿದರು. ಆ ವೇಳೆ ಅವರ ಮೈಮೇಲಿದ್ದ ಚದ್ದರವೂ ಜಾರಿ

ಬಿತ್ತು. ಪ್ರವಾದಿವರ್ಯರ(ಸ) ಈ ಆದರಪೂರ್ವಕ ಸ್ವಾಗತ ಕಂಡು ಇಕ್ರಿ ಲಜ್ಜಿತರಾಗಿ ತಲೆ ತಗ್ಗಿಸಿ ನಿಂತರು. ಅವರು ಕೂಡಲೇ ಇಸ್ಲಾಮ್ ಸ್ವೀಕರಿಸಿರುವುದ ನಿರ್ಧರಿಸಿ ಪ್ರವಾದಿವರ್ಯರೊಡನೆ ಹೀಗೆ ಅರಿಕೆ ಮಾಡಿಕೊಂಡರೂ, "ಅಲ್ಲಾ ಸಂದೇಶವಾಹಕರೇ! ನಾನು ಜೀವನವಿಡೀ ಇಸ್ಲಾಮಿಗೆ ವಿರುದ್ಧವಾಗಿದ್ದೆ. ತಾವು ಪರವಾಗಿ ಅಲ್ಲಾಹನಿಂದ ಕ್ಷಮೆಗಾಗಿ ಪ್ರಾರ್ಥಿಸಿರಿ." ಪ್ರವಾದಿವರ್ಯರು(ಸ) ಕೈ ಪ್ರಾರ್ಥಿಸಿದರು. ಇಕ್ರಿಮಾ ಸಮಾಧಾನದಿಂದ ಇಸ್ಲಾಮ್ ಸ್ವೀಕರಿಸಿದರು.

ತರುವಾಯ ಅವರು ಪ್ರವಾದಿವರ್ಯರಲ್ಲಿ ಹೀಗೆ ನಿವೇದಿಸಿಕೊಂಡ "ಅಲ್ಲಾಹನ ಸಂದೇಶವಾಹಕರೇ! ನನಗೆ ಅತ್ಯುತ್ತಮ ಉಪದೇಶ ನೀಡಿ ಪ್ರವಾದಿವರ್ಯರು(ಸ) ಹೇಳಿದರು, "ಅಲ್ಲಾಹನನ್ನು ಏಕೈಕನೆಂದು ನಂಬು ವ ನನ್ನನ್ನು ಅಲ್ಲಾಹನ ದಾಸ ಹಾಗೂ ಸಂದೇಶವಾಹಕನೆಂದು ಅಂಗೀಕರಿ ತರುವಾಯ ಇಕ್ರಿಮಾ ಹೇಳಿದರು, "ಅಲ್ಲಾಹನ ಸಂದೇಶವಾಹಕರೇ! ನಾ ಇಸ್ಲಾಮಿಗೆ ವಿರುದ್ಧ ಎಷ್ಟು ಹಣ ವ್ಯಯಿಸಿದೆನೋ ಅದಕ್ಕಿಂತಲೂ ದುಪ್ಪಟ್ಟು ವನ್ನು ಇಸ್ಲಾಮಿನ ಪರವಾಗಿ ವ್ಯಯಿಸುವೆನು. ಇಸ್ಲಾಮಿನ ವಿರುದ್ಧ ಹೇಗೆ ಯ ಮಾಡಿದ್ದೇನೋ ಅದಕ್ಕಿಂತಲೂ ಹೆಚ್ಚು ಉತ್ಸಾಹದಿಂದ ಇಸ್ಲಾಮಿಗಾಗಿ ಜಿಹಾ ಮಾಡುವೆನು."

ಪ್ರವಾದಿವರ್ಯರು(ಸ) ಇಕ್ರಿಮರನ್ನು ಕ್ಷಮಿಸಿದರಾದರೂ ಜನರು ಅವರ ಕ್ಷಮಿಸಲು ಸಿದ್ಧರಿರಲಿಲ್ಲ. ಅವರನ್ನು ಜನ ನಾನಾ ತರವಾಗಿ ದೂಷಿಸತೊಡಗಿದ ಹಾಗಾಗಿ ಪ್ರವಾದಿವರ್ಯರು(ಸ) ಮಸೀದಿಗೆ ತೆರಳಿ ಪ್ರವಚನ ನೀಡಿದರು ವ "ಯಾರು ಅಜ್ಞಾನ ಕಾಲದಲ್ಲಿ ಗೌರವಾರ್ಹರಾಗಿದ್ದರೋ ಅವರು ಇಸ್ಲಾಮಿನಲ್ಲಿ ಗೌರವಾರ್ಹರು. ಯಾವ ಮುಸ್ಲಿಮನೂ ಆತರ ಹಿಂದಿನ ಕೃತ್ಯಗಳ ಕಾ ದೂಷಿಸಲ್ಪಡಬಾರದು" ಎಂದು ಸಾರಿದರು. ಈ ರೀತಿಯಾಗಿ ಜನರು ವಿರೋ ವುದನ್ನು ನಿಲ್ಲಿಸಿದರು.

ಮುಸ್ಲಿಮರಾದ ಬಳಿಕ ಇಕ್ರಿಮರಿಗೆ(ರ) ಪ್ರವಾದಿವರ್ಯರ(ಸ) ಜತೆ ಜಿಹಾದ್ ಮಾಡುವ ಅವಕಾಶ ಬಹಳ ಕಡಿಮೆಯೇ ದೊರೆತಿತ್ತು. ಆದರೆ ದೊ ಅವಕಾಶವೊಂದನ್ನು ಬಿಟ್ಟಿರಲಿಲ್ಲ. ಹ. ಅಬೂಬಕರ್ ಸಿದ್ದೀಕ್‌ರ(ರ) ಖಿಲಾ ಕಾಲದಲ್ಲಿ ಝಕಾತ್‌ನ ವಿಷಯವಾಗಿ ಧರ್ಮ ಭ್ರಷ್ಟತೆಯ ಕ್ಷೋಭೆಯೆದ್ದಾಗ, ಅ ಗೋತ್ರವನ್ನು ಮಣಿಸಲು ಇಕ್ರಿಮರನ್ನು ನೇಮಿಸಲಾಯಿತು. ಅವರು ಆ ಗೋ ಭ್ರಷ್ಟ ಸರದಾರರನ್ನು ವಧಿಸಿ, ಬನೀ ಅರ್ಝ್ದ್ ಗೋತ್ರವನ್ನು ಪುನಃ ಇಸ್ಲಾಮಿ ನೆಲೆಗೊಳಿಸಿದರು. ಅರ್ಝ್ದ್ ಗೋತ್ರದ ಕ್ಷೋಭೆನಿಂತ ಬೆನ್ನಿಗೇ ಅಮ್ಮಾನ್‌ನ ಗೋತ್ರಗಳಲ್ಲೂ ಧರ್ಮಭ್ರಷ್ಟತೆ ಹರಡಲಾರಂಭಿಸಿತು. ಆ ಗೋತ್ರಗಳೆಲ್ಲವೂ ಒ

ತಿದುವು. ಅಲ್ಲಿಗೂ ಅಬೂಬಕರ್(ರ), ಇಕ್ರಿಮರನ್ನು(ರ) ಕಳುಹಿಸಿದರು. ಅವರು ಕ್ತಿಯಿಂದಲೇ ಆ ಗೋತ್ರಗಳೆಲ್ಲವನ್ನೂ ಮಣಿಸಿದರು. ಅದರಿಂದ ಬಿಡುವು ದೊರೆ ವಷ್ಟರಲ್ಲಿ ಬನೀ ಮುಹ್ರಃಗೋತ್ರಗಳು ಒಂದಾಗಿ ವಿದ್ರೋಹವೆಸಗಿದುವು. ಇಕ್ರಿಮಾ ಗೂ ಕಳುಹಿಸಲ್ಪಟ್ಟರು. ಆದರೆ ಅವರು ಅಲ್ಲಿಗೆ ತಲಪುವಷ್ಟರಲ್ಲಿ ಆ ಜನರು ಾತ್ ಪಾವತಿಸಿ ಸಹಕರಿಸಿದರು.

ಯಮನ್‌ನ ಕ್ಷೋಭೆಯನ್ನು ಹತ್ತಿಕ್ಕಲು ಝಿಯಾದ್ ಬಿನ್ ಲುಬೈದ್‌ರನ್ನು(ರ) ುಸಲಾಗಿತ್ತು. ಅವರು ಅನೇಕ ವಿದ್ರೋಹಿ ಗೋತ್ರಗಳನ್ನು ಮಣಿಸಿದ್ದರು. ಆದರೆ ್ಮ ಅಸ್ ಅಸ್ ಬಿನ್ ಕೈಸ್ ಎಂಬವನು ಝಿಯಾದ್ ಸಂಗ್ರಹಿಸಿದ ಝಕಾತ್‌ನ ವನ್ನು ಅದರಿಂದ ಕಸಿದು ಕೊಂಡನು. ಹ. ಅಬೂಬಕರ್‌ರಿಗೆ(ರ) ಈ ಬಗ್ಗೆ ು ಬಂದಾಗ ಅವರು ಇಕ್ರಿಮರನ್ನು ಝಿಯಾದ್‌ರ ಬಳಿಗೆ ಕಳುಹಿಸಿದರು. ುರ ಸೇನಾ ಕಾರ್ಯಾಚರಣೆಯಿಂದಾಗಿ ಅಸ್‌ಅಸ್‌ನ ಹಲವಾರು ಬೆಂಬಲಿಗರು ಾದರು. ಕೊನೆಗ ಅಸ್‌ಅಸ್ ತನ್ನ ಗೋತ್ರದ ಪರವಾಗಿ ಅಭಯಯಾಚಿಸಿದನು. ನ್ನು ಬಂಧಿಸಿ ಖಲೀಫ ಅಬೂಬಕರ್‌ರ(ರ) ಸನ್ನಿಧಿಯಲ್ಲಿ ಹಾಜರುಪಡಿಸಲಾಯಿತು. ರೆ ಅವರು ಆತನನ್ನು ಕ್ಷಮಿಸಿ ಬಿಡುಗಡೆಗೊಳಿಸಿದರು.

ಯಾ ಕಾರ್ಯಾಚರಣೆಯಲ್ಲಿ

ಸಿರಿಯಾದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಇಕ್ರಿಮಾ(ರ) ವೀರಾವೇಶದಿಂದ ೇರಾಡಿದರು. ಮಖ್ಲ್ ಯುದ್ಧದಲ್ಲಿ ಅತಿಯಾದ ಉತ್ಸಾಹ-ಪರಾಕ್ರಮ ಮೆರೆದಿದ್ದ ರು ಶತ್ರು ಪಾಳೆಯದೊಳಗೆ ನುಗ್ಗಿ ಎದುರಿಗೆ ಸಿಕ್ಕ ಯೋಧರನ್ನೆಲ್ಲ ವಧಿಸುತ್ತಾ ುದರು. ಈ ಮಧ್ಯೆ ಅವರ ತಲೆ ಮತ್ತು ಎದೆಯಲ್ಲಿ ಹಲವಾರು ಗಾಯಗಳಾದುವು. ರು ಹೇಳಿದರು, ""ಇಕ್ರಿಮಾ! ದೇವನಿಗೆ ಭಯಪಡಿರಿ. ಈ ರೀತಿ ನಿಮ್ಮ ಲೆಯೇ ಅಕ್ರಮವೆಸಗಬೇಡಿರಿ. ಸ್ವಲ್ಪ ಮೃದುವಾಗಿರಿ. ಸಂಯಮ ಪಾಲಿಸಿರಿ." ಇಕ್ರಿಮಾ ಈ ರೀತಿ ಪ್ರತಿಕ್ರಿಯಿಸಿದರು, "ಲಾತ್ ಮತ್ತು ಉಝ್ಝಾಗಳಿಗಾಗಿ ವದ ಹಂಗು ತೊರೆದು ಹೋರಾಡುತ್ತಿದ್ದೆ. ಇಂದು ಅಲ್ಲಾಹ್ ಮತ್ತು ಅವನ ದೇಶವಾಹಕರಿಗಾಗಿ ಹೋರಾಡುವಾಗ ನಾನು ಜೀವದ ಬಗ್ಗೆ ಆಲೋಚಿಸಬೇಕೇ? ್ಲಾಹನಾಣೆ! ಸಾಧ್ಯವಿಲ್ಲ!"

ಸಿರಿಯಾದ ಕಾರ್ಯಾಚರಣೆಯಲ್ಲಿ ಯರ್ಮೂಕ್ ಯುದ್ಧವು ಅತಿ ಪ್ರಧಾನವಾಗಿತ್ತು. ುರಲ್ಲಿ ಖಾಲಿದ್ ಬಿನ್ ವಲೀದ್‌ರು(ರ) ಇಕ್ರಿಮರನ್ನು ಸೇನಾ ತುಕಡಿಯೊಂದರ ಡನಾಯಕನನ್ನಾಗಿ ನೇಮಿಸಿದರು. ಇಕ್ರಿಮಾ(ರ) ಆ ಹೊಣೆಯನ್ನು ಸಂಪೂರ್ಣವಾಗಿ ಲಿಸಿದರು. ಯುದ್ಧದ ವೇಳೆ ಒಮ್ಮೆ ರೋಮನರು ಮೇಲುಗೈ ಸಾಧಿಸಿದರು. ುರಿಂದಾಗಿ ಮುಸ್ಲಿಮರು ಹಿಮ್ಮೆಟ್ಟತೊಡಗಿದರು. ಅದನ್ನು ಕಂಡು ಇಕ್ರಿಮಾ,

"ನಾವು ಪ್ರವಾದಿವರ್ಯರ(ಸ) ಜತೆಯಲ್ಲಿ ಎಷ್ಟೋ ಯುದ್ಧಗಳನ್ನು ಮಾಡಿ ಹಾಗಿರುತ್ತಾ ಈ ಯುದ್ಧದಿಂದ ನಾವು ಪಲಾಯನ ಮಾಡುವುದೇ?" ಎನು "ಮರಣದೊಂದಿಗೆ ಯಾರು ಬೈಅತ್ ಮಾಡುತ್ತಾರೆ?" ಎಂದು ಗರ್ಜಿಸಿದ

ಇಕ್ರಿಮಾರ ಈ ಯುದ್ಧ ಗರ್ಜನೆ ಕೇಳಿ ನಾಲ್ನೂರು ಮಂದಿ ಯೋ ದೇವ ಮಾರ್ಗದಲ್ಲಿ ಜೀವಾರ್ಪಣೆಗೆ ಸಿದ್ಧರಾದರು. ಎಲ್ಲರೂ ಜೀವದ ಹ ತೊರೆದು ಹೋರಾಡಿದರು. ಅವರಲ್ಲನೇಕರು ಹುತಾತ್ಮರಾದರು. ಉಳಿದ ಗಂಭೀರವಾಗಿ ಗಾಯಗೊಂಡರು. ಇಕ್ರಿಮಾ ಮತ್ತವರ ಈರ್ವರು ಪುತ್ರ ಗಾಯಗಳಿಂದ ಜರ್ಝರಿತರಾದರು. ಅವರ ಸ್ಥಿತಿಯು ಚಿಂತಾಜನಕವಾ ಅವರನ್ನು ಕಾಣಲು ಬಂದ ಖಾಲಿದ್ ಬಿನ್ ವಲೀದ್‌ರು(ರ) ಇಕ್ರಿಮರ ಪುತ್ರರಿ ತಲೆಯನ್ನು ತಮ್ಮ ತೊಡೆಯಮೇಲಿರಿಸಿ, ಅವರಿಗೆ ನೀರು ಕುಡಿಸಿದರು.

ಇಸ್ಲಾಮ್ ಸ್ವೀಕರಿಸುವಾಗ ಇಕ್ರಿಮಾ, ಪ್ರವಾದಿವರ್ಯರಲ್ಲಿ(ಸ) ಹೀಗೆಂದಿದ್ದ "ಇಸ್ಲಾಮಿಗೆ ವಿರುದ್ಧ ಎಷ್ಟು ಯುದ್ಧಗಳಲ್ಲಿ ಭಾಗವಹಿಸಿದ್ದೆನೋ, ಅದರ ದುಪ್ಪ ಯುದ್ಧಗಳಲ್ಲಿ ಇಸ್ಲಾಮಿನ ಪರವಾಗಿ ಹೋರಾಡುವೆನು. ಅದೇ ರೀತಿ ಸಂಪತ್ತ ಹಿಂದಿಗಿಂತ ದುಪ್ಪಟ್ಟು ಖರ್ಚು ಮಾಡುವೆನು." ಯುದ್ಧಗಳಲ್ಲಿ ಭಾಗವಹಿಸಿದ ಉಪರೋಕ್ತ ವಿವರಣೆಗಳಲ್ಲಿ ಓದಿದಿರಿ.

ಇನ್ನು ಧನವ್ಯಯದ ವಿಷಯ... ಸಿರಿಯದ ಸೇನಾ ಕಾರ್ಯಾಚರಣೆಯ ವೆ ಒಮ್ಮೆ ಹ. ಅಬೂಬಕರ್‌ರು(ರ) ಸೇನೆಯ ಅವಲೋಕನ ನಡೆಸಲು ಹೊರಟ ಒಂದೆಡೆ, ಡೇರೆಯ ಸುತ್ತಲೂ ಕುದುರೆಗಳು, ಈಟಿಗಳು ಮತ್ತಿತರ ಯ ಸಾಮಗ್ರಿಗಳು ಇರುವುದನ್ನು ಕಂಡರು. ಹತ್ತಿರ ಹೋಗಿ ನೋಡಿದಾಗ, ಒಳ ಇಕ್ರಿಮ ಇದ್ದರು. ಅಬೂಬಕರ್‌ರವರು(ರ) ಸಲಾಮ್ ಹೇಳಿ ಯುದ್ಧದ ಖರ್ಚಿಗ ಹಣ ನೀಡಲು ಮುಂದಾದರು. ಆದರೆ ಇಕ್ರಿಮಾ(ರ) ನಯವಾಗಿ ನಿರಾಕರಿಸು "ನನಗೆ ಅದರ ಅಗತ್ಯವಿಲ್ಲ. ನನ್ನ ಬಳಿ ಈಗ ಎರಡು ಸಾವಿರ ದೀನಾರಗಳಿ ಎಂದು ಹೇಳಿದರು. ಅಬೂಬಕರ್ ಸಿದ್ದೀಕ್‌ರು ಇಕ್ರಿಮರಿಗಾಗಿ ಪ್ರಾರ್ಥಿಸುತ್ತಾ ಹ ನಡೆದರು.

ಇಕ್ರಿಮರಿಗೆ ತಮ್ಮ ಗತ ಪಾಪಗಳ ಬಗ್ಗೆ ನಿತ್ಯ ಖೇದವೆನಿಸುತ್ತಿತ್ತು. ಇಸ್ಲಾ ಸ್ವೀಕರಿಸಿದಂದಿನಿಂದ ತಮ್ಮ ಹೆಚ್ಚಿನ ಸಮಯವನ್ನು ದೇವಾರಾಧನೆಯಲ್ಲಿ ವ್ಯಯಿಸಿದ ಪವಿತ್ರ ಕುರ್‌ಆನ್ ಪಠಣವನ್ನು ಅತ್ಯಧಿಕ ಮೆಚ್ಚುತ್ತಿದ್ದರು. ಅದನ್ನು ಮುಖಕ್ಕೆ ಒತ್ತಿ 'ಕಿತಾಬುರಬ್ಬೀ, ಕಿತಾಬುರಬ್ಬೀ' (ನನ್ನ ಪ್ರಭುವಿನ ಗ್ರಂಥ, ನನ್ನ ಪ್ರಭುವಿನ ಗ್ರಂ ಎನ್ನುತ್ತಾ ಬಿಕ್ಕುತ್ತಿದ್ದರು.

ಕ್ಕಾ ವಿಜಯದ ಪ್ರಮುಖ ಕೊಡುಗೆ

ಇಸ್ಲಾಮಿನ ಮಹಾಶತ್ರು ಅಬೂ ಜಹಲನ ಹಿರಿಯ ಸಹೋದರ, ಅಬೂ ಬ್ದುರ್ರಹ್ಮಾನ್‌ರ ಮೂಲ ಹೆಸರು ಹಾರಿಸ್ ಎಂದಾಗಿತ್ತು. ಬದ್ರ್ ಯುದ್ಧದ ವೇಳೆ ರು ಅಬೂಜಹಲನೊಂದಿಗಿದ್ದರು. ಆದರೆ ಅವರು ಯುದ್ಧ ರಂಗದಿಂದ ಪರಾರಿ ಾದರು. ಅಬೂ ಜಹಲ್ ಹತನಾದನು. ಹಾರಿಸ್‌ರ ಹೇಡಿತನದ ಬಗ್ಗೆ ಹಸ್ಸಾನ್ ್ ಸಾಬಿತ್‌ರು ತಮ್ಮ ಕವಿತೆಗಳಲ್ಲಿ ಪ್ರಸ್ತಾಪಿಸಿ ಹಂಗಿಸಿದ್ದರು. ಅದಕ್ಕುತ್ತರ ವಾಗಿ ರಿಸ್, ಉಹುದ್ ಯುದ್ಧದಲ್ಲಿ ಸಕ್ರಿಯರಾಗಿ ಪಾಲ್ಗೊಂಡು ಮುಸ್ಲಿಮರ ವಿರುದ್ಧ ೋರಾಡಿದರು.

ಮಕ್ಕಾ ವಿಜಯದ ದಿನ ಬಿಲಾಲ್‌ರು ಕಅಬಾದ ಗೋಡೆಯ ಮೇಲೇರಿ ಾನ್ ಕರೆ ಮೊಳಗಿಸಿದಾಗ, ಅಬೂ ಜಹಲನ ಪುತ್ರಿ ಜುವೈರಿಯಾ ಈ ರೀತಿ ದ್ಗರಿಸಿದಳು, "ದೇವನ ಕರುಣೆ! ಬಿಲಾಲ್‌ನ ಧ್ವನಿಯನ್ನು ಕಅಬಾದ ಮೇಲಿನಿಂದ ಿಸಿಕೊಳ್ಳುವ ಮೊದಲೇ ನನ್ನ ತಂದೆಯವರು ತೀರಿ ಹೋದದ್ದು ಒಳ್ಳೆಯದೇ ಯಿತು." ಆಗ ಹಾರಿಸ್ ಬಿನ್ ಹಿಶಾಮ್‌ರು, "ಅಯ್ಯೋ! ಇಂದು ನಾನು ವಂತವಿಲ್ಲದಿರುತ್ತಿದ್ದರೆ!" ಎಂದಿದ್ದರು.

ಹಾರಿಸ್‌ರು ಮಕ್ಕಾ ನಗರದ ಪ್ರಮುಖ ಶ್ರೀಮಂತ ಸರದಾರರಲ್ಲೋರ್ವರಾಗಿದ್ದರು. ಡುಗೈ ದಾನಿಯೂ ಆಗಿದ್ದರು. ನೂರಾರು ಬಡ ಜನರಲ್ಲಿ ಅವರು ಆಹಾರ ಮಗ್ರಿಗಳನ್ನು ವಿತರಿಸುತ್ತಿದ್ದರು. ಇಂತಹ ಹಾರಿಸ್‌ರು ಸತ್ಯವಿಶ್ವಾಸ ಸ್ವೀಕರಿಸಬೇಕೆಂಬ ್ರಹ ಪ್ರವಾದಿವರ್ಯರಲ್ಲಿ(ಸ) ಮುಂಚಿನಿಂದಲೂ ಇತ್ತು. ಹಿಂದೆ, "ಇಬ್ಬರು ಮರ್‌ರಲ್ಲಿ ಯಾರಾದರೊಬ್ಬರು ಸತ್ಯ ಸ್ವೀಕರಿಸುವಂತಾಗಲಿ" ಎಂಬ ಪ್ರವಾದಿ ರ್ಯರ(ಸ) ಆಗ್ರಹವು ಹ. ಉಮರ್‌ರ(ರ) ಮೂಲಕ ಈಡೇರಿತ್ತು. ಇನ್ನೋರ್ವ ಮರ್ ಅಂದರೆ ಅಮ್ರ್ ಬಿನ್ ಹಿಶಾಮ್ ಅರ್ಥಾತ್ ಅಬೂ ಜಹಲ್ ಈ ುಗ್ರಹದಿಂದ ವಂಚಿತನಾಗಿದ್ದ.

ಅದೇ ವೇಳೆ ಪ್ರವಾದಿವರ್ಯರು ಅಬೂ ಜಹಲ್‌ನ ಅಣ್ಣ ಹಾರಿಸ್ ಬಿನ್ ಶಾಮ್‌ರ ಬಗ್ಗೆಯೂ ಅಂತಹದೇ ನಿರೀಕ್ಷೆಯನ್ನಿರಿಸಿದ್ದರು. ಅವರ ಕುರಿತು ಪ್ರವಾದಿ ವರು(ಸ) ಒಮ್ಮೆ ಹೀಗೆಂದಿದ್ದರು, "ಹಾರಿಸ್ ಸರದಾರರಾಗಿದ್ದಾರೆ ಮತ್ತು ಾಕಿಲ್ಲ... ಅವರ ತಂದೆಯವರೂ ಸರದಾರರಾಗಿದ್ದರಲ್ಲವೇ? ಆದರೆ ಹಾರಿಸ್ ್ಯವಿಶ್ವಾಸ ಸ್ವೀಕರಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು!"

ಮಕ್ಕಾ ವಿಜಯದ ಮರುದಿನ ಹಾರಿಸ್ ಇಸ್ಲಾಮ್ ಸ್ವೀಕರಿಸಿರುವುದಾಗಿ ೋಷಿಸಿದಾಗ ಅವರನ್ನು ಯಾವುದೇ ರೀತಿಯ ವಿಚಾರಣೆಗೆ ಒಳಪಡಿಸಲಾಗಲಿಲ್ಲ.

ಮುಸ್ಲಿಮರಾದ ಬಳಿಕ ಹಾರಿಸ್‌ರು ಹುನೈನ್ ಯುದ್ಧದಲ್ಲಿ ಭಾಗವಹಿಸಿದ ತರುವಾಯ ಮಕ್ಕಾ ನಗರಕ್ಕೆ ಮರಳಿದರು. ಪ್ರವಾದಿವರ್ಯರ(ಸ) ನಿಧನದ ಷ ಇವರು ಮದೀನದಲ್ಲಿದ್ದರು. ಅನ್ಸಾರ್ ಮತ್ತು ಮುಹಾಜಿರರ ಮಧ್ಯೆ ಖಿಲಾಫ಼ ಸಂಬಂಧಿಸಿ ಭಿನ್ನಾಭಿಪ್ರಾಯ ತಲೆದೋರಿದಾಗ ಹಾರಿಸ್‌ರು ಹೀಗೆ ಅಭಿಪ್ರಾ ವ್ಯಕ್ತಪಡಿಸಿದ್ದರು, "ಅಲ್ಲಾಹ ನಾಣೆ! ಪ್ರವಾದಿವರ್ಯರು, 'ನಾಯಕತ್ವವು ಕುರೈಶರಿ ಸೇರಿದೆ'ಯೆಂದು ಹೇಳದಿರುತ್ತಿದ್ದರೆ, ನಾವು ಅನ್ಸಾರರನ್ನು ಪ್ರತ್ಯೇಕಿಸುತ್ತಿರಲಿ ಏಕೆಂದರೆ ಅನ್ಸಾರರು ನಾಯಕತ್ವದ ಹಕ್ಕುದಾರರಾಗಿದ್ದಾರೆ. ಆದರೆ ಪ್ರವಾದಿವರ್ಯರ ಆದೇಶದ ಬಗ್ಗೆ ಯಾರೂ ಸಂಶಯ ತಾಳಲಾರರು."

❖ ❖ ❖ ❖

ಸಿರಿಯಾದ ಸೇನಾ ಕಾರ್ಯಾಚರಣೆಯ ಸಿದ್ಧತೆ ನಡೆಸುವಾಗ ಖಲೀ ಅಬೂ ಬಕರ್ ಸಿದ್ದೀಕ್‌ರು(ರ), ಅರೇಬಿಯದ ಸಕಲಸರ ದಾರರಿಗೂ ಅದ ಪಾಲ್ಗೊಳ್ಳಲು ಕರೆ ನೀಡಿದರು. ಆ ಪೈಕಿ ಒಂದು ಪತ್ರ ಹಾರಿಸ್‌ರಿಗೂ ತಲುಪಿ ಅವರು ಕೂಡಲೇ ಹೊರಡಲು ಸಿದ್ಧರಾದರು. ಆದರೆ ಅವರು ಮಕ್ಕಾದ ಬಡ ಜ ಪಾಲಿಗೆ ಆಧಾರವಾಗಿದ್ದರು. ಆದ್ದರಿಂದ ಅವರು ಹೊರಡುವುದನ್ನು ತಿಳಿದು ಮ ದಲ್ಲಿ ತೀವ್ರ ದುಃಖ ವ್ಯಾಪಿಸಿತು. ಅವರಿಂದ ಸಹಾಯ-ಸಹಾನುಭೂತಿ ಹೊಂ ತ್ತಿದ್ದವರೆಲ್ಲರೂ ರೋದಿಸತೊಡಗಿದ್ದರು. ಶೋಕತಪ್ತ ಜನರು ಅವರನ್ನು ಬೀಳ್ಕೊಡ ನಗರದ ಹೊರ ವಲಯದ ವರೆಗೂ ಹಿಂಬಾಲಿಸಿದರು. ಬಡ ಜನರ ದುಃಖ ಕಂ ಹಾರಿಸ್‌ರಿಂದ ತಡೆಯ ಲಾಗಲಿಲ್ಲ. ಅವರು ಜನರನ್ನು ಸಂತೈಸುತ್ತಾ ಹೇಳಿದ

"ಜನರೇ, ಅಲ್ಲಾಹನಾಣೆ! ನಾನು ನನ್ನ ವೈಯಕ್ತಿಕ ಲಾಭಕ್ಕಾಗಿ ನಿಮ್ಮ ಬೇರ್ಪಡುತ್ತಿಲ್ಲ. ಈ ನಗರಕ್ಕಿಂತ ಬೇರೊಂದು ನಗರ ನನಗೆ ಪ್ರಿಯವಾಗಿಯೂ ಇ ಬದಲಾಗಿ ಪ್ರಮುಖ ಕಾರ್ಯಾಚರಣೆಯೊಂದು ನಮ್ಮ ಮುಂದಿದೆ. ಅದ ಕುರೈಶರ ಎಲ್ಲ ಸರದಾರರೂ ಭಾಗವಹಿಸುತ್ತಿದ್ದಾರೆ. ಇಂಥ ಪ್ರಮುಖ ಅವಕಾಶವ ತೊರೆದರೆ, ಮುಂದೆ ಮಕ್ಕಾ ನಗರದ ಸಕಲ ಪರ್ವತಗಳಷ್ಟು ಚಿನ್ನವನ್ನು ದ ಮಾಡಿದರೂ ಅದಕ್ಕೆ ಸಮಾನವಾಗಲಾರದು. ಒಂದು ವೇಳೆ, ನನಗೆ ಈ ಯುದ್ಧ ಲೌಕಿಕ ಘನತೆ ದೊರೆಯಬೇಕೆಂಬ ಚಿಂತೆಯೇನೂ ನನಗಿಲ್ಲ, ಪಾರಲೌ ಸಮೃದ್ಧಿಯು ಲಭಿಸುವ ನಿರೀಕ್ಷೆಯಿದೆ. ನಾವೆಲ್ಲರೂ ದೇವ ಮಾರ್ಗದಲ್ಲಿ ಹೋರಾಡ ಹೊರಡುತ್ತಿದ್ದೇವೆ."

ಈ ರೀತಿ ಹಾರಿಸ್‌ರು(ರ) ಉತ್ಸಾಹ ಭರಿತರಾಗಿ ಜಿಹಾದ್‌ಗೆ ಹೊರಟ ಫಹಲ್ ಮತ್ತು ಅಜ್‌ನಾದೀನ್ ಯುದ್ಧ ಮೈದಾನಗಳಲ್ಲಿ ಪರಾಕ್ರಮ ಮೆರೆದ ಈ ಕಾರ್ಯಾಚರಣೆಯ ಒಂದಂಗವಾದ ಯರ್ಮೂಕ್ ಯುದ್ಧವಂತೂ ಪ್ರಮು

ಠಿಣವಾಗಿತ್ತು. ಪ್ರಾರಂಭದಲ್ಲಿ ಮುಸ್ಲಿಮರಲ್ಲಿ ಅನೇಕ ಮಂದಿ ಹುತಾತ್ಮರಾದರು. ಹಾರಿಸ್‌ರೂ ಗಾಯಗೊಂಡರು. ಅಂತ್ಯ ವೇಳೆಯಲ್ಲಿ ತೀವ್ರವಾಗಿ ಬಾಯಾರಿದರು. ರ ಬಳಿ ಇತರ ಮುಸ್ಲಿಮ್ ಯೋಧರೂ ಗಾಯಗೊಂಡು ಬಾಯಾರಿದ ಸ್ಥಿತಿ ಬಿದ್ದುಕೊಂಡಿದ್ದರು. ಓರ್ವರು ಹಾರಿಸ್‌ರ ಬಳಿಗೆ ನೀರು ತಂದರು. ಆದರೆ ರಿಯಾದ ಹಾರಿಸ್‌ರು ಇತರರಿಗೆ ನೀಡಲು ಹೇಳಿದರು. ಹತ್ತಿರವಿದ್ದವರೂ ರ ಬಳಿಗೆ ಕಳುಹಿಸಿದರು. ಅಷ್ಟು ಹೊತ್ತಿಗೆ ಹಾರಿಸ್‌ರ ಪ್ರಾಣಪಕ್ಷಿ ಹಾರಿ ಗಿತ್ತು. ❑

ಕಿರುಕುಳ, ವಿಷಪ್ರಾಶನವೂ ಕ್ಷಮಾರ್ಹ!

ಕುರೈಶಿ ಶ್ರೀಮಂತರಲ್ಲೋರ್ವರಾಗಿದ್ದ ಸುಹೈಲ್ ಬಿನ್ ಅಮ್ರ್ ಪ್ರವಾದಿವರ್ಯರ ವೈರಿಗಳ ಪೈಕಿ ಒಬ್ಬರಾಗಿದ್ದರು. ಅವರ ರೂಢನಾಮ ಅಬೂಯಝೀದ್ ನಾಗಿತ್ತು. ಅವರು ಪ್ರವಾದಿವರ್ಯರ(ಸ) ವಿರುದ್ಧ ಅಲ್ಲಲ್ಲಿ ಭಾಷಣ ಮಾಡುತ್ತಿದ್ದರು. ಉಮರ್(ರ)ರವರು, ಸುಹೈಲರಿಗೆ ಹೊಡೆಯಲು ಮುಂದಾದಾಗ ಪ್ರವಾದಿ ರ್ಯರು(ಸ) ಅವರನ್ನು ತಡೆದು ಹೀಗೆಂದಿದ್ದರು, "ಈ ವೇಳೆಯಲ್ಲಿ ಸುಹೈಲ್ ನ್ನು ದುಃಖಕ್ಕೀಡು ಮಾಡುತ್ತಿದ್ದಾರೆ. ಬಹುಶಃ ಮುಂದೆಂದಾದರೂ ನಮ್ಮ ಸೋಷಕ್ಕೆ ಅವರು ಕಾರಣರಾಗಬಹುದು."

ಸುಹೈಲ್‌ರು, ಪ್ರವಾದಿ ಪತ್ನಿ ಸೌದಾರ(ರ) ಆಪ್ತ ಬಂಧುವಾಗಿದ್ದರು. ಬದ್ರ್ ದ್ಧದಲ್ಲಿ ಬಂದಿಯಾದವರಲ್ಲಿ ಸುಹೈಲ್ ಕೂಡಾ ಇದ್ದರು. ಅವರನ್ನು ಸೌದರ(ರ) ಂದೆ ತರಲಾದಾಗ, ಸೌದರ ಬಾಯಿಯಿಂದ ಈ ಉದ್ಗಾರ ಹೊರಟಿತ್ತು, "ನೀವೂ ಳೆಯರಂತೆ ಬಳೆ ತೊಟ್ಟುಬಿಟ್ಟಿರಾ? ಹೋರಾಡಿ ಮಡಿಯಲು ನಿಮ್ಮಿಂದಾಗ ವೇ?"

ಸುಹೈಲ್‌ರ ಈರ್ವರು ಪುತ್ರರಾದ ಅಬ್ದುಲ್ಲಾ(ರ) ಮತ್ತು ಅಬೂ ಜಂದಲ್(ರ) ರಂಭದಲ್ಲಿಯೇ ಇಸ್ಲಾಮ್ ಸ್ವೀಕರಿಸಿದ್ದರು. ಈ ಕಾರಣಕ್ಕಾಗಿ ಅವರೀರ್ವರಿಗೂ ಹೈಲ್ ನಾನಾ ತರವಾಗಿ ಕಿರುಕುಳ ನೀಡಿದರು. ಹುದೈಬಿಯಾ ಸಂಧಿಯ ವೇಳೆ ಬೂಜಂದಲ್‌ರು(ರ) ಗೃಹಬಂಧನದಿಂದ ತಪ್ಪಿಸಿ ಬಂದು ಪ್ರವಾದಿವರ್ಯರ(ಸ) ಯ ಕೋರಿದರು. ಆ ವೇಳೆ, ಹುದೈಬಿಯಾ ಸಂಧಿಯ ಶರ್ತಗಳನ್ನು ನಿಶ್ಚಯಿಸ ಕಾಗಿ ಸುಹೈಲ್‌ರೇ ಆಗಮಿಸಿದ್ದರು. ಹಾಗಾಗಿ ಸಹಾಬಿಗಳ ಇಂಗಿತವಿದ್ದಾಗಿಯೂ ಒಂದದ ಶರ್ತ ಪ್ರಕಾರ ಅಬೂಜಂದಲ್‌ರನ್ನು ಮಕ್ಕಾಗೆ ಮರಳಿಸಲಾಯಿತು.

ಮಕ್ಕಾ ವಿಜಯದ ಸಂದರ್ಭದಲ್ಲಿ ಸುಹೈಲ್‌ರು ಶಿಕ್ಷೆಗೆ ಭಯಪಟ್ಟು ನಗರ ರ ವಲಯದಲ್ಲಿ ಅಡಗಿಕೊಂಡಿದ್ದರು. ತರುವಾಯ ಪುತ್ರ ಅಬೂಜಂದಲ್‌ರ

ಮೂಲಕ ಪ್ರವಾದಿವರ್ಯರಿಂದ(ಸ) ಅಭಯ ಯಾಚಿಸಿದರು. ಪ್ರವಾದಿವರ್ಯರ ಕೂಡಲೇ ಅವರನ್ನು ಕ್ಷಮಿಸಿ ಅಭಯ ನೀಡಿದರು. ಹುನೈನ್ ಯುದ್ಧದಿಂದ ಪ್ರ ವರ್ಯರು(ಸ) ಮರಳುತ್ತಿದ್ದ ವೇಳೆ, ಸುಹೈಲ್‌ರು ಬಂದು ಅವರನ್ನು ಸೇರಿಕೊಂ ಮತ್ತು ಜಅ್‌ರಾನ ಎಂಬಲ್ಲಿ ಇಸ್ಲಾಮ್ ಸ್ವೀಕರಿಸಿದ್ದರು. ಅಜ್ಞಾನ ಕಾಲದಲ್ಲಿ ಅ ಧರ್ಮ ವಿಶ್ವಾಸದಲ್ಲಿ ಎಷ್ಟು ಕಠಿಣ ಧೋರಣೆ ಹೊಂದಿದ್ದರೋ ಅದೇ ರೀ ಧೋರಣೆಯನ್ನು ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ಇಸ್ಲಾಮೀ ಆಚರಣೆ ತೊಡಗಿಕೊಳ್ಳುತ್ತಿದ್ದರು.

❖ ❖ ❖ ❖

ಪ್ರವಾದಿವರ್ಯರು(ಸ) ನಿಧನರಾದಾಗ ನವ ಮುಸ್ಲಿಮರಲ್ಲಿ ಧರ್ಮಭ್ರ ಹರಡುವ ಲಕ್ಷಣಗಳು ಗೋಚರಿಸತೊಡಗಿತ್ತು. ಆದರೆ ಸುಹೈಲ್‌ರ(ರ) ವಿಶ್ವಾಸ ಎಳ್ಳಷ್ಟೂ ವ್ಯತ್ಯಾಸವುಂಟಾಗಲಿಲ್ಲ. ಅವರು ಆ ಸಂದರ್ಭದಲ್ಲಿ ಎಲ್ಲ ಗೋ ಜನರನ್ನು ಒಟ್ಟುಗೂಡಿಸಿ ಈ ರೀತಿ ಉಪದೇಶಿಸಿದರು, “ಸತ್ಯವಿಶ್ವಾಸಿ ಸಹೋದ ನೀವು ಪ್ರವಾದಿವರ್ಯರನ್ನು(ಸ) ಆರಾಧಿಸುತ್ತಿರುವಿ ರಾದರೆ, ಅವರು ನಿಧನರಾಗಿ ನೀವು ಅಲ್ಲಾಹನನ್ನು ಆರಾಧಿಸುತ್ತೀರೆಂದಾದರೆ, ಅಲ್ಲಾಹ್ ಚಿರಂತನನೂ ಸ್ವ ಜೀವಂತನೂ ಆಗಿದ್ದಾನೆ. ಓ ಕುರೈಶ್ ಜನರೇ! ನೀವು ಎಲ್ಲರಿಗಿಂತ ತಡ ಇಸ್ಲಾಮ್ ಸ್ವೀಕರಿಸಿದವರಾಗಿದ್ದೀರಿ. ಆದರೆ ಅದನ್ನು ಮೊತ್ತ ಮೊದಲು ತೊರೆಯ ವರಾಗಬೇಡಿರಿ. ಪ್ರವಾದಿವರ್ಯರ(ಸ) ವಿಯೋಗದಿಂದ ಇಸ್ಲಾಮಿಗೆ ಯಾವ ರೀತಿಯ ಆಘಾತ ಅಥವಾ ನಷ್ಟ ಉಂಟಾಗಲಾರದು. ಬದಲಾಗಿ ಅದು (ದಿನೇ ವರ್ಧಿಸುತ್ತಲೇ ಇರುವುದು. ಇಸ್ಲಾಮ್ ಲೋಕದಾದ್ಯಂತ ಹರಡಿ ಸೂರ್ಯ ಅಷ್ಟ ದಿಕ್ಕುಗಳಿಗೂ ಪ್ರಕಾಶ ಬೀರುವುದು ಎಂಬ ವಿಶ್ವಾಸ ನನಗಿದೆ. ನೆನ ಯಾರಾದರೂ ಇಸ್ಲಾಮಿನಿಂದ ವ್ಯತಿಚರಿಸಿದರೆ ನಾನವನ ತಲೆ ಕಡಿದು ಬಿಡುವೆ

ಸುಹೈಲ್‌ರ(ರ) ಈ ಆವೇಶಪೂರ್ಣ ಉಪದೇಶವು ಜನರ ಮೇಲೆ ? ಪ್ರಭಾವ ಬೀರಿತು. ಈ ರೀತಿಯ ಕ್ಷೋಭೆ ನಿಗ್ರಹಿಸುವ ನಿಟ್ಟಿನಲ್ಲಿ ಸುಹೈಲ್‌ರ ಇಡೀ ಕುಟುಂಬವು ಪರಿಶ್ರಮ ಪಟ್ಟಿತ್ತು. ಇಂಥ ಕ್ಷೋಭೆಯನ್ನು ಅಣಗಿಸಲಿ ನಡೆದ ಯಮಾಮಾ ಯುದ್ಧದಲ್ಲಿ ಸುಹೈಲ್‌ರ ಹಿರಿಯ ಪುತ್ರ ಹುತಾತ್ಮರಾದ

ಸಿರಿಯಾ ಕಾರ್ಯಚರಣೆಯ ವೇಳೆ ದ್ವಿತೀಯ ಖಲೀಫಾ ಉಮರ್‌ರವರು ಎಲ್ಲ ಗೋತ್ರಗಳ ನಾಯಕರನ್ನು ಒಟ್ಟು ಸೇರಿಸಿದರು. ಬಳಿಕ ಒಬ್ಬೊಬ್ಬರನ್ನೇ ಕ ಮಾತನಾಡಿದರು. ಮೊದಲು ಇಸ್ಲಾಮ್ ಸ್ವೀಕರಿಸಿದವರನ್ನು ಮೊದಲು ಕರೆಯ ಉದ್ದೇಶದಿಂದ ಮೊತ್ತ ಮೊದಲಿಗೆ ಬದ್ರ್ ಯುದ್ಧದಲ್ಲಿ ಪಾಲ್ಗೊಂಡವರಿಗೆ ಆ ನೀಡಿದರು. ಇದು ಅಬೂ ಸುಫಿಯಾನರಿಗೆ(ರ) ಅರೋಚಕವೆನಿಸಿತು. ಅವ

ಲಾಮರನ್ನು ಮೊದಲು ಕರೆಯಲಾಗುತ್ತಿದೆ ಮತ್ತು ನಾವು ಬಾಗಿಲಲ್ಲೇ ಕುಕೊಂಡಿದ್ದೇವೆ" ಎಂದು ಆಕ್ಷೇಪಿಸಿದರು. ಇದನ್ನು ಕೇಳಿದ ಸುಹೈಲ್‌ರಿಗೆ ಸಹಿಸ ಗಲಿಲ್ಲ. ಅವರು ಹೇಳಿದರು, "ನಿಮಗೆ ಏನಾಗಿದೆ? ಇಸ್ಲಾಮ್ ಎಲ್ಲರ ಂದೆಯೂ ಏಕ ಪ್ರಕಾರವೇ ಸಂದೇಶವನ್ನಿಟ್ಟಿತ್ತು. ಆ ಜನರು ಮೊದಲು ಇಸ್ಲಾಮ್ ರಿಸಿದರು. ನಿಮಗೆ ಕೋಪ ಬರುವುದಾದರೆ ಸ್ವತಃ ನಿಮ್ಮ ಮೇಲೆಯೇ ಬರ ತ್ತು. ನೀವು ಇಸ್ಲಾಮ್ ಸ್ವೀಕರಿಸುವಲ್ಲಿ ವಿಳಂಬ ಯಾಕೆ ಮಾಡಿದಿರಿ? ಈಗ ರಿಗಿಂತ ಹೆಚ್ಚು ಗೌರವ ಪಡೆಯುವ ಹಕ್ಕು ನಿಮಗಿಲ್ಲ. ಈಗ ಜಿಹಾದ್‌ನ (ದೇವ ರ್ಗದಲ್ಲಿ ಹೋರಾಡುವ) ಅವಕಾಶವೊದಗಿ ಬಂದಿದೆ. ಅದನ್ನು ಕಳಕೊಳ್ಳಬೇಡಿರಿ. ಹಿರಿಮೆಯೂ ತಪ್ಪಿ ಹೋಗದಂತೆ ನೋಡಿಕೊಳ್ಳಿರಿ." ಸುಲೈಹ್‌ರ(ರ) ಈ ತುಗಳು ಅಬೂ ಸುಫಿಯಾನ್‌ರ(ರ) ಮೇಲೆ ಪ್ರಭಾವ ಬೀರಿದುವು. ಹಾಗೆಯೇ ಹೈಲ್‌ರೂ(ರ) ಪ್ರಸ್ತುತ ಜಿಹಾದ್‌ನಲ್ಲಿ ಭಾಗವಹಿಸಿದ್ದರು ಮತ್ತು ಯರ್ಮೂಕ್ ದ್ಧದಲ್ಲಿ ಸೇನಾ ತುಕಡಿಯೊಂದರ ದಂಡನಾಯಕನೂ ಆದರು.

ಸುಲೈಹ್‌ರಿಗೆ(ರ), ತಾನು ಹಿಂದೆ ಪ್ರವಾದಿ(ಸ) ಮತ್ತು ಮುಸ್ಲಿಮರೊಡನೆ ೀರವಾಗಿ ವರ್ತಿಸುತ್ತಿದ್ದುದರ ನೆನಪು ಸದಾ ಕಾಡುತ್ತಿತ್ತು. ಅದಕ್ಕಾಗಿ ಅವರು ್ಂದ ಸಾಧ್ಯವಾದಷ್ಟು ಇಸ್ಲಾಮಿಗೆ ಪ್ರಯೋಜನವನ್ನುಂಟು ಮಾಡಲು ಶ್ರಮಿಸುತ್ತಿದ್ದರು. ಲಾಮಿಗೆ ವಿರುದ್ಧ ಖರ್ಚು ಮಾಡಿದುದಕ್ಕಿಂತಲೂ ಅಧಿಕ ಸಂಪತ್ತನ್ನು ಇಸ್ಲಾಮಿನ ವಾಗಿ ಖರ್ಚು ಮಾಡಿದರು. ಇಸ್ಲಾಮ್ ಸ್ವೀಕರಿಸಿದ ಬಳಿಕ ಯಾವೆಲ್ಲ ಯುದ್ಧ ನಡೆದಿದ್ದುವೋ ಅವೆಲ್ಲದರಲ್ಲೂ ಸಕ್ರಿಯವಾಗಿ ಪಾಲ್ಗೊಂಡರು ಮತ್ತು ಅತ್ಯಂತ ಕ್ರಮ ಮೆರೆದು ಶತ್ರುಗಳಿಗೆ ಸಿಂಹಸ್ವಪ್ನವಾದರು. ಸಿರಿಯದ ಕಾರ್ಯಾಚರಣೆಯ ೆ ಅವರು ತಮ್ಮ ಸಂಪೂರ್ಣ ಕುಟುಂಬವನ್ನು ಪಾಲ್ಗೊಳಿಸಿದರು. ಅವರಲ್ಲಿ ನೇಕರು ದೇವಮಾರ್ಗದಲ್ಲಿ ಹುತಾತ್ಮರಾದರು.

ಸುಹೈಲ್‌ರು ಅತ್ಯಧಿಕವಾಗಿ ದೇವರಾಧನೆ ಮಾಡುತ್ತಿದ್ದರು. ನಮಾಝ್‌ಗಳನ್ನು ಹೆಚ್ಚು ನಿರ್ವಹಿಸುತ್ತಿದ್ದರು. ಆರಾಧನೆಯ ಆಧಿಕ್ಯದಿಂದಾಗಿಯೇ ಅವರ ದೇಹ ರಗಿತ್ತು. ಕುರ್‌ಆನ್ ಪಠಣದ ವೇಳೆಯಲ್ಲೆಲ್ಲಾ ತಮಗರಿವಿಲ್ಲದೆಯೇ ಅತ್ತುಬಿಡುತ್ತಿದ್ದರು. ರು ಹಿ.ಶ. 18ರಲ್ಲಿ ನಿಧನರಾದರು.

ಷ ನೀಡಿದಾಕೆಗೆ ಕ್ಷಮಾದಾನ

ಪ್ರವಾದಿವರ್ಯರು(ಸ) ಖೈಬರ್ ಯುದ್ಧವನ್ನು ಜಯಿಸಿದ ಬಳಿಕ, ಓರ್ವ ಹೂದಿ ಮಹಿಳೆಯು ಬೇಯಿಸಿದ ಮಾಂಸದಲ್ಲಿ ವಿಷ ಬೆರೆಸಿ ತಂದು ಪ್ರವಾದಿ ರ್ಯರಿಗೆ(ಸ) ನೀಡಿದಳು. ಒಂದು ತುತ್ತು ಬಾಯಿಗಿಡುವಾಗಲೇ ಪ್ರವಾದಿವರ್ಯರಿಗೆ ಂರದಲ್ಲಿ ವಿಷವಿರುವುದು ತಿಳಿಯಿತು. ಅವರು ಆ ಮಹಿಳೆಯೊಡನೆ ಕೇಳಿದರು,

"ಮಾಂಸದಲ್ಲಿ ವಿಷ ಬೆರೆಸಿದ್ದೀಯಾ?" ಆಕೆ ಆಶ್ಚರ್ಯಗೊಂಡು, "ಇದರಲ್ಲಿ ‹ ಸೇರಿಸಲಾಗಿದೆಯೆಂದು ನಿಮಗೆ ಹೇಗೆ ತಿಳಿಯಿತು?" ಎಂದು ಮರು ಪ್ರಶ್ನಿಸಿದ "ನನಗೆ ನೀನು ನೀಡಿರುವಂತಹ ಮಾಂಸವೇ ಸ್ವಯಂ ನಿನ್ನ ಕೃತ್ಯವನ್ನು ಬಹಿರ ಪಡಿಸಿದೆ" ಎಂದು ಪ್ರವಾದಿವರ್ಯರು(ಸ) ಹೇಳಿದರು. ಆಕೆ ಪ್ರವಾದಿವರ್ಯ ಕ್ಷಮೆ ಯಾಚಿಸಿದಳು.

ಪ್ರವಾದಿವರ್ಯರು(ಸ) ಆಕೆಯನ್ನು ಕ್ಷಮಿಸಿದ ಬಳಿಕ "ನೀನು ಹೀ ಮಾಡಿದೆ?" ಎಂದು ವಿಚಾರಿಸಿದರು. ಆಕೆ ಹೀಗೆ ಉತ್ತರಿಸಿದಳು, "ಒಂದು ವ ನೀವು ನಿಜವಾದ ಪ್ರವಾದಿಯಾಗಿರುವಿರೆಂದಾದರೆ ವಿಷದ ಪ್ರಭಾವ ನಿಮ್ಮ ಮೇಲಾಗ ಪ್ರವಾದಿಯಲ್ಲವೆಂದಾದರೆ ನಿಮ್ಮಿಂದ ಸುಲಭದಲ್ಲಿ ಮುಕ್ತಿ ಪಡೆದಂತಾಗುತ್ತಿತ್ತು." ವಿಷದ ಪ್ರಭಾವವು ಪ್ರವಾದಿವರ್ಯರನ್ನು ಜೀವಮಾನವಿಡೀ ಕಾಡುತ್ತಿತ್ತು. ಕೊನೆ ಗಳಿಗೆಯಲ್ಲಿ ಅವರು(ಸ) "ಈ ಸಮಯದಲ್ಲಿ ಆ ವಿಷವು ನನ್ನ ಕಂಠನಾಡಿಯ ತುಂಡರಿಸುತ್ತಿದೆ" ಎಂದು ಹೇಳುತ್ತಿದ್ದರು.

ಹಂತಕರ ಮೇಲೆ ದಯೆ

ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಒಮ್ಮೆ ಮುಂಜಾನೆಯ ವ ಎಂಬತ್ತು ಮಂದಿಯ ತಂಡವೊಂದು ತಗೀಮ್ ಪರ್ವತದ ಮೂಲಕ ಇಳ ಬಂತು. ಯಾರಿಗೂ ತಿಳಿಯದಂತೆ ಪ್ರವಾದಿವರ್ಯರನ್ನು(ಸ) ಮುಗಿಸಿ ಬಿಡುವ ಅವರ ಹಂಚಿಕೆಯಾಗಿತ್ತು. ಆದರೆ ಎಲ್ಲರೂ ಬಂಧಿಸಲ್ಪಟ್ಟರು. ಹಾಗಿ ಪ್ರವಾದಿವರ್ಯರು(ಸ) ಅವರನ್ನು ಯಾವುದೇ ವಿಚಾರಣೆಗೊಳಪಡಿ ಬಿಡುಗಡೆಗೊಳಿಸಿರು. ಈ ಘಟನೆಯ ಕುರಿತು ಪವಿತ್ರ ಕುರ್‌ಆನಿನಲ್ಲಿ ಈ (ಉಲ್ಲೇಖಿಸಲಾಗಿದೆ,

"ಮಕ್ಕಾ ಕಣಿವೆಯಲ್ಲಿ ಅವರ ಕೈಗಳನ್ನು ನಿಮ್ಮಿಂದಲೂ ನಿಮ್ಮ ಕೈಗಳ ಅವರಿಂದಲೂ ತಡೆದವನು ಅವನೇ. ವಸ್ತುತಃ ಅವನು ನಿಮಗೆ ಅವರ ಮೆ ಪ್ರಾಬಲ್ಯ ದಯಪಾಲಿಸಿದ್ದನು ಮತ್ತು ನೀವು ಮಾಡುತ್ತಿದ್ದುದನ್ನೆಲ್ಲ ಅಲ್ಲಾ ವೀಕ್ಷಿಸುತ್ತಿದ್ದನು." **(ಪವಿತ್ರ ಕುರ್‌ಆನ್: 48: 24)**

ಒಮ್ಮೆ ಓರ್ವ ವ್ಯಕ್ತಿಯು ಪ್ರವಾದಿವರ್ಯರನ್ನು(ಸ) ಕೊಲ್ಲುವ ಸಂ ಹೂಡಿದನು. ಇದನ್ನು ತಿಳಿದ ಸಹಾಬಿಗಳು ಆತನನ್ನು ಹಿಡಿದು ಪ್ರವಾದಿವರ್ಯರ ಸನ್ನಿಧಿಗೆ ತಂದರು. ಪ್ರವಾದಿವರ್ಯರನ್ನು ನೋಡುತ್ತಲೇ ಆತ ಕಂಪಿಸಿದನು. ಆತನನ್ನು ಉದ್ದೇಶಿಸಿ ಪ್ರವಾದಿವರ್ಯರು(ಸ) ಹೇಳಿದರು, "ಹೆದರಬೇಡ. ನಿ ಒಂದು ವೇಳೆ ನನ್ನನ್ನು ಕೊಲ್ಲಲು ಯತ್ನಿಸಿದರೂ ಕೊಲ್ಲಲಾರೆ." ❑

ಇಪ್ಪತ್ತು ವರ್ಷ ಲೇವಡಿ ಮಾಡಿದವರು!

ಪ್ರವಾದಿವರ್ಯರ(ಸ) ಚಿಕ್ಕಪ್ಪ ಹಾರಿಸ್‌ರ ಪುತ್ರ ಮುಗೀರ ಶೈಶವ ಕಾಲದಲ್ಲಿ ೀಮ ಸಅದಿಯ್ಯರ ಮೊಲೆ ಹಾಲು ಕುಡಿದಿದ್ದರು. ಆ ಕಾರಣ ಅವರು ಪ್ರವಾದಿ ರ್ಯರಿಗೆ ದಾಯಾದಿಯಾಗಿರುವಂತೆಯೇ ಸ್ತನಪಾನ ಸಂಬಂಧಿ ಸಹೋದರ ಡ ಆಗಿದ್ದರು. ಬಾಲ್ಯ ಮತ್ತು ಯೌವ್ವನದಲ್ಲಿ ಈರ್ವರಲ್ಲಿಯೂ ಗಾಢ ತ್ರಿಯಿತ್ತು. ಆದರೆ ಇಸ್ಲಾಮ್‌ನ ಸೂರ್ಯ ಉದಯಿಸುವುದರೊಂದಿಗೆ ಈ ತ್ರಿಯು ಅಸ್ತಮಿಸಿತು. ಮುಗೀರಾ, ಪ್ರವಾದಿವರ್ಯರ(ಸ) ಕಡುವೈರಿಯಾದರು.

ವಿಶೇಷವೆಂದರೆ ಮುಗೀರ, ಅಬೂ ಸುಫಿಯಾನ್ ಎಂಬ ಹೆಸರಿನಿಂದಲೂ ಯಲ್ಪಡುತ್ತಿದ್ದರು. ಅಲ್ಲದೆ ಪ್ರವಾದಿವರ್ಯರ(ಸ) ಮಾವ ಅಬೂಸುಫಿಯಾನ್ ತೆಯೇ ಮುಗೀರಾ ಕೂಡ ಮಕ್ಕಾ ವಿಜಯದ ತನಕವೂ ಇಸ್ಲಾಮಿನ ಶತ್ರುವಾಗಿದ್ದುದು ತ್ರವಲ್ಲ, ಇಸ್ಲಾಮಿನ ವಿರುದ್ಧ ಅದುವರೆಗೆ ನಡೆದಿದ್ದ ಎಲ್ಲ ಯುದ್ಧಗಳಲ್ಲೂ ಯರಾಗಿ ಪಾಲ್ಗೊಂಡಿದ್ದರು. ಮುಸ್ಲಿಮರಿಗೆ ನಷ್ಟವುಂಟು ಮಾಡುವುದರಲ್ಲಿಯೂ ಗೀರರು ಅಬೂ ಸುಫಿಯಾನ್‌ರವರಿಗಿಂತ ಹಿಂದೆ ಬಿದ್ದಿರಲಿಲ್ಲ. ಕಾವ್ಯಸಿರಿ ಗೀರರಿಗೆ ಜನ್ಮದತ್ತವಾಗಿ ದೊರೆತ ಸಂಪತ್ತಾಗಿತ್ತು. ಹಾಗಾಗಿ ಪ್ರವಾದಿವರ್ಯರ(ಸ) ುದ್ಧ ಲೇವಡಿ ಗೀತೆ ರಚಿಸಿ ಹಾಡುವುದಕ್ಕೆ ಹೆಚ್ಚು ಶ್ರಮ ಪಟ್ಟವರಲ್ಲಿ ಮುಗೀರರು ರಾಗಿದ್ದರು. ಗಲ್ಲಿ–ಪೇಟೆಗಳಲ್ಲಿ ಈ ರೀತಿ ಇಸ್ಲಾಮಿನ ಅವಹೇಳನ ಮಾಡುವ ವಡಿ ಗೀತೆ ಹಾಡುವುದು ಇವರ ಹವ್ಯಾಸವಾಗಿತ್ತು. ಹಸ್ಸಾನ್ ಬಿನ್ ಸಾಬಿತ್‌ರು(ರ) ಲಾಮ್ ಸ್ವೀಕರಿಸಿದಂದಿನಿಂದ ಇವರ ಲೇವಡಿ ಗೀತೆಗಳಿಗೆ ಕಾವ್ಯದಲ್ಲಿಯೇ ಉತ್ತರ ಡುತ್ತಿದ್ದರು.

ಮಕ್ಕಾ ವಿಜಯದ ಕೆಲವು ದಿನಗಳ ಮುಂಚೆ... ಪ್ರವಾದಿವರ್ಯರು(ಸ) ಮಕ್ಕಾ ರದ ಮೇಲೆ ಮುತ್ತಿಗೆ ಹಾಕಲು ತಯಾರಿ ನಡೆಸುತ್ತಿದ್ದ ಸುದ್ದಿಯು ಮಕ್ಕಾ ನಗರ ದ್ಯಂತ ಹರಡಿದಾಗ, ಮುಗೀರ ತನ್ನ ಪತ್ನಿಯನ್ನು ಕರೆದು ಹೇಳಿದರು, "ಇನ್ನು ಂಗೆ ಉಳಿಗಾಲವಿಲ್ಲ, ನಾವು ಎಲ್ಲಾದರೂ ಹೋಗಿ ಆಶ್ರಯ ಪಡೆಯೋಣ." ದರೆ ಆ ವೇಳೆಗೆ ಅವರ ಪತ್ನಿಗೆ ಸತ್ಯದರ್ಶನದ ಭಾಗ್ಯ ಪ್ರಾಪ್ತಿಯಾಗಿತ್ತು. ಅವರು ಯನ್ನು ತಡೆಯುತ್ತಾ ಹೇಳಿದರು, "ಇಡೀ ಅರೇಬಿಯವೇ ಮುಹಮ್ಮದ್‌ರನ್ನು ುಸರಿಸುತ್ತಿದೆ. ಹೀಗಿರುತ್ತಾ ನೀವು ಅವರೊಂದಿಗಿನ ಶತ್ರುತ್ವವನ್ನು ಇನ್ನೂ ಂದುವರಿಸುತ್ತಿದ್ದೀರಲ್ಲ! ವಾಸ್ತವದಲ್ಲಿ ಅವರಿಗೆ ಸಹಾಯ ಮಾಡುವವರ ಪೈಕಿ ವು ಮೊದಲಿಗರಾಗಬೇಕಿತ್ತು."

ಪತ್ನಿಯ ಕೊನೆಯ ವಾಕ್ಯವು ಮುಗೀರರ ಹೃದಯಕ್ಕೆ ಬಾಣದಂತೆ ನಾಟಿತು.

ಅವರು ಕೂಡಲೇ ಮಗನನ್ನು ಕರೆದುಕೊಂಡು ಪ್ರವಾದಿವರ್ಯರ(ಸ) ಸನ್ನಿಧಿಂ
ಹಾಜರಾದರು. ಅವರ ಆಗಮನವನ್ನು ಸಹಾಬಿಗಳು ವಿರೋಧಿಸಿದರು. ಖ
ಹೊಡೆತವನ್ನು ಬೇಕಾದರೆ ಕ್ಷಮಿಸಬಹುದು. ಆದರೆ ಅದಕ್ಕಿಂತಲೂ ಹರಿತವ
ನಾಲಗೆಯ ಹೊಡೆತವನ್ನು ಕ್ಷಮಿಸುವುದು ಅಷ್ಟು ಸುಲಭವಲ್ಲವಷ್ಟೆ. ಆ
ಪ್ರವಾದಿವರ್ಯರು(ಸ) ಅಲಿಯವರನ್ನು(ರ) ಕರೆದು, "ನಮ್ಮ ಚಿಕ್ಕಪ್ಪನ ಮಗನ
ಕರೆದುಕೊಂಡು ಹೋಗಿ ನಮಾಝ್ ಕಲಿಸು. ಮತ್ತೆ ನನ್ನ ಬಳಿಗೆ ಕರಕೊಂ
ಬಾ" ಎಂದು ಆದೇಶಿಸಿದರು.

ಹೀಗೆ ಹ. ಅಲಿಯವರು ಮುಗೀರರನ್ನು ಕರೆದುಕೊಂಡು ಹೋಗಿ, ಮೆ
ಮೊದಲಿಗೆ ಸ್ನಾನ ಮಾಡಲು ಹೇಳಿದರು. ಬಳಿಕ ನಮಾಝ್‌ನ ರೀತಿಯ
ಕಲಿಸಿದರು. ತರುವಾಯ ಪ್ರವಾದಿವರ್ಯರ(ಸ) ಬಳಿಗೆ ಕರೆ ತಂದರು. ಮುಗೀ
ಪ್ರವಾದಿವರ್ಯರ(ಸ) ಮುಂದೆ ಸತ್ಯವಚನ ಪಠಿಸಿ ಪ್ರಕೃತಿ ಧರ್ಮ ಸ್ವೀಕರಿಸಿದ
ಆಗ ಪ್ರವಾದಿವರ್ಯರು(ಸ) ಸಂಗಾತಿಗಳನ್ನು ಉದ್ದೇಶಿಸಿ ಹೀಗೆಂದರು, "ಮುಗೀರರಿ
ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶವಾಹಕರು ಸಂತುಷ್ಟರಾದರು. ನೀವು ಕ
ಸಂತುಷ್ಟರಾಗಿರಿ."

ಇಸ್ಲಾಮ್ ಸ್ವೀಕರಿಸಿದ ಬಳಿಕ ಮುಗೀರಾ(ರ) ಪ್ರಥಮವಾಗಿ ಮಕ್ಕಾ ವಿಜಯ
ಪಾಲ್ಗೊಂಡರು. ನಂತರ ಹುನೈನ್ ಯುದ್ಧದಲ್ಲಿ ಶೌರ್ಯ ಮೆರೆದರು. ಯುದ್ಧ
ಅವರು ಪ್ರವಾದಿವರ್ಯರನ್ನು ರಕ್ಷಿಸಲು ಮತ್ತು ಸಹಾಯ ಮಾಡಲು ಸಾಧ್ಯ
ಶ್ರಮಿಸಿದರು. ಇದರಿಂದ ಪ್ರವಾದಿವರ್ಯರು(ಸ) ಸಂತುಷ್ಟರಾಗಿ ಹೇಳಿದ
"ನಿಜವಾಗಿಯೂ ನೀವು ನನ್ನ ಸಹೋದರರಾಗಿರುವಿರಿ." ಇದನ್ನು ಕೇಳಿ ಮುಗೀರ
ಅತ್ಯಧಿಕ ಸಂತೋಷವಾಯಿತು ಹಾಗೂ ಅವರು ಪ್ರವಾದಿವರ್ಯರ(ಸ) ಸವಾರಿ
ಲಗಾಮನ್ನು ಹಿಡಿದುಕೊಂಡೇ ಶತ್ರುಗಳ ವಿರುದ್ಧ ಕಾದಾಡಿದರು. ಈ ಶೌಯ
ಪರಾಕ್ರಮದಿಂದ ಸಂತುಷ್ಟರಾದ ಪ್ರವಾದಿವರ್ಯರು(ಸ) ಮುಗೀರರಿಗೆ 'ಅಸದುಲ್ಲಾ
(ಅಲ್ಲಾಹನ ಹುಲಿ) ಮತ್ತು 'ಅಸದುರ್ರಸೂಲ್' (ದೇವಸಂದೇಶ ವಾಹಕರ ಹು
ಎಂಬ ಬಿರುದು ನೀಡಿದರು. ಇದರ ಬಳಿಕ ನಡೆದ ಎಲ್ಲ ಯುದ್ಧಗಳ ಲ್ಲಿಯ
ಅವರು ಪ್ರವಾದಿವರ್ಯರ(ಸ) ಜತೆಯಲ್ಲಿದ್ದರು.

ಪ್ರವಾದಿವರ್ಯರು(ಸ) ನಿಧನರಾದ ಬೆನ್ನಿಗೇ ಮುಗೀರರ(ರ) ಸಹೋ
ನೌಫಲ್ ನಿಧನರಾದರು. ಈರ್ವರು ಆಪ್ತರ ನಿಧನದಿಂದ ಮುಗೀರಾ(ರ) ಬಹಳವ
ನೊಂದುಕೊಂಡರು. ತರುವಾಯ ಅಲ್ಲಾಹನಲ್ಲಿ, "ನನ್ನಿಬ್ಬರು ಸೋದರರ ವಿಯೋ
ದಿಂದಾಗಿ ನನ್ನ ಜೀವನ ದುರ್ಭರವಾಗತೊಡಗಿದೆ. ಆದ್ದರಿಂದ ಓ ನನ್ನ ಪ್ರಭ
ಈಗ ನನಗೂ ಮರಣವನ್ನು ನೀಡು" ಎಂದು ಪ್ರಾರ್ಥಿಸ ತೊಡಗಿದರು. ಅಲ್ಲಾಹ

ಿ ಪ್ರಾರ್ಥನೆಯನ್ನು ಸ್ವೀಕರಿಸಿದನು. ಹೆಚ್ಚು ಕಾಲ ಕಳೆದಿರಲಿಲ್ಲ. ಒಮ್ಮೆ ಹಜ್ಜ್
ತ್ರೆಯ ವೇಳೆ ಅವರು ರೋಗ ಪೀಡಿತರಾದರು. ಮದೀನಕ್ಕೆ ಮರಳಿದವರೇ ತಮ್ಮ
ರಿಯನ್ನು ಸ್ವತಃ ತೋಡಿದರು. ಅದನ್ನು ಕಂಡು ಅವರ ಸಂಬಂಧಿಕರು
ಳಾಡತೊಡಗಿದರು. ಆಗ ಅವರು ಹೇಳಿದರು, "ನೀವೆಲ್ಲ ಯಾಕೆ ಅಳುತ್ತಿದ್ದೀರಿ?
ಮ್ ಸ್ವೀಕರಿಸಿದ ಬಳಿಕ ನನ್ನಿಂದ ಯಾವುದೇ ಪ್ರಮಾದವುಂಟಾಗಿಲ್ಲ. ಆದ್ದರಿಂದ
ಮೋಕ್ಷ ಪ್ರಾಪ್ತವಾಗುವ ಸಂಪೂರ್ಣ ಭರವಸೆಯಿದೆ." ಗೋರಿ ತೋಡಿದ
ು ದಿನಗಳ ಬಳಿಕ ಅವರು ಕೊನೆಯುಸಿರೆಳೆದರು. ಖಲೀಫಾ ಉಮರ್‌ರವರು(ರ)
ಿ ಜನಾಝಾ ನಮಾಝ್‌ನ ನೇತೃತ್ವವಹಿಸಿದರು ಮತ್ತು ಜನ್ನತುಲ್ ಬಕೀಅ್‌ನಲ್ಲಿ
ಿ ಮಾಡಲಾಯಿತು.

ಮುಗೀರಾ(ರ) ಇಸ್ಲಾಮ್ ಸ್ವೀಕರಿಸಿದ ಬಳಿಕ ಇಸ್ಲಾಮೀ ಕಾರ್ಯಗಳಲ್ಲಿ
ಕ ಆಸಕ್ತಿಯನ್ನು ತೋರುತ್ತಿದ್ದರು. ದಿನ–ರಾತ್ರೆಗಳ ಹೆಚ್ಚಿನ ಭಾಗವು ದೇವಾರಾಧನೆ
ಕಳೆಯುತ್ತಿತ್ತು. ಅವರ ಈ ಆರಾಧನೆಯನ್ನು ಕಂಡು ಪ್ರವಾದಿವರ್ಯರಿಗೆ(ಸ)
ಿ ಸಂತೋಷವಾಗುತ್ತಿತ್ತು. ಅವರು ಬಾಲ್ಯದಲ್ಲಿಯೇ ಪ್ರವಾದಿಯವರ ಆಪ್ತರಾಗಿದ್ದರು
ಇಸ್ಲಾಮ್ ಸ್ವೀಕರಿಸಿದ ಬಳಿಕ ವಂತೂ ಇನ್ನಷ್ಟು ಆಪ್ತರಾದರು. ಪ್ರವಾದಿ
ರ್ಯರು(ಸ) ಅವರನ್ನು 'ಖೈರು ಅಹ್ಲೀ' (ನನ್ನ ಆಪ್ತರಲ್ಲಿ ಆಪ್ತರು) ಎನ್ನುತ್ತಿದ್ದರು.
ಗಂತೂ ಪ್ರವಾದಿವರ್ಯರಲ್ಲಿ ಅತೀವ ಸ್ನೇಹವಿತ್ತು. ಪ್ರವಾದಿವರ್ಯರ
ಯೋಗದಿಂದಾಗಿ ಮುಗೀರಾ(ರ) ದುಃಖಭರಿತ ಸ್ತುತಿ ವಚನಗಳನ್ನು ರಚಿಸಿದರು.
ಅವರಲ್ಲಿದ್ದಂತಹ ಪ್ರವಾದಿ ಪ್ರೇಮವನ್ನು ಸ್ಪಷ್ಟವಾಗಿ ಬಿಂಬಿಸುತ್ತಿತ್ತು.

ಟ ಮಾಡಿದವರಿಗೆ ಕ್ಷಮೆ

ಪ್ರವಾದಿವರ್ಯರು(ಸ) ಹುದೈಬಿಯಾ ಸಂಧಿಯ ಬಳಿಕ ಮದೀನಕ್ಕೆ ಮರಳಿದ
ಅಲ್ಲಿನ ಯಹೂದಿಯರು ಸೇರಿ ಮಾಟಗಾರ ಲಬೀದ್ ಬಿನ್ ಆಝುಮ್‌ನನ್ನು
ಸಿ ಹೇಳಿದರು, "ಮುಹಮ್ಮದ್‌ರು ನಮಗೆ ಅತ್ಯಧಿಕ ಸಂಕಷ್ಟ ನೀಡುತ್ತಿದ್ದಾರೆ.
ಒಂದು ವೇಳೆ ಅವರ ಮೇಲೆ ಮಾಟ ಮಾಡಿದರೆ, ನಿಮ್ಮನ್ನು ಸಾಕಷ್ಟು
ತ್ತಿನಿಂದ ಶ್ರೀಮಂತಗೊಳಿಸುವೆವು."

ಆ ಮಾಟಗಾರನು ಪ್ರವಾದಿವರ್ಯರು(ಸ) ಉಪಯೋಗಿಸಿದ ಬಾಚಣಿಗೆ
ಅವರ(ಸ) ಉದುರಿದ ತಲೆಗೂದಲನ್ನು ತರಿಸಿದನು. ತರುವಾಯ, ಆ
ಲನ್ನು ಬಾಚಣಿಗೆಗೆ ಸುತ್ತಿ ಕೆಲವು ಗಂಟುಗಳನ್ನು ಕಟ್ಟಿದನು. ಬಳಿಕ ಅದನ್ನು
ರ್ಜರದ ತೊಗಟೆಯಲ್ಲಿರಿಸಿ ಒಂದು ಪುರಾತನ ಬಾವಿಯ ಅಡಿಯಲ್ಲಿರಿಸಿ ಅದರ
ಿ ಭಾರೀ ಕಲ್ಲು ಚಪ್ಪಡಿಯನ್ನಿರಿಸಿದನು. ಈ ಮಾಟದ ಪ್ರಭಾವವು ಪ್ರವಾದಿ
ರ್ಯರ(ಸ) ಸತ್ಯಸಂದೇಶ ಪ್ರಚಾರ ಕಾರ್ಯದ ಮೇಲೆ ಯಾವುದೇ ಬಾಧೆಯನ್ನುಂಟು

ಮಾಡಿರಲಿಲ್ಲವಾದರೂ ಲೌಕಿಕ ವಿಷಯಗಳಿಗೆ ಸಂಬಂಧಿಸಿದಂತೆ ಅವರನ್ನು ಮರೆ
ಯನ್ನಾಗಿ ಮಾಡಿತು. ಇದರಿಂದಾಗಿ ಅವರು(ಸ) ಅನ್ನ-ಪಾನೀಯ ಸೇವಿ
ಇದ್ದಾಗಲೂ ಅವರಿಗೆ ಸೇವಿಸಿದಂತೆ ಭಾಸವಾಗುತ್ತಿತ್ತು. ಶಾಹ್ ಅಬ್ದುಲ್ ಅಝೀ
ದೆಹ್ಲವಿಯ ವರು ಉಲ್ಲೇಖಿಸುವಂತೆ, ಆರು ತಿಂಗಳ ತನಕ ಪ್ರವಾದಿವರ್ಯರು
ಇದೇ ಅವಸ್ಥೆಯನ್ನು ಅನುಭವಿಸಿದರು.

ಒಂದು ದಿನ ಪ್ರವಾದಿವರ್ಯರು(ಸ) ಈ ಅವಸ್ಥೆಯಿಂದ ಪಾರುಗೊಳಿ
ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಅಂದು ರಾತ್ರಿ ನಿದ್ರೆಯಲ್ಲಿ ಅವರು, ಇಬ್ಬರು
ಚರರು ಇಳಿದು ಬಂದಂತೆ ಕನಸು ಕಂಡರು. ಒಬ್ಬರು ತಲೆಯ ಭಾಗದಲ್ಲಿ ನಿ
ಇನ್ನೊಬ್ಬ ದೇವಚರರು ಕಾಲಿನ ಬಳಿ ನಿಂತುಕೊಂಡರು. ಅವರು ಪರಸ್ಪರ
ಮಾತುಕತೆಯಾಡಿದರು,

"ಪ್ರವಾದಿವರ್ಯರ ಸ್ಥಿತಿ ಹೇಗಿದೆ?"

"ಇವರ ಮೇಲೆ ಮಾಟ ಮಾಡಲಾಗಿದೆ."

"ಯಾರು ಮಾಟ ಮಾಡಿದ್ದಾರೆ?"

"ಲಬೀದ್ ಬಿನ್ ಆಝುಮ್ ಎಂಬ ಯಹೂದಿ."

"ಯಾವುದರಿಂದ ಮಾಟ ಮಾಡಲಾಗಿದೆ?"

"ಪ್ರವಾದಿಯವರ ತಲೆಗೂದಲು, ಬಾಚಣಿಗೆ ಮತ್ತು ಖರ್ಜೂರದ ತೊಗಟೆಯ

"ಅದನ್ನೆಲ್ಲಿಡಲಾಗಿದೆ?"

"ಝೀ ಅರ್‌ವಾನ್ ಎಂಬ ಬಾವಿಯಲ್ಲಿ."

ಅಷ್ಟರಲ್ಲಿ ಪ್ರವಾದಿವರ್ಯರು(ಸ) ಎಚ್ಚರಗೊಂಡರು. ಬಳಿಕ ಪತ್ನಿ ಆಯಿಶರು
ಹೇಳಿದರು, "ಅಲ್ಲಾಹನು ನನ್ನ ರೋಗ ಲಕ್ಷಣದ ವಿವರವನ್ನು ತಿಳಿಸಿದ
ತರುವಾಯ ಕೆಲವು ಮಂದಿ ಸಹಾಬಿಗಳೊಡನೆ ಪ್ರವಾದಿವರ್ಯರು(ಸ)
ಅರ್‌ವಾನ್ ಎಂಬ ಪುರಾತನ ಬಾವಿಯ ಬಳಿಗೆ ಹೋದರು. ಒಂದಿಬ್ಬರು
ಒಳಗಿಳಿದು, ಅದರಡಿಯಲ್ಲಿದ್ದ ಕಲ್ಲು ಚಪ್ಪಡಿಯನ್ನು ಸರಿಸಿ, ಮಾಟದ ವಸ್ತು
ಹೊರ ತೆಗೆದರು. ಅದರಲ್ಲಿ ಕೂದಲಿನ ಮೂಲಕ ಹನ್ನೊಂದು ಗಂಟುಗಳನ್ನು
ಲಾಗಿತ್ತು. ಅದನ್ನು ಬಿಚ್ಚಲು ಸಾಕಷ್ಟು ಪ್ರಯತ್ನ ಪಡಲಾಯಿತಾದರೂ ಯಾ
ಪ್ರಯೋಜನ ಕಾಣಲಿಲ್ಲ. ಅಷ್ಟರಲ್ಲಿ ಪ್ರವಾದಿವರ್ಯರಿಗೆ(ಸ) ದೇವಚರ ಜಿ
ಗೋಚರಿಸಿದರು. ಜತೆಗೆ ಪವಿತ್ರ ಕುರ್‌ಆನ್‌ನ 'ಅಲ್ ಫಲಕ್' ಮತ್ತು 'ಅನ
ಎಂಬ ಎರಡು ಅಧ್ಯಾಯಗಳು ಅವತೀರ್ಣವಾದುವು. ಆ ಎರಡೂ ಅಧ್ಯಾಯಗ
ಪ್ರವಾದಿವರ್ಯರು(ಸ) ಉಚ್ಚರಿಸಿದರು. ಪ್ರತಿಯೊಂದು ವಚನವನ್ನು ಓದಿದಾ

ದೊಂದು ಗಂಟು ಬಿಚ್ಚುತ್ತಾ ಹೋಯಿತು. ಹೀಗೆ ಒಟ್ಟು ಹನ್ನೊಂದು ವಚನ ನ್ನು ಓದಿ ಮುಗಿಸಿದಾಗ ಪ್ರವಾದಿವರ್ಯರ(ಸ) ಸ್ಥಿತಿ ಸುಧಾರಿಸಿತು. ಆಗ ಸಹಾಬಿ ು ಹೇಳಿದರು, "ಇನ್ನು ಆ ಮಾಟಗಾರನಿಗೆ ಶಿಕ್ಷೆ ನೀಡಬೇಕು." ಆದರೆ ಅವರನ್ನು ದ ಪ್ರವಾದಿವರ್ಯರು(ಸ), "ನನ್ನ ಕಷ್ಟ ನೀಗಿತು. ಇನ್ನು ಪ್ರತೀಕಾರ ತೀರಿಸುವ ತ್ಯವಿಲ್ಲ."

ಇದರಿಂದ ಪ್ರವಾದಿವರ್ಯರು ತಮ್ಮ ಮೇಲಾದ ಯಾವುದೇ ಅನ್ಯಾಯಕ್ಕೆ ೀಕಾರ ತೀರಿಸುತ್ತಿರಲಿಲ್ಲವೆಂದು ತಿಳಿದುಬರುತ್ತದೆ. ಕ್ಷಮೆಯು ಇಂತಹ ಉದಾತ್ತವಾದ ುದರಿ ಬೇರಾವ ಚರಿತ್ರೆಯಲ್ಲಿ ಕಾಣಬಹುದು!? ❑

ಕೊಲೆಯ ಸಂಚು ಬಯಲು

ಉಮಯ್ಯ ಬಿನ್ ಖಲಫ್‌ನ ಕುರಿತು ನಾವು ಈ ಹಿಂದೆ ಓದಿದ್ದೆವಷ್ಟೇ. ಆತ ್ಲಾಮಿನ ಅತಿದೊಡ್ಡ ಶತ್ರುಗಳ ಪೈಕಿ ಒಬ್ಬನಾಗಿದ್ದ. ಹ. ಬಿಲಾಲ್(ರ) ಈತನ ಸ್ಯ ಬಂಧನದಲ್ಲಿದ್ದರು. ಅವರು ಇಸ್ಲಾಮ್ ಸ್ವೀಕರಿಸಿದ ಕಾರಣ ಅವರಿಗೆ ಮಯ್ಯ ನೀಡಿದ ಚಿತ್ರಹಿಂಸೆಯನ್ನು ನಾವು ಈ ಹಿಂದೆ ಇದೇ ಅಂಕಣದಲ್ಲಿ ುದ್ದೆವು. ಈತ ಬದ್ರ್ ಯುದ್ಧದಲ್ಲಿ ಶತ್ರು ಸೇನೆಯ ಮುಂಚೂಣಿಯಲ್ಲಿದ್ದ. ಸತ್ಯ- ಥ್ಯದ ನಡುವೆ ಸಂಭವಿಸಿದ ಈ ಸಂಘರ್ಷದಲ್ಲಿ ಹದಿನಾಲ್ಕು ಮಂದಿ ಮುಸ್ಲಿಮರು ಹುತಾತ್ಮರಾಗಿದ್ದರು. ಎಪ್ಪತ್ತು ಮಂದಿ ಕುರೈಶಿ ಸತ್ಯನಿಷೇಧಿಗಳು ಹತರಾದರು. ಈ ಭಾಗ್ಯರನ್ನು ಒಂದೇ ಹೊಂಡದಲ್ಲಿ ಹೂತು ಬಿಡಲಾಗುತ್ತದೆ. ಇಸ್ಲಾಮಿನ ಪ್ರಕಾಶ ನ್ನು ನಂದಿಸಲು ಬಂದವರೇ ಈಗ ನಂದಿ ಹೋಗಿದ್ದಾರೆ. ಅವರ ಪೈಕಿ ಉಮಯ್ಯ ನ್ ಖಲಫ್‌ನ ದೇಹವು ತನ್ನದೇ ಯುದ್ಧ ಕವಚದಲ್ಲಿ ಊದಿಕೊಂಡ ಸ್ಥಿತಿಯಲ್ಲಿತ್ತು. ಗಾಗಿ ಆ ದೇಹ ಬಿದ್ದಿರುವಲ್ಲಿಗೇ ಮಣ್ಣು ಹಾಕಿ ಮುಚ್ಚಲಾಗುತ್ತದೆ.

ಇಂತಹ ಹೀನಾಯ ಸ್ಥಿತಿಯಲ್ಲಿ ಮಡಿದ ಉಮಯ್ಯನ ಮಗ ಸಫ್ವಾನ್ ಕೂಡಾ ್ಲಾಮಿನ ಮಹಾ ಶತ್ರುವಾಗಿದ್ದರು. ಅವರು ತನ್ನ ತಂದೆಯ ಕೊಲೆಗೆ ಪ್ರತೀಕಾರ ರಿಸುವುದರ ಬಗ್ಗೆಯೇ ಹೆಚ್ಚು ಚಿಂತಿಸುತ್ತಿದ್ದರು. ಹೀಗೆ ಒಮ್ಮೆ 'ಮಕಾಮು ಹಿಜ್ರ್' ುಬಳಿ ಸಫ್ವಾನ್, ಇಸ್ಲಾಮಿನ ಕಡು ವೈರಿಗಳಲ್ಲೋರ್ವರಾಗಿದ್ದ ಉಮೈರ್ ಬಿನ್ ಹಬ್‌ರೊಡನೆ ಬದ್ರ್ ಯುದ್ಧದಲ್ಲಿ ಮಡಿದವರ ಕುರಿತು ಶೋಕ ವ್ಯಕ್ತಪಡಿಸುತ್ತಾ ಳಿದರು, "ಅಲ್ಲಾಹನಾಣೆ! ಇನ್ನು ಜೀವನದಲ್ಲಿ ಆಸಕ್ತಿಯಿಲ್ಲ!"

ಆಗ ಉಮೈರ್ ಹೀಗೆ ಉದ್ಗರಿಸಿದರು, "ಅದು ನಿಜ! ನನ್ನ ಮೇಲೆ ಸಾಲದ ರೆಯಿಲ್ಲದಿರುತ್ತಿದ್ದರೆ, ಮಕ್ಕಳು ಮತ್ತು ಮನೆಯ ಚಿಂತೆಯಿಲ್ಲದಿರುತ್ತಿದ್ದರೆ, ಬದ್ರ್‌ನಲ್ಲಿ ರಾದವರ ರಕ್ತ ಪ್ರತೀಕಾರವನ್ನು ನಾನೇ ತೀರಿಸುತ್ತಿದ್ದೆ. ಮುಹಮ್ಮದ್‌ನನ್ನು ವಧಿಸಿ

ಬಿಡುತ್ತಿದ್ದೆ. ನನ್ನ ಮಗನೂ ಅಲ್ಲಿ ಬಂಧನದಲ್ಲಿದ್ದಾನೆ."

ಆಗ ಸಫ್ವಾನ್, "ನೀವು ಸಾಲ ಮತ್ತು ಮಕ್ಕಳ ಕುರಿತು ಎಳ್ಳ ಚಿಂತಿಸಬೇಡಿರಿ. ನಾನು ಅವರ ಹೊಣೆಯನ್ನು ಹೊರುತ್ತೇನೆ" ಎಂದು ಹ ಉಮೈರ್‌ರಲ್ಲಿ ಧೈರ್ಯ ತುಂಬುತ್ತಾರೆ.

ಹೀಗೆ ಮನೆಗೆ ಮರಳಿದ ಉಮೈರ್, ಖಡ್ಗಕ್ಕೆ ವಿಷ ಲೇಪಿಸಿ ಒರೆಯಲ್ಲಿ ಮದೀನದೆಡೆಗೆ ಹೊರಡುತ್ತಾರೆ. ಅವರು ಅಲ್ಲಿಗೆ ತಲಪುವಾಗ ಪ್ರವಾದಿವರ್ಯರು(ಮಸ್ಜಿದುನ್ನಬವಿಯಲ್ಲಿ ಶಿಷ್ಯರ ಜತೆ ಕುಳಿತಿದ್ದರು. ಉಮೈರ್ ಒಂಟೆಯಿಂದ ಇಳಿ ವುದನ್ನು ಕಂಡು ಉಮರ್(ರ) ಮಸೀದಿಯ ಒಳಗೆ ಧಾವಿಸಿ ಪ್ರವಾದಿವರ್ಯರಲ್ಲಿ(ಹೇಳುತ್ತಾರೆ, "ಯಾ ರಸೂಲಲ್ಲಾಹ್ ಇಸ್ಲಾಮಿನ ಶತ್ರು ಉಮೈರ್ ಬಿನ್ ವಹ ಖಡ್ಗ ಹಿಡಿದು ಬರುತ್ತಿದ್ದಾನೆ."

ಪ್ರವಾದಿವರ್ಯರು(ಸ), "ಆತನನ್ನು ಒಳಗೆ ಕರೆ ತನ್ನಿರಿ" ಎನ್ನುತ್ತಾರೆ.

ಉಮರ್‌ರು(ರ) ಮೊದಲು ಕೆಲವು ಮಂದಿ ಸಂಗಾತಿಗಳಿಗೆ ಅಪಾಯ ಮುನ್ಸೂಚನೆ ನೀಡಿ ಮಸೀದಿಗೆ ಕಳುಹಿಸುತ್ತಾರೆ. ಬಳಿಕ ಉಮೈರ್‌ರನ್ನು ಹಿಡಿ ಪ್ರವಾದಿವರ್ಯರ(ಸ) ಮುಂದೆ ತಂದು ನಿಲ್ಲಿಸುತ್ತಾರೆ.

ಪ್ರವಾದಿವರ್ಯರು(ಸ) ಉಮರ್‌ರನ್ನುದ್ದೇಶಿಸಿ ಹೇಳಿದರು, "ಓ ಉಮ ಅವರನ್ನು ಬಿಟ್ಟು ಬಿಡಿರಿ." ತರುವಾಯ ಉಮೈರ್‌ರನ್ನು ಹತ್ತಿರ ಕುಳ್ಳಿರಿಸಿ, "ಬ ಉದ್ದೇಶವೇನು?" ಎಂದು ವಿಚಾರಿಸುತ್ತಾರೆ.

"ನನ್ನ ಮಗ ನಿಮ್ಮ ಸೆರೆಯಲ್ಲಿದ್ದಾನೆ. ಅವನ ವಿಷಯದಲ್ಲಿ ನನ್ನೊಂ ಸದ್ವ್ಯವಹಾರ ಮಾಡಿರಿ" ಎಂದು ಉಮೈರ್ ಹೇಳುತ್ತಾರೆ.

"ನೀವು ಕುತ್ತಿಗೆಯಲ್ಲಿ ನೇತಾಡಿಸಿರುವ ಈ ಖಡ್ಗದ ಉದ್ದೇಶವೇನು ಪ್ರವಾದಿವರ್ಯರು(ಸ) ಪುನಃ ಪ್ರಶ್ನಿಸುತ್ತಾರೆ.

"ಈ ಖಡ್ಗಗಳನ್ನು ಅಲ್ಲಾಹನು ನಾಶ ಮಾಡಲಿ. ಅವು ನಮಗೆ ಬದ್ರ್ ಯಾವ ಪ್ರಯೋಜನಕ್ಕೆ ಬಂದಿವೆ?"

"ನೀವು ಬಂದ ಉದ್ದೇಶವೇನೆಂದು ನೇರವಾಗಿ ಹೇಳಿರಿ" ಪ್ರವಾದಿವರ್ಯರು(ಗಂಭೀರ ಸ್ವರದಿಂದ ಕೇಳಿದರು.

"ನಾನಂತೂ ನನ್ನ ಮಗನ ಬಿಡುಗಡೆ ಮಾಡಿಸಲು ಬಂದಿದ್ದೇನೆ" ಉಮೈರ್ ಅದರ ಹೊರತು ಬೇರೇನೂ ಹೇಳಲು ಧೈರ್ಯ ಸಾಲದಾಯಿತು.

"ಇಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ" ಪ್ರವಾದಿವರ್ಯರ ಈ ಪ್ರತಿಕ್ರಿಯೆ

ೖರ್ ಬೆಚ್ಚಿಬಿದ್ದರು. ಅವರು ತಲೆಯೆತ್ತಿ ನೋಡಿದಾಗ ಪ್ರವಾದಿವರ್ಯರು(ಸ) ‌ನ್ನು ಮುಂದುವರಿಸುತ್ತಾರೆ, "ನೀವು ಮತ್ತು ಸಫ್ವಾನ್ 'ಮಕಾಮು ಹಿಜ್ರ್'ನಲ್ಲಿ ು ಬದ್ರ್‌ನಲ್ಲಿ ಕೊಲ್ಲಲ್ಪಟ್ಟ ಕುರೈಶ್ ಯೋಧರ ಕುರಿತು ಮಾತನಾಡುತ್ತಿದ್ದಿರಿ. ನೀವು ಸಾಲದ ಹೊರೆ ಮತ್ತು ಕುಟುಂಬ ಪೋಷಣೆಯ ಭಾರವಿಲ್ಲದಿರುತ್ತಿದ್ದರೆ ೀನಕ್ಕೆ ಹೋಗಿ ಮುಹಮ್ಮದ್‌ನನ್ನು ಕೊಲ್ಲುತ್ತಿದ್ದೆ ಎಂದಿರಿ. ಆಗ ಸಫ್ವಾನ್ ನನ್ನನ್ನು ್ಲವ ಶರ್ತದ ಮೇಲೆ ನಿಮ್ಮ ಸಾಲ ತೀರಿಸುವ ಮತ್ತು ನಿಮ್ಮ ಕುಟುಂಬದ ಗ ಕ್ಷೇಮ ನೋಡಿಕೊಳ್ಳುವ ಹೊಣೆ ವಹಿಸಿದರು ಅಲ್ಲವೇ? ಆದರೆ ಅಲ್ಲಾಹನು ನ್ನು ರಕ್ಷಿಸಿದನು."

ಈ ಮಾತು ಕೇಳಿ ಉಮೈರ್ ಬಿನ್ ವಹಬ್ ದಿಙ್ಮೂಢರಾದರು. ಅತ್ಯಂತ ವಾಗಿ ಸಫ್ವಾನ್‌ರೊಡನೆ ಆಡಿದ ಮಾತು ಈ ಮುನ್ನೂರು ಮೈಲಿ ದೂರದಲ್ಲಿರುವ ಮ್ಮದ್‌ರಿಗೆ ಹೇಗೆ ತಿಳಿಯಿತು? ಇದು ಅಸಾಧ್ಯ! ಉಮೈರ್ ಬಹಳ ಹೊತ್ತು ಮೂರ್ತಿಯಂತೆ ತಟಸ್ಥರಾಗಿದ್ದುಬಿಟ್ಟರು. ತರುವಾಯ ತನಗರಿವಿಲ್ಲದಂತೆಯೇ, ಮುಹಮ್ಮದ್! ನೀವು ಖಂಡಿತವಾಗಿಯೂ ದೇವ ಸಂದೇಶವಾಹಕರಾಗಿದ್ದೀರಿ" ು ಉದ್ಗರಿಸಿದರು.

ಅವರು ಮುಂದುವರಿಯುತ್ತಾ, "ಯಾ ರಸೂಲುಲ್ಲಾಹ್! ತಮ್ಮ ಮೇಲೆ ೀರ್ಣವಾಗುತ್ತಿದ್ದ ದೇವವಾಣಿಯನ್ನು ನಾವು ನಿರಾಕರಿಸುತ್ತಿದ್ದೆವು. ಆದರೆ ನನ್ನ ಸಫ್ವಾನ್‌ರ ನಡುವೆ ಆದ ಮಾತುಕತೆಯು ಅತ್ಯಂತ ರಹಸ್ಯವಾಗಿತ್ತು. ಅಲ್ಲಿ ಬ್ಬ ವ್ಯಕ್ತಿಯೇ ಇರಲಿಲ್ಲ. ಅಲ್ಲಾಹನಾಣೆ! ಈ ಸಂಚಿನ ಕುರಿತು ತಮಗೆ ಹನೇ ತಿಳಿಸಿರುವನೆಂದು ನನಗೀಗ ಖಾತ್ರಿಯಾಯಿತು. ಅಲ್ ಹಮ್ದುಲಿಲ್ಲಾಹ್!" ು ಹೇಳುತ್ತಾ ಪವಿತ್ರ ವಚನವನ್ನು ಉಚ್ಚರಿಸಿ ಸತ್ಯವಿಶ್ವಾಸ ಸ್ವೀಕರಿಸಿದರು.

ಸಫ್ವಾನ್, ಪ್ರವಾದಿವರ್ಯರ(ಸ) ಮರಣವಾರ್ತೆ ಕೇಳಲು ಕಾತರರಾಗಿದ್ದರು. ಅವರಿಗೆ ಉಮೈರ್ ಇಸ್ಲಾಮ್ ಸ್ವೀಕರಿಸಿದ ಸುದ್ದಿ ತಲುಪುತ್ತದೆ. ಉಮೈರ್(ರ) ಮರಾದ ಬಳಿಕ ಧೈರ್ಯದಿಂದ ಮಕ್ಕಾ ನಗರ ಪ್ರವೇಶಿಸಿದರು. ಅವರ ಮುಖ ನೋಡಿಯೇ ಸಫ್ವಾನ್ ಹೌಹಾರುತ್ತಾರೆ. ಅವರ ಮುಖದಲ್ಲಿ ಮದೀನಕ್ಕೆ ಡುವುದಕ್ಕೆ ಮುಂಚೆ ಮುಸ್ಲಿಮರ ರಕ್ತ ಹೀರುವಷ್ಟು ಕ್ರೋಧ ತುಂಬಿತ್ತು. ಮ್ ಮತ್ತು ಮುಸ್ಲಿಮರ ಬಗ್ಗೆ ಅತ್ಯಧಿಕ ಶತ್ರುತ್ವವಿತ್ತು. ಆದರೆ ನಗರಕ್ಕೆ ಸವಾಗ ಉಮೈರ್‌ರ ಮುಖದಲ್ಲಿ ಪ್ರಶಾಂತಿಯಿತ್ತು. ಸತ್ಯವಿಶ್ವಾಸದ ಕಾಂತಿಯಿತ್ತು. ೖರ್(ರ) ನಗರಕ್ಕೆ ಮರಳಿದ ಬಳಿಕ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಸತ್ಯವಿಶ್ವಾಸವು ಖದ ಅಂತರಾಳದಲ್ಲಿ ಇಳಿದ ಬಳಿಕ ಯಾರೂ ಆರಾಮವಾಗಿ ಕುಳಿತುಕೊಳ್ಳಲಾರರು. ರ್(ರ) ಮಕ್ಕಾ ನಗರದಾದ್ಯಂತ ಇಸ್ಲಾಮಿನ ಸಂದೇಶವನ್ನು ಹರಡಲಾರಂಭಿಸಿದರು.

ತತ್ಪರಿಣಾಮವಾಗಿ ಅವರ ಈ ಕಾರ್ಯವು ಅಲ್ಲಿ ಬಹುದೊಡ್ಡ ಸಂಖ್ಯೆಯ ಜನ ಇಸ್ಲಾಮಿನ ಕಿರಣದಿಂದ ಪ್ರಕಾಶಿಸಿತು.

ಉಮೈರ್‌ರಿಂದ ನಿರಾಶರಾದ ಸಫ್ವಾನ್ ಅಬೂ ಸುಫಿಯಾನ್‌ರನ್ನು ಸ ಬದ್ರ್ ಯುದ್ಧದಲ್ಲಿ ಮಡಿದವರ ಪ್ರತೀಕಾರಕ್ಕಾಗಿ ಮತ್ತೊಮ್ಮೆ ಮದೀನದ ದಂಡೆತ್ತಿ ಹೋಗುವಂತೆ ಅವರನ್ನು ಪ್ರೇರೇಪಿಸಿದರು. ಹೀಗೆ ಸರ್ವ ಸಜ್ಜಿ ಹೊರಟ ಸೇನೆಯಲ್ಲಿ ಸಫ್ವಾನ್ ಕೂಡ ಭಾಗವಹಿಸಿದ್ದರು. ಉಹುದ್ ಕಣಿವೆಯಲ್ಲಿ ಮುಸ್ಲಿಮರ ವಿರುದ್ಧ ನಡೆದ ಸಂಘರ್ಷದ ಬಗ್ಗೆಯೂ ಈ ನಾವು ತಿಳಿದುಕೊಂಡಿದ್ದೇವಷ್ಟೇ. ಉಹುದ್ ಯುದ್ಧ ನಡೆದು ನಾಲ್ಕು ತಿಂಗಳು ಬಳಿಕ ಕೆಲವರು ನವ ಮುಸ್ಲಿಮರ ಸೋಗು ಹಾಕಿ ಪ್ರವಾದಿವರ್ಯರನ್ನು(ಸ) ಸ ಹೀಗೆ ಅರಿಕೆ ಮಾಡಿಕೊಳ್ಳುತ್ತಾರೆ, "ಅಲ್ಲಾಹನ ಸಂದೇಶವಾಹಕರೇ! ನಮ್ಮ ಇಸ್ಲಾಮ್ ಸ್ವೀಕರಿಸಿದ್ದಾರೆ. ಆದರೆ ಅವರಿಗೆ ಇಸ್ಲಾಮಿನ ಕುರಿತು ಹೆಚ್ಚೇನೂ ತಿಳಿ ಆದ್ದರಿಂದ ನಮ್ಮೊಡನೆ ಧರ್ಮದ ಬಗ್ಗೆ ಜ್ಞಾನವಿರುವ ಯಾರನ್ನಾದರೂ ಕಳ ಕೊಡಿರಿ. ಅವರಿಂದ ನಾವು ಧಾರ್ಮಿಕ ವಿಷಯಗಳನ್ನು ಕಲಿಯ ಬಯಸುತ್ತೇ

ಹೀಗೆ ಆಸಿಮ್‌ರ ನೇತೃತ್ವದಲ್ಲಿ ಹತ್ತು ಮಂದಿ ಸಹಾಬಿಗಳನ್ನು ಅವರೊ ಕಳುಹಿಸಿಕೊಡಲಾಯಿತು. ಆದರೆ ದಾರಿಮಧ್ಯೆ ಆ ನಯವಂಚಕರು ಆ ಸೇರಿದಂತೆ ಎಂಟು ಮಂದಿ ಸಹಾಬಿಗಳನ್ನು ಹತ್ಯೆಗೈದು ಖುಬೈಬ್(ರ) ಝೈದ್ ಬಿನ್ ವಸ್ನಿಯರನ್ನು(ರ) ಮಕ್ಕಾ ನಗರಕ್ಕೆ ಹಿಡಿದು ತಂದು ಮಾರಿ ಖುಬೈಬ್ ಉಹುದ್ ಯುದ್ಧದಲ್ಲಿ ಹಾರಿಸ್‌ನನ್ನು ವಧಿಸಿದ್ದರು. ಆದ್ದರಿಂದ ಹಾ ಪುತ್ರರು ಅವರನ್ನು ಖರೀದಿಸಿ ಕೆಲಕಾಲ ಬಂಧನದಲ್ಲಿರಿಸಿ ಬಳಿಕ ವಧಿಸಿ ಝೈದ್‌ರನ್ನು(ರ) ಸಫ್ವಾನ್ ಬಿನ್ ಉಮಯ್ಯ ಖರೀದಿಸಿದ್ದರು. ತರುವಾಯ ಸುಫಿಯಾನ್ ಸೇರಿದಂತೆ ಕುರೈಶ್ ಗಣ್ಯರ ಸಮ್ಮುಖದಲ್ಲಿ ವಧಿಸುವ ಮ ಬದ್ರ್‌ನಲ್ಲಿ ಹತನಾದ ತನ್ನ ತಂದೆಯ ರಕ್ತ ಪ್ರತೀಕಾರವಾಯಿತೆಂದು ಸಫ ಭಾವಿಸಿದರು.

❖ ❖ ❖ ❖

ಮಕ್ಕಾ ವಿಜಯುವಾದಾಗ ಮತ್ತು ಇಸ್ಲಾಮಿನ ಮಹಾ ಶತ್ರುಗಳಿಂದ ಪ್ರತಿ ಪಡೆಯುವ ಸಂದರ್ಭ ಎದುರಾದಾಗ, ಸಫ್ವಾನ್ ಭಯಪಟ್ಟು ಜಿದ್ದಾಗೆ ಪಲಾ ಮಾಡಿದರು. ಅವರ ಆಪ್ತ ಮಿತ್ರ ಉಮೈರ್ ಬಿನ್ ವಹಬ್(ರ) ಬದ್ರ್ ಯ ಬಳಿಕ ಇಸ್ಲಾಮ್ ಸ್ವೀಕರಿಸಿದ್ದರಷ್ಟೇ. ಅವರು ಪ್ರವಾದಿವರ್ಯರನ್ನು(ಸ) ಸ ಹೀಗೆ ನಿವೇದಿಸಿದರು, "ಯಾ ರಸೂಲುಲ್ಲಾಹ್! ಸಫ್ವಾನರು ನಿಮ್ಮ ಮೆ ಭಯದಿಂದ ಓಡಿ ಹೋಗಿದ್ದಾರೆ." ಇದನ್ನು ಕೇಳಿ ಪ್ರವಾದಿವರ್ಯರು(ಸ), "

ರಿಗೆ ಅಭಯ ನೀಡಿದ್ದೇನೆ” ಎಂದು ಹೇಳಿದರು.

ತರುವಾಯ ಉಮೈರ್‌ರ(ರ) ಅಪೇಕ್ಷೆಯ ಮೇರೆಗೆ ಅಭಯದ ಸಂಕೇತವಾಗಿ ಾದಿವರ್ಯರು(ಸ) ತಮ್ಮ ಚದ್ದರವನ್ನು ಅವರಿಗೆ ನೀಡಿ ಕಳುಹಿಸಿದರು. ಅವರು ನ್ನು ಕೊಂಡು ಹೋಗಿ ಸಫ್ವಾನ್‌ರಿಗೆ ತೋರಿಸುತ್ತಾ ಪ್ರವಾದಿವರ್ಯರ(ಸ) ಯವನ್ನು ತಿಳಿಸಿದರು. ಹೀಗೆ ಸಫ್ವಾನ್ ಮದೀನಕ್ಕೆ ಮರಳಿದರು. ಪ್ರವಾದಿ ರ್ಯರು(ಸ) ಸಫ್ವಾನರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟರು. ಬಳಿಕ ಂದರು, “ನಿಮಗೆ ಸಮಾಧಾನವಿಲ್ಲ ದಿದ್ದರೆ ಎರಡು ಮೂರು ತಿಂಗಳು ೋಚಿಸಿ ಬಳಿಕ ತೀರ್ಮಾನಿಸಿರಿ.” ಅನಂತರ ಹುನೈನ್ ಮತ್ತು ತಾಯಿಫ್ ದ್ಧಗಳು ನಡೆದುವು. ಅವುಗಳಲ್ಲಿ ಸಫ್ವಾನರು ಆಯುಧಗಳನ್ನು ನೀಡುವ ಲಕ ಸಹಾಯ ಮಾಡಿದರು. ಜತೆಗೆ ಸ್ವಯಂ ಯುದ್ಧದಲ್ಲಿ ಭಾಗವಹಿಸಿದರು. ನೈನ್ ಯುದ್ಧ ಜಯಿಸಿದ ಬಳಿಕ ಪ್ರವಾದಿವರ್ಯರು(ಸ) ಸಮರಾರ್ಜಿತ ತ್ತಿನಿಂದ ಸಫ್ವಾನ್‌ರಿಗೆ ನೂರು ಒಂಟೆಗಳನ್ನು ನೀಡಿದರು. ಈ ಔದಾರ್ಯವು ರ ಮೇಲೆ ಗಾಢ ಪ್ರಭಾವ ಬೀರಿತು. ತಾಯಿಫ್ ಯುದ್ಧದ ಬಳಿಕ ಅವರು ಲಾಮ್ ಸ್ವೀಕರಿಸಿದರು. ತರುವಾಯ ಕೆಲವು ದಿನ ಮದೀನದಲ್ಲಿದ್ದು ಬಳಿಕ ಮಕ್ಕಾ ರಕ್ಕೆ ಮರಳಿದರು.

ಸಫ್ವಾನ್ ಬಿನ್ ಉಮಯ್ಯ(ರ)ರು ಉಮರ್(ರ)ರ ಆಡಳಿತ ಕಾಲದಲ್ಲಿ ನಡೆದ ಯಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಯರ್ಮೂಕ್ ಯುದ್ಧದಲ್ಲಿ ಾ ತುಕಡಿಯೊಂದರ ದಂಡನಾಯಕನಾಗಿದ್ದರು. ಅಮೀರ್ ಮುಆವಿಯರ(ರ) ದಲ್ಲಿ ಅವರು ನಿಧನರಾದರು.

ಲೆಗಾರರು ಕಂಪಿಸಿದರು

ಪ್ರವಾದಿವರ್ಯರು(ಸ) ಮದೀನದ ಸುತ್ತಮುತ್ತಲ ಪ್ರದೇಶಗಳ ರಾಜಂದಿರಿಗೆ ಮಿನ ಸಂದೇಶ ಹೊತ್ತ ಪತ್ರ ರವಾನಿಸುತ್ತಿದ್ದರು. ಅವುಗಳ ಪೈಕಿ ಒಂದು ಪತ್ರ ಯದ ರಾಜನ ಹೆಸರಿನಲ್ಲಿತ್ತು. ಆತ ಮಜೂಸಿ ಅಂದರೆ ಅಗ್ನಿ ಆರಾಧಕನಾಗಿದ್ದನು. ಓದುತ್ತಲೇ ಕೆರಳಿ ಕೆಂಡಾಮಂಡಲನಾದ ಆತ ಪತ್ರವನ್ನು ಹರಿದು ಚಿಂದಿ ಡಿದ. ಆದರಿಂದಲೂ ತೃಪ್ತನಾಗದೆ, ಆತ ಯಮನ್‌ನ ತನ್ನ ರಾಜ್ಯ ಪಾಲನಿಗೆ ಬರೆದು, “ಇಬ್ಬರು ದೃಢ ಕಾಯದ ಜಟ್ಟಿಗಳನ್ನು ಕಳುಹಿಸಿ ಮುಹಮ್ಮದ್‌ನ ಕಡಿದು ನನ್ನ ಬಳಿಗೆ ರವಾನಿಸಬೇಕು ಅಥವಾ ಜೀವಂತ ಸೆರೆ ಹಿಡಿದು ೇಕು” ಎಂದು ಆದೇಶಿಸಿದ.

ಯಮನ್‌ನ ರಾಜ್ಯಪಾಲನು ತನ್ನ ಅರಸನ ಆದೇಶನ ಮೇರೆಗೆ ಇಬ್ಬರು

ಜಗಜಟ್ಟಿಗಳನ್ನು ಮದೀನಕ್ಕೆ ಕಳುಹಿಸಿದನು. ಅವರಿಬ್ಬರೂ ಯಮನ್‌ನಿಂದ ಹೊ
ಮಕ್ಕಾ ನಗರಕ್ಕೆ ತಲುಪಿದಾಗ, ಮಕ್ಕಾದ ಬಹುದೇವಾರಾಧಕರು ವಿಷಯವನ್ನ
ಸಂತೋಷಪಟ್ಟರು... ಇನ್ನು ಮುಹಮ್ಮದ್‌ರಿಗೆ ಉಳಿಗಾಲವಿಲ್ಲ. ಇವರಿಬ್ಬರೂ
ರನ್ನು ಕೊಲ್ಲುವುದು ಖಂಡಿತ. ಈ ರೀತಿ ನಮ್ಮ ಉದ್ದೇಶವೂ ಈಡೇರಿದಂತಾಗು
ಇಷ್ಟು ದೊಡ್ಡ ಸಾಮ್ರಾಟನು ವಿರೋಧಿಯಾಗಿರುವಾಗ ಮುಸ್ಲಿಮರು ನಾಶವಾದಂತೆ
ಸರಿ... ಎಂದು ಅವರು ಕನಸು ಕಾಣತೊಡಗಿದರು.

ಜಗಜಟ್ಟಿಗಳಿಬ್ಬರೂ ಮಕ್ಕಾ ಮಾರ್ಗವಾಗಿ ಮದೀನಕ್ಕೆ ತಲುಪಿದರು. ಅ
ತಮ್ಮನ್ನು ಕೊಲೆಗೈಯಲು ಬಂದಿರುವರೆಂದು ಪ್ರವಾದಿವರ್ಯರಿಗೆ ತಿಳಿದುಬಿಟ್ಟ
ಹಾಗಾಗಿ ಪ್ರವಾದಿವರ್ಯರು(ಸ) ತಮ್ಮ ಸಂಗಾತಿಗಳಿಗೆ ಹೀಗೆ ಆದೇಶಿಸಿದ
“ನಮ್ಮ ಅತಿಥಿಗಳನ್ನು ಉತ್ತಮ ಮನೆಯಲ್ಲಿರಿಸಿರಿ. ಅವರನ್ನು ಸತ್ಕರಿಸುವುದರಲ್ಲಿ
ಯಾವುದೇ ರೀತಿಯ ಕೊರತೆಯನ್ನು ಮಾಡದಿರಿ. ಅವರ ಯಾತ್ರೆಯ ಬ
ದೂರವಾಗಲಿ.”

ಅನ್ಸಾರರು ಸತತ ಏಳು ದಿನಗಳ ವರೆಗೆ ಅವರಿಬ್ಬರನ್ನೂ ಸತ್ಕರಿಸಿದ
ಎಂಟನೆಯ ದಿನ ಪ್ರವಾದಿವರ್ಯರು(ಸ), “ಇಂದು ನಮ್ಮ ಅತಿಥಿಗಳಿಗೆ ನನ್ನೊ
ಸಂದರ್ಶನದ ಅವಕಾಶ ಮಾಡಿಕೊಡಿರಿ” ಎಂದರು. ಅವರೀರ್ವರನ್ನೂ ಮಸ್ಜಿದುನ್ನಬ
ಕರೆತರಲಾಯಿತು. ಆದರೆ ಪ್ರವಾದಿವರ್ಯರ(ಸ) ಘನ ಗಂಭೀರ ವ್ಯಕ್ತಿತ್ವವು ಅವ
ಚಕಿತಗೊಳಿಸಿತು. ತಮ್ಮ ನಾಡಿನಲ್ಲಿ ಸೋಲಿಲ್ಲದ ಸರದಾರರೆಂದೇ ಖ್ಯಾತರಾ
ಆ ನಿರ್ಭೀತ ಪಹಿಲ್ವಾನರು ಭಯದಿಂದ ಥರಗುಟ್ಟಿದರು. ಅವರ ಕೈ ಕಾಲುಗ
ಸಣ್ಣದಾಗಿ ಕಂಪನ ಶುರುವಾಯಿತು. ಪ್ರವಾದಿವರ್ಯರು(ಸ) ಅವರಿಬ್ಬರಿಗೂ ಕು
ಕೊಳ್ಳಲು ಹೇಳಿದರು. ತರುವಾಯ, ಬಂದ ವಿಷಯವೇನೆಂದು ಗಂಭೀರವಾಗಿ
ದರು. ಆಗಂತುಕರ ನಾಲಗೆ ತೊದಲಿತು. ಅವರಿಬ್ಬರೂ ಸಾವರಿಸಿಕೊಂಡು
ದರು, “ಇರಾನಿನ ದೊರೆ ನಿಮ್ಮನ್ನು ಕೊಲೆಗೈಯಲು ನಮಗೆ ಆದೇಶಿಸಿದ್ದಾ
ಆಗ ಪ್ರವಾದಿವರ್ಯರು(ಸ) ಮುಗುಳ್ನಗುತ್ತಾ ಹೇಳಿದರು, “ನಿಮ್ಮ ದೊರೆ ಇ
ರಾತ್ರಿಯೇ ಹತನಾಗಿದ್ದಾನೆ. ಅವನ ಮಗನೇ ಅವನನ್ನು ಕೊಂದಿರುವನು.
ನೀವು ಯಾವ ದೊರೆಯ ಆದೇಶವನ್ನು ಪಾಲಿಸುತ್ತೀರಿ?”

ತಮ್ಮ ರಾಜನ ಹತ್ಯೆಯಾಗಿರುವ ಸುದ್ದಿ ಕೇಳಿ ಅವರಿಬ್ಬರೂ ಪ್ರವಾದಿವರ್ಯ
ಬಳಿಯಿಂದ ಎದ್ದು ಹೊರಟರು. ಹೋಗುವಾಗ ಪರಸ್ಪರ ಹೀಗೆ ಮಾತನಾಡಿಕೊಂ
“ಮುಹಮ್ಮದ್‌ರಲ್ಲಿ ಇದ್ದಂತಹ ಗಾಂಭೀರ್ಯವನ್ನು ನಾನು ಬೇರಾವ ಸಾಮ್ರಾಟನಲ್ಲಿ
ಕಂಡಿಲ್ಲ.”

"ಒಂದು ವೇಳೆ ನಾನು ಇನ್ನೊಂದಿಷ್ಟು ಹೊತ್ತು ಅಲ್ಲಿರುತ್ತಿದ್ದರೆ ಖಂಡಿತಾ ಹೋಗುತ್ತಿದ್ದೆ. ನೋಡು ನನ್ನ ಕಾಲುಗಳು ಈಗಲೂ ಕಂಪಿಸುತ್ತಿವೆ."

"ಹೌದು ಏರಿರುವ ನನ್ನ ಹೃದಯ ಬಡಿತವು ಈಗಲೂ ಸ್ಥಿಮಿತಕ್ಕೆ ಬಂದಿಲ್ಲ."

ಅವರು ಯಮನ್ ತಲುಪಿದಾಗ, ಇರಾನಿನ ರಾಜ ತನ್ನ ಸ್ವಂತ ಮಗನಿಂದಲೇ ಗೈಯಲ್ಪಟ್ಟಿದ್ದ ವಿಷಯ ತಿಳಿದುಕೊಂಡರು.

ುಸ ಬಂದವನಿಗೆ ಅಭಯ!

ಪ್ರವಾದಿವರ್ಯರು(ಸ) ಮದೀನಕ್ಕೆ ವಲಸೆ (ಹಿಜ್ರತ್) ಹೊರಟ ಸಂದರ್ಭ. ಕ್ಕವಾಸಿಗಳು ಪ್ರವಾದಿವರ್ಯರನ್ನು(ಸ) ವಧಿಸುವ ಸಂಚು ಹೂಡಿದ್ದರಷ್ಟೇ. ರೆ ಅವರ ಸಂಚು ವಿಫಲಗೊಂಡು, ಪ್ರವಾದಿವರ್ಯರು(ಸ) ಅಬೂಬಕರ್‌ರ ತೆಗೂಡಿ ಮದೀನದೆಡೆಗೆ ಪ್ರಯಾಣ ಬೆಳೆಸುತ್ತಾರೆ. ವಿಷಯ ತಿಳಿದಾಗ ಕುರೈಶರು ರಿಬ್ಬರನ್ನು ಹುಡುಕಲು ಜನರನ್ನು ಕಳುಹಿಸುತ್ತಾರೆ. ಆದರೆ ಪ್ರವಾದಿವರ್ಯರು(ಸ) ುಡ ಸದೃಶವಾಗಿ ಆ ಜನರ ಕಣ್ತಪ್ಪಿಸಿಕೊಳ್ಳುತ್ತಾರೆ. ಇದರಿಂದ ನಿರಾಶರಾದ ್ರಶ್ ಸರದಾರರು 'ಮುಹಮ್ಮದ್ ಮತ್ತು ಅಬೂಬಕರ್‌ರನ್ನು ಕೊಂದವರಿಗೆ ರು ಒಂಟೆಗಳನ್ನು ಬಹುಮಾನವಾಗಿ ನೀಡುತ್ತೇವೆ' ಎಂದು ಘೋಷಿಸಿದರು.

ಬಹುಮಾನದ ಆಸೆಯಿಂದ ಸುರಾಕಾ ಬಿನ್ ಜಅ್‌ಶಮ್ ಎಂಬ ವ್ಯಕ್ತಿ ಪ್ರವಾದಿ ರ್ಯರನ್ನು(ಸ) ಹುಡುಕುತ್ತಾ ಹೊರಟ. ಹೀಗೆ ಹುಡುಕುತ್ತಾ ಸುರಾಕಾ ಹತ್ತಿರಕ್ಕೆ ುವಾಗ ಕುದುರೆಯ ಗೊರಸಿನ ಸಪ್ಪಳ ಕೇಳಿ ಅಬೂಬಕರ್ ತಿರುಗಿ ನೋಡು . ಸುರಾಕಾ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುವಷ್ಟು ಅಂತರದಲ್ಲಿದ್ದಾರೆ. "ಅಲ್ಲಾಹನ ೀಶವಾಹಕರೇ! ಶತ್ರುಗಳು ನಮ್ಮನ್ನು ತಲುಪಿ ಬಿಟ್ಟರು" ಎಂದು ಅಬೂಬಕರ್(ರ) ುಕ ತುಂಬಿದ ಸ್ವರದಲ್ಲಿ ಹೇಳುತ್ತಾರೆ. "ಭಯಪಡಬೇಡಿ, ಅಲ್ಲಾಹನು ನಮ್ಮ ುದ್ದಾನೆ" ಎನ್ನುತ್ತಾ ಪ್ರವಾದಿವರ್ಯರು(ಸ) ಕರಗಳನ್ನೆತ್ತಿ, "ಓ ನಮ್ಮ ಪ್ರಭೂ! ್ನು ಶತ್ರುಗಳ ಕೇಡಿನಿಂದ ರಕ್ಷಿಸು" ಎಂದು ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಾರೆ.

ಪ್ರಾರ್ಥನೆಯ ಫಲವೆಂಬಂತೆ ಸುರಾಕರ ಕುದುರೆಯ ಕಾಲುಗಳು ಮರಳಲ್ಲಿ ಕು ಹೋದುವು. ಪರಿಸ್ಥಿತಿಯನ್ನರಿತ ಸುರಾಕಾ, ಪ್ರವಾದಿವರ್ಯರಲ್ಲಿ ಹೀಗೆ ವಿಸಿದರು, "ಓ ಮುಹಮ್ಮದ್! ನನ್ನನ್ನು ಈ ಸಂಕಷ್ಟದಿಂದ ಪಾರುಗೊಳಿಸಿರಿ. ು ಇಲ್ಲಿಂದಲೇ ಮರಳಿಹೋಗುತ್ತೇನೆ. ಈ ಕಡೆಯಿಂದ ಯಾರಾದರೂ ನಿಮ್ಮನ್ನು ುಕಿಕೊಂಡು ಬಂದರೆ ಅವರನ್ನೂ ಮರಳಿಸುತ್ತೇನೆ." ಪ್ರವಾದಿವರ್ಯರು(ಸ) ್ಹನಲ್ಲಿ ಪ್ರಾರ್ಥಿಸಿದರು. ಕುದುರೆಯ ಕಾಲುಗಳು ಮರಳಿನಿಂದ ಹೊರಬಂದುವು.

ಸುರಾಕಾ ಮರಳಿ ಹೋಗ ಬಯಸಿದರು. ಆದರೆ ನೂರು ಒಂಟೆಗಳ ಲಾಲಸೆ ಅವರನ್ನು ಪುನಃ ತಿರುಗಿ ಬೆನ್ನಟ್ಟುವಂತೆ ಪ್ರೇರೇಪಿಸಿತು. ಈ ಬಾರಿ ನಾಲ ಹೆಜ್ಜೆಗಳು ಮುಂದೆ ಹೋಗುತ್ತಿದ್ದಂತೆಯೇ ಕುದುರೆಯ ಕಾಲುಗಳು ಇನ್ನಷ್ಟು ಆ ಹೂತು ಹೋದುವು. ಸುರಾಕಾ, ಕುದುರೆಯಿಂದ ಕೆಳಗಿಳಿದು ಪುನಃ ಪ್ರವಾದಿವರ್ಯರ ಕೂಗಿ ಕರೆದರು.

ಈ ಬಾರಿ ಮರಳಿನಿಂದ ಮೇಲೆ ಬರುತ್ತಲೇ ಪ್ರವಾದಿವರ್ಯರನ್ನು ಸಮೀ ಸುರಾಕಾ, "ನನಗೆ ಅಭಯ ನೀಡಿರುವುದಾಗಿ ಬರೆದು ಕೊಡಿ" ಎಂದು ಬ ಕೊಂಡರು. ಹೀಗೆ ಅಬೂಬಕರ್ ಸಿದ್ದೀಕ್‌ರು ಚರ್ಮದ ತುಂಡಿನಲ್ಲಿ ಅಭಯ ಬರೆದರು. ಪವಾದಿವರ್ಯರು ಅದನ್ನು ಸುರಾಕರ ಕೈಗಿಡುತ್ತಾ ಕೇಳಿದರು, "ಸುರಾ ಕಿಸ್ರಾನ ಕಡಗ ನಿಮ್ಮ ಕೈಯಲ್ಲಿ ಎಷ್ಟು ಚೆನ್ನಾಗಿ ಕಾಣಬಹುದು?" ಸುರಾಕ ಅದಾಗಲೇ ಮುಹಮ್ಮದ್‌ರು ಅಲ್ಲಾಹನ ಸತ್ಯಸಂದೇಶವಾಹಕರಾಗಿರವರೆಂಬ ಖಾತ್ರಿಯಾಗಿತ್ತು. ಹಾಗಾಗಿ ಪ್ರವಾದಿವರ್ಯರ(ಸ) ಈ ಪ್ರಶ್ನೆ ಸೋಜಿಗವೆನಿಸ ಇದಾಗಿ ಎಂಟು ವರ್ಷಗಳ ತರುವಾಯ ಮಕ್ಕಾ ವಿಜಯ, ಹುನೈನ್ ಯುದ್ಧ ವ ತಾಯಿಫ್ ಯುದ್ಧಗಳಾದ ನಂತರ ಸುರಾಕಾ(ರ) ಇಸ್ಲಾಮ್ ಸ್ವೀಕರಿಸಿದರು. ಬಳಿಕ ಮದೀನದಲ್ಲಿ ಪ್ರವಾದಿವರ್ಯರೊಡನೆ ಇದ್ದಷ್ಟೂ ಕಾಲ ಅವರ(ಸ) ಸಾಂ ದಿಂದ ಪುನೀತರಾದರು.

ಒಮ್ಮೆ ಪ್ರವಾದಿವರ್ಯರು(ಸ) ಸುರಾಕರೊಡನೆ ಕೇಳಿದರು, "ಸುರಾ ನಿಮಗೆ ಸ್ವರ್ಗವಾಸಿಗಳು ಮತ್ತು ನರಕವಾಸಿಗಳು ಯಾರೆಂದು ಹೇಳಲೇ?" ಸುರ ಹೇಳಿದರು, "ಹೇಳಿ ಅಲ್ಲಾಹನ ಸಂದೇಶವಾಹಕರೇ!" ಆಗ ಪ್ರವಾದಿ(ಸ) ಹೀಗೆಂದ "ತೀಕ್ಷ್ಣ ಸ್ವಭಾವಿ, ಜಂಭದಿಂದ ಎದೆ ಸೆಟೆಸಿ ನಡೆಯುವವ ಮತ್ತು ಅಹಂ ವ್ಯಕ್ತಿ ನರಕವಾಸಿಯಾಗಿದ್ದಾನೆ. ಅಧೀನರೂ ಬಡವರೂ ದುರ್ಬಲರೂ ಸ್ವರ್ಗ ಗಳಾಗಿದ್ದಾರೆ." ಒಮ್ಮೆ ಸುರಾಕಾ ಕೇಳಿದರು, "ಅಲ್ಲಾಹನ ಸಂದೇಶವಾಹಕರೇ! ದ ತಪ್ಪಿದ ಒಂಟೆಯೊಂದು ನನ್ನ ಒಂಟೆ ನೀರು ಕುಡಿಯುವಲ್ಲಿಗೆ ಬಂದರೆ ನಾನ ನೀರುಣಿಸಿದರೆ ನನಗೆ ಪ್ರತಿಫಲವಿದೆಯೇ?" ಆಗ ಪ್ರವಾದಿವರ್ಯರು ಹೇಳಿ "ಖಂಡಿತವಾಗಿಯೂ ಇದೆ. ಪ್ರತಿಯೊಂದು ಜೀವಿಗೂ ನೀರುಣಿಸಿದರೆ ಪುಣ್ಯವಿ ಹಜ್ಜತುಲ್ ವಿದಾದ ಸಂದರ್ಭದಲ್ಲಿ ಸುರಾಕಾ(ರ) ಪ್ರವಾದಿವರ್ಯರಲ್ಲಿ(ಸ) ಕೇಳಿ "ಅಲ್ಲಾಹನ ಸಂದೇಶವಾಹಕರೇ! ನಮ್ಮ ಈ ಉಮ್ರಾ ಈ ವರ್ಷಕ್ಕೆ ಮಾ ಅಥವಾ ಎಂದೆಂದಿಗೂ ಇರುವುದೇ?" ಪ್ರವಾದಿವರ್ಯರು(ಸ) ಹೇಳಿ "ನಿರಂತರವಾಗಿರುವುದು."

ಅದೇ ರೀತಿ ಹಿಜ್ರತ್‌ನ ವೇಳೆ ಪ್ರವಾದಿವರ್ಯರು ನೀಡಿದ ಭವಿಷ್ಯವಾಣಿ

ಂಕರ ವೃದ್ಧಾಪ್ಯದ ವೇಳೆ, ಹ. ಉಮರ್‌ರ(ರ) ಖಿಲಾಫತ್ ಆಡಳಿತ ಕಾಲದಲ್ಲಿ ಾಯಿತು. ಆಗ ರೋಮನ್ನು ಜಯಿಸಿದ ಮುಸ್ಲಿಮರು ಸಂಗ್ರಹಿಸಿ ತಂದ ಾರ್ಜಿತ ಸೊತ್ತಿನಲ್ಲಿ ಕಿಸ್ರಾನ ಒಡವೆಗಳೂ ಇದ್ದುವು. ಹ. ಉಮರ್‌ರವರು ಪೈಕಿ ಕಡಗವನ್ನೆತ್ತಿ ಸುರಾಕರ ಕೈಗೆ ತೊಡಿಸಿ, "ಹೇಳಿ ಹೇಗೆನಿಸುತ್ತಿದೆ?' ಪ್ರಶ್ನಿಸಿದಾಗ ಸುರಾಕಾ(ರ) ಪ್ರವಾದಿವರ್ಯರ(ಸ) ನೆನಪಾಗಿ ಅತ್ತುಬಿಟ್ಟರು.

❖ ❖ ❖ ❖

ಪ್ರವಾದಿವರ್ಯರು(ಸ) 'ದಾತುರ್ರಿಖಾಅ್' ಯುದ್ಧ ಮುಗಿಸಿ ಮರಳುತ್ತಿದ್ದರು. ಯು ಹಾದಿಯಲ್ಲಿ ಮಧ್ಯಾಹ್ನದ ವೇಳೆ ವಿಶ್ರಮಿಸಲು ಒಂದೆಡೆ ತಂಗಿತು. ಸಹಾಬಿ ರೂ ಒಂದು ವೃಕ್ಷದಡಿ ವಿರಮಿಸಿದರು. ಪ್ರವಾದಿವರ್ಯರು(ಸ) ಅನತಿ ದೂರ ್ದ ಮರದ ಬುಡದಲ್ಲಿ ಕುಳಿತುಕೊಂಡರು. ಅವರೆಲ್ಲರೂ ನಿದ್ರಾವಶರಾದ ರ್ಭದಲ್ಲಿ ಬಹುದೇವ ವಿಶ್ವಾಸಿಗಳು ಇದೇ ತಕ್ಕ ಸಂದರ್ಭವೆಂದರಿತು ಗೌಸ್ ಹಾರಿಸ್ ಎಂಬ ಪಹಿಲ್ವಾನನನ್ನು ಹಣದ ಆಮಿಷವೊಡ್ಡಿ, ಪ್ರವಾದಿವರ್ಯರನ್ನು ಲು ರವಾನಿಸಿದರು. ಅವನನ್ನು ಕಳುಹಿಸುವಾಗ ಹೀಗೆ ಹೇಳಿದರು, "ನೋಡು, ಮ್ಮದ್ ಅಲ್ಲಿ ಒಬ್ಬಂಟಿಯಾಗಿ ಮರದಡಿಯಲ್ಲಿ ನಿದ್ರಿಸುತ್ತಿದ್ದಾರೆ. ಅವರನ್ನು ಮ ಬಿಟ್ಟರೆ ಮತ್ತೆ ಯಾವುದೇ ರೀತಿಯ ಕಲಹ-ಜಗಳವಿರಲಾರದು."

ಗೌಸ್ ಖಡ್ಗ ಹಿರಿದು ಪ್ರವಾದಿವರ್ಯರನ್ನು ಸಮೀಪಿಸಿದನು. ಖಡ್ಗವೆತ್ತಿ (ಸ) ಕೊರಳನ್ನು ಕೊಯ್ಯಬೇಕೆನ್ನುವಷ್ಟರಲ್ಲಿ ಪ್ರವಾದಿವರ್ಯರು(ಸ) ಕಣ್ಣು ರು. ಆಗ ಗೌಸ್ ಕೇಳಿದ, "ಈಗ ನಿಮ್ಮನ್ನು ಯಾರು ರಕ್ಷಿಸುವರು?" ಪ್ರವಾದಿ ರು(ಸ) ಶಾಂತಚಿತ್ತರಾಗಿ ಹೇಳಿದರು, "ನನ್ನನ್ನು ಯಾವಾಗಲೂ ಕಾಪಾಡುತ್ತಿರುವ ಹನೇ ನಿನ್ನಿಂದಲೂ ರಕ್ಷಿಸುವನು."

ಅಷ್ಟರಲ್ಲಿ ಅವನ ಕೈ ಕಂಪಿಸಿ ಖಡ್ಗ ಜಾರಿ ಕೆಳಗೆ ಬಿತ್ತು. ಈಗ ಅದೇ ಖಡ್ಗ ್ದ ಪ್ರವಾದಿವರ್ಯರು(ಸ) ಗೌಸ್‌ನೊಡನೆ ಕೇಳಿದರು, "ಈಗ ಹೇಳು, ನನ್ನಿಂದ ್ನ ಯಾರು ಕಾಪಾಡಬಲ್ಲರು?"

ದಿಗ್ಭ್ರಾಂತರಾದ ಗೌಸ್ ಹೇಳಿದ, "ನಿಮ್ಮ ಸಚ್ಚಾರಿತ್ರ್ಯವು ನನ್ನನ್ನು ರಕ್ಷಿಸಬಲ್ಲುದು." ದಿವರ್ಯರು(ಸ) ಮುಗುಳ್ನಗುತ್ತಾ ಅವನನ್ನು ಕ್ಷಮಿಸಿದರು ಮತ್ತು ಅವನ ನ್ನು ಮರಳಿಸಿದರು. ಗೌಸ್ ತನ್ನ ಜನಾಂಗದವರ ಬಳಿಗೆ ತೆರಳಿದಾಗ ದಿವರ್ಯರ(ಸ) ಚಾರಿತ್ರ್ಯದ ಬಗ್ಗೆ ಪ್ರಸ್ತಾಪಿಸುತ್ತಾ, "ತನ್ನ ಪ್ರಾಣ ಶತ್ರುವನ್ನೂ ಬಿಡುವಂತಹ ಉದಾರಮತಿ ಸಚ್ಚಾರಿತ್ರ್ಯವಂತ ವ್ಯಕ್ತಿಯನ್ನು ಇದುವರೆಗೂ ಕಂಡಿಲ್ಲ" ಎಂದು ಉದ್ಗರಿಸಿದನು. ❑

ಹಂಗಿಸಿದವರೂ ಆಕರ್ಷಿತರಾದರು

ಅಬ್ದುಲ್ಲಾ ಬಿನ್ ಅಬೀ ಉಮಯ್ಯ- ಪ್ರವಾದಿವರ್ಯರ(ಸ) ಸೋ
ಅತಿಕರ ಮಗ. ಪ್ರವಾದಿವರ್ಯರ(ಸ) ಪತ್ನಿ ಉಮ್ಮು ಸಲಮರವರು ಅಬ್ದು
ಒಡಹುಟ್ಟಿದ ಸೋದರಿಯಾಗಿದ್ದರು. ಹೀಗೆ ಅಬ್ದುಲ್ಲರಿಗೆ ಪ್ರವಾದಿವರ್ಯರೊ
ಒಂದಲ್ಲ ಹಲವು ರೀತಿಯ ಸಂಬಂಧವಿತ್ತು. ಬಾಲ್ಯದಲ್ಲಿ ಅವರಿಬ್ಬರ ನ
ಗೆಳೆತನವೂ ಇತ್ತು. ಅಜ್ಞಾನ ಕಾಲದಲ್ಲಿಯೂ ನಂತರ ಇಸ್ಲಾಮಿನ ಕಾಲದಲ್ಲಿ
ಅಬ್ದುಲ್ಲರದ್ದು ಕುಲೀನ ಮನೆತನವಾಗಿತ್ತು. ಅವರ ತಂದೆ ಅಬೂ ಉಮಯ್ಯ ಕು
ಪೈಕಿ ಗೌರವಾರ್ಹ ಶ್ರೀಮಂತರಲ್ಲೋರ್ವರಾಗಿದ್ದರು. ಔದಾರ್ಯವು ಆ ಕುಟುಂ
ವಿಶೇಷ ಪದ್ಧತಿಯಾಗಿತ್ತು. ಎಲ್ಲಿಗೆ ಯಾತ್ರೆ ಹೋಗುವುದಿದ್ದರೂ ತಮ್ಮ ಸಂಗ
ಸಂಪೂರ್ಣ ಖರ್ಚನ್ನು ಈ ಕುಟುಂಬದ ಸದಸ್ಯರೇ ಭರಿಸುತ್ತಿದ್ದರು.

ಪ್ರವಾದಿವರ್ಯರು(ಸ) ಇಸ್ಲಾಮಿನ ಸಂದೇಶ ಹರಡಲಾರಂಭಿಸಿದಾಗ
ಮೊದಲಿಗೆ ಕುರೈಶಿ ಸರದಾರರು ವಿರೋಧಿಸಿದರು. ಅಬೂ ಉಮಯ್ಯ
ಕುರೈಶಿಗಳ ಓರ್ವ ಸರದಾರರಾಗಿದ್ದರು. ಅವರೂ ಅವರ ಪುತ್ರ ಅಬ್ದುಲ್ಲ
ಪ್ರವಾದಿವರ್ಯರನ್ನು ಉಗ್ರವಾಗಿ ವಿರೋಧಿಸಿದವರ ಪೈಕಿ ಮುಂಚೂಣಿಯಲ್ಲಿ
ಅಬ್ದುಲ್ಲಾರಲ್ಲಿ ಪ್ರವಾದಿವರ್ಯರ ಮೇಲಿದ್ದ ಗೆಳೆತನವು ಅದ್ಯಾವ ರೀತಿ
ಹಗೆತನವಾಗಿ ಮಾರ್ಪಟ್ಟಿತೋ... ಅವರು ಪ್ರವಾದಿವರ್ಯ ರನ್ನು ಮಾತ್ರ
ಅವರ ಸಂಗಡಿಗರನ್ನೂ ದ್ವೇಷಿಸತೊಡಗಿದರು.

ಅಬೂತಾಲಿಬ್‌ರು ತೀವ್ರ ರೋಗ ಬಾಧಿತರಾಗಿದ್ದಾಗ ಪ್ರವಾದಿವರ್ಯರ
ಅವರ ಬಳಿ ಕುಳಿತಿದ್ದರು. ಹಾಗೆಯೇ ಅಬ್ದುಲ್ಲಾ ಬಿನ್ ಅಬೀ ಉಮಯ್ಯ,
ಜಹಲ್ ಸೇರಿದಂತೆ ಕುರೈಶ್ ಗಣ್ಯರೂ ಅಲ್ಲಿ ಬಂದು ಸೇರಿದರು. ಅವರೇ
ಹಲವು ಬಾರಿ ಪ್ರವಾದಿವರ್ಯರ(ಸ) ವಿರುದ್ಧ ದೂರು ಹೇಳಲು ಅಬೂತಾಲಿ
ಬಳಿಗೆ ಬಂದಿದ್ದರು. ಇದು ಕೊನೆಯ ಬಾರಿ ಬರುವುದೆಂದೂ ಅವರು ಘೋ
ಕೊಂಡಿದ್ದರು. ಅದೇ ಹೊತ್ತಿಗೆ, ಅಬೂತಾಲಿಬ್ ಅಂತಿಮ ಕ್ಷಣಗಳನ್ನೆಣಿಸುತ್ತಿ
ಇದನ್ನು ಗ್ರಹಿಸಿದ ಪ್ರವಾದಿವರ್ಯರು(ಸ) ಅಬೂತಾಲಿಬ್‌ರನ್ನುದ್ದೇಶಿಸಿ ಹೇಳಿ
"ದೊಡ್ಡಪ್ಪಾ, ನೀವು ಸತ್ಯವಚನ ಪಠಿಸಿದರೆ, ಪರಲೋಕದಲ್ಲಿ ನನಗೆ ನಿಮ್ಮ ಕ
ಶಿಫಾರಸ್ಸು ಮಾಡಲು ಅವಕಾಶ ಒದಗೀತು."

ಇದನ್ನು ಕೇಳಿ ಅಬೂಜಹಲ್ ಮತ್ತು ಅಬ್ದುಲ್ಲಾ ಹಾವು ಮೆಟ್ಟಿ
ಹೌಹಾರುತ್ತಾರೆ. ಇಬ್ಬರೂ ಒಕ್ಕೊರಲಿನಿಂದ, "ಅಬೂ ತಾಲಿಬ್! ನೀವು ಅ
ಮುತ್ತಲಿಬ್‌ರ ಧರ್ಮವನ್ನು ತೊರೆಯುತ್ತೀರಾ?" ಎಂದು ಕೇಳುತ್ತಾರೆ. ಹಿ

ಂತಾಲಿಬ್‌ರು ಪ್ರವಾದಿವರ್ಯರೊಡನೆ, "ಸೋದರ ಪುತ್ರಾ! ನಾನು ಖಂಡಿತ ೦ಚನ ಪಠಿಸುವವನಿದ್ದೆ. ಆದರೆ ಕುರೈಶರು, ನಾನು ಮರಣ ಭಯದಿಂದ ,ದೆನೆಂದು ನನ್ನನ್ನು ಹಂಗಿಸಬಹುದು. ಆದ್ದರಿಂದ ನಾನು ನನ್ನ ಧರ್ಮದಲ್ಲಿಯೇ ಯುತ್ತೇನೆ" ಎಂದು ಹೇಳುತ್ತಾರೆ.

ಪ್ರವಾದಿವರ್ಯರು(ಸ) ನಿರಾಶರಾದರೂ, "ನಾನು ನಿಮಗಾಗಿ ಅಲ್ಲಾಹನಲ್ಲಿ ್ಥಸುವೆನು" ಎಂದು ಹೇಳುತ್ತಾರೆ. ಈ ಪ್ರಕಾರ ಅಬೂಜಹಲ್ ಮತ್ತು ಅಬ್ದುಲ್ಲಾ ಅಬೀ ಉಮಯ್ಯ ಇಬ್ಬರೂ ಅಬೂತಾಲಿಬ್‌ರನ್ನು ಸತ್ಯಧರ್ಮ ಸ್ವೀಕರಿಸು ೨ಂದ ತಡೆಯುತ್ತಾರೆ.

ಅಬ್ದುಲ್ಲಾ ಮತ್ತು ಸಂಗಡಿಗರು ಪ್ರವಾದಿವರ್ಯರನ್ನು(ಸ) ಹಂಗಿಸುತ್ತಾ ಹೀಗೆ ುತ್ತಿದ್ದರು, "ನೀವು ನಮಗಾಗಿ ಭೂಮಿಯನ್ನು ಸೀಳಿ ಒಂದು ಚಿಲುಮೆಯನ್ನು ುವ ವರೆಗೂ ನಾವು ನಿಮ್ಮ ಮಾತನ್ನು ನಂಬಲಾರೆವು ಅಥವಾ ನಿಮಗಾಗಿ ರ್ಜರ ಮತ್ತು ದ್ರಾಕ್ಷೆಗಳ ಒಂದು ತೋಟ ಉಂಟಾಗಬೇಕು ಹಾಗೂ ನೀವು ಲ್ಲಿ ಕಾಲುವೆಗಳನ್ನು ಹರಿಸಬೇಕು ಅಥವಾ ನಿಮ್ಮ ವಾದದಂತೆ ಆಕಾಶವನ್ನು ತು ತುಂಡಾಗಿ ಮಾಡಿ ನಮ್ಮ ಮೇಲೆ ಬೀಳಿಸಬೇಕು, ಇಲ್ಲವೇ ಅಲ್ಲಾಹನನ್ನೂ ಚರರನ್ನೂ ಮುಖಾಮುಖಿ ನಮ್ಮ ಮುಂದೆ ತರಬೇಕು ಅಥವಾ ನಿಮಗಾಗಿ ು ಚಿನ್ನದ ಮನೆ ತಯಾರಾಗಬೇಕು ಅಥವಾ ನೀವು ಆಕಾಶದ ಮೇಲೆ ೇಕು."

ಇಸ್ಲಾಮ್ ಸಂಪೂರ್ಣ ಶಕ್ತಿಯೊಂದಿಗೆ ಅರೇಬಿಯದಾದ್ಯಂತ ಪಸರಿಸಿದಾಗ, ಅಬ್ದುಲ್ಲಾ ಬಿನ್ ಅಬೀ ಉಮಯ್ಯ ಅದರೆಡೆಗೆ ಆಕರ್ಷಿತರಾದರು. ಅಲ್ಲಾಹನ ಗಳನ್ನು ಅಪಹಾಸ್ಯಕ್ಕೆ ಗುರಿ ಮಾಡುತ್ತಿದ್ದವರು, ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ು ಸೇರಿದರು. ಪ್ರವಾದಿವರ್ಯರೂ(ಸ) ಮರುಮಾತನಾಡದೆ ಅವರನ್ನು ಕ್ಷಮಿಸಿ ಹೀಗೆ ಅಬ್ದುಲ್ಲಾ ಬಿನ್ ಅಬೀ ಉಮಯ್ಯ ಸತ್ಯಧರ್ಮವನ್ನು ಸ್ವೀಕರಿಸಿದ ಮಕ್ಕಾ ವಿಜಯ, ಹುನೈನ್ ಮತ್ತು ತಾಯಿಫ್ ಯುದ್ಧಗಳಲ್ಲಿ ಭಾಗವಹಿಸಿದರು. ುಫ್‌ನಲ್ಲಿ ಅಬ್ದುಲ್ಲಾ ಬಾಣದೇಟಿನಿಂದ ಗಾಯಗೊಂಡು ಹುತಾತ್ಮರಾದರು.

ಗಾರನ ಅನುಚಿತ ವರ್ತನೆಗೆ ಮೌನ ಉತ್ತರ

ಹಿಂದೆ ಯಹೂದಿ ವಿದ್ವಾಂಸರಾಗಿದ್ದ ಝೈದ್ ಬಿನ್ ಸಅತದ್ ಎಂಬವರಿಂದ ೃತ ಹದೀಸ್ ವಿದ್ವಾಂಸರು ಈ ರೀತಿ ಉಲ್ಲೇಖಿಸಿದ್ದಾರೆ:

ನಾನು ಪೂರ್ವ ಗ್ರಂಥಗಳಲ್ಲಿ ಅಂತ್ಯ ಪ್ರವಾದಿಯವರ ಕುರಿತಾದ ವಿವರಣೆಯನ್ನು ತಿಳಿದುಕೊಂಡಿದ್ದೆ. ಆ ಎಲ್ಲ ಗುಣಗಳನ್ನು ಪ್ರವಾದಿ ಮುಹಮ್ಮದ್‌ರಲ್ಲಿ ಕಂಡಿದ್ದೆ.

ಆದರೆ ಎರಡು ವಿಶಿಷ್ಟ ಗುಣಗಳ ಬಗ್ಗೆ ಸ್ಪಷ್ಟವಾಗಿ ತಿಳಿಯಲಾಗಲಿಲ್ಲ. ಒಂದನೆ ಸಹನೆಯು ಕೋಪವನ್ನು ಮೆಟ್ಟಿ ನಿಲ್ಲುವುದು; ಇನ್ನೊಂದು ಕಠೋರ ಮಾತುಗ ಕೇಳಿಯೂ ಕೋಪಗೊಳ್ಳದಿರುವುದು, ಬದಲಾಗಿ ಇನ್ನೂ ಹೆಚ್ಚು ಮೃದು ಧೋರಣೆ ತಾಳುವುದು. ನಾನು ಈ ಎರಡೂ ಗುಣಗಳನ್ನು ಹೇಗಾದರೂ ಮಾಡಿ ಪರೀಕ್ಷಿಸಬಯ ಈ ಅವಕಾಶಕ್ಕಾಗಿ ನಾನು ಹಲವು ದಿನ ಕಾದೆ. ಆಕಸ್ಮಿಕವಾಗಿ, ಒಮ್ಮೆ ಪ್ರ ಮುಹಮ್ಮದ್‌ರು ನನ್ನಿಂದ ಕೆಲವು ಉತ್ತುತ್ತೆಗಳನ್ನು ಸಾಲವಾಗಿ ಪಡೆದರು. ಅ ಇಂತಿಂತಹ ದಿನ ಮರಳಿಸಲಾಗುವುದೆಂದೂ ವಾಗ್ದಾನ ಮಾಡಿದರು.

ನಾನು ನಿಶ್ಚಿತ ದಿನಕ್ಕಿಂತ ಮೂರು ದಿವಸ ಮುಂಚೆಯೇ ಹೋಗಿ, ಅ ಸಾಲ ಮರುಪಾವತಿಸಲು ಒತ್ತಾಯಿಸಿದೆ. ಅವರು ಮೌನವಾಗಿದ್ದರು. ಮರ ದಿನ ನಿಗದಿ ಪಡಿಸಲಾಗಿದ್ದರೂ ಬೇಗ ಏಕೆ ಬಂದೆ ಎಂದು ನನ್ನನ್ನು ತರ ತೆಗೆದುಕೊಳ್ಳಲಿಲ್ಲ. ಮತ್ತೆ ನಾನು ಸ್ವಲ್ಪ ಒರಟಾಗಿಯೇ ಕೇಳಿದೆ. ಅಷ್ಟರಲ್ಲಿ ಪ್ರ ವರ್ಯರ(ಸ) ಕೆಲವು ಮಂದಿ ಸಂಗಾತಿಗಳು ಒಟ್ಟು ಸೇರಿದರು. ಇ ಪರಿಸ್ಥಿತಿಯಲ್ಲಿ ಪ್ರವಾದಿಯವರು(ಸ) ಕೋಪಗೊಳ್ಳುವರೆಂದೂ ನನ್ನೊಡನೆ ಕಠಿಣ ವರ್ತಿಸುವರೆಂದೂ ನಾನು ಭಾವಿಸಿದೆ. ಆದರೆ ಅವರಿಗೆ ಎಳ್ಳಷ್ಟೂ ಕೋಪ ಬಂ ಕಾಣಲಿಲ್ಲ. ಎಲ್ಲಿಯ ವರೆಗೆಂದರೆ ನಾನು, "ನಿಮ್ಮ ಕುಟುಂಬದವರೆಲ್ಲರೂ ಹೀಗೆ ಸಾಲ ಪಡೆಯುತ್ತಾರೆ, ಆದರೆ ಮರುಪಾವತಿಸುವಾಗ ನುಣುಚಿಕೊಳ್ಳುತ್ತಾರೆ. ನಿವ ವರಿಂದ ಸಾಲಗಾರನಿಗೆ ಸುಲಭದಲ್ಲಿ ತನ್ನ ಸಾಲ ಮರಳಿ ಸಿಗಲಾರದು" ಎ ಒದರಿಬಿಟ್ಟೆ.

ಆದರೂ ಅವರು ತುಟಿಪಿಟಿಕ್ಕೆನ್ನಲಿಲ್ಲ. ಬಳಿಕ ನಾನು ಅವರೊಡನೆ ಅಸಭ್ಯ ವರ್ತಿಸಿದೆ. ಅವರು(ಸ) ಹೊದ್ದುಕೊಂಡಿದ್ದ ಚದ್ದರವನ್ನು ಹಿಡಿದೆಳೆದೆ. ಅವರನ್ನು ದುರುಗುಟ್ಟಿ ನೋಡಿದೆ. "ಏಳಿ, ನನ್ನ ಸಾಲವನ್ನು ಮರುಪಾವತಿ ಎಂದು ಅಬ್ಬರಿಸಿದೆ. ಪ್ರವಾದಿಯವರು(ಸ) ಎದ್ದು ನಿಂತರು. ಅದೇ ವೇಳೆ ಅಲ್ಲಿ ಉಪಸ್ಥಿತರಿದ್ದ ಉಮರ್‌ರವರು ನನ್ನ ವರ್ತನೆಯಿಂದ ರೋಷಾಕುಲರಾಗಿ ಒರೆಯಿಂದ ಖಡ್ಗ ತೆಗೆದು ನನ್ನೆಡೆಗೆ ತೋರಿಸುತ್ತಾ, "ದೇವಧಿಕ್ಕಾರಿ! ನೀನು ಕೃತ್ಯದಿಂದ ಹಿಂದೆ ಸರಿಯುತ್ತೀಯೋ ಅಥವಾ ನಿನ್ನ ತಲೆಯನ್ನು ಕಡಿಯಲೋ ಎಂದು ಘರ್ಜಿಸಿದರು.

ಪ್ರವಾದಿವರ್ಯರು(ಸ) ಮುಗುಳ್ನಗುತ್ತಾ ಉಮರ್‌ರೊಡನೆ ಹೀಗೆಂ "ನೀವು ಈ ವ್ಯಕ್ತಿಯನ್ನು ಗದರಿಸುತ್ತೀರೆಂದು ನಾನು ಭಾವಿಸಿರಲಿಲ್ಲ. ನಿ ನನ್ನೊಡನೆ ಸಾಲ ಮರುಪಾವತಿಸಲು ಹೇಳಬಹುದಾಗಿತ್ತು, ಅದುವೇ ಒಳ್ಳೆಯ ಅಥವಾ ಈ ವ್ಯಕ್ತಿಯೊಡನೆ, ಮೃದುವಾಗಿ ವರ್ತಿಸುವಂತೆ ವಿನಂತಿಸಬಹುದಿ

ಈ ಮಾತು ಕೇಳಿ ಉಮರ್ ನಾಚಿ ತಲೆ ತಗ್ಗಿಸಿದರು ಮತ್ತು, "ಅಲ್ಲಾಹನ ೀಶವಾಹಕರೇ! ನನ್ನಿಂದ ಸಹಿಸಲಾಗಲಿಲ್ಲ. ತಾವು ಆದೇಶಿಸಿದಲ್ಲಿ ಇವರ ವನ್ನು ನಾನು ತೀರಿಸಲೇ?" ಆಗ ಪ್ರವಾದಿವರ್ಯರು(ಸ) ಹೇಳಿದರು, "ಸರಿ, ಗಿ ಇವರ ಸಾಲವನ್ನು ತೀರಿಸಿರಿ ಮತ್ತು ಇವರೊಡನೆ ಕಠೋರವಾಗಿ ವರ್ತಿಸಿ ಕ್ಕಾಗಿ ಪ್ರಾಯಶ್ಚಿತ್ತವಾಗಿ ಇಪ್ಪತ್ತು ಬೊಗಸೆ ಹೆಚ್ಚುವರಿಯಾಗಿ ನೀಡಿರಿ."

ನಾನು ಪ್ರವಾದಿವರ್ಯರ(ಸ) ಈ ಸದ್ವರ್ತನೆ ಕಂಡು ಪ್ರಭಾವಿತನಾದೆ. ಆ ಲೇ ಸತ್ಯವಚನ ಉಚ್ಚರಿಸಿ, ಅವರ ಪ್ರವಾದಿತ್ವವನ್ನು ದೃಢಪಡಿಸಿಕೊಂಡೆ.

ಾಕ್ಷಿಯಾಗಿ ಮಾರ್ಪಟ್ಟ ಲೂಟಿಕೋರ

ಕುರಝ್ ಬಿನ್ ಜಾಬಿರ್ ಕುರೈಶ್ ಗೋತ್ರದವರಾಗಿದ್ದರು. ಮುಸ್ಲಿಮರ ಮೇಲೆ , ದೌರ್ಜನ್ಯ ಎಸಗುವಲ್ಲಿ ಸಾಧ್ಯಂತ ಪ್ರಯತ್ನಪಟ್ಟಿದ್ದರು. ಪ್ರವಾದಿವರ್ಯರು(ಸ) ೀನಕ್ಕೆ ವಲಸೆ ಹೋದ ಬಳಿಕ ಅವರನ್ನು ಸತಾಯಿಸುವ ನೂತನ ವಿಧಾನವನ್ನು ಕರಿಸಿದರು. ಮದೀನಕ್ಕೆ ಮೂರು ಮೈಲು ದೂರದಲ್ಲಿರುವ ಜಮಾರ್ ಬೆಟ್ಟದ ಯಿಂದ ಮುಸ್ಲಿ ಮರ ಒಂಟೆಗಳನ್ನು ಕದ್ದೊಯ್ಯತೊಡಗಿದರು. ಕೊನೆಗೆ ಒಮ್ಮೆ ರ್ ಬೆಟ್ಟ ಪ್ರದೇಶದ ನಿವಾಸಿಗಳನ್ನೇ ಲೂಟಿಗೈದರು. ಈ ವಿಷಯ ತಿಳಿದಾಗ ದಿವರ್ಯರು ಕುರಝ್‌ರನ್ನು ಹುಡುಕುತ್ತಾ ಹೊರಟರು. ಸಫ್ವಾನ್ ಕಣಿವೆಯ ತಲಪುವಾಗ, ಕುರಝ್ ಹಿಡಿತದಿಂದ ಬಲುದೂರ ಓಡಿ ಹೋಗಿರುವುದಾಗಿ ು ಬರುತ್ತದೆ. ಹಾಗಾಗಿ ಪ್ರವಾದಿವರ್ಯರು(ಸ) ನಗರಕ್ಕೆ ಮರಳುತ್ತಾರೆ. ಕೆಲವು ಳ ಬಳಿಕ ಕುರಝ್ ಮದೀನಕ್ಕೆ ಬಂದು ತಾನು ಇಸ್ಲಾಮ್ ಸ್ವೀಕರಿಸಿರುವುದಾಗಿ ದಿವರ್ಯರ(ಸ) ಮುಂದೆ ಪ್ರಕಟಿಸುತ್ತಾರೆ.

ಮಕ್ಕಾ ವಿಜಯದ ಸಂದರ್ಭದಲ್ಲಿ ಕುರಝ್‌ರು(ರ) ಪ್ರವಾದಿವರ್ಯರ(ಸ) ವಾರರಾಗಿದ್ದರು. ಕುರಝ್ ಮತ್ತು ಜೈಶ್(ರ) ಇಬ್ಬರೂ ಖಾಲಿದ್ ಬಿನ್ ದ್‌ರ(ರ) ಸೇನೆಯಲ್ಲಿದ್ದರು. ಆಕಸ್ಮಿಕವಾಗಿ ಇಬ್ಬರೂ ಸೇನೆಯಿಂದ ಬೇರ್ಪಟ್ಟು ತಪ್ಪಿದರು. ಅವರಿಗೆ ಕೆಲವು ಮಂದಿ ಬಹುದೇವ ವಿಶ್ವಾಸಿಗಳೆದುರಾದರು. ು ಜೈಶ್‌ರನ್ನು(ರ) ವಧಿಸಿದರು. ಕುರಝ್(ರ) ಜೈಶ್‌ರ ಮೃತದೇಹವನ್ನು ದಿಟ್ಟು ಆ ಬಹುದೇವ ವಿಶ್ವಾಸಿಗಳ ವಿರುದ್ಧ ಏಕಾಂಗಿಯಾಗಿ ವೀರಾವೇಶದಿಂದ ಾಡಿ ಹುತಾತ್ಮರಾದರು.

ಗಮಾರನ ಅತಿರೇಕಕ್ಕೆ ಮುಗುಳ್ನಗೆಯ ಉತ್ತರ

ಪ್ರವಾದಿವರ್ಯರ(ಸ) ಮಹಾನ್ ಸಂಗಾತಿಗಳ ಪೈಕಿ ಒಬ್ಬರಾದ ಅಬೂ ಾ(ರ) ಒಂದು ಘಟನೆಯನ್ನು ವಿವರಿಸಿದ್ದಾರೆ. ಇದು ಮಾನವೇತಿಹಾಸದ

ಪುಟಗಳಲ್ಲಿ ಅದ್ಭುತಗಳ ಸಾಲಿನಲ್ಲಿ ಸೇರಿಸಬೇಕಾದಂತಹ ಘಟನೆ. ಇಂತಹ ಸ ಮತ್ತು ಕ್ಷಮೆ ತುಂಬಿದ ಪರಿಪೂರ್ಣ ವ್ಯಕ್ತಿತ್ವದ ಉದಾಹರಣೆ ಜಗತ್ತಿನ ಇತಿಹಾಸ ಬೇರೆ ಸಿಗಲಾರದು.

ಒಮ್ಮೆ ಪ್ರವಾದಿವರ್ಯರು(ಸ) ನಮ್ಮ ಜತೆ ಕುಳಿತು ಮಾತಾನಾಡುತ್ತಿ ತರುವಾಯ ಅಲ್ಲಿಂದ ಎದ್ದು ಮನೆಯ ಕಡೆಗೆ ಹೊರಟರು. ನಾನೂ ಜತೆಯಲ್ಲೇ ನಡೆದೆ. ದಾರಿಯಲ್ಲಿ ಓರ್ವ ಬದವಿ (ಗ್ರಾಮೀಣ ಅರಬ) ಎದುರಾ ಆತ ಪ್ರವಾದಿವರ್ಯರ(ಸ) ಚದ್ದರವನ್ನು ಒರಟಾಗಿ ಹಿಡಿದು ಎಳೆದನು. ಇದ ಪ್ರವಾದಿವರ್ಯರ(ಸ) ಕತ್ತಿನ ಸುತ್ತಲೂ ಕೆಂಪಾಯಿತು ಹಾಗೂ ಹತ್ತಿರದ ಗೊ ಅವರ ತಲೆ ಬಡಿಯುವುದರಲ್ಲಿತ್ತು. ಆದರೂ ಪ್ರವಾದಿವರ್ಯರು(ಸ) ಶ ಸ್ವರದಲ್ಲಿ ಹಳ್ಳಿಗನೊಡನೆ ಕೇಳಿದರು, "ನಿನ್ನ ಉದ್ದೇಶವೇನು? ಏನು ಬೇಕ ನಿನಗೆ?"

ಆಗ ಆತ ಹೇಳಿದ, "ನನ್ನ ಈ ಎರಡೂ ಒಂಟೆಗಳ ಮೇಲೆ ಆ ಧಾನ್ಯಗಳನ್ನು ಹೇರಿಸು. ಏಕೆಂದರೆ ನಿನ್ನ ಬಳಿಯಿರುವ ಸಂಪತ್ತು ನಿನ್ನದೋ ಅ ನಿನ್ನಪ್ಪನದೋ ಅಲ್ಲ. ಅದು ದೇವನ ಸಂಪತ್ತಾಗಿದೆ."

ಆಗ ಪ್ರವಾದಿವರ್ಯರು(ಸ) ಹೀಗೆ ಪ್ರತಿಕ್ರಿಯಿಸಿದರು, "ಹೌದು, ಹೇಳಿದ್ದು ಸರಿ. ಅದು ದೇವನ ಸೊತ್ತಾಗಿದೆ. ನನ್ನದೋ ನನ್ನ ತಂದೆಯದೋ ಆದರೆ ನೀನು ನನ್ನ ಚದ್ದರವನ್ನು ಹಿಡಿದೆಳೆದೆಯಲ್ಲ... ಅದರಿಂದ ನೋವಾಯಿತಲ್ಲ... ಅದರ ಪ್ರತೀಕಾರವನ್ನಂತೂ ನಾನು ಪಡೆದೇ ತೀರು ಏಕೆಂದರೆ ಈ ನೋವು ನನಗಾದುದಲ್ಲವೇ?"

ಆದರೆ ಆತ, "ನಾನು ಅದಕ್ಕೆ ಪ್ರತಿಯಾಗಿ ಯಾವುದೇ ಪರಿಹಾರ ನೀಡ ಎಂದನು.

ಈ ರೀತಿಯಾಗಿ ಪ್ರವಾದಿವರ್ಯರು(ಸ) ತಮ್ಮ ಮಾತನ್ನು ಪುನರಾವರ್ತಿಸು ಇದ್ದರು ಹಾಗೂ ಆ ಹಳ್ಳಿಗ ನಿರಾಕರಿಸುತ್ತಲೇ ಇದ್ದನು. ಅದರೆಡೆಯಲ್ಲಿ ಪ್ರವಾದಿವರ್ಯರು(ಸ) ಓರ್ವ ವ್ಯಕ್ತಿಯನ್ನು ಕರೆದು, ಆ ಹಳ್ಳಿಗನ ಒಂದು ಒಂ ಮೇಲೆ ಉತ್ತುತೆಯನ್ನು ಇನ್ನೊಂದರ ಮೇಲೆ ಜೋಳವನ್ನು ಹೇರಲು ತಿಳಿಸಿ ಹೀಗೆ ಆ ವ್ಯಕ್ತಿಯು ಎರಡೂ ಒಂಟೆಗಳ ಬೆನ್ನ ಮೇಲೆ ಧಾನ್ಯದ ಮೂಟೆಗ ಹೇರಿ ಹೊರಟನು.

❖ ❖ ❖ ❖

ಒಮ್ಮೆ ಮದೀನದಲ್ಲಿ ಓರ್ವ ಗ್ರಾಮೀಣ ಅರಬನು ಪ್ರವಾದಿವರ್ಯ

ಯಾಗಿ ಆಗಮಿಸಿದನು. ಪ್ರವಾದಿವರ್ಯರು(ಸ) ಅತಿಥಿಯನ್ನು ಸತ್ಕರಿಸಿದರು. ಕ್ತಿ ಹೊಟ್ಟೆ ಬಿರಿಯುವಷ್ಟು ಊಟ ಮಾಡಿದ. ರಾತ್ರಿಯ ವೇಳೆ ಅಜೀರ್ಣವಾಗಿ ಗಿದ ಚಾಪೆಯಲ್ಲಿಯೇ ಮಲ ವಿಸರ್ಜನೆ ಮಾಡಿದ್ದಲ್ಲದೆ, ಬೆಳಗಾತ ಸದ್ದಿಲ್ಲದೆ ಯಿಂದ ಹೊರಟು ಹೋದ. ಆದರೆ ಈ ಗಡಿಬಿಡಿಯಲ್ಲಿ ಆತ ತನ್ನ ಾಳುವ ಖಡ್ಗವನ್ನು ಮರೆತು ಹೋಗಿದ್ದ. ಅದನ್ನು ಪಡೆಯುವುದು ಅವನಿಗೆ ಾರ್ಯವಾಗಿತ್ತು. ತನ್ನ ಕೃತ್ಯಕ್ಕೆ ಆತಿಥೇಯ ಏನು ಹೇಳುವರೋ ಎಂದು ಕುತ್ತಾ ಪ್ರವಾದಿ ವರ್ಯರ(ಸ) ಮನೆಗೆ ಮರಳಿದಾಗ, ಅಲ್ಲಿ ನೋಡುವುದೇನು! ದಿವರ್ಯರು(ಸ) ಆ ಗಲೀಜು ಚದ್ದರ ಮತ್ತು ಚಾಪೆಯನ್ನು ಸ್ವತಃ ಒಗೆಯುತ್ತಿ . ಇದನ್ನು ಕಂಡು ಅತಿಥಿಯ ಮನ ಪರಿವರ್ತನೆಯಾಗಿ, ಅಲ್ಲಿಯೇ ಸತ್ಯವಚನ ಇಸ್ಲಾಮ್ ಸ್ವೀಕರಿಸಿದನು.

❖ ❖ ❖ ❖

ಅಬೂದರ್ ಗಿಫ್ಫಾರಿಯವರು ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ಒಮ್ಮೆ ದಿವರ್ಯರ(ಸ) ಮನೆಗೆ ಅತಿಥಿಯಾಗಿ ಬಂದಿದ್ದರು. ರಾತ್ರಿಯ ವೇಳೆ, ಯ ಎಲ್ಲ ಆಡುಗಳ ಹಾಲನ್ನೂ ಒಬ್ಬರೇ ಕುಡಿದುಬಿಟ್ಟರು. ಆದರೆ ಪ್ರವಾದಿ ರು(ಸ) ಒಂದು ಮಾತನ್ನೂ ಆಡಿರಲಿಲ್ಲ. ವಸ್ತುತಃ ಆ ರಾತ್ರಿಯಿಡೀ ಪ್ರವಾದಿ ರು(ಸ) ಮನೆಯ ಮಂದಿ ಹಸಿದಿರಬೇಕಾಗಿ ಬಂದಿತ್ತು.

❖ ❖ ❖ ❖

ಒಮ್ಮೆ ಓರ್ವ ಬಹುದೇವ ವಿಶ್ವಾಸಿಯು ಪ್ರವಾದಿವರ್ಯರ(ಸ) ಮನೆಗೆ ಯಾಗಿ ಆಗಮಿಸಿದ್ದರು. ಪ್ರವಾದಿವರ್ಯರು(ಸ) ಆ ವ್ಯಕ್ತಿಗೆ ಒಂದು ಆಡಿನ ನ್ನು ನೀಡಿದರು. ಅದನ್ನು ಆತ ಸಂಪೂರ್ಣವಾಗಿ ಕುಡಿದು ಬಿಟ್ಟನು. ನೆಯ ಆಡಿನ ಹಾಲನ್ನು ನೀಡಿದರು. ಅದನ್ನೂ ಆತ ಕುಡಿದನು. ಹೀಗೆ ಏಳು ಗಳ ಹಾಲನ್ನು ಒಬ್ಬನೇ ಕುಡಿದು ಬಿಟ್ಟನು. ಬೆಳಿಗ್ಗೆ ಎದ್ದ ಬಳಿಕ ಆ ವ್ಯಕ್ತಿ ಮ್ ಸ್ವೀಕರಿಸಿದನು. ಪ್ರವಾದಿವರ್ಯರು(ಸ) ಆತನಿಗೆ ಆಡಿನ ಹಾಲನ್ನು ರು. ಆದರೆ ಈ ಬಾರಿ ಆ ವ್ಯಕ್ತಿಯ ಹೊಟ್ಟೆ ತುಂಬಲು ಒಂದೇ ಲೋಟ) ಸಾಕಾಯಿತು.

ತರುವಾಯ ಪ್ರವಾದಿವರ್ಯರು(ಸ) ಮುಗುಳ್ನಗುತ್ತಾ ಹೇಳಿದರು, "ಸತ್ಯ ಸಿಯು ಏಳು ಹೊಟ್ಟೆಗಳಿಗೆ ಉಣ್ಣುತ್ತಾನೆ. ಆದರೆ ಸತ್ಯವಿಶ್ವಾಸಿಯು ಒಂದೇ ಗೆ ತಿನ್ನುತ್ತಾನೆ." ❑

ವಿದ್ರೋಹಿಯ ಮನ ಪರಿವರ್ತನೆ

ಯಮಾಮದ ಬನೂ ಹನೀಫಾ ಗೋತ್ರ- ಪ್ರವಾದಿವರ್ಯರನ್ನು(ಸ) ಅ: ವಿರೋಧಿಸಿದ ಗೋತ್ರವಾಗಿತ್ತು. ಈ ಗೋತ್ರದವನೇ ಆದ ಮುಸೈಲಿಮ ಎಂಬ ಇತಿಹಾಸದ ಪುಟಗಳಲ್ಲಿ ಸುಳ್ಳುಗಾರ (ಕದ್ದಾಬ್) ಎಂದೇ ಕುಖ್ಯಾತಿ ಪಡೆದಿ: ಏಕೆಂದರೆ ಈತ, ತಾನು ಪ್ರವಾದಿ ಎಂದು ವಾದಿಸಿದ್ದೂ ಅಲ್ಲದೆ, ತನ್ನ ಪರ ಗಣನೀಯ ಜನಸಂಖ್ಯೆಯನ್ನೂ ಒಟ್ಟುಗೂಡಿಸಿದ್ದನು. ಸುಮಾಮ ಬಿನ್ ಆ: ಎಂಬವರು ಪ್ರಸ್ತುತ ಗೋತ್ರದ ಓರ್ವ ಸರದಾರರಾಗಿದ್ದರು. ಇಸ್ಲಾಮೀ ಆಡ ವಿರುದ್ಧ ವಿದ್ರೋಹ ಎಸಗಿದವರಲ್ಲಿ ಮುಂಚೂಣಿಯಲ್ಲಿದ್ದ ಅವರು, ಆಕಸ್ಮಿಕವಾಗಿ ಮುಸ್ಲಿಮರಿಗೆ ಸೆರೆಸಿಕ್ಕರು. ಅವರನ್ನು ಬಂಧಿಸಿ ಮದೀನಕ್ಕೆ ತರಲಾಂ

ಬಂಧಿಯನ್ನು ಮಸೀದಿಯ ಕಂಬಕ್ಕೆ ಕಟ್ಟಿ ಹಾಕಲು ಪ್ರವಾದಿವರ್ಯರ ಆದೇಶಿಸಿದರು. ತರುವಾಯ ಅವರು(ಸ) ಮಸೀದಿಗೆ ಆಗಮಿಸಿ, ಸುಮಾಮ ವಿಚಾರಿಸತೊಡಗಿದರು. ಮಾತಿನ ಮಧ್ಯೆ ಸುಮಾಮ ಹೇಳಿದರು, "ಓ ಮುಹವ ನೀವು ನನ್ನನ್ನು ವಧಿಸಿದರೆ, ಒಬ್ಬ ಕೊಲೆಗಾರನನ್ನು ವಧಿಸಿದಂತಾಗುವುದು. ಮೇಲೆ ಔದಾರ್ಯ ತೋರಿದರೆ, ಓರ್ವ ಕೃತಜ್ಞನ ಮೇಲೆ ಕೃಪೆ ತೋರಿದಂತಾಗು: ನನ್ನನ್ನು ದಂಡ ಪಡೆದು ಬಿಡುಗಡೆ ಮಾಡುವುದಾದರೆ, ಅದನ್ನು ಕೊಡಲೂ : ಸಿದ್ಧ."

ಈ ಮಾತು ಕೇಳಿ ಪ್ರವಾದಿವರ್ಯರು(ಸ) ಮೌನ ವಹಿಸಿದರು. ಎರಡ ದಿನವೂ ಇದೇ ರೀತಿಯ ಮಾತುಕತೆ ನಡೆಯಿತು. ಮೂರನೆಯ ದಿನವೂ ಸುವ ರಿಂದ ಅದೇ ಉತ್ತರ ಬಂದಾಗ, ಅವರನ್ನು ಬಿಡುಗಡೆಗೊಳಿಸುವಂತೆ ಆದೇಶಿಸಿ

ಈ ಅನಿರೀಕ್ಷಿತ ಔದಾರ್ಯದಿಂದ ಸುಮಾಮ ಬಹಳ ಪ್ರಭಾವಿತರಾ ಅವರು ಅಲ್ಲಿಂದ ಹೋದವರೇ ಮರವೊಂದರ ಮರೆಯಲ್ಲಿ ಸ್ನಾನ ಮಾಡಿ ತರುವಾಯ ಮಸ್ಜಿದುನ್ನಬವಿಗೆ ಮರಳಿ ಪ್ರವಾದಿವರ್ಯರ(ಸ) ಮುಂದೆ ಹಾ: ಸತ್ಯವಚನ ಪಠಿಸಿ ಇಸ್ಲಾಮ್ ಸ್ವೀಕರಿಸಿದರು. ಅದಾದ ಬಳಿಕ ಹೀಗೆಂದರು, "ಅಲ ಸಂದೇಶವಾಹಕರೇ! ಸ್ವಲ್ಪ ಮುಂಚಿನ ವರೆಗೆ ನನ್ನ ದೃಷ್ಟಿಯಲ್ಲಿ ನಿಮಗಿಂತ ಅ ವ್ಯಕ್ತಿ ಈ ಜಗತ್ತಿನಲ್ಲಿ ಬೇರಾರೂ ಇರಲಿಲ್ಲ. ಆದರೆ ಈಗ ನನಗೆ ನಿಮ್ಮಷ್ಟು ವ್ಯಕ್ತಿ ಈ ಜಗತ್ತಿನಲ್ಲಿ ಬೇರೆ ಯಾರೂ ಇಲ್ಲ. ಈ ಮುಂಚೆ, ನನ್ನ ದೃಷ್ಟಿಯಲ್ಲಿ ಧರ್ಮಕ್ಕಿಂತ ಕೆಟ್ಟ ಧರ್ಮ ಬೇರೆ ಯಾವುದೂ ಇದ್ದಿರಲಿಲ್ಲ. ಆದರೆ ಈಗ ನನ್ನ ಪಾಲಿಗೆ ಉತ್ತಮ ಮತ್ತು ಪ್ರೀತಿಯ ಧರ್ಮವಾಗಿದೆ. ನಾನು ಉಮ್ರಾ ನಿವ ಲೆಂದು ತೆರಳಿದ್ದೆ. ಆಗ ತಮ್ಮ ಸವಾರರು ನನ್ನನ್ನು ಬಂಧಿಸಿದರು. ಈಗ

ೀಶವೇನು?"

ಪ್ರವಾದಿವರ್ಯರು(ಸ)ಅವರಿಗೆ ಉಮ್ರಾ ಮಾಡಲು ಹೇಳಿದರು. ಈ ಪ್ರಕಾರ ಮಾಮ(ರ) ಉಮ್ರಾ ನಿರ್ವಹಿಸಲು ಮಕ್ಕಾ ನಗರಕ್ಕೆ ತೆರಳಿದರು. ಅವರು ಸ್ಲಿಮರಾದ ಬಗ್ಗೆ ತಿಳಿದ ಮಕ್ಕಾದವರ ಪೈಕಿ ಓರ್ವರು ಕೇಳಿದರು, "ನೀವು ರ್ಮವನ್ನು ತೊರೆದಿರಾ?" ಆಗ ಸುಮಾಮ ಹೀಗೆ ಉತ್ತರಿಸಿದರು, "ಇಲ್ಲ! ಬದ ಿ ನಾನು ಪ್ರಕೃತಿ ಧರ್ಮವನ್ನು ಸ್ವೀಕರಿಸಿ ಮುಸ್ಲಿಮನಾಗಿದ್ದೇನೆ. ನೆನಪಿಡಿ, ಇನ್ನು ಂದೆ ಪ್ರವಾದಿವರ್ಯರ(ಸ) ಆದೇಶವಿಲ್ಲದೆ ಧಾನ್ಯದ ಒಂದು ಕಾಳೂ ಕೂಡ ಮಾಮದಿಂದ ಮಕ್ಕಾ ನಗರಕ್ಕೆ ತಲುಪಲಾರದು."

ಹೀಗೆ, ಸುಮಾಮ(ರ) ಉಮ್ರಾ ನಿರ್ವಹಿಸಿಯಾದ ಬಳಿಕ ಯಮಾಮಕ್ಕೆ ರಟರು. ಅಲ್ಲಿಗೆ ತಲುಪುತ್ತಲೇ ಮಕ್ಕಾಗೆ ಕಳುಹಿಸಲಾಗುತ್ತಿದ್ದ ಗೋಧಿಯ ಬರಾಜನ್ನು ತಡೆಹಿಡಿದರು. ಮಕ್ಕಾದವರು ಆಹಾರಕ್ಕಾಗಿ ಯಮಾಮದ ಧಾನ್ಯಗಳನ್ನೇ ಪೂರ್ಣವಾಗಿ ಅವಲಂಬಿಸಿದ್ದರು. ಈಗ ಅದರ ಸರಬರಾಜು ನಿಂತು ಬಿಟ್ಟಾಗ ಾಲಾದರು. ಮಕ್ಕಾ ನಿವಾಸಿಗಳು ಪ್ರವಾದಿವರ್ಯರಿಗೆ(ಸ) ಪತ್ರ ಬರೆದು, "ನೀವು ಯೆಯನ್ನು ಬೋಧಿಸುತ್ತೀರಿ. ಆದರೆ ವ್ಯಾವಹಾರಿಕವಾಗಿ ಅದಕ್ಕೆ ವಿರುದ್ಧವಾಗಿದ್ದೀರಿ. ವು ನಮ್ಮ ಹಿರಿಯರನ್ನು ಖಡ್ಗದಿಂದಲೂ ಮಕ್ಕಳನ್ನು ಹಸಿವಿನಿಂದಲೂ ಕೊಲ್ಲು ." ಎಂದು ತಮ್ಮ ಆಕ್ಷೇಪ ವ್ಯಕ್ತಪಡಿಸಿದರು. ಆಗ ಪ್ರವಾದಿವರ್ಯರು(ಸ) ಮಕ್ಕಾ ರಿಗೆ ಆಹಾರ ಧಾನ್ಯ ಕಳುಹಿಸುವಂತೆ ಆದೇಶಿಸಿದರು. ಆ ಹೊತ್ತಿಗೆ ಮಕ್ಕಾದವರು ಂತರ ಹತ್ತು ವರ್ಷಗಳ ಕಾಲ ತಮಗೆ ಪೀಡನೆ, ಹಿಂಸೆ, ನೀಡಿದ್ದರೆಂಬ ಯವನ್ನು ಅವರು ಗಣನೆಗೆ ತೆಗೆದುಕೊಳ್ಳಲಿಲ್ಲ. ಏಕೆಂದರೆ ಅವರು ಲೋಕಾನುಗ್ರಹಿ(ಸ) ದ್ದಾರಲ್ಲವೇ?

❖ ❖ ❖ ❖

ಮುಸೈಲಿಮ ತನ್ನ ಕಪಟ ಪ್ರವಾದಿತ್ವವನ್ನು ಘೋಷಿಸಿದಾಗ ಯಮನ್‌ನ ಸಿಗಳು ಆತನ ಮೋಸದ ಜಾಲದಲ್ಲಿ ಬಿದ್ದುಬಿಟ್ಟರು ಮತ್ತು ಮುಸೈಲಿಮ ಇಡೀ ಮನನ್ನು ವಶಪಡಿಸಿಕೊಂಡನು. ಅದರೊಂದಿಗೆ ಯಮಾಮದ ಜನರು ಆತನ ೀಸಕ್ಕೆ ಬಲಿಬಿದ್ದರು. ಸುಮಾಮ(ರ) ತಮ್ಮ ನಾಡಿನವರನ್ನು ಧರ್ಮಭ್ರಷ್ಟತೆಯಿಂದ ಸಲು ಸಾಧ್ಯಂತ ಶ್ರಮಿಸಿದರು. ಆದರೆ ಮುಸೈಲಿಮನ ಪ್ರಭಾವದಿಂದಾಗಿ ಯಾರೂ ಮಾಮರ ಮಾತನ್ನು ಆಲಿಸಲು ಸಿದ್ಧರಾಗಲಿಲ್ಲ. ಹೀಗೆ ತಮ್ಮ ಜನರಿಂದ ಶರಾದ ಸುಮಾಮ(ರ) ಊರು ತೊರೆಯುವ ಪ್ರಯತ್ನದಲ್ಲಿದ್ದರು. ಅಷ್ಟರಲ್ಲಿ ಮ ಖಲೀಫ ಅಬೂಬಕರ್(ರ)ರವರು ಧರ್ಮಭ್ರಷ್ಟರನ್ನು ದಮನಿಸಲಿಕ್ಕಾಗಿ

ಅಲಾ ಬಿನ್ ಹಕ್‌ಲಿಯವರ ನೇತೃತ್ವದಲ್ಲಿ ಸೇನೆಯನ್ನು ಕಳುಹಿಸಿದರು. ಸುಮಾಮ ಅವರೊಡನೆ ಸೇರಿಕೊಂಡರು. ಈ ಕ್ಷೋಬೆಯು ಅಡಗಿದ ಬಳಿಕ ಒಂದು (ಸುಮಾಮ(ರ) ಬನೂ ಕೈಸ್ ಗೋತ್ರದ ಧರ್ಮಭ್ರಷ್ಟ ಸರದಾರ ಹತೀವ ನಿಲುವಂಗಿಯನ್ನು, ಅವನನ್ನು ವಧಿಸಿದ ವ್ಯಕ್ತಿಯಿಂದ ಖರೀದಿಸಿದ್ದರು. ಬ ಕೈಸ್‌ನ ಜನರು ಸುಮಾಮ(ರ), ಹತೀಮ್‌ನ ನಿಲುವಂಗಿ ಧರಿಸಿರುವುದನ್ನು ಕಂ ಅವರೇ ಹತೀಮ್‌ನ ಕೊಲೆಗಾರ ಎಂದು ಭಾವಿಸಿ ಅವರನ್ನು ವಧಿಸಿಬಿಟ್ಟರ

ಲೇವಡಿಗೀತೆ ಪ್ರಶಂಸೆಗೆ ತಿರುಗಿತು

ಝುಬ್‌ಅರಿಯ ಪುತ್ರ ಅಬ್ದುಲ್ಲಾ ಇಸ್ಲಾಮ್ ಸ್ವೀಕರಿಸುವುದಕ್ಕೆ ಮುಂಚೆ ಪ್ರವ ವರ್ಯರ(ಸ) ಮತ್ತು ಮುಸ್ಲಿಮರ ಕಡುವೈರಿಯಾಗಿದ್ದರು. ಅವರ ಸಂಪ ಸಾಮರ್ಥ್ಯ ಮತ್ತು ಕವಿತೆ ಎಲ್ಲವೂ ಮುಸ್ಲಿಮರ ಅವಹೇಳನಕ್ಕಾಗಿ ಬಳಸಲ್ಪಡುತ್ತಿದ್ದ ಪವಿತ್ರ ಕುರ್‌ಆನಿನ ವಚನಗಳು ಹೆಚ್ಚಾಗಿ ಅವರ ಆಕ್ಷೇಪ, ಮೂದಲಿಕೆಗಳಿಗೆ ಯಾಗುತ್ತಿದ್ದವು. ಕುರೈಶರು ಅವರನ್ನು ಬೆಂಕಿಯುಗುಳುವ ಕವಿಯೆಂದೇ ಕರೆಯುತ್ತಿದ್ದ ಅವರ ಕವನಗಳಲ್ಲಿ ಅಧಿಕಾಂಶವು ಪ್ರವಾದಿವರ್ಯರನ್ನೇ ಗೇಲಿ ಮಾಡುವಂತ ದಾಗಿದ್ದುವು. ಉಹುದ್ ಯುದ್ಧದಲ್ಲಿ ಹತರಾದ ಕುರೈಶರ ಕುರಿತು ಒಂ ಸುದೀರ್ಘ ಶೋಕಗೀತೆಯನ್ನು ಅವರು ರಚಿಸಿದ್ದರು. ಅದಕ್ಕೆ ಹಸ್ಸಾನ್ ಬಿನ್ ಸಾಬ ರವರು ತಮ್ಮ ಕವನದಲ್ಲಿ ಉತ್ತರ ನೀಡಿದ್ದರು.

ಮಕ್ಕಾ ವಿಜಯದ ಬಳಿಕ ಅಬ್ದುಲ್ಲಾ ಬಿನ್ ಝುಬ್‌ಅರಿ, ಹುಬೈರ್ ವಹಬ್ ಮತ್ತಿತರ ಬಹುದೇವ ವಿಶ್ವಾಸಿಗಳು ನಜ್ರಾನ್‌ಗೆ ಹೊರಟರು. ಅಬ್ದುಲ್ಲಾರ ಹಸ್ಸಾನ್ ಬಿನ್ ಸಾಬಿತ್‌ರ ಮೇಲೆ ಹಲವು ಬಾರಿ ಟೀಕಾ ಪ್ರಹಾರ ಮಾಡಿದ್ದ ಈಗ ಅವರು ನಜ್ರಾನ್‌ಗೆ ಓಡಿ ಹೋದ ವಿಷಯ ತಿಳಿದ ಹಸ್ಸಾನ್‌ರಿಗೆ ಒಳ್ಳೆ ಅವಕಾಶ ಒದಗಿದಂತಾಯಿತು. ಹಾಗಾಗಿ ಅವರು ಈ ಅರ್ಥ ಬರುವ ಪದ್ಯ ಹಾಡಿದರು, "ಯಾರ ವೈರವು ನಿಮ್ಮನ್ನು ನಜ್ರಾನ್‌ನ ಅರೋಚಕ ಜೀವ ತಲುಪಿಸಿತೋ ಆ ವ್ಯಕ್ತಿ ಎಂದಿಗೂ ನಾಶವಾಗದಿರಲಿ."

ಅಬ್ದುಲ್ಲಾರಿಗೆ ಈ ಕವನದ ಕುರಿತು ಅರಿವಾದಾಗ ಅವರು ನಜ್ರಾನ್‌ನಿ ಮರಳಿದವರೇ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದರು. ಅವರ ಕು ಯಾವುದೇ ತನಿಖೆ ನಡೆಸಲಾಗಲಿಲ್ಲ. ಅಬ್ದುಲ್ಲಾರನ್ನು ಇದು ಆಶ್ಚರ್ಯಕ್ಕೆ ಈ ಮಾಡಿತು. ಅವರು ತಕ್ಷಣವೇ ಗತ ದಿನಗಳ ಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು ಸತ್ಯವ ಪಠಿಸಿ ಮುಸ್ಲಿಮರಾದರು. ಬಳಿಕ ಅವರು ಪ್ರವಾದಿವರ್ಯರಲ್ಲಿ ಕ್ಷಮೆ ಕೋರಿದ ಪ್ರವಾದಿವರ್ಯರು(ಸ) ತಡಮಾಡದೆ ಅವರನ್ನು ಕ್ಷಮಿಸಿದರು. ತರುವಾಯ, ಪ್ರವ ವರ್ಯರ(ಸ) ವಿರುದ್ಧ ಲೇವಡಿ ಗೀತೆ ಹಾಡುತ್ತಿದ್ದ ಆ ನಾಲಗೆಯು ಪ್ರಶಂ

ಯನ್ನು ಹಾಡತೊಡಗಿತು. ಮುಸ್ಲಿಮರಾದ ಬಳಿಕ ಅವರು ಹಲವು ಯುದ್ಧ ಲ್ಲಿಯೂ ಭಾಗವಹಿಸಿದ್ದರು.

ರೇಕವೆಸಗಿದವರ ಪಶ್ಚಾತ್ತಾಪ

ಪ್ರವಾದಿವರ್ಯರ(ಸ) ಪುತ್ರಿ ಝೈನಬ್‌ರ ಮೇಲೆ ದೌರ್ಜನ್ಯವೆಸಗಿದ ವ್ಯಕ್ತಿಯಾಗಿ ಹುಬ್ಬಾರ್ ಬಿನ್ ಅಸ್ವದ್. ಝೈನಬ್(ರ) ಮಕ್ಕಾದಿಂದ ಮದೀನಕ್ಕೆ ವಲಸೆ ಗುವಾಗ ತುಂಬು ಗರ್ಭಿಣಿಯಾಗಿದ್ದರು. ಮಕ್ಕಾದ ಬಹುದೇವ ವಿಶ್ವಾಸಿಗಳು ೈನಬ್(ರ) ವಲಸೆ ಹೋಗುವುದನ್ನು ವಿರೋಧಿಸಿದರು. ಹುಬ್ಬಾರ್ ಸ್ವಲ್ಪ ಟಾಗಿಯೇ ವರ್ತಿಸುತ್ತಾ, ಝೈನಬ್‌ರನ್ನು ಹಿಡಿದೆಳೆದು ಒಂಟೆಯಿಂದ ಕೆಳಗೆ ಸಿದರು. ಇದರಿಂದಾಗಿ ಝೈನಬ್(ರ) ಗಂಭೀರವಾಗಿ ಗಾಯಗೊಂಡರು ೂ ಅವರ ಗರ್ಭಪಾತವಾಯಿತು.

ಅದಲ್ಲದೆ ಹುಬ್ಬಾರ್ ಇನ್ನೂ ಅನೇಕ ಅತಿರೇಕಗಳಲ್ಲಿ ಭಾಗಿಯಾಗಿದ್ದರು. ಈ ಕಾರಣಗಳಿಂದಾಗಿ, ಮಕ್ಕಾ ವಿಜಯದ ಬಳಿಕ ವಧೆಗೆ ಆದೇಶಿಸಲ್ಪಟ್ಟ ಮಂದಿಯ ಹುಬ್ಬಾರ್‌ರ ಹೆಸರೂ ಇತ್ತು. ಆದ್ದರಿಂದ ಅವರು ಮಕ್ಕಾದಿಂದ ಇರಾನ್‌ನಿಗೆ ಯನ ಮಾಡಬಯಸಿದರು. ಆದರೆ ಅವರು ಪ್ರವಾದಿವರ್ಯರ(ಸ) ಸಚ್ಚಾರಿತ್ರ್ಯದ ್ತ ಕ್ಷಮಾಗುಣದ ಬಗ್ಗೆಯೂ ತಿಳಿದುಕೊಂಡಿದ್ದರು. ಹಾಗಾಗಿ ಅವರು ಮರಳಿ ದಿವರ್ಯರ(ಸ) ಸನ್ನಿಧಿಗೆ ಹಾಜರಾಗಿ ಹೀಗೆ ನಿವೇದಿಸಿಕೊಂಡರು, "ಅಲ್ಲಾಹನ ೇಶವಾಹಕರೇ! ನಾನು ಇರಾನಿಗೆ ಓಡಿಹೋಗಬಯಸಿದ್ದೆ. ಅದೇ ವೇಳೆ, ನನಗೆ ದಯಾಗುಣದ ನೆನಪಾಗಿ ಮರಳಿ ಬಂದೆ. ನನ್ನಿಂದ ತಮಗೆ ಅಪಾರ ದುಃಖ- ಯುಂಟಾಗಿದೆ ನಿಜ. ನಾನು ನನ್ನ ಅಜ್ಞಾನ ಮತ್ತು ಪ್ರಮಾದವನ್ನು ಒಪ್ಪಿಕೊಳ್ಳುತ್ತೇನೆ. ಮುಸ್ಲಿಮನಾಗಲು ಮರಳಿ ಬಂದಿರುವೆನು."

ಪ್ರವಾದಿವರ್ಯರು(ಸ) ತಡಮಾಡದೆ ಅವರನ್ನು ಕ್ಷಮಿಸಿದರು. ಪ್ರವಾದಿವರ್ಯ ದರೋ ಮಿತ್ರ, ಶತ್ರುವೆಂಬ ಭೇದ ಇರಲಿಲ್ಲವಷ್ಟೇ.

ಷೆ, ಕ್ಷಮೆಗೆ ಮಿತಿಯಿಲ್ಲ

ಅಬ್ದುಲ್ಲಾ ಬಿನ್ ಸಅದ್‌ರು ಮಕ್ಕಾ ವಿಜಯಕ್ಕೆ ಮುಂಚೆ ಇಸ್ಲಾಮ್ ರಿಸಿರುವುದಾಗಿ ಘೋಷಿಸಿದ್ದರು. ಆದರೆ ಅವರು ಅವತೀರ್ಣಗೊಳ್ಳುತ್ತಿದ್ದ ಪವಿತ್ರ ಆನ್ ವಚನಗಳನ್ನು ತಿರುಚಿ ಬರೆಯುತ್ತಿದ್ದರು. ಇಂತಹ ಅಪರಾಧ ಕೃತ್ಯ ಾಗಿಯೇ ಮಕ್ಕಾ ವಿಜಯದ ಬಳಿಕ ವಧಾ ಶಿಕ್ಷೆಗೆ ಅರ್ಹರಾದವರ ದಿಯಲ್ಲಿ ಅವರ ಹೆಸರೂ ಇತ್ತು. ವಿಷಯ ತಿಳಿದಾಗ ಅಬ್ದುಲ್ಲಾರು ಉಸ್ಮಾನ್ ರಲ್ಲಿ ಅಭಯ ಯಾಚಿಸಿದರು. ಹೀಗೆ ಉಸ್ಮಾನ್‌ರವರು(ರ) ಅಬ್ದುಲ್ಲಾರನ್ನು

ಪ್ರವಾದಿವರ್ಯರ(ಸ) ಬಳಿಗೆ ಕರೆದುಕೊಂಡು ಹೋದರು. ತರುವಾಯ ತನ್ನ ಮಿತ್ರನನ್ನು ಕ್ಷಮಿಸಬೇಕೆಂದು ಅವರು ಪ್ರವಾದಿವರ್ಯರಲ್ಲಿ(ಸ) ವಿನಂತಿಸಿದರು. ಅ ದಿನ ಪ್ರವಾದಿವರ್ಯರು(ಸ) ಏನೂ ಅನ್ನಲಿಲ್ಲ. ಮರುದಿನ ಅವರು(ಸ) ಅಬ್ದುಲ್ಲರಿಗೆ ಕ್ಷಮಾದಾನ ನೀಡಿರುವುದಾಗಿ ಘೋಷಿಸಿದರು. ಅಬ್ದುಲ್ಲಾ(ರ), ಉಸ್ಮಾನ್‌ರ(ರ) ಆಡಳಿತ ಕಾಲದ ವರೆಗೆ ಬದುಕಿದ್ದರು. ಆ ವೇಳೆಗೆ ಅವರು ಈಜಿಪ್ಟಿನ ಆಡಳಿತಾಧಿಕಾರಿಯಾಗಿಯೂ ನೇಮಕಗೊಂಡಿದ್ದರು.

❖ ❖ ❖ ❖

ಹುದೈಬಿಯಾ ಸಂಧಿಯ ವೇಳೆ ಹ. ಅಸ್ಮಾರ(ರ) ತಾಯಿ ಬಹುದೇವ ವಿಶ್ವಾಸಿನಿಯಾಗಿದ್ದರು. ಅಸ್ಮಾ(ರ) ಮದೀನಕ್ಕೆ ಬಂದು ಪ್ರವಾದಿವರ್ಯರೊಡನೆ, "ಬಹುದೇವ ವಿಶ್ವಾಸಿ ತಾಯಿಯ ಜತೆ ಹೇಗೆ ವ್ಯವಹರಿಸಬೇಕು?" ಎಂದು ಪ್ರಶ್ನಿಸಿದರು. ಆಗ ಪ್ರವಾದಿವರ್ಯರು(ಸ), "ಅವರೊಡನೆ ಉತ್ತಮವಾಗಿ ವರ್ತಿಸಿರಿ" ಎಂದರು.

ಅಬೂಹುರ್ರೈರಾರವರ(ರ) ತಾಯಿ ಬಹುದೇವ ವಿಶ್ವಾಸಿನಿಯಾಗಿದ್ದರು. ಅವರು ತಮ್ಮ ತಾಯಿಗೆ ಸಾಕಷ್ಟು ಹಿತವಚನ ನೀಡಿದ್ದರು. ಆದರೆ ಅವರ ತಾಯಿ ನಿರಾಕರಿಸುತ್ತಲೇ ಇದ್ದರು. ಒಂದೊಮ್ಮೆ ಅಬೂಹುರ್ರೈರಾ(ರ) ತಮ್ಮ ತಾಯಿಗೆ ಯಥಾ ಪ್ರಕಾರ ಉಪದೇಶ ನೀಡಿದಾಗ ತಾಯಿಯವರ ಬಾಯಿಯಿಂದ ಪ್ರವಾದಿವರ್ಯರ(ಸ) ಕುರಿತು ಅನುಚಿತ ಮಾತು ಹೊರಟಿತು. ಇದರಿಂದ ನೊಂದುಕೊಂಡ ಅಬೂಹುರ್ರೈರಾ ಪ್ರವಾದಿವರ್ಯರ(ಸ) ಬಳಿಗೆ ಬಂದು, ನಡೆದ ವಿಷಯವನ್ನು ಅರುಹಿದರು. ಆಗ ಪ್ರವಾದಿವರ್ಯರು(ಸ) ಅಲ್ಲಾಹನಲ್ಲಿ ಹೀಗೆ ಪ್ರಾರ್ಥಿಸಿದರು, "ಓ ನನ್ನ ಪ್ರಭೂ ಅಬೂ ಹುರ್ರೈರಾರ ಮಾತೆಗೆ ಸನ್ಮಾರ್ಗವನ್ನು ದಯಪಾಲಿಸು."

ಇದನ್ನು ಕೇಳಿ ಅಬೂಹುರ್ರೈರಾ(ರ) ಸಂತೋಷದಿಂದ ಮನೆಯ ಕಡೆಗೆ ಧಾವಿಸಿದರು. ಮನೆಯ ಒಳಗಿನಿಂದ ಚಿಲಕ ಹಾಕಲಾಗಿತ್ತು. ಅವರ ತಾಯಿ ಸ್ನಾನ ಮಾಡುತ್ತಿದ್ದರು. ತರುವಾಯ ಅವರು ಸತ್ಯವಚನ ಪಠಿಸಿ ಮುಸ್ಲಿಮರಾದರು.

❖ ❖ ❖ ❖

ಮಕ್ಕಾ ವಿಜಯವಾದ ಬಳಿಕ ಇಸ್ಲಾಮಿನ ಶತ್ರುಗಳು ಚದುರಿ ಹೋದರು. ತರುವಾಯ ಪ್ರವಾದಿವರ್ಯರಿಗೆ(ಸ) ಚಿಕ್ಕಪ್ಪನ ಮಗ ಉತ್ಬಾರ ನೆನಪಾಯಿತು. ಅವರು(ಸ) ಅಬ್ಬಾಸ್‌ರನ್ನು ಕರೆದು, "ನಿಮ್ಮ ಇಬ್ಬರು ಸೋದರ ಪುತ್ರರಾದ ಉತ್ಬಾ ಮತ್ತುಮುಈತ್ ಕಾಣಿಸುತ್ತಿಲ್ಲವಲ್ಲ?" ಎಂದು ವಿಚಾರಿಸಿದರು. ಆಗ ಅಬ್ಬಾಸ್(ರ) ಹೇಳಿದರು, "ಬಹುದೇವ ವಿಶ್ವಾಸಿಗಳೊಂದಿಗೆ ಅವರೂ ಮಕ್ಕಾ ತೊರೆದು ಬೇರೆಲ್ಲಿಗೋ

ೀಟು ಹೋಗಿದ್ದಾರೆ."

ತರುವಾಯ ಪ್ರವಾದಿವರ್ಯರು(ಸ) ಅವರಿಬ್ಬರನ್ನೂ ಹುಡುಕಿ ತರಲು ದರು. ಅಬ್ಬಾಸ್(ರ) ಅವರಿಬ್ಬರನ್ನೂ ಹುಡುಕಿ ಪ್ರವಾದಿವರ್ಯರ(ಸ) ಬಳಿಗೆ ಂದರು. ಪ್ರವಾದಿವರ್ಯರು(ಸ) ಅವರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟರು. ಬ್ಬರೂ ಸ್ವೀಕರಿಸಿದಾಗ ಅವರ ಕೈ ಹಿಡಿದು ಕಅಬದ ಬಾಗಿಲು ಮತ್ತು ುಲ್ ಅಸ್ವದ್‌ನ ಮಧ್ಯೆ ತಂದು ನಿಲ್ಲಿಸಿದರು. ತರುವಾಯ ಅವರಿಗಾಗಿ ್ಥಿಸಿದರು. ಅಲ್ಲಿಂದ ಮರಳುವಾಗ ಪ್ರವಾದಿವರ್ಯರ(ಸ) ಮುಖಾರವಿಂದವು ೋಷದಿಂದ ಹೊಳೆಯುತ್ತಿತ್ತು.

ಅದನ್ನು ಕಂಡು ಅಬ್ಬಾಸ್(ರ) ಹೇಳಿದರು, "ನಾನು ನಿಮ್ಮನ್ನು ಬಹಳ ಆನಂದ ಂ ಇರುವುದಾಗಿ ಕಾಣುತ್ತಿದ್ದೇನೆ. ಅಲ್ಲಾಹನು ನಿಮ್ಮನ್ನು ನಿತ್ಯವೂ ಹೀಗೆಯೇ ೋಷದಿಂದ ಹೊಳೆಯಸಲಿ." ಪ್ರವಾದಿವರ್ಯರು(ಸ) ಮುಗುಳ್ನಗುತ್ತಾ ಹೇಳಿದರು, ು ಅಲ್ಲಾಹನಲ್ಲಿ ನನ್ನ ಇಬ್ಬರು ಸೋದರರನ್ನು ಕೇಳಿದೆ. ಅವನು ಇಬ್ಬರನ್ನೂ ಮರಳಿ ನೀಡಿದನು. ಅದಕ್ಕಾಗಿಯೇ ಸಂತೋಷಪಡುತ್ತಿದ್ದೇನೆ."

ಮುಸ್ಲಿಮರಾದ ಬಳಿಕ ಉತ್ಬಾ(ರ) ಹೆಚ್ಚಿನ ವೇಳೆ ಮಕ್ಕಾದಲ್ಲಿಯೇ ಕಳೆಯುತ್ತಿದ್ದರು. ರೆ ಹಲವು ಯುದ್ಧಗಳಲ್ಲಿಯೂ ಅವರು ಭಾಗವಹಿಸಿದರು. ಹುನೈನ್ ಯುದ್ಧದಲ್ಲಿ ದಿವರ್ಯರೊಂದಿಗೆ ಭಾಗವಹಿಸಿದ್ದರು. ಯುದ್ಧದಲ್ಲಿ ಹೆಚ್ಚಿನ ಮುಸ್ಲಿಮರಲ್ಲಿ ಚರಿತ ಕಂಡಾಗಲೂ ಉತ್ಬಾರಲ್ಲಿ ಯಾವುದೇ ರೀತಿಯ ಅಸ್ಥಿರತೆ ಗೋಚರಿಸಿರಲಿಲ್ಲ. ು ದಿಟ್ಟತನದಿಂದ ಹೋರಾಡಿದರು. ಹುನೈನ್ ಯುದ್ಧದ ಬಳಿಕ ತಾಯಿಫ್ ದ್ಧದಲ್ಲಿಯೂ ಅವರು ಭಾಗವಹಿಸಿದರು. ❑

ಯಹೂದಿ ಕ್ರೈಸ್ತರೊಂದಿಗಿನ ಸಂಬಂಧ

ಕುರೈಶ್ ಬಹುದೇವ ವಿಶ್ವಾಸಿಗಳ ಬಳಿಕ, ಪ್ರವಾದಿವರ್ಯರ(ಸ) ಮೇಲೆ ಧಿಕ ದ್ವೇಷ ಹೊಂದಿದ್ದವರು ಯಹೂದಿಗಳು ಮತ್ತು ಕ್ರೈಸ್ತರು. ಪ್ರತಿ ಕ್ಷಣವೂ ು ಪ್ರವಾದಿವರ್ಯರನ್ನು(ಸ) ಅವಮಾನಿಸುವುದಕ್ಕಾಗಿ ಸಂಚು ಹೂಡುತ್ತಿದ್ದರು. ರ್ ಯುದ್ಧದ ವರೆಗಿನ ಒಂದೊಂದು ಘಟನೆಯೂ ಅದಕ್ಕೆ ಸಾಕ್ಷಿಯಾಗಿತ್ತು. ರೆ ಲೋಕಾನುಗ್ರಹಿಯು(ಸ) ಏಕದೇವ ವಿಶ್ವಾಸಿ-ಬಹುದೇವ ವಿಶ್ವಾಸಿ ಮತ್ತು -ಶತ್ರುವೆಂಬ ಭೇದವನ್ನು ಕಲ್ಪಿಸುತ್ತಿರಲಿಲ್ಲ. ಯಾರಾದರೂ ತಮ್ಮೊಂದಿಗೆ ುಚಿತವಾಗಿ ವರ್ತಿಸಿದರೆ ಪ್ರವಾದಿವರ್ಯರು(ಸ) ಅದನ್ನು ಗಂಭೀರವಾಗಿ ಪರಿ ಸುತ್ತಿರಲಿಲ್ಲ. ಶತ್ರುವೇ ಆದರೂ ತಮ್ಮ ಬಳಿ ಬಂದು ಸಲಹೆ ಕೇಳಿದರೆ, ಅವರು ಹೆ ನೀಡಿ ಸಹಕರಿಸುತ್ತಿದ್ದರು. ನ್ಯಾಯ ಪಾಲನೆಯಲ್ಲಿ ಯಾರೊಂದಿಗೂ

ರಿಯಾಯಿತಿ ತೋರುತ್ತಿರಲಿಲ್ಲ.

ಒಮ್ಮೆ ಕೆಲವು ಮಂದಿ ಯಹೂದಿಯರು ಬಂದು ಪ್ರವಾದಿವರ್ಯರೊ 'ಅಸ್ಸಲಾಮು ಅಲೈಕುಮ್' (ನಿಮ್ಮ ಮೇಲೆ ಶಾಂತಿಯಿರಲಿ) ಎನ್ನುವ ರೀತಿಂ 'ಅಸ್ಸಾಮು ಅಲೈಕುಮ್' (ನಿಮ್ಮ ಮೇಲೆ ಮರಣ ಎರಗಲಿ) ಎಂದರು. ಅವ ಕುಚೇಷ್ಟೆಯಿಂದ ಆಯಿಶಾ(ರ) ಕೋಪಗೊಂಡು ಅವರನ್ನು ಜರೆಯಲು ಮುಂದಾಗು ಆಗ ಪ್ರವಾದಿವರ್ಯರು(ಸ) ಪತ್ನಿಯನ್ನು ತಡೆಯುತ್ತಾ ಹೇಳಿದರು, "ಆಯಿ ಕೆಟ್ಟದನ್ನಾಡಬೇಡ. ಮೃದು ಧೋರಣೆ ತೋರು. ಅಲ್ಲಾಹ್ ಮೃದು ಧೋರಣೆಯ ಇಷ್ಟ ಪಡುತ್ತಾನೆ."

❖ ❖ ❖ ❖

ಒಮ್ಮೆ ಕೆಲವು ಮಂದಿ ಕ್ರೈಸ್ತರು ನಜ್ರಾನ್‌ನಿಂದ ಮದೀನಕ್ಕೆ ಆಗಮಿಸಿ ಪ್ರವಾದಿವರ್ಯರು(ಸ) ಅವರಿಗೆ ಆತಿಥ್ಯ ನೀಡಿದರು. ಮಸ್ಜಿದುನ್ನಬವಿಯಲ್ಲಿ ಇ ಅವರಿಗೆ ಅವಕಾಶ ಮಾಡಿಕೊಟ್ಟರು. ಅವರಿಗೆ ಅವರದೇ ಆದ ರೀತಿ ಆರಾಧನಾ ಕರ್ಮ ನಿರ್ವಹಿಸಲು ಅನುಮತಿ ನೀಡಿದರು. ಮುಸ್ಲಿಮರು ಅವ ತಡೆಯಲು ಯತ್ನಿಸಿದಾಗ, ಪ್ರವಾದಿವರ್ಯರು(ಸ) ತಡೆಯಬೇಡಿರೆಂದು ಸೌಹಾರ್ದ ಮೆರೆದರು.

❖ ❖ ❖ ❖

ಒಮ್ಮೆ ಓರ್ವ ಯಹೂದಿ ವಿದ್ವಾಂಸ ಅಬ್ದುಲ್ಲಾ ಬಿನ್ ಸಲಾಮ್, ಪ್ರ ವರ್ಯರ(ಸ) ಬಳಿಗೆ ಬಂದು ಹೇಳುತ್ತಾರೆ, "ನಾನು ನಿಮ್ಮಲ್ಲಿ ಮೂರು ಪ್ರಶ್ನೆಗ ಕೇಳುತ್ತೇನೆ. ಅದಕ್ಕೆ ಸರಿಯಾದ ಉತ್ತರ ಓರ್ವ ಪ್ರವಾದಿಯಲ್ಲದೆ ಬೇರಾ ನೀಡಲಾರರು. ಅಂತ್ಯ ದಿನದ ಪ್ರಥಮ ಕುರುಹು ಯಾವುದು? ಸ್ವರ್ಗವಾಸಿ ಮೊದಲು ಸೇವಿಸುವ ಆಹಾರ ಯಾವುದು? ಮಗು ತಾಯಿ ಅಥವಾ ತಂದೆಯ ಹೋಲಲು ಕಾರಣವೇನು?"

ಪ್ರವಾದಿವರ್ಯರು(ಸ) ಹೀಗೆ ಉತ್ತರಿಸುತ್ತಾರೆ, "ಅಂತ್ಯ ದಿನದ ಪ್ರ ಕುರುಹು ಒಂದು ಬೆಂಕಿಯಾಗಿರುವುದು. ಅದು ಜನರನ್ನು ಪಶ್ಚಿಮದಿಂದ ಪೂವ ಕಡೆಗೆ ಅಟ್ಟಿಸಿಕೊಂಡು ಹೋಗುವುದು. ಮೀನಿನ ಯಕೃತ್ತು ಸ್ವರ್ಗವಾಸಿಗಳ ಮೊ ಆಹಾರವಾಗಿರುವುದು. ತಂದೆಯ ವೀರ್ಯದ ಅಂಶವು, ತಾಯಿಯ ಅಂಶಕ್ಕಿ ಪ್ರಬಲವಾದರೆ ಮಗು ತಂದೆಯನ್ನೂ ತಾಯಿಯ ಅಂಶವು ತಂದೆ ಅಂಶಕ್ಕಿ ಪ್ರಬಲವಾದರೆ ಮಗು ತಾಯಿಯನ್ನೂ ಹೋಲುತ್ತದೆ."

ಈ ಉತ್ತರಗಳನ್ನು ಕೇಳಿದ ಅಬ್ದುಲ್ಲಾ ಬಿನ್ ಸಲಾಮ್ ಸಮಾಧಾನ ಪ

ು ನಿಮ್ಮ ಪ್ರವಾದಿತ್ವಕ್ಕೆ ಸಾಕ್ಷ್ಯ ನುಡಿಯುತ್ತೇನೆ" ಎಂದು ಉದ್ಗರಿಸುತ್ತಾರೆ.

❖ ❖ ❖ ❖

ಇನ್ನೋರ್ವ ಯಹೂದಿ ವಿದ್ವಾಂಸ ಪ್ರವಾದಿವರ್ಯರ(ಸ) ಬಳಿ ಬಂದು ಹೀಗೆ ುತ್ತಾರೆ, "ಪುನರುತ್ಥಾನ ದಿವಸ ಭೂಮಿ ಆಕಾಶಗಳನ್ನು ಅಡಿಮೇಲುಗೊಳಿಸಲಾ ದೇವನ ಸೃಷ್ಟಿಗಳು ಎಲ್ಲಿರುತ್ತಾರೆ?" ಪ್ರವಾದಿವರ್ಯರು(ಸ), "ದೀಪದಡಿ ರುತ್ತದೆ" ಎನ್ನುತ್ತಾರೆ. ಬಳಿಕ ಆಗಂತುಕ, "ಮೊತ್ತ ಮೊದಲು ಸ್ವರ್ಗ ಪ್ರವೇಶಿ ಅನುಮತಿ ಯಾರಿಗೆ ಸಿಗುತ್ತದೆ?" ಎಂದು ಕೇಳಿದಾಗ, "ದೇವ ಮಾರ್ಗದಲ್ಲಿ ಮಾರುಗಳನ್ನು ತೊರೆಯಲ್ಪಟ್ಟ ಬಡ ಸತ್ಯವಿಶ್ವಾಸಿಗೆ" ಎಂದು ಪ್ರವಾದಿವರ್ಯರು(ಸ) ರಿಸುತ್ತಾರೆ.

ತರುವಾಯ ಆಗಂತುಕ ಹೀಗೆನ್ನುತ್ತಾರೆ, "ನನ್ನ ಈ ಪ್ರಶ್ನೆಗೆ ಓರ್ವ ದಿಯಲ್ಲದೆ ಬೇರೆ ಯಾರೂ ಉತ್ತರಿಸಲಾರರು. ಮಗು ಹೆಣ್ಣು ಅಥವಾ ಗಂಡು ವುದು ಹೇಗೆ?"

ಪ್ರವಾದಿವರ್ಯರು(ಸ) ಹೇಳಿದರು, "ಪುರುಷ ವೀರ್ಯವು ಬಿಳಿಯಾಗಿಯೂ ು ವೀರ್ಯವು ಹಳದಿಯಾಗಿಯೂ ಇರುತ್ತದೆ. ಸ್ತ್ರೀ ವೀರ್ಯವು ಪುರುಷ ರ್ಯವನ್ನು ಮೀರಿಸಿದರೆ ಮಗು ಹೆಣ್ಣಾಗಿಯೂ ಪುರುಷ ವೀರ್ಯವು ಪ್ರಬಲವಾದರೆ ು ಗಂಡಾಗಿಯೂ ಹುಟ್ಟುತ್ತದೆ."

ಇದನ್ನು ಕೇಳಿ ಆಗಂತುಕ, "ಖಂಡಿತವಾಗಿಯೂ ನೀವು ದೇವ ಪ್ರವಾದಿಯಾಗಿ ು" ಎಂದು ಉದ್ಗರಿಸಿದಾಗ ಪ್ರವಾದಿವರ್ಯರು(ಸ) ಹೀಗೆ ಪ್ರತಿಕ್ರಿಯಿಸುತ್ತಾರೆ, ಗೆ ಮೊದಲು ತಿಳಿದಿಲ್ಲದಂತಹ ವಿಷಯಗಳನ್ನು ಅಲ್ಲಾಹನು ನನಗೆ ತಿಳಿಯ ಸುತ್ತಾನೆ." ❑

ಕಪಟ ವಿಶ್ವಾಸಿಯ ಅತಿರೇಕಗಳು

ಪ್ರವಾದಿವರ್ಯರು(ಸ) ಮಕ್ಕಾದಿಂದ ಮದೀನಕ್ಕೆ ವಲಸೆ ಹೋಗುವುದಕ್ಕೆ ಿಚೆ, ಮದೀನದಲ್ಲಿ ಔಸ್ ಮತ್ತು ಖಝ್ರುಜ್ ಗೋತ್ರಗಳ ನಡುವೆ ಒಪ್ಪಂದ ಯುವುದರಲ್ಲಿತ್ತು. ಅಲ್ಲಿ ಒಂದು ಸುದೀರ್ಘ ಕಾಲ ನಡೆದಿದ್ದ ಬುಆಸ್ ದ್ಧದಿಂದ ಉಭಯ-ಬಣಗಳೂ ಬೇಸತ್ತು ಹೋಗಿದ್ದುವು. ಶಾಂತಿ ಸ್ಥಾಪಿಸುವ ನಲ್ಲಿ ಉಭಯ ಗೋತ್ರಗಳು ಸೇರಿ ಅಬ್ದುಲ್ಲಾ ಬಿನ್ ಉಬೈ ಎಂಬ ಪ್ರಭಾವಿ ಾರನನ್ನು ಒಮ್ಮತದಿಂದ ತಮ್ಮ ರಾಜನಾಗಿ ಅಂಗೀಕರಿಸಿದ್ದರು. ಆತನ ಟ್ಟಾಭಿಷೇಕಕ್ಕೆ ಎಲ್ಲ ಸಿದ್ಧತೆ ನಡೆದಿತ್ತು. ಅದಕ್ಕಾಗಿ ಬಂಗಾರ, ಬೆಳ್ಳಿ, ವಜ್ರ ಮತ್ತು

ಮಾಣಿಕ್ಯಗಳಿಂದ ಕೂಡಿದ ಒಂದು ಕಿರೀಟವನ್ನೂ ತಯಾರಿಸಲಾಗಿತ್ತು.

ಆದರೆ ಪ್ರವಾದಿವರ್ಯರ(ಸ) ಆಗಮನದಿಂದ ಜನರ ಗಮನ ಅವರೆಡ ತಿರುಗಿತು. ಹೀಗೆ ಅಬ್ದುಲ್ಲಾ ಬಿನ್ ಉಬ್ಬೈಯ ರಾಜನಾಗುವ ಕನಸು ಭಗ್ನವಾಯಿತ ಆತ ಅದಕ್ಕಾಗಿ ಪ್ರವಾದಿವರ್ಯರನ್ನು(ಸ) ದ್ವೇಷಿಸತೊಡಗಿದ. ಅದೇ ವೇಳೆ ಮದೀನದ ಇಸ್ಲಾಮ್ ಕ್ರಮೇಣ ಬಲ ಪಡೆಯತೊಡಗಿದಾಗ ಮಕ್ಕಾದ ಕುರೈಶರೂ ಆತಂಕಿತರಾ ತೊಡಗಿದರು. ವಲಸೆಯ ಒಂದು ವರ್ಷ ತರುವಾಯ ಕುರೈಶರು ಮಕ್ಕಾ ದಾರುನ್ನದ್‌ವದಲ್ಲಿ ಸಭೆ ಸೇರಿ ಈ ಬಗ್ಗೆ ಚರ್ಚಿಸುತ್ತಾರೆ. ಅವರಿಗಿದ್ದ ಆತಂ ಒಂದೆರಡಲ್ಲ. ಪ್ರವಾದಿವರ್ಯರು(ಸ) ಮದೀನದ ಮತ್ತು ಆಸುಪಾಸಿನ ಅನೇ ಗೋತ್ರಗಳ ಜತೆ ಶಾಂತಿ ಸಂಧಾನ ಮಾಡಿದ್ದು ಕುರೈಶರ ಬಹುದೊಡ್ಡ ಸಮಸ್ಯೆಯಾಗಿತ್ತು

ಸಭೆಯಲ್ಲಿ ಅಬೂಜಹಲ್ ಒಂದು ಸಲಹೆ ನೀಡುತ್ತಾನೆ, "ಮದೀನದ ನಿವಾಸಿ ಗಳ ನೆರವಿಲ್ಲದೆ ನಾವು ಮುಸ್ಲಿಮರನ್ನೇನೂ ಮಾಡಲು ಸಾಧ್ಯವಿಲ್ಲ. ಆದರೆ ಅಬ್ದುಲ್ಲಾ ಬಿನ್ ಉಬೈ ಎಂಬ ಸರದಾರನ ಬಗ್ಗೆ ನಮಗೆ ತಿಳಿದಿದೆ. ಆತ ಮುಹಮ್ಮದ್‌ರನ್ನು ಒಳಗೊಳಗೇ ದ್ವೇಷಿಸುತ್ತಿದ್ದಾನೆ. ಅವನನ್ನು ಬಳಸುವ ಮೂಲಕ 'ನೂತನ' ಧರ್ಮ ವನ್ನು ಸಂಪೂರ್ಣ ಅಳಿಸಿ ನಾವು ನಿಶ್ಚಿಂತರಾಗಬಹುದು." ಈ ಸಲಹೆಯನ್ನು ಸಭೆ ಸೇರಿದವರೆಲ್ಲರೂ ಒಪ್ಪಿಕೊಳ್ಳುತ್ತಾರೆ.

ಹೀಗೆ ಅಬೂಜಹಲನ ಸಲಹೆಯ ಮೇರೆಗೆ ಅಬ್ದುಲ್ಲಾ ಬಿನ್ ಉಬೈಯ ಹೆಸರಿಗೆ ಪತ್ರ ರವಾನಿಸಲಾಗುತ್ತದೆ. ಅದರ ಒಕ್ಕಣೆ ಹೀಗಿತ್ತು, "ನೀವು ನಮ್ಮ ಓರ್ವ ವ್ಯಕ್ತಿಗೆ ಆಶ್ರಯ ನೀಡಿರುವಿರಿ. ದೇವರಾಣೆ! ಒಂದೋ ನೀವು ಅವರನ್ನು ವಧಿಸಿ ಬಿಡಿರಿ ಅಥವಾ ಮದೀನದಿಂದ ಹೊರಕ್ಕಟ್ಟಿರಿ. ಅನ್ಯಥಾ ನಾವು ನಿಮ್ಮ ಮೇಲೆ ಆಕ್ರಮಣ ಮಾಡುವೆವು ಮತ್ತು ನಿಮ್ಮ ಯುವಕರನ್ನು ಕೊಂದು, ನಿಮ್ಮ ಮಹಿಳೆಯರನ್ನು ಸ್ವಾಧೀನಪಡಿಸುವೆವು."

ಪತ್ರ ತಲಪುತ್ತಲೇ ಅಬ್ದುಲ್ಲಾ ಬಿನ್ ಉಬೈ ಸಭೆ ಕರೆಯುತ್ತಾನೆ. ಅಬ್ದುಲಾನಂತಹುದೇ ಮನಸ್ಥಿತಿಯ ಕೆಲವು ಮಂದಿ ವಿಷಯದ 'ಗಂಭೀರತೆ'ಯನ್ನು ಮನಗಂಡು ಮುಸ್ಲಿಮರನ್ನು ಮದೀನದಿಂದ ಹೊರಕ್ಕಟ್ಟುವ ಕುರಿತು ಒಮ್ಮತ ವ್ಯಕ್ತಪಡಿಸುತ್ತಾರೆ. ಏಕೆಂದರೆ ಇಸ್ಲಾಮ್ ಮದೀನದಲ್ಲಿ ಕ್ಷಿಪ್ರವಾಗಿ ಬೆಳೆಯುತ್ತಿತ್ತಲ್ಲದೆ, ಪ್ರವಾದಿವರ್ಯರು(ಸ) ಹತ್ತಿರದ ಬಹುತೇಕ ಎಲ್ಲ ಗೋತ್ರಗಳೊಡನೆಯೂ ಸಂಧಾನ ಮಾಡಿದ್ದರು.

ಈ ಸಭೆಯ ಸುದ್ದಿ ಕೇಳುತ್ತಲೇ ಪ್ರವಾದಿವರ್ಯರು(ಸ) ಅಲ್ಲಿಗೆ ಧಾವಿಸುತ್ತಾರೆ. ಸಭೆ ಸೇರಿದವರೆಲ್ಲ ಆಶ್ಚರ್ಯಚಕಿತರಾಗಿರುವಂತೆಯೇ ಪ್ರವಾದಿವರ್ಯರು(ಸ) ಹೇಳುತ್ತಾರೆ, "ಕುರೈಶರು ನಿಮ್ಮ ವಿರುದ್ಧ ಕುತಂತ್ರ ಹೂಡಿದ್ದಾರೆ. ನೀವು ಯುದ್ಧ

ಡಿದರೆ, ಮುಸ್ಲಿಮರಾದ ನಿಮ್ಮ ಮಕ್ಕಳನ್ನೂ ಸಹೋದರರನ್ನೂ ನಿಮ್ಮ ಕೈಯಾರೆ ಲ್ಲಬೇಕಾದೀತು. ಈ ರೀತಿ ಎರಡೂ ಕಡೆಯಲ್ಲಿ ನಷ್ಟ ನಿಮಗೆ. ನೀವು ಕುರೈಶರ ದ್ಧ ಯುದ್ಧ ಮಾಡಿದರೆ ಅದು ಅನ್ಯರ ಜತೆ ಹೋರಾಟವಾಗುವುದು."

ಪ್ರವಾದಿವರ್ಯರ(ಸ) ಈ ಮಾತು ಅಲ್ಲಿ ನೆರೆದವರ ಕಣ್ಣು ತೆರೆಸುತ್ತದೆ. ಇದು ರ ಪೈಕಿ ಯಾರೂ ನಿರಾಕರಿಸಲಾಗದ ಸತ್ಯವಾಗಿತ್ತು. ಹಾಗಾಗಿ ಎಲ್ಲರೂ ಪ್ರವಾದಿ ರ್ಯರ(ಸ) ಮಾತನ್ನು ಅಂಗೀಕರಿಸುತ್ತಾರೆ. ಹೀಗೆ ಕುರೈಶರ ಕುತಂತ್ರ ಮತ್ತು ಬ್ದುಲ್ಲಾ ಬಿನ್ ಉಬೈಯ ಸಂಚು ವಿಫಲವಾಗುತ್ತದೆ.

ಕುರೈಶರು, ಇನ್ನು ತಡಮಾಡುವುದು ತರವಲ್ಲವೆಂದು ಭಾವಿಸಿ ಮದೀನದೆಡೆಗೆ ಡೆತ್ತಿ ಹೋಗುತ್ತಾರೆ. ಸುದ್ದಿ ತಿಳಿದ ಪ್ರವಾದಿವಯರು(ಸ) ಬದ್ರ್ ಎಂಬಲ್ಲಿ ಅವ ನ್ನ ಎದುರಿಸುತ್ತಾರೆ. ಮುಸ್ಲಿಮರ ಸಂಖ್ಯೆಯ ಮೂರು ಪಟ್ಟಿನಷ್ಟಿದ್ದ ಕುರೈಶರು ೀತು ಪಲಾಯನ ಮಾಡುವಾಗ ತಮ್ಮ ಎಪ್ಪತ್ತು ಮಂದಿ ಪರಾಕ್ರಮಿಗಳ ಕಳೇಬರ ನ್ನೂ ರಣರಂಗದಲ್ಲೇ ಬಿಟ್ಟೋಡುತ್ತಾರೆ. ಇದು ತಿಳಿದಾಗ ಅಬ್ದುಲ್ಲಾ ಬಿನ್ ಉಬೈ ೋಚನೆಗೆ ಬೀಳುತ್ತಾನೆ. ಇನ್ನು ಇಸ್ಲಾಮನ್ನು ತಡೆಯುವುದು ಸುಲಭ ಸಾಧ್ಯವಲ್ಲವೆಂದು ರಗಂಡು, ಆತ ಇಸ್ಲಾಮ್ ಸ್ವೀಕರಿಸಿರುವುದಾಗಿ ಘೋಷಿಸುತ್ತಾನೆ. ಹೀಗೆ ಬದ್ರ್ ದ್ಧದ ಪರಿಣಾಮ ಕಂಡು ಇಸ್ಲಾಮ್ ಸ್ವೀಕರಿಸಿದವರು ಅನೇಕ ಮಂದಿ ಇದ್ದರು. ತಹವರ ಒಂದು ವಿಶೇಷತೆಯೆಂದರೆ, ಅವರು ತೀರಾ ಅಂಜುಬುರುಕರಾಗಿರುತ್ತಾರೆ. ಮದ ಕಾರಣ ಅವರು ಆಲೋಚಿಸುವುದೊಂದು, ಹೇಳುವುದೊಂದು. ಇಂತಹವರು ಲ್ನೋಟಕ್ಕೆ ಮುಸ್ಲಿಮರಾಗಿದ್ದರೂ ಒಳಗಿಂದೊಳಗೇ ಇಸ್ಲಾಮಿನ ಮೂಲೋತ್ಪಾದನೆಗೆ ಚು ಹೂಡುತ್ತಿದ್ದರು. ಇವೆಲ್ಲರಿಗೂ ಅಬ್ದುಲ್ಲಾ ಬಿನ್ ಉಬೈ ನೇತಾರನಾಗಿದ್ದ.

❖ ❖ ❖ ❖

ಬದ್ರ್‌ನ ಸೋಲಿಗೆ ಪ್ರತೀಕಾರವಾಗಿ ಕುರೈಶರು ಪುನಃ ಸೈನ್ಯ ಸಂಘಟಿಸಿ ದೀನದೆಡೆಗೆ ಹೊರಡುತ್ತಾರೆ. ಈ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಯುದ್ಧದ ತಾಗಿ ಜನರ ಅಭಿಪ್ರಾಯ ಕೇಳಿದರು. ಹಲವು ಪ್ರಮುಖರು ನಗರದೊಳಗಿದ್ದುಕೊಂಡೇ ುಗಳನ್ನು ಎದುರಿಸಬೇಕೆಂದು ಅಭಿಪ್ರಾಯಪಟ್ಟರು. ಪ್ರವಾದಿವರ್ಯರ(ಸ) ಇಂಗಿತವೂ ುವೇ ಆಗಿತ್ತು. ಆದರೆ ಬಹುಮಂದಿ ಯುವಕರು ಅದನ್ನು ತಮ್ಮ ಘನತೆಗೆ ದೆಂದು ಭಾವಿಸಿದರು. ಈ ಪ್ರಕಾರ, ಬಹುಮತದ ಆಧಾರದಲ್ಲಿ ಪ್ರವಾದಿವರ್ಯರು(ಸ) ದು ಸಾವಿರ ಮಂದಿ ಅನ್ಸಾರ್ ಮತ್ತು ಮುಹಾಜಿರರೊಡಗೂಡಿ ಉಹುದ್ ವೆಯೆಡೆಗೆ ತೆರಳುತ್ತಾರೆ.

ಶಸ್ತ್ರಸಜ್ಜಿತರಾದ ಮೂರು ಸಾವಿರ ಕುರೈಶ್ ಯೋಧರ ಸೇನೆಯು ಬರುತ್ತಿರುವುದನ್ನು

ತಿಳಿದುಕೊಂಡ ಅಬ್ದುಲ್ಲಾ ಬಿನ್ ಉಬೈ ಹುರ್‍ರವಾಕುಮ್ ಎಂಬ ಕಣಿವೆಗೆ ತಲಪು ತ್ತಲೇ, 'ಮದೀನದಲ್ಲಿದ್ದುಕೊಂಡೇ ಶತ್ರುಗಳನ್ನೆದುರಿಸಬೇಕೆಂಬ ನಮ್ಮ ಸಲಹೆಯನು ನೀವು ಸ್ವೀಕರಿಸದ ಕಾರಣ ನಾವು ಮರಳುತ್ತಿದ್ದೇವೆ' ಎಂದು ಹೇಳಿಕೊಂಡು ತನ ಮುನ್ನೂರ ಮಂದಿ ಸಂಗಾತಿಗಳೊಂದಿಗೆ ಮರಳುತ್ತಾನೆ. ಆತನ ಪ್ರಚೋದನೆಯಿಂದ ಅನ್ಸಾರರ ಇನ್ನೆರಡು ವಿಭಾಗದ ಜನರೂ ಆತನೊಡನೆ ಮರಳಲುದ್ಯುಕ್ತರಾಗುತ್ತಾರೆ ಆದರೆ ಅವರ ಸರದಾರು ಅವರನ್ನು ಮರಳುವುದರಿಂದ ತಡೆದರು. ಈ ಕುರಿತು ಅಲ್ಲಾಹನು ಈ ವಚನವನ್ನು ಅವತೀರ್ಣಗೊಳಿಸಿದನು, "ನಿಮ್ಮಲ್ಲಿ ಎರಡು ತಂಡಗಳು ಭೀರುತನ ತೋರಿಸಲುದ್ಯುಕ್ತರಾಗಿ ಬಿಟ್ಟಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರ ಸಹಾಯಕ್ಕೆ ಅಲ್ಲಾಹ್ ಉಪಸ್ಥಿತನಿದ್ದನು ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆಯನ್ನಿಡಬೇಕು." (ಪವಿತ್ರ ಕುರ್‌ಆನ್: 3: 122)

❖ ❖ ❖ ❖

ಹಿಜರಿ ಶಕ 5ರಲ್ಲಿ ಮದೀನದಿಂದ 96 ಮೈಲಿ ದೂರದ 'ಮರ್ಯ್ಸಅ್' ಚಿಲುಮೆಯ ಬಳಿ ಖುಝಾಅ ಗೋತ್ರದ ಅಲ್ ಮುಸ್ತಲಿಕ್ ಮನೆತನದ ಸರದಾರ ಹಾರಿಸ್ ಬಿನ್ ಅಬೂ ಝುರಾರ್ ಎಂಬವರು ಮದೀನದ ಮೇಲೆ ದಾಳಿಯೆಸಗುವ ಸಂಚನ್ನು ಹೂಡುತ್ತಾರೆ. ಇದರ ಸುದ್ದಿ ತಲಪುತ್ತಲೇ ಪ್ರವಾದಿವರ್ಯರು(ಸ) ಝೈದ್ ಬಿನ್ ಹಾರಿಸರನ್ನು ಮದೀನದ ನಾಯಕನಾಗಿ ನೇಮಿಸಿ ಯುದ್ಧರಂಗಕ್ಕೆ ಹೊರಡುತ್ತಾರೆ. ಈ ಬಾರಿ ಅದುವರೆಗೂ ಯಾವುದೇ ಯುದ್ಧದಲ್ಲಿ ಭಾಗವಹಿಸದ ಮುನಾಫಿಕರು (ಕಪಟ ವಿಶ್ವಾಸಿಗಳು) ಪ್ರವಾದಿವರ್ಯರ(ಸ) ಜತೆಯಲ್ಲಿ ಹೊರಡುತ್ತಾರೆ. ಪ್ರವಾದಿ ಪತ್ನಿಯರಾದ ಆಯಿಶಾ ಮತ್ತು ಉಮ್ಮು ಸಲಮ(ರ) ಕೂಡಾ ಜತೆಯಲ್ಲಿದ್ದರು.

ಹೀಗೆ ಹೊರಟು ಕುದ್ಯೆದ್ ಮಾರ್ಗವಾಗಿ ಮರ್ಯ್ಸಅ್‌ಗೆ ಶೀಘ್ರ ತಲುಪಿದ ಇಸ್ಲಾಮೀ ಸೇನೆಯು ಹಠಾತ್ ದಾಳಿಯೆಸಗಿದಾಗ ದಿಕ್ಕೆಟ್ಟು ಹಾರಿಸ್‌ನ ಸೇನೆಯು ರಣರಂಗದಿಂದ ಪಲಾಯನ ಮಾಡುತ್ತದೆ. ಸ್ವತಃ ಹಾರಿಸ್ ಕೂಡಾ ಓಡಿ ಹೋಗುತ್ತಾರೆ. ಶತ್ರುಗಳ ಪೈಕಿ ಹತ್ತು ಮಂದಿ ಹತರಾಗಿ ಏಳುನೂರು ಮಂದಿ ಸೆರೆ ಸಿಗುತ್ತಾರೆ. ಅವರಲ್ಲಿ ಹಾರಿಸ್‌ರ ಪುತ್ರಿ ಬರ್‍ರ ಕೂಡಾ ಸೇರಿದ್ದರು. ಪ್ರವಾದಿವರ್ಯರು(ಸ) ಆಕೆಯೊಡನೆ ವಿವಾಹವಾಗುವ ಮೂಲಕ ಎಲ್ಲ ಬಂಧಿತರನ್ನೂ ಬಿಡುಗಡೆಗೊಳಿಸುತ್ತಾರೆ. ಇದರಿಂದ ಪ್ರಭಾವಿತರಾದ ಮುಸ್ತಲಿಕ್ ಗೋತ್ರದ ಅನೇಕ ಮಂದಿ ಇಸ್ಲಾಮ್ ಸ್ವೀಕರಿಸುತ್ತಾರೆ. ಸುದ್ದಿ ತಿಳಿದ ಹಾರಿಸ್ ಕೂಡಾ ಮುಸ್ಲಿಮರಾಗಿ ಮರಳುತ್ತಾರೆ.

ಇದಾದ ಬಳಿಕ ಮುಸ್ಲಿಮ್ ಸೇನೆಯು ಕೆಲವು ದಿನ ಮರ್ಯ್ಸಅ್ ಚಿಲುಮೆಯ ಬಳಿಯೇ ಬೀಡು ಬಿಟ್ಟಿರುತ್ತದೆ. ಈ ಮಧ್ಯೆ ಅನ್ಸಾರರ ಪೈಕಿ ಸಿನಾನ್ ಬಿನ್ ಜುಹನಿ ಮತ್ತು ಮುಹಾಜಿರರಾದ ಜುಹ್‌ಜಾಹ್ ಬಿನ್ ಸಅದ್‌ರ ಮಧ್ಯೆ ಯಾವುದೋ

ಷಯಕ್ಕೆ ಕಲಹವೇರ್ಪಡುತ್ತದೆ. ಜುಹ್‌ಜಾಹ್ ಸಿಟ್ಟಿನ ಭರದಲ್ಲಿ ಸಿನಾನ್‌ರ ಕೆನ್ನೆಗೆ ಹೊಡೆದರು. ಇದರಿಂದ ಅವರ ತುಟಿಯೊಡೆದು ರಕ್ತ ಹರಿಯಿತು. ಅವರು ಅನ್ಸಾರರನ್ನು ರೆದರು. ಆಗ ಜುಹ್‌ಜಾಹ್, ಮುಹಾಜಿರರನ್ನು ಕೂಗಿ ಕರೆದರು. ಈ ಗದ್ದಲವು ಅಲ್ಲಿ ನೆರೆದಿದ್ದವರಲ್ಲಿ ಆತಂಕವನ್ನು ಉಂಟು ಮಾಡುತ್ತದೆ. ವಿಷಯವನ್ನು ಅಲ್ಲಿಯೇ ಇತ್ಯರ್ಥಗೊಳಿಸಲಾಗುತ್ತದಾದರೂ ಈ ಘಟನೆಯಿಂದ ಅಬ್ದುಲ್ಲಾ ಬಿನ್ ಉಬೈಯ ಕುಲ ಮಹಿಮೆ ಜಾಗೃತವಾಗುತ್ತದೆ. ಆತ ಅನ್ಸಾರರನ್ನು ಮುಹಾಜಿರರ ವಿರುದ್ಧ ಎತ್ತಿ ಕಟ್ಟತೊಡಗಿದ, "ನಾವು ಈ ಮುಹಾಜಿರರಿಗೆ ಸಹಾಯ ಮಾಡಿದೆವು ಮತ್ತು ನಮ್ಮಿಂದಾಗಿಯೇ ಅವರೆಲ್ಲ ಬಲ ಪಡೆದರು. ನಾವು ನಮ್ಮ ಹಣ ಮತ್ತು ಸೊತ್ತುಗಳನ್ನು ಇವರ ಮೇಲೆ ಖರ್ಚು ಮಾಡದಿರುತ್ತಿದ್ದರೆ, ಇವರು ಬೇಸತ್ತು ಬೇರೆಲ್ಲಿಗಾದರೂ ಹೊರಟು ಹೋಗುತ್ತಿದ್ದರು. ಇರಲಿ, ನಾವು ಮದೀನಾಕ್ಕೆ ಮರಳಿದ ಬಳಿಕ ನಮ್ಮಲ್ಲಿ ಪ್ರತಿಷ್ಠಿತರು ನೀಚರನ್ನು ಹೊರಗಟ್ಟಬೇಕು" ಎಂದು ಹೇಳಿದನು.

ಅಬ್ದುಲ್ಲಾ ಬಿನ್ ಉಬೈಯ ಈ ಮಾತುಗಳನ್ನು ಕೇಳಿದ ಝೈದ್ ಬಿನ್ ಅರ್ಕಮ್ ಪ್ರವಾದಿವರ್ಯರ(ಸ) ಬಳಿ ಬಂದು ನಡೆದ ಘಟನೆಯನ್ನು ವಿವರಿಸುತ್ತಾರೆ. ಹತ್ತಿರದಲ್ಲೇ ಇದ್ದ ಉಮರ್(ರ) ಅದನ್ನು ಕೇಳಿ ಕೆಂಡಾಮಂಡಲರಾಗುತ್ತಾರೆ. ತರುವಾಯ, "ಅಲ್ಲಾಹನ ಸಂದೇಶವಾಹಕರೇ! ಅವನನ್ನು ವಧಿಸಿ ಬಿಡಲು ಆಜ್ಞಾಪಿಸಿರಿ" ಎಂದು ಗರ್ಜಿಸುತ್ತಾರೆ.

ಘಟನೆಯಿಂದ ಪ್ರವಾದಿವರ್ಯರೂ(ಸ) ಬಹಳ ನೊಂದುಕೊಂಡಿದ್ದರಾದರೂ ಶಾಂತ ಸ್ವರದಲ್ಲಿ ಹೇಳುತ್ತಾರೆ, "ಉಮರ್! ಮುಹಮ್ಮದ್ ತನ್ನ ಸಂಗಾತಿಗಳನ್ನೇ ಕೊಲೆ ಮಾಡಿಸುತ್ತಿದ್ದಾನೆಂದು ಜನರಾಡಿಕೊಳ್ಳಬೇಕೆಂದು ನೀವು ಬಯಸುತ್ತೀರಾ?" ಇದನ್ನು ಕೇಳಿ ಉಮರ್ ಸುಮ್ಮನಾಗುತ್ತಾರೆ.

ಅದೇ ವೇಳೆ ಅಬ್ದುಲ್ಲಾ ಬಿನ್ ಉಬೈಯ ಮಗ ಅಬ್ದುಲ್ಲಾ ಬಿನ್ ಅಬ್ದುಲ್ಲಾರಿಗೆ ಈ ವಿಷಯ ತಿಳಿದು ಬಂದಾಗ ಅವರಿಗೆ ತಂದೆಯ ಬಗ್ಗೆ ಜಿಗುಪ್ಸೆ ಹುಟ್ಟುತ್ತದೆ. ಅವರು ನೇರವಾಗಿ ಪ್ರವಾದಿವರ್ಯರ(ಸ) ಬಳಿಗೆ ಬಂದು ಹೇಳುತ್ತಾರೆ, "ಅಲ್ಲಾಹನ ಸಂದೇಶವಾಹಕರೇ! ನನ್ನ ತಂದೆಯ ಮಾತಿನಿಂದ ತಮಗೆ ಬಹಳ ಬೇಸರವಾಗಿದೆ. ಅದಕ್ಕಾಗಿ ಅವರನ್ನು ವಧಿಸಬೇಕಿದ್ದರೆ ನನಗೆ ಹೇಳಿ, ನಾನೇ ಅವರ ತಲೆ ಕಡಿದು ತರುವೆನು. ಖಝ್ರಜ್ ಗೋತ್ರದವರ ಪೈಕಿ ಯಾರೂ ತಮ್ಮ ತಂದೆಯೊಂದಿಗೆ ನನ್ನಷ್ಟು ಸೌಜನ್ಯದಿಂದ ವರ್ತಿಸುವುದಿಲ್ಲ. ನನ್ನ ಹೊರತು ಯಾರಾದರೂ ಅವರನ್ನು ವಧಿಸಿದರೆ ನನ್ನ ತಂದೆಯ ಕೊಲೆಗಾರ ಜನರ ಮಧ್ಯೆ ನಡೆದಾಡುವುದನ್ನು ಕಂಡು ನನಗೆ ಸಹಿಸಲು ಸಾಧ್ಯವಾಗದು. ಹಾಗಾಗಿ ಅವನನ್ನು ನಾನು ಕೊಲೆ ಮಾಡಿಬಿಡಲೂ ಬಹುದು."

ಆದರೆ ಪ್ರವಾದಿವರ್ಯರು(ಸ) ಹೇಳುತ್ತಾರೆ, "ಅವರನ್ನು ಕೊಲ್ಲುವುದು ನಮಗೆ ಇಷ್ಟವಿಲ್ಲ. ಅವರು ನಮ್ಮ ಜೊತೆ ಇರುವ ತನಕ ಅವರೊಂದಿಗೆ ಚೆನ್ನಾಗಿ ವರ್ತಿಸಲಾಗುವುದು."

ಅಷ್ಟರಲ್ಲಿ ಅಬ್ದುಲ್ಲಾ ಬಿನ್ ಉಬೈಗೂ ತನ್ನ ಮಾತು ಪ್ರವಾದಿವರ್ಯರಿಗೆ(ಸ) ತಲುಪಿ, ತನ್ನ ಕೊಲೆಯ ಬಗ್ಗೆ ಸಮಾಲೋಚನೆ ನಡೆಯುತ್ತಿದೆಯೆಂದು ತಿಳಿದು ಬಿಡುತ್ತದೆ. ಆತ ಪ್ರವಾದಿವರ್ಯರ(ಸ) ಬಳಿಗೆ ಬಂದು, "ಪ್ರವಾದಿವರ್ಯರೇ(ಸ)! ಝೈದ್‌ಗೆ ಕೇಳುವಲ್ಲಿ ಏನೋ ಪ್ರಮಾದವಾಗಿರಬಹುದು" ಎನ್ನುತ್ತಾನೆ. ಪ್ರವಾದಿವರ್ಯರು ಏನೆಂದೂ ಮರುನುಡಿಯದೆ, ಸೇನೆಗೆ ತಕ್ಷಣ ಹೊರಡಲು ಆದೇಶಿಸುತ್ತಾರೆ. ಈ ಮಧ್ಯೆ ಝೈದ್, ಬಹಳ ನೊಂದುಕೊಂಡು ತನ್ನ ಸತ್ಯವಂತಿಕೆಯನ್ನು ಜಾಹೀರುಗೊಳಿಸಲು ಅಲ್ಲಾಹನಲ್ಲಿ ಮೊರೆಯಿಡುತ್ತಾರೆ. ಆಗ ಅಲ್ಲಾಹನು 'ಅಲ್ ಮುನಾಫಿಕೂನ್' ಅಧ್ಯಾಯದ ಮೊದಲ ಎಂಟು ವಚನಗಳನ್ನು ಅವತೀರ್ಣಗೊಳಿಸಿದನು. ಅದರಲ್ಲಿ ಕಪಟವಿಶ್ವಾಸಿಗಳ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿರುವನಲ್ಲದೆ, ಅಬ್ದುಲ್ಲಾ ಬಿನ್ ಉಬೈಯ ಪ್ರಸ್ತುತ ಮಾತುಗಳನ್ನು ಯಥಾವತ್ ಉಲ್ಲೇಖಿಸಿದ್ದಾನೆ.

"ನಾವು ಮದೀನಕ್ಕೆ ಹಿಂದಿರುಗಿದಾಗ ಗೌರವಾನ್ವಿತನು ನಿಂದ್ಯನನ್ನು ಅಲ್ಲಿಂದ ಹೊರಕ್ಕಟ್ಟಿಬಿಡುವನೆಂದು ಇವರು ಹೇಳುತ್ತಾರೆ. ವಾಸ್ತವದಲ್ಲಿ ಗೌರವವಂತೂ ಅಲ್ಲಾಹ್, ಅವನ ಸಂದೇಶವಾಹಕರು ಮತ್ತು ಸತ್ಯವಿಶ್ವಾಸಿಗಳಿಗಾಗಿಯೇ ಇದೆ. ಆದರೆ ಈ ಕಪಟವಿಶ್ವಾಸಿಗಳು ತಿಳಿಯುವುದಿಲ್ಲ." (ಪವಿತ್ರ ಕುರ್‌ಆನ್: 63: 8)

ಮಹಾ ಅಪವಾದ

ಮರ್ಯಸಲ್‌ನಿಂದ ಹೊರಟ ಸೇನೆಯನ್ನು ಪ್ರವಾದಿವರ್ಯರು(ಸ) ಎಲ್ಲೂ ತಂಗಲು ಅವಕಾಶ ಕೊಡದೆ, ನಿರಂತರ ಎರಡು ದಿನ ಪ್ರಯಾಣ ಮುಂದುವರಿಸುತ್ತಾರೆ. ಅಬ್ದುಲ್ಲಾ ಬಿನ್ ಉಬೈಯ ಮಾತುಗಳು ಜನರ ಮನ–ಮಸ್ತಿಷ್ಕಗಳಿಂದ ಹೊರಟು ಹೋಗಲಿ ಎಂಬುದೇ ಅದರ ಉದ್ದೇಶವಾಗಿತ್ತು. ಮೂರನೆಯ ದಿನ ಸೈನ್ಯವು ಹಿಜಾಝ್ ಪ್ರದೇಶದ 'ನಕ್‌ಆ' ಎಂಬ ಬಾವಿಯ ಬಳಿ ತಂಗುತ್ತದೆ. ನಮಾಝ್ ಮುಗಿಸಿ ಎಲ್ಲರೂ ಗಾಢ ನಿದ್ರೆಗೆ ಜಾರುತ್ತಾರೆ.

ಆ ವೇಳೆಗೆ ಆಯಿಶಾ(ರ) ದೇಹಬಾಧೆ ತೀರಿಸಲು ಡೇರೆಯಿಂದ ದೂರ ಹೋಗಿದ್ದರು. ಮರಳಿ ಬರುವಾಗ ಎಲ್ಲರೂ ಹೊರಟು ಹೋಗಿಯಾಗಿತ್ತು. ಅದು ಉಣ್ಣಲು ಆಹಾರವಿಲ್ಲದೆ ಮದೀನದ ಮಹಿಳೆಯರು ತೀರಾ ಕೃಶಕಾಯದವರಾಗಿದ್ದ ಕಾಲವಾಗಿತ್ತು. ಆದ್ದರಿಂದ ಆಯಿಶರು ಡೇರೆಯಲ್ಲಿದ್ದಾರೋ, ಇಲ್ಲವೋ ಎಂಬುದು ಅದನ್ನೆತ್ತಿದವರಿಗೆ ತಿಳಿಯಲಿಲ್ಲ. ಅವರು ಹತಾಶರಾಗಿ ಏನು ಮಾಡುವುದೆಂದು ತಿಳಿಯದೆ ಒಂದೆಡೆ

ಕು ಅಲ್ಲೇ ನಿದ್ರೆಗೆ ಜಾರಿದರು. ಪ್ರವಾದಿವರ್ಯರು(ಸ) ಸೇನೆಯ ರಕ್ಷಣೆಗೆಂದು ್ವಾನ್ ಬಿನ್ ಮುಅತ್ತಲ್ ಎಂಬವರನ್ನು ಸೇನೆಯ ಹಿಂದಿನಿಂದ ಸಾಗಲು ನೇಮಿಸಿ). ಅವರು ಎದುರ್ಗೊಂಡಾಗ ಆಯಿಶರು ಅವರೊಂದಿಗೆ ಮದೀನಕ್ಕೆ ಹೊರಡುತ್ತಾರೆ. ಘಟನೆಯನ್ನು ಅಬ್ದುಲ್ಲಾ ಬಿನ್ ಉಬೈ ಗೊಂದಲ ಎಬ್ಬಿಸಲು ಬಳಸಿದನು. ಪ್ರವಾದಿ ಪತ್ನಿಯ ಮೇಲೆ ಸುಳ್ಳಾರೋಪ ಹೊರಿಸಿ ನಗರದಾದ್ಯಂತ ಪ್ರಚಾರ ಡತೊಡಗಿದನು. ಈ ಕುರಿತು ಅಲ್ಲಾಹನು ಹೀಗೆ ಹೇಳಿರುವನು,

"ಈ ಸುಳ್ಳಾರೋಪವನ್ನು ರಚಿಸಿ ತಂದವರು ನಿಮ್ಮೊಳಗೆ ಇರುವ ಒಂದು ುವಾಗಿದ್ದಾರೆ. ಈ ಘಟನೆಯನ್ನು ನಿಮ್ಮ ಪಾಲಿಗೆ ಕೆಟ್ಟದೆಂದು ಭಾವಿಸಬೇಡಿರಿ. ವಾಗಿ ಇದು (ಪರಿಣಾಮದ ದೃಷ್ಟಿಯಲ್ಲಿ) ನಿಮಗೆ ಹಿತಕರವಾಗಿಯೇ ಇದೆ. ರಲ್ಲಿ ಯಾರು ಎಷ್ಟು ಭಾಗವಹಿಸಿದನೋ ಅಷ್ಟೇ ಪಾಪವನ್ನು ಶೇಖರಿಸಿಕೊಂಡನು. ಹೊಣೆಗಾರಿಕೆಯ ಪ್ರಮುಖ ಪಾಲು ವಹಿಸಿಕೊಂಡವನಿಗಂತೂ ಮಹಾ ತನೆಯಿದೆ." (ಪವಿತ್ರ ಕುರ್‌ಆನ್: 24: 11)

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಉಬಾದ ಬಿನ್ ಸಾಮಿತ್‌ರಿಗೆ(ರ) ಅಬ್ದುಲ್ಲಾ ಉಬೈಯೊಂದಿಗೆ ಜಗಳವಾಯಿತು. ಉಬಾದ(ರ) ಹೇಳಿದರು, "ನನಗೆ ಹೂದಿಯರೊಂದಿಗೂ ಗೆಳೆತನವಿತ್ತು ಹಾಗೂ ಸಂಕಷ್ಟದ ವೇಳೆ ಅವರಿಂದ ಯ ಪಡೆಯುತ್ತಿದೆ. ಯಹೂದಿಯರು ಇಸ್ಲಾಮ್ ಮತ್ತು ಪ್ರವಾದಿಯವರ(ಸ) ಗಳಾಗಿದ್ದಾರೆ. ಅಲ್ಲಾಹ್ ಮತ್ತು ಪ್ರವಾದಿವರ್ಯರೂ ಅವರಿಂದ ುಕೊಂಡಿದ್ದಾರೆ. ಆದ್ದರಿಂದ ಇನ್ನು ಮುಂದೆ ನಾನು ಗೆಳೆತನವಿರಿಸಲಾರೆ." ಅಬ್ದುಲ್ಲಾ ಬಿನ್ ಉಬೈ ಹೇಳಿದನು, "ನಾನು ಕಾಲದ ಘಟನೆಗಳಿಂದ ಪಡುತ್ತಿದ್ದೇನೆ. ಆದ್ದರಿಂದ ನನಗೆ ಯಹೂದಿಯ ರೊಂದಿಗೆ ಗೆಳೆತನವಿರಿಸದೆ ರ್ಹವಿಲ್ಲ."

ಇದಕ್ಕೆ ಸಂಬಂಧಿಸಿ ಅಲ್ಲಾಹನು ಈ ರೀತಿ ಹೇಳಿರುವನು, "ಓ ಸತ್ಯವಿಶ್ವಾಸಿಗಳೇ,) ಯಹೂದಿಯರನ್ನೂ ಕ್ರೈಸ್ತರನ್ನೂ ನಿಮ್ಮ ಆಪ್ತರನ್ನಾಗಿ ಮಾಡಿಕೊಳ್ಳಬೇಡಿರಿ. ು ಪರಸ್ಪರ ಆಪ್ತರು. ನಿಮ್ಮಲ್ಲಾರಾದರೂ ಅವರನ್ನು ಆಪ್ತರನ್ನಾಗಿ ಮಾಡಿಕೊಂಡರೆ ನೂ ಅವರೊಂದಿಗೇ ಸೇರಿದವನಾಗಿರುತ್ತಾನೆ. ವಾಸ್ತವದಲ್ಲಿ ಅಲ್ಲಾಹ್ ಅಕ್ರಮಿಗಳಿಗೆ ರ್ಗದರ್ಶನ ಮಾಡುವುದಿಲ್ಲ. ಹೃದಯಗಳಲ್ಲಿ ಕಾಪಟ್ಯದ ರೋಗವುಳ್ಳವರು ರಲ್ಲೇ ಓಡಾಡಿಕೊಂಡಿರುವುದನ್ನು ನೀವು ಕಾಣುತ್ತೀರಿ. ಅವರು, 'ನಾವೇನಾದರೂ ಷ್ಟದ ಸುಳಿಯಲ್ಲಿ ಸಿಲುಕಿ ಹೋಗುವೆವೋ ಎಂದು ನಮಗೆ ಭಯವಾಗುತ್ತದೆ' ುತ್ತಾರೆ. ಅಲ್ಲಾಹ್ ನಿಮಗೆ ನಿರ್ಣಾಯಕ ವಿಜಯ ದಯಪಾಲಿಸಿದಾಗ ಅಥವಾ ಕಡೆಯಿಂದ ಇನ್ನೇನಾದರೂ ವ್ಯಕ್ತಪಡಿಸಿದಾಗ, ಇವರು ತಮ್ಮ ಹೃದಯಗಳಲ್ಲಿ

ಬಚ್ಚಿಟ್ಟುಕೊಂಡಿರುವ ಈ ಕಾಪಟ್ಯದ ಬಗ್ಗೆ ಲಜ್ಜಿತರಾಗಲೂಬಹುದು."

(ಪವಿತ್ರ ಕುರ್‌ಆನ್: 5: 51–52

ಪ್ರವಾದಿವರ್ಯರು(ಸ) ಮದೀನದ ಪರಿಸರದ ಯಹೂದಿಯರೊಡನೆ ಶಾಂ ಒಪ್ಪಂದವನ್ನು ಮಾಡಿದ್ದರಷ್ಟೇ. ಆದರೆ ಯಹೂದಿಗಳು ಆಗಾಗ ಬಣ್ಣ ಬದಲಾಯಿಸುತ್ತಲೆ ಇದ್ದರು. ವಿಶೇಷವಾಗಿ ಕಂದಕ್ ಯುದ್ಧದಲ್ಲಿ ಕುರೈಶರ ಸೇನೆಯೊಡಗೂಡಿ ಮದೀನದ ಮೇಲೆ ದಾಳಿಯಿಡುವಾಗ ಮದೀನದೊಂದಿಗಿನ ಸಂಧಾನದ ಬಗ್ಗೆ ಯೋಚಿಸಿರಲಿಲ್ಲ ಆದರೆ ಅದರಿಂದ ಸಾಕಷ್ಟು ಪೆಟ್ಟು ತಿಂದ ಆಕ್ರಮಣಕೋರರು ಚದುರಿ ದಿಕ್ಕಾಪಾಲಾಗಿ ಹೋಗಿದ್ದರು. ಅದರಿಂದ ಪಾಠ ಕಲಿಯುವುದರ ಬದಲು ಅವರು ಪುನಃ ಮದೀನದ ಮೇಲೆ ಅಕ್ರಮಣಕ್ಕೆ ಸಂಚು ಹೂಡತೊಡಗಿದರು.

ಹೀಗೆ ಮದೀನಕ್ಕೆ ನೂರು–ಮೈಲು ದೂರದ ಖೈಬರ್ ಕೋಟೆಯಲ್ಲಿ ಯಹೂದಿಗಳ ಎಲ್ಲ ಪ್ರದೇಶದ ಗಣ್ಯರು ರಹಸ್ಯ ಸಭೆ ಸೇರಿದರು. ಅಬೂ ರಾಫಿಅ್ ಎಂಬ ಸರದಾರನು ಸಭೆಯನ್ನುದ್ದೇಶಿಸಿ ಹೇಳುತ್ತಾನೆ, "ಸೋದರರರೇ! ಮುಸ್ಲಿಮರ ಏರುತ್ತಿರುವ ಶಕ್ತಿಯು ಈಗ ನಮ್ಮ ಪಾಲಿಗೆ ಅಪಾಯಕರವಾಗಿ ಮಾರ್ಪಟ್ಟಿದೆ. ನಾವು ಕುರೈಶರನ್ನೂ ಗತ್‌ಫಾನ್‌ನವರನ್ನೂ ಮುಸ್ಲಿಮರ ವಿರುದ್ಧ ಯುದ್ಧ ಮಾಡಿಸಿ ನೋಡಿದೆವು. ಆದರೆ ನಮ್ಮ ಧ್ಯೇಯ ಈಡೇರಲಿಲ್ಲ. ಈಗ ಮುಸ್ಲಿಮರು ಹಿಂದೆಂದಿಗಿಂತಲೂ ಹೆಚ್ಚು ಬಲಶಾಲಿಗಳಾಗಿರುವರು. ಈಗ ನಾವೇ ಶಕ್ತಿಯಾರ್ಜಿಸಿ ಅವರ ವಿರುದ್ಧ ಹೋರಾಡಿ ಅವರನ್ನು ಸದೆಬಡಿಯಬೇಕಾಗಿದೆ. ಏಕೆಂದರೆ ಇದು ನಮ್ಮ ಅಳಿವು–ಉಳಿವಿನ ಪ್ರಶ್ನೆಯಾಗಿದೆ."

ಪ್ರಸ್ತುತ ಸಭೆಯ ವಿಷಯ ಮದೀನಕ್ಕೆ ತಿಳಿಯುತ್ತದೆ. ಪ್ರವಾದಿವರ್ಯರು(ಸ) ಈ ಬಗ್ಗೆ ಮುಸ್ಲಿಮರ ಜತೆ ಸಮಾಲೋಚನೆ ನಡೆಸುತ್ತಾರೆ. ಈ ಸಂದರ್ಭದಲ್ಲಿ ಅಬ್ದುಲ್ಲಾ ಬಿನ್ ಉಬೈ ಖೈಬರ್‌ನ ಯಹೂದಿಯರನ್ನು ಸಂಪರ್ಕಿಸುತ್ತಾನೆ. ಏನಿದ್ದರೂ ಅವನಿಗೆ ಇಸ್ಲಾಮಿನ ಮೂಲೋತ್ಪಾಟನೆ ಆಗಬೇಕೆಂಬುದೇ ಜೀವಿತೋದ್ದೇಶವಾಗಿತ್ತಲ್ಲವೇ... ಆತ ಯಹೂದಿಯರನ್ನು ಸಂಪರ್ಕಿಸಿ, "ಮುಸ್ಲಿಮರ ಬಗ್ಗೆ ಭಯಪಡುವ ಅಗತ್ಯವಿಲ್ಲ. ಬೆರಳೆಣಿಕೆಯಷ್ಟಿರುವ ಅವರ ಶಕ್ತಿಯು ಕಂದಕ್ ಯುದ್ಧದಲ್ಲಿಯೇ ಕುಂದಿ ಹೋಗಿದೆ. ನೀವು ಪ್ರಬಲವಾದ ದಾಳಿ ಮಾಡಿದರೆ ವಿಜಯ ಖಂಡಿತ ನಿಮ್ಮದಾಗುತ್ತದೆ" ಎಂದು ಹೇಳಿ ಅವರನ್ನು ಹುರಿದುಂಬಿಸುತ್ತಾನೆ.

ಇದರಿಂದ ಉತ್ತೇಜಿತರಾದ ಖೈಬರ್‌ನ ಯಹೂದಿಯರು ಕಿನಾನ ಮತ್ತು ಹೂದಃ ಬಿನ್ ಕೈಸ್‌ರನ್ನು ಗತ್‌ಫಾನ್‌ಗೆ ಕಳುಹಿಸಿ, "ನಮ್ಮೊಡನೆ ಸೇರಿ ಮದೀನದ ಮೇಲೆ ಆಕ್ರಮಣ ಮಾಡಲು ಸಿದ್ಧರಾದಿರೆಂದಾದರೆ ನಾವು ನಮ್ಮ ಖರ್ಜೂರದ ಇಳುವರಿಯ ಅರ್ಧಾಂಶವನ್ನು ನಿಮಗೆ ನೀಡುತ್ತೇವೆ" ಎಂದು ಆಮಿಷವೊಡ್ಡಿದರು.

ಹೀಗೆ ಗತ್‌ಫಾನ್‌ನ ಯಹೂದಿಯರು ಪುನಃ ಇವರ ಬಲೆಗೆ ಬಿದ್ದು ಬಿಡುತ್ತಾರೆ.

ಆದರೆ ಗತ್‌ಫಾನ್‌ನವರು ಖೈಬರ್‌ಗೆ ಹೊರಡುವುದಕ್ಕೆ ಮುಂಚೆಯೇ ಪ್ರವಾದಿ ವರ್ಯರು(ಸ) ಸೈನ್ಯವನ್ನು ಖೈಬರ್ ಮತ್ತು ಗತ್‌ಫಾನ್‌ನ ಮಧ್ಯೆ ಇರುವ ಪ್ರದೇಶ ದಲ್ಲಿ ನೆಲೆಗೊಳಿಸುತ್ತಾರೆ. ಇದರಿಂದಾಗಿ ಗತ್‌ಫಾನ್‌ನವರಿಗೆ ಖೈಬರ್‌ನವರ ಬೆಂಬಲಕ್ಕೆ ಹೊರಡುವುದು ಅಸಾಧ್ಯವಾಗುತ್ತದೆ. ಹೀಗೆ ಇಪ್ಪತ್ತು ದಿನಗಳ ಹೋರಾಟದ ಬಳಿಕ ಯಹೂದಿಯರು ಸಂಧಾನಕ್ಕೆ ಮುಂದಾಗುತ್ತಾರೆ. ಪ್ರವಾದಿವರ್ಯರು(ಸ) ಕೆಲವು ಶರ್ತಗಳ ಮೇರೆಗೆ ಸಂಧಾನಕ್ಕೆ ಒಪ್ಪುತ್ತಾರೆ.

ಹೀಗೆ ಅಬ್ದುಲ್ಲಾ ಬಿನ್ ಉಬೈಯ ಈ ಯೋಜನೆಯೂ ತಲೆಕೆಳಗಾಗುತ್ತದೆ. ಬಳಿಕದ ದಿನಗಳಲ್ಲಿ ಇಸ್ಲಾಮ್ ಅರೇಬಿಯಾದಾದ್ಯಂತ ಜನಮನ್ನಣೆಗೊಳಿಸಿದಾಗ ಆತನಲ್ಲಿ ಅಳಿದುಳಿದ ಕುಯುಕ್ತಿಯೂ ಆವಿಯಾಗಿ ಹೋಯಿತು. ಆದರೆ ಕುಲ ಮಹಿಮೆ ಮತ್ತು ನಾಯಕತ್ವ ಬಯಕೆಯು ಅವನ ಮನಸ್ಸಿನಲ್ಲಿಯೇ ಸುಪ್ತವಾಗಿ ಉಳಿದಿತ್ತು. ಮಕ್ಕಾ ವಿಜಯದ ಬಳಿಕ ಪ್ರವಾದಿವರ್ಯರು(ಸ) ಹುನೈನ್ ಮತ್ತು ತಾಯಿಫ್ ಯುದ್ಧಗಳಲ್ಲಿ ನಿಬಿಡರಾಗಿದ್ದ ವೇಳೆ ಅಬ್ದುಲ್ಲಾ ಬಿನ್ ಉಬೈಯ ಕಾಪಟ್ಯದ ರೋಗವು ಪುನಃ ಉಲ್ಬಣಿಸಿತು. ಆತ ಕುಬಾ ಮಸೀದಿಯ ಎದುರಲ್ಲೇ ಝಿರಾರ್ ಎಂಬ ಹೆಸರಿನ ಮಸೀದಿಯನ್ನು ಕಟ್ಟಿಸಿದನು. ಅದು ಮೇಲ್ನೋಟಕ್ಕೆ ಮಸೀದಿಯಾಗಿ ಕಂಡರೂ ಒಳಗೆ ರಹಸ್ಯ ಕಾರ್ಯಾಚರಣೆಯ ಎಲ್ಲ ವ್ಯವಸ್ಥೆಯನ್ನೂ ಮಾಡಿಡಲಾಗಿತ್ತು. ರೋಮ್‌ನ ಕ್ರೈಸ್ತ ರಾಜನ ಒಂದು ಸೇನಾ ತುಕಡಿಯನ್ನು ಅಲ್ಲಿ ನೆಲೆಗೊಳಿಸಲಾಗಿತ್ತು.

ಝಿರಾರ್ ಮಸೀದಿಯ ನಿರ್ಮಾಣ ಕಾರ್ಯ ಪೂರ್ಣಗೊಂಡಾಗ ಅಬ್ದುಲ್ಲಾ ಬಿನ್ ಉಬೈ, ಅದರ ಉದ್ಘಾಟನೆಗಾಗಿ ಪ್ರವಾದಿವರ್ಯರನ್ನು(ಸ) ಆಹ್ವಾನಿಸಿದನು. ಆ ಸಂದರ್ಭದಲ್ಲಿ ರೋಮ್‌ನ ದೊರೆ ಕೈಸರನು ಮೂತಾ ಯುದ್ಧಕ್ಕೆ ಪ್ರತೀಕಾರ ಪಡೆಯಲು ಸಿದ್ಧತೆ ನಡೆಸುತ್ತಿದ್ದನು. ಅದಕ್ಕಾಗಿ ಆತನು ಮದೀನದಿಂದ ಸುಮಾರು ಐನೂರು ಮೈಲು ದೂರ ಉತ್ತರಕ್ಕಿರುವ ತಬೂಕ್ ನಗರದಲ್ಲಿ ಸೇನೆ ಸಜ್ಜುಗೊಳಿಸುತ್ತಿದ್ದನು. ಈ ವಿಷಯವನ್ನು ಗುಪ್ತಚರರಿಂದ ತಿಳಿದುಕೊಂಡ ಪ್ರವಾದಿವರ್ಯರು(ಸ) ರೋಮನರು ದಾಳಿಯೆಸಗುವುದಕ್ಕಿಂತ ಮುಂಚೆಯೇ ಅವರ ನೆಲದಲ್ಲೇ ಅವರನ್ನು ಸದೆ ಬಡಿಯು ವುದು ಉತ್ತಮವೆಂದು ಮನಗಂಡು, ತಕ್ಷಣ ಸೇನೆಯನ್ನು ಹೊರಡಿಸುತ್ತಾರೆ. ಸ್ವತಃ ಅದರ ದಂಡನಾಯಕನಾಗಿ ಹೊರಟಿದ್ದ ಕಾರಣ ಝಿರಾರ್ ಮಸೀದಿಯನ್ನು ಯುದ್ಧ ಮುಗಿದು ಮರಳಿದ ಬಳಿಕ ಉದ್ಘಾಟಿಸುವುದಾಗಿ ಅಬ್ದುಲ್ಲಾ ಬಿನ್ ಉಬೈಗೆ ವಾಗ್ದಾನವೀಯುತ್ತಾರೆ.

ಅದೇ ವೇಳೆ ಪ್ರವಾದಿವರ್ಯರ ಸೇನೆಯು ತಬೂಕ್‌ಗೆ ಇನ್ನೂರು ಮೈಲಿ ದೂರದ ಜರ್ಫ್ ಎಂಬಲ್ಲಿ ಹೋಗಿ ಬೀಡುಬಿಟ್ಟಾಗ ಮೂತಾ ಯುದ್ಧದಲ್ಲಿ ಕೇವಲ

ಮೂರು ಸಾವಿರದಷ್ಟಿದ್ದ ಮುಸ್ಲಿಮ್ ಯೋಧರಿಂದ ಪೆಟ್ಟು ತಿಂದು ಪಲಾಯನಗೈದಿದ್ದ ರೋಮ್‌ನ ಬೃಹತ್ತಾದ ಶಿಸ್ತುಬದ್ಧ ಸೇನೆಯು ಭಯಭೀತಗೊಂಡು ಯುದ್ಧವಿಲ್ಲದೆಯೆ ಸೋಲೊಪ್ಪಿಕೊಳ್ಳುತ್ತದೆ. ಅದರಿಂದ ಮರಳಿ ಬರುವಾಗ ಈ ಕೆಳಗಿನ ಕುರ್‌ಆನ ವಚನಗಳು ಅವತೀರ್ಣಗೊಳ್ಳುತ್ತವೆ.

"ಒಂದು ಮಸೀದಿ ಕಟ್ಟಿಸಿದ ಕೆಲವರಿದ್ದಾರೆ. ಅವರು ಅದನ್ನು (ಸತ್ಯಾಹ್ವಾನಕ್ಕೆ) ಹಾನಿಯನ್ನುಂಟು ಮಾಡಲಿಕ್ಕೂ (ಅಲ್ಲಾಹನ ದಾಸ್ಯಾರಾಧನೆ ಮಾಡುವ ಬದಲಿಗೆ) ಸತ್ಯವನ್ನು ನಿಷೇಧಿಸಲಿಕ್ಕೂ ಸತ್ಯವಿಶ್ವಾಸಿಗಳೊಳಗೆ ಒಡಕನ್ನುಂಟು ಮಾಡಲಿಕ್ಕೂ (ಈ ತೋರಿಕೆಯ ಆರಾಧನಾಲಯವನ್ನು) ಈ ಮುಂಚೆ ಅಲ್ಲಾಹ್ ಮತ್ತು ಅವನ ರಸೂಲರ ವಿರುದ್ಧ ಯುದ್ಧಾಸಕ್ತನಾಗಿದ್ದವನಿಗೆ ಹೊಂಚುದಾಣವನ್ನಾಗಿ ಮಾಡಲಿಕ್ಕಾಗಿಯೂ ಕಟ್ಟಿಸಿರುತ್ತಾರೆ. ನಮ್ಮ ಉದ್ದೇಶವು ಒಳ್ಳೆಯದಾಗಿತ್ತೇ ವಿನಃ ಇನ್ನಾವುದೂ ಇರಲಿಲ್ಲವೆಂದು ಅವರು ಖಂಡಿತವಾಗಿಯೂ ಪ್ರಮಾಣ ಮಾಡುತ್ತಾ ಹೇಳುವರು. ಆದರೆ ಅವರು ಸುಳ್ಳುಗಾರರೆಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ. ನೀವು ಎಷ್ಟು ಮಾತ್ರಕ್ಕೂ ಆ ಕಟ್ಟಡದೊಳಗೆ ನಿಲ್ಲಬಾರದು. ಆರಂಭದ ದಿನದಿಂದಲೇ ತಕ್ವಾದ (ಧರ್ಮ ನಿಷ್ಠೆಯ) ಮೇಲೆ ಸ್ಥಾಪಿತಗೊಂಡಿರುವ ಮಸೀದಿಯೇ (ಆರಾಧನೆಗಾಗಿ) ನಿಲ್ಲಲು ಯೋಗ್ಯವಾದುದು. ಶುದ್ಧವಾಗಿರಬೇಕೆಂದು ಇಚ್ಛಿಸುವವರು ಅದರಲ್ಲಿ ಇರುತ್ತಾರೆ. ಶುದ್ಧತೆಯನ್ನು ಪಾಲಿಸುವವರೇ ಅಲ್ಲಾಹನಿಗೆ ಇಷ್ಟವುಳ್ಳವರು."

(ಪವಿತ್ರ ಕುರ್‌ಆನ್: 9: 107–108)

ಈ ವಚನಗಳು ಅವತೀರ್ಣಗೊಂಡ ಬಳಿಕ ಪ್ರವಾದಿವರ್ಯರು(ಸ) ಆ ಮಸೀದಿಗೆ ಬೆಂಕಿಯಿಡಲು ಆದೇಶಿಸಿದರು. ಈ ಪ್ರಕಾರ, ಅದನ್ನು ಸುಟ್ಟು ಸಂಪೂರ್ಣ ಧ್ವಂಸಗೊಳಿಸಲಾಯಿತು. ಅದಾದ ಬಳಿಕ ಜನರ ಬಾಯಿಯಲ್ಲಿ ಆ ಮಸೀದಿಯ ಹೆಸರಿನ ಹೊರತು ಅಲ್ಲಿ ಅದರ ಯಾವುದೇ ಕುರುಹು ಉಳಿಯಲಿಲ್ಲ.

❖ ❖ ❖ ❖

ಒಮ್ಮೆ ಅಬ್ದುಲ್ಲಾ ಬಿನ್ ಉಬೈ ರೋಗಪೀಡಿತನಾಗಿದ್ದಾಗ ಪ್ರವಾದಿವರ್ಯರು(ಸ) ಅವನ ಯೋಗಕ್ಷೇಮ ವಿಚಾರಿಸಲು ಹೊರಟಿದ್ದರು. ಆಗ ಅವರು ಅವನೊಡನೆ, ಕಾಪಟ್ಯದ ನೀತಿಯನ್ನು ತೊರೆದು ನೈಜ ಮುಸ್ಲಿಮನಾಗಿ ಬಾಳಲು ಉಪದೇಶಿಸಿದ್ದರು. ಅದಕ್ಕೆ ಉತ್ತರವಾಗಿ ಅಬ್ದುಲ್ಲಾ ಬಿನ್ ಉಬೈ, "ನಿಮ್ಮ ಸಂಗಾತಿಗಳೂ ನಿಷ್ಕಳಂಕ ಮುಸ್ಲಿಮರಾಗಿದ್ದರಲ್ಲವೇ? ಅವರೇನು ಮರಣದಿಂದ ತಪ್ಪಿಸಿಕೊಂಡರೇ? ನಾನು ನೈಜ ಮುಸ್ಲಿಮನಾದರೆ ಮರಣದಿಂದ ತಪ್ಪಿಸಿಕೊಳ್ಳುವೆನೆಂಬ ಖಾತ್ರಿಯಿದೆಯೇ?" ಎಂದು ಹೇಳಿದ್ದ. ಈ ಮಾತು ಕೇಳಿ ಪ್ರವಾದಿವರ್ಯರು(ಸ) ನಿರಾಶರಾಗಿ ಮರಳಿದ್ದರು.

ಹ. ಶಾಹ್ ಅಬ್ದುಲ್ ಕಾದಿರ್(ರ) ತಮ್ಮ 'ಮೌಝಿಉಲ್ ಕುರ್‌ಆನ್' ಎಂಬ ದಲ್ಲಿ ಪ್ರಸ್ತುತ ಘಟನೆಯನ್ನು ಈ ರೀತಿ ಉಲ್ಲೇಖಿಸಿದ್ದಾರೆ:

ಕಪಟ ವಿಶ್ವಾಸಿಗಳ ಸರದಾರ ರೋಗ ಬಾಧಿತನಾದಾಗ, ಪ್ರವಾದಿವರ್ಯರು(ಸ) ನ್ನು ಕಾಣಲು ಅವನ ಮನೆಗೆ ತೆರಳಿದರು. ಆ ಸಂದರ್ಭದಲ್ಲಿ ಆತ ಪ್ರವಾದಿ ರ್ಯರೊಡನೆ ಹೀಗೆ ವಿನಂತಿಸಿದನು, "ನಿಮ್ಮ ಚದ್ದರವನ್ನು ನನ್ನ ಪಾಲಿಗೆ ಸ್ತ್ರದ ರೂಪದಲ್ಲಿ ನೀಡಿರಿ, ನನ್ನ ಜನಾಝಾ ನಮಾಝನ್ನು ನೀವೇ ನಿರ್ವಹಿಸಿರಿ ದಫನ ಕಾರ್ಯದ ವೇಳೆಯೂ ನೀವು ಉಪಸ್ಥಿತರಿರಿ."

ಕೆಲವು ದಿನಗಳ ಬಳಿಕ ಅಬ್ದುಲ್ಲಾ ಬಿನ್ ಉಬೈ ಮರಣ ಹೊಂದಿದಾಗ ದಿವರ್ಯರು(ಸ) ತಮ್ಮ ಚದ್ದರವನ್ನು ಶವವಸ್ತ್ರಕ್ಕಾಗಿ ನೀಡಿದರು. ಬಳಿಕ ಆತನ ಾಗಿ ಜನಾಝಾ ನಮಾಝ್ ನಿರ್ವಹಿಸಲು ಮುಂದಾದರು. ಆಗ ಉಮರ್(ರ) ರೀತಿ ಅರಿಕೆ ಮಾಡಿದರು, "ಯಾ ರಸೂಲುಲ್ಲಾಹ್! ನೀವು ಈ ಕಪಟ ಿಯ ಜನಾಝಾ ನಮಾಝ್ ನಿರ್ವಹಿಸುವುದೇ? ಈತನಂತೂ ಇಂತಿಂತಹ ಗಳನ್ನು ಮಾಡಿದ್ದಾನೆ."

ಆದರೆ ಪ್ರವಾದಿವರ್ಯರು(ಸ) ಮುಗುಳ್ನಕ್ಕು ಹೇಳಿದರು, "ಉಮರ್! ಸರಿದು ' ಆದರೆ ಉಮರ್(ರ) ಪಟ್ಟು ಬಿಡದಿದ್ದಾಗ ಪ್ರವಾದಿವರ್ಯರು(ಸ) ಹೀಗೆಂದರು, ಮ ವೇಳೆ ನನಗೆ ಅಧಿಕಾರ ನೀಡಲಾಗುತ್ತಿದ್ದರೆ ಮತ್ತು ಎಪ್ಪತ್ತು ಸಲ ನಮಾಝ್ ಹಿಸಿದರೆ ಈತನ ಪಾಪಗಳಿಗೆ ಕ್ಷಮೆ ನೀಡಲಾಗುವುದು ಎಂದು ತಿಳಿದು ರೆ, ನಾನು ಅದಕ್ಕಿಂತಲೂ ಅಧಿಕ ನಮಾಝ್ ನಿರ್ವಹಿಸುತ್ತಿದ್ದೆ."

ಆದರೆ ಪ್ರವಾದಿವರ್ಯರು(ಸ) ನಮಾಝ್ ನಿರ್ವಹಿಸಲು ಮುಂದಾದಾಗ ಈ ಅವತೀರ್ಣವಾಯಿತು, "ಇನ್ನು ಮುಂದೆ ಅವರಲ್ಲಿ ಯಾರಾದರೂ ಮರಣ ದಿದರೆ ಅವನ ಜನಾಝಾ ನಮಾಝನ್ನು ನೀವು ಎಷ್ಟು ಮಾತ್ರಕ್ಕೂ ಹಿಸಬಾರದು ಮತ್ತು ಅವನ ಸಮಾಧಿಯ ಬಳಿ ಎಂದಿಗೂ ನಿಲ್ಲಬಾರದು. ದರೆ ಅವರು ಅಲ್ಲಾಹ್ ಮತ್ತು ಅವನ ರಸೂಲರನ್ನು ನಿಷೇಧಿಸಿದರು. ಅವರು ಭ್ರಷ್ಟರಾಗಿರುವ ಸ್ಥಿತಿಯಲ್ಲಿ ಸತ್ತಿದ್ದಾರೆ." **(ಪವಿತ್ರ ಕುರ್‌ಆನ್: 9: 84)**

ವಸ್ತುತಃ ಅಬ್ದುಲ್ಲಾ ಬಿನ್ ಉಬೈ ಕಪಟವಿಶ್ವಾಸಿಗಳ ಸರದಾರನಾಗಿದ್ದನು. ತನ್ನ ನಮಾನವಿಡೀ ಆತ, ಪ್ರವಾದಿವರ್ಯರ(ಸ) ಸಂದೇಶ ಪ್ರಚಾರ ಕಾರ್ಯದಲ್ಲಿ ವುಂಟು ಮಾಡಲು, ಯುದ್ಧಗಳಲ್ಲಿ ನಷ್ಟವುಂಟು ಮಾಡಲು, ಖಾಸಗಿ ಮತ್ತು ಹಿಕ ಜೀವನದಲ್ಲಿ ವೈಮನಸ್ಸು ಹಾಗೂ ಮನಸ್ತಾಪವುಂಟು ಮಾಡಲು, ನ್ನು ಅವಮಾನಿಸಲು, ಅವರ ಗೌರವವನ್ನು ಕುಂದಿಸಲು ಸಾಧ್ಯಂತ ಶ್ರಮಿಸುತ್ತಿದ್ದ ಾ ದ್ರೋಹಿಯಾಗಿದ್ದನು. ಇಂತಹವನ ಬಗ್ಗೆ ಔದಾರ್ಯ ತೋರಲು ಅಳುಕದ

ಹೃದಯ ಓರ್ವ ಪ್ರವಾದಿಯದ್ದಲ್ಲದೆ ಸಾಮಾನ್ಯನರದ್ದಾಗಿರಲು ಸಾಧ್ಯವೇ

ಉಪಸಂಹಾರ

ವಾಚಕರೇ, ಪ್ರವಾದಿವರ್ಯರ(ಸ) ಶತ್ರುವಾತ್ಸಲ್ಯದ ಬಗ್ಗೆ ಬರೆಯು ಅವರಿಗೆ ಜೀವಮಾನವಿಡೀ ನೆರವಾದವರು; ಅವರನ್ನು ನಿರಂತರ ಪೀಡಿಸಿ, ವಿರುದ್ಧ ಹೋರಾಡಿದ ಸತ್ಯನಿಷೇಧಿಗಳು; ತರುವಾಯ ಸತ್ಯನಿಷೇಧ ನೀತಿಂ ಅನುಸರಿಸಿಕೊಂಡು ಬಂದಿದ್ದು, ಕ್ರಮೇಣ ಅಲ್ಲಾಹನ ಅನುಗ್ರಹದಿಂದ ಸತ್ಯ ಕಂಡುಕೊಂಡು ಮುಸ್ಲಿಮರಾದವರು; ಪ್ರವಾದಿವರ್ಯರ(ಸ) ಔದಾರ್ಯ ಕ್ಷಮಾ ದಿಂದ ಪ್ರಭಾವಿಗೊಂಡು ಅವರ ಅನುಯಾಯಿಗಳಾಗಿ ಮಾರ್ಪಟ್ಟು ಕೃತಾರ್ಥರಾದ ಹೀಗೆ ಆ ಕಾಲಘಟ್ಟದ ಪಟ್ಟಭದ್ರರು ಮತ್ತು ಸತ್ಯಾಕಾಂಕ್ಷಿಗಳ ಕುರಿತು ಪ್ರಸ್ತಾ ಬಳಿಕ ಕೊನೆಯಲ್ಲಿ ಅಬ್ದುಲ್ಲಾ ಬಿನ್ ಉಬೈಯ ಬಗ್ಗೆ ಇಷ್ಟು ದೀರ್ಘವಾಗಿ ಉ ಸಲು ಕಾರಣವೇನು, ಪ್ರವಾದಿವರ್ಯರ(ಸ) ಜೀವನ ಚರಿತ್ರೆಯೊಂದಿಗೆ ಮುನಾಫಿಕನ ಜೀವನ ವೃತ್ತಾಂತ ಏಕೆ ಎಂಬಿತ್ಯಾದಿ ಪ್ರಶ್ನೆಗಳು ಕೆಲವರಲ್ಲಿಯಾ ಮೂಡಿರಬಹುದು.

ವಸ್ತುತಃ 'ಶತ್ರುವತ್ಸಲ' ಎಂಬ ಶೀರ್ಷಿಕೆಯಡಿ ಬರೆಯುವಾಗ ಶತ್ರುಗಳ ಕು ಗಿಯೇ ಹೆಚ್ಚು ಬರೆಯುವುದು ಅನಿವಾರ್ಯವಾಗಿತ್ತು. ಕಪಟ ವಿಶ್ವಾಸಿಗಳ ಸರದ ಕುರಿತ ವೃತ್ತಾಂತವನ್ನು ಕೊನೆಯಲ್ಲಿ ಉಲ್ಲೇಖಿಸುವುದರ ಹಿಂದೆಯೂ ಒ ಉದ್ದೇಶವಿತ್ತು. ಸಾಮಾಜಿಕ ನೀತಿಯನ್ನು ಅರಿತಿರುವವರಿಗೆ ಇದು ಸುಲ ಅರ್ಥವಾಗುತ್ತದೆ. ಒಂದು ವ್ಯವಸ್ಥೆಗೆ, ಜನಾಂಗಕ್ಕೆ ಅಥವಾ ಸಮಾಜಕ್ಕೆ ವಿರೋಧಿ ಶತ್ರುಗಳು ಇದ್ದರೆ ಅವರು ನೇರ ಸಂಘರ್ಷಕ್ಕೆ ಮುಂದಾಗಿದ್ದರೆ ಅಂತಹವ ಎದುರಿಸಬಹುದು; ಪ್ರತಿಭಟಿಸಬಹುದು ಅಥವಾ ಅವರ ಜತೆ ಚರ್ಚಿಸುವ ಮು ಅವರ ಮನವೊಲಿಸಬಹುದು. ಒಂದರ್ಥದಲ್ಲಿ ನಿದ್ರಿಸುತ್ತಿರುವವರನ್ನು ತಟ್ಟಿ ಎಬ್ಬಿಸಬ ಎನ್ನುವಂತಿದೆ ಇದರ ಉಪಮೆ.

ಅದೇ ವೇಳೆ, ನಿದ್ರಿಸಿದಂತೆ ನಟಿಸುವವರನ್ನು ಏನು ಮಾಡಲು ಸಾಧ್ಯ? ಮುನಾಫಿಕರ (ಕಪಟ ವಿಶ್ವಾಸಿಗಳ) ಉದಾಹರಣೆಯಾಗಿದೆ. ಆದರೆ ಈ ಉಪಮೆ ಮುನಾಫಿಕರ ಮಟ್ಟಿಗೆ ಸಾಲದು. ಏಕೆಂದರೆ ಸತ್ಯವನ್ನು ಗ್ರಹಿಸಿಯೂ ಒಪ್ಪದೆ ತೆ ವವರಿಂದ ದೊಡ್ಡ ನಷ್ಟವೇನೂ ಇಲ್ಲ. ಆದರೆ ಸತ್ಯದ ಮೇಲೆ ವಿಶ್ವಾಸವಿರಿಸಿರುವ ನಂಬಿಸಿ, ಬೆನ್ನ ಹಿಂದೆ ಇರಿಯವವರು, ದ್ರೋಹವೆಸಗುವವರು ಯಾವ ಉಪಮ ನಿಲುಕಲಾರದ ಜೀವಿಗಳು. ಅಂತಹವನ್ನು ಅಲ್ಲಾಹನು 'ಕರ್ಮಭ್ರಷ್ಟರು' ಎ ಕರೆದಿದ್ದಾನೆ. ಅವರ ಕುಕೃತ್ಯಗಳಿಗೆ ಕ್ಷಮೆಯಿಲ್ಲ. ವಾಸ್ತವದಲ್ಲಿ ಅವರ ಮನಃಸ್ಥಿ

ಾಗುವಂತಹದ್ದೇ ಅಲ್ಲ. ಹಾಗಾಗಿ ಅಬ್ದುಲ್ಲಾ ಬಿನ್ ಉಬೈಯಂತಹ ಮಹಾ ಯ ವೃತ್ತಾಂತವನ್ನು ಇಲ್ಲಿ ಸುಧೀರ್ಘವಾಗಿ ಉಲ್ಲೇಖಿಸಲಾಗಿದೆ. ವಸ್ತುತಃ ಕಾಪಟ್ಯ ರೋಗದ ವೈರಸ್ ಹರಡಿದ ಮಹಾಮಾರಿಯ ಬಗ್ಗೆ ಇಲ್ಲಿ ಖಿಸಿದ್ದು ಏನೇನೂ ಅಲ್ಲ. ಅದು ಅಳಿಯಲಾಗದ ಮತ್ತು ಅಳಿಸಲಾಗದ ಾಣುವಾಗಿದೆ. ಅಂತಹವರ ಬಗ್ಗೆ ಸ್ಥೂಲವಾಗಿ ತಿಳಿಯಲು 'ಅಲ್ ಮುನಾಫಿಕೂನ್' 'ಅತ್ತೌಬಃ' ಅಧ್ಯಾಯಗಳನ್ನು ವ್ಯಾಖ್ಯಾನ ಸಹಿತ ಅಧ್ಯಯನ ನಡೆಸಿದರೆ ರಿಯಾದೀತು.

ಅದೇನಿದ್ದರೂ ಮುಸ್ಲಿಮರ ಮಟ್ಟಿಗೆ ಸತ್ಯವಿಶ್ವಾಸಿಗಳ ಒಳಿತು, ಸದ್ಗುಣಗಳನ್ನು ರೆ ಮಾತ್ರ ಸಾಕಾಗಲಾರದು. ಸತ್ಯನಿಷೇಧಿಗಳ ಕುಯುಕ್ತಿ, ಸಂಚು, ಅಪಪ್ರಚಾರ ನ್ನು ಅರಿಯಬೇಕಾಗುತ್ತದೆ; ಕಪಟ ವಿಶ್ವಾಸಿಗಳಂತಹ ನಯವಂಚಕರ ಬಗ್ಗೆಯೂ ತರಾಗಿರಬೇಕಾಗುತ್ತದೆ. ಇಂತಹ ಕಪಟ ವಿಶ್ವಾಸಿಗಳು ಎಲ್ಲ ಕಾಲದಲ್ಲಿಯೂ ತ್ತಾರೆ. ಅಂತಹವರ ವಂಚನೆಯ ಜಾಲವು ಯಾವ ರೀತಿ ಹರಡಿಕೊಂಡಿರುತ್ತದೆ ಊಹಿಸಲು ಸಾಧ್ಯವಾಗದು. ಸ್ವತಃ ಪ್ರವಾದಿವರ್ಯರಿಗೇ(ಸ) ಅಲ್ಲಾಹನು ಾಣಿ (ವಹೀ) ಮೂಲಕ ಕಪಟ ವಿಶ್ವಾಸಿಗಳ ಬಗ್ಗೆ ಎಚ್ಚರಿಸಿದ್ದಾನಷ್ಟೇ. ಆದರೆ ಮಾತಂತೂ ಸ್ಪಷ್ಟ. ಪ್ರವಾದಿವರ್ಯರು(ಸ) ಲೋಕಾನುಗ್ರಹಿ, ಮಾನವ ವಿಮೋಚಕ, ಕರುಣಾ ಸಾಗರ, ಶತ್ರುವತ್ಸಲ ಆಗಿರುವುದರಿಂದಾಗಿಯೇ ಾರು ವಿರೋಧಿಗಳು ಅವರ ಅನುಚರರಾಗಿ ಮಾರ್ಪಟ್ಟರು. ಆದರೆ ಕಪಟ ಿಗಳ ಮನವೊಲಿಸಲು ಅಥವಾ ಮನಸ್ಸನ್ನು ಬದಲಿಸಲು ಪ್ರವಾದಿವರ್ಯರ(ಸ) ವ ಔದಾರ್ಯ, ಒಳಿತು ಕೂಡಾ ಕೆಲಸಕ್ಕೆ ಬಂದಿರಲಿಲ್ಲ. ಅದು ಅವರ ವಿಧಿ. ಗಿಯೂ ಜನರು ಪ್ರವಾದಿವರ್ಯರ(ಸ) ಮಾದರಿಯನ್ನು ಅನುಸರಿಸುವ ಲಕ (ಅವರಂತೆ ಲೋಕಾನುಗ್ರಹಿ-ಶತ್ರುವತ್ಸಲರಾಗಲು ಸಾಧ್ಯವಿಲ್ಲದಿದ್ದರೂ) ಜನಪೀಡಕರಂತೂ ಆಗದಿರಲು ಶ್ರಮಿಸಬಹುದಲ್ಲವೇ? ಅಲ್ಲಾಹನು ಸರ್ವರನ್ನೂ ಟ್ಟಿನಲ್ಲಿ ಅನುಗ್ರಹಿಸಲಿ. (ಆಮೀನ್)

❖ ❖ ❖ ❖